ಮುಂಗಾರು

ಭಾನುವಾರ, ಮಾರ್ಚ್ 5, 1989

ಪ್ರಾದೇಶಿಕ ಸ್ವಾಯತ್ತೆ–ಅಂಗೀಕೃತ ತತ್ವ

ಪಂಜಾಬಿನಲ್ಲಿ ತಲೆದೋರಿರುವ ಕ್ಷೋಭೆಯನ್ನು ಶಮನಗೊಳಿಸುವ ದಿಸೆಯಲ್ಲಿ ಕೇಂದ್ರ ಸರಕಾರ ಎಂಟಂಶಗಳ ಸೂತ್ರವೊಂದನ್ನು ರೂಪಿಸಿರುವುದಾಗಿ ಪ್ರಧಾನಿ ರಾಜೀವ್ ಗಾಂಧಿ ಶುಕ್ರವಾರ ಲೋಕ ಸಭೆಯಲ್ಲಿ ಪ್ರಕಟಿಸಿದ್ದಾರೆ. ಪ್ರಧಾನಿಯವರ ಈ ಪ್ರಕಟಣೆಯನ್ನು ಸಮಗ್ರ ಸಭೆ ಗಂಭೀರ ಮೌನದಿಂದ ಆಲಿಸಿತೆಂದು ವರದಿ ತಿಳಿಸುತ್ತದೆ.

ಪ್ರಧಾನಿಯವರು ಪ್ರಕಟಿಸಿದ ಎಂಟಂಶಗಳ ಸೂತ್ರವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವರ ಪ್ರಕಟಣೆ ನಿಜಕ್ಕೂ ಗಣನೀಯವೇ. ಈ ಸೂತ್ರಗಳಲ್ಲಿ ತೀರಾ ಸಮಾಧಾನಕರವಾಗಿರುವುದು ಜೋಧಪುರ ಬಂಧಿಗಳ ಬೇಷರತ್ ಬಿಡುಗಡೆಗೆ ಸಂಬಂಧಿಸಿದ್ದು. 1984ರ ಜೂನ್ 4ರಂದು ಭಾರತದ ಭೂಸೇನಾ ಪಡೆ ಅಮೃತಸರದ ಸ್ವರ್ಣ ದೇಗುಲದ ಮೇಲೆ ನಡೆಸಿದ 'ನೀಲತಾರೆ' ಕಾರ್ಯಾಚರಣೆಯಲ್ಲಿ ಬಂಧಿತರಾದವರೇ ಜೋಧಪುರದ ಬಂಧಿಗಳು. ಸ್ವರ್ಣದೇಗುಲಕ್ಕೆ ಸಂದರ್ಶಕರಾಗಿ ಬಂದಿದ್ದ ಸುಮಾರು 600 ಮಂದಿ ಸಿಕ್ಖರನ್ನು "ನೀಲತಾರೆ" ಕಾರ್ಯಾಚರಣೆಯಲ್ಲಿ ಬಂಧಿಸಲಾಗಿತ್ತು. ಇವರಲ್ಲಿ ಸಾಕಷ್ಟು ಮಂದಿ ಹೆಂಗಸರು ಮಕ್ಕಳೂ ಸೇರಿದ್ದರು. ನಿಶ್ಚಿತವಾದ ಯಾವ ಆರೋಪವೂ ಇಲ್ಲದೆ ಸೆರೆಮನೆಗೆ ತಳ್ಳಿದ ಈ ಜೋಧಪುರ ಬಂಧಿಗಳಲ್ಲಿ 175 ಮಂದಿಯ ಒಂದು ಗುಂಪನ್ನು ಹೋದ ವರ್ಷ ಬಿಡುಗಡೆ ಮಾಡಲಾಗಿತ್ತು. ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ವಿಚಾರಣೆ ಇಲ್ಲದೆ ಬಂಧೀಖಾನೆಯಲ್ಲಿ ಕೊಳೆಯುತ್ತಿರುವ ಈ ನಿರಪರಾಧಿಗಳ ನೋವು ನಮ್ಮ ರಾಷ್ಟ್ರ ಜೀವನದ ಒಂದು ಹುಣ್ಣಾಗಿ ಉಳಿದಿದೆ. ಈ ಜೋಧಪುರ ಬಂಧಿಗಳ ವಿಚಾರ ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಶ್ನೆಯಾಗಿ ವಿಶ್ವ ವೇದಿಕೆಯನ್ನೇರಿದೆ. ಜನತಂತ್ರವಾದಿ ದೇಶವೆನ್ನಿಸಿರುವ ಭಾರತದ ಹೆಸರಿಗೆ ಇದರಿಂದ ಕಳಂಕ ಬಂದಿದೆ. ಕೊನೆಗೂ ಪ್ರಧಾನಿ ರಾಜೀವ್ ಗಾಂಧಿಯವರು ಈ ಕಳಂಕದಿಂದ ಮುಕ್ತರಾಗುವ ತೀರ್ಮಾನಕ್ಕೆ ಬಂದಿರುವುದು ಸ್ವಾಗತಾರ್ಹ.

ಜೋಧಪುರದ ಬಂಧಿಗಳ ಬಿಡುಗಡೆಯಿಂದ ಸಿಕ್ಖ್ ಜನಾಂಗ ತೀರಾ ಸಂತುಷ್ಟರಾಗಿ ಕಳೆದ ನಾಲ್ಕೈದು ವರ್ಷಗಳಿಂದ ತಾವು ಅನುಭವಿಸಿದ ಮಾನಸಿಕ ಯಾತನೆಯನ್ನು ಮರೆತು ಬಿಡುವರೆಂದು ನಾವು ತಿಳಿದಿಲ್ಲ. ಆದರೆ ಸಿಕ್ಖರ ಭಾವನೆ ಇನ್ನಷ್ಟು ಉಗ್ರವಾಗುವುದನ್ನು ತಪ್ಪಿಸಿದಂತಾಯಿತೆನ್ನಬಹುದು.

ಇದೇ ರೀತಿ ಪಂಜಾಬಿನಲ್ಲೀಗ ಜಾರಿಯಲ್ಲಿರುವ ಕೆಲವು ಉಗ್ರ ಶಾಸನಗಳ ಆಚರಣೆಯನ್ನು ಮಿತಿಗೊಳಿಸುವುದಾಗಿ ಪ್ರಧಾನಿಯವರು ತಿಳಿಸಿದ್ದಾರೆ. ಈಗ ಪಂಜಾಬಿನ ಎಲ್ಲೆಡೆ ಕಾರ್ಯಾಚರಣೆಯಲ್ಲಿರುವ ವಿಶೇಷ ಸಶಸ್ತ್ರ ಪಡೆಗಳನ್ನು ವಿಷಮ ಪರಿಸ್ಥಿತಿ ಇರುವ ಪ್ರದೇಶಗಳಿಗೆ ಮಾತ್ರ ಸೀಮಿತಗೊಳಿಸುವುದಾಗಿ ಹೇಳಿದ್ದಾರೆ. ಅದೇ ರೀತಿ ವಿಧ್ವಂಸಕ ಕೃತ್ಯಗಳನ್ನು ತಡೆಗಟ್ಟುವ ಶಾಸನ, ರಾಷ್ಟ್ರೀಯ ಭದ್ರತಾ ಶಾಸನ, ಮತ್ತಿತರ ಶಾಸನಗಳ ಬಳಕೆಯನ್ನು ಮಿತಗೊಳಿಸುವುದಾಗಿ ತಿಳಿಸಿದ್ದಾರೆ. ಪಂಜಾಬಿನಲ್ಲಿ ಪೊಲೀಸರ ಕಾರ್ಯಾಚರಣೆಯನ್ನು ಮಾಮೂಲಿ ಸ್ಥಿತಿಗೆ ತರುವುದಾಗಿ ಹೇಳಿದ್ದಾರೆ.

ಪ್ರಧಾನಿಯವರ ಈ ಹೇಳಿಕೆ ಇದು ವರೆಗೆ ಎಲ್ಲ ಶಾಸನಗಳ ಬಳಕೆ ಹಾಗೂ ಪೊಲೀಸರು ಮತ್ತು ಸಶಸ್ತ್ರ ಪಡೆಯ ಕಾರ್ಯಾಚರಣೆ ತೀರಾ ಅತಿಯಾಗಿ ನಡೆದಿತ್ತೆಂಬುದನ್ನು ಸಾಬೀತು ಪಡಿಸುತ್ತದೆ. ಪಂಜಾಬಿನ ಕ್ಷೋಭೆಗೆ ಸಿಕ್ಖರ ಮತಾಂಧತೆಯಷ್ಟೇ ಸರಕಾರದ ದಮನಕಾರಿ ಕೃತ್ಯಗಳೂ ಕಾರಣವೆಂಬುದನ್ನು ಪ್ರಧಾನಿಯವರು ಈಗಲಾದರೂ ಮನವರಿಕೆ ಮಾಡಿಕೊಂಡಿರುವುದು ಸಂತೋಷ.

ಸರಕಾರಿ ದಮನ ಕಡಿಮೆಯಾದಷ್ಟು ಮಟ್ಟಿಗೆ ಪಂಜಾಬಿನಲ್ಲಿ ನಡೆಯುತ್ತಿರುವ ಹತ್ಯಾಕಾಂಡದ ತೀವ್ರತೆಯೂ ಕಡಿಮೆಯಾಗುವ ಸಾಧ್ಯತೆ ಇದೆ. ಆದರೆ ಇವೊಂದರಿಂದಲೇ ಪಂಜಾಬಿನ ಕ್ಷೋಭೆ ಶಮನಗೊಳ್ಳುವುದೆಂದು ನಿರೀಕ್ಷಿಸಲಾಗದು. ಪಂಜಾಬಿನ ಸಮಸ್ಯೆ ಮೂಲತಃ ರಾಜಕೀಯವಾದುದು. ಪಂಜಾಬಿನ ಸಿಕ್ಖರ ರಾಜಕೀಯ ಹಾಗೂ ಪ್ರಾದೇಶಿಕ ಆಕಾಂಕ್ಷೆಗಳು ಧಾರ್ಮಿಕ ಅಂಧಾಭಿಮಾನದಲ್ಲಿ ಬೆರೆತಿರುವುದೇ ಅಲ್ಲಿನ ನಿಜವಾದ ಸಮಸ್ಯೆ. ಪ್ರಧಾನಿಯವರು ಪ್ರಕಟಿಸಿರುವ ಎಂಟಂಶಗಳ ಸೂತ್ರ ಪಂಜಾಬಿನ ಸಮಸ್ಯೆಯ ಈ ನಿಜರೂಪವನ್ನು ಗಣನೆಗೆ ತೆಗೆದುಕೊಂಡಿಲ್ಲ.

ಪಂಜಾಬಿನ ಸಮಸ್ಯೆಯನ್ನು ಬಲಪ್ರಯೋಗದಿಂದ ಬಗೆಹರಿಸಲು ಸಾಧ್ಯವೇ ಇಲ್ಲವೆಂಬುದನ್ನು ನಾವು ಈ ಹಿಂದೆ ಹಲವು ಬಾರಿ ಹೇಳಿದ್ದೇವೆ. ಇದಕ್ಕೊಂದು ರಾಜಕೀಯ ಪರಿಹಾರವನ್ನು ರೂಪಿಸಬೇಕೆಂದು ಪ್ರತಿಪಾದಿಸಿದ್ದೇವೆ. ಆದರೆ ಸರಕಾರ ಬಲಪ್ರಯೋಗದ ವಿಪತ್ಕಾರಿ ಆವಿಷ್ಕಾರಗಳನ್ನು ಅರಿತುಕೊಂಡಿದೆ, ರಾಜಕೀಯ ಪರಿಹಾರದ ಬಗ್ಗೆ ಮಾತ್ರ ಯೋಚನೆ ಮಾಡುವ ಸ್ಥಿತಿಗೆ ಬಂದಿಲ್ಲ.

ರಾಜ್ಯ ಸಭೆಯ ಸದಸ್ಯ ರಾಮ್ ಜೇಠ್ಮಲಾನಿಯವರು ಪಂಜಾಬಿಗೆ ಪ್ರಾದೇಶಿಕ ಸ್ವಾಯತ್ತೆಯನ್ನು ಪ್ರತಿಪಾದಿಸಿರುವುದು ಮಹಾಪರಾಧವೆನ್ನುವ ಧಾಟಿಯಲ್ಲಿ ಪ್ರಧಾನಿಯವರು ಮಾತನಾಡಿರುವುದು ಮತ್ತು ಅದಕ್ಕೆ ವಿರೋಧ ಪಕ್ಷಗಳು ಪ್ರತಿ ಮಾತನಾಡದಿರುವುದನ್ನು ಗಮನಿಸಿದರೆ ಈ ದೇಶದ ರಾಜಕೀಯ ಪ್ರಭುಗಳು ಸಮಸ್ಯೆಯ ಮೂಲಕ್ಕೆ ಹೋಗಲು ಹೆದರುತ್ತಿರುವರೆಂದೇ ಹೇಳಬೇಕಾಗುತ್ತದೆ.

ಈ ದೇಶದಲ್ಲಿ ಪ್ರಾದೇಶಿಕ ಸ್ವಾಯತ್ತೆಯ ಪ್ರತಿಪಾದನೆ ರಾಷ್ಟ್ರ ಘಾತುಕವೆನ್ನುವ ತೀರ್ಮಾನಕ್ಕೆ ನಮ್ಮ ರಾಜಕಾರಣಿಗಳು ಬಂದಿರುವುದು ತೀರಾ ಸೋಜಿಗದ ಸಂಗತಿ. ಪ್ರಾದೇಶಿಕ ಸ್ವಾಯತ್ತೆಯು ಪಂಜಾಬಿನ ಮತಾಂಧ ಸಿಕ್ಖರು ಕಲ್ಪಿಸಿದ ಹೊಸ ಸೂತ್ರವೇನಲ್ಲ. ಇದು ನಮ್ಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ರೂಪುಗೊಂಡ ಒಂದು ರಾಷ್ಟ್ರೀಯ ನೀತಿ. ನಮ್ಮ ಸ್ವಾತಂತ್ರ್ಯದ ಶಿಲ್ಪಿಗಳು ಮುಕ್ತ ಮನಸ್ಸಿನಿಂದ ಅಂಗೀಕರಿಸಿದ ತತ್ವ.

ನಮ್ಮ ರಾಷ್ಟ್ರೀಯ ಜೀವನದ ಇಂದಿನ ಆಗು–ಹೋಗುಗಳಿಗೆ ನಿನ್ನೆಯ ಸಂಬಂಧವಿದೆಯೆಂಬುದನ್ನು ನಾವು ಮರೆಯಬಾರದು. ಇದಕ್ಕಾಗಿಯೇ ದೇಶದ ಆಡಳಿತ ಸೂತ್ರ ಹಿಡಿದಿರುವ ರಾಜಕೀಯ ಪ್ರಭುಗಳು ಇತಿಹಾಸವನ್ನು ಬುದ್ಧಿಪೂರ್ವಕವಾಗಿ ಓದಬೇಕಾಗುತ್ತದೆ. 1920ರ ದಶಕದಲ್ಲಿ ಭಾರತದಲ್ಲಿ ಸ್ವಾತಂತ್ರ್ಯದ ಬಯಕೆ ಮೇಳೈಸಿದಾಗ ಬ್ರಿಟಿಷ್ ರಾಜಕಾರಣಿಗಳು 'ಭಾರತದ ರಾಷ್ಟ್ರೀಯತೆಯೆನ್ನುವುದು ಒಂದು ಮಿಥ್ಯೆ' ಎಂದು ಗೇಲಿ ಮಾಡಿದ್ದರು. ಭಿನ್ನ ಮತಗಳು ಹಾಗೂ ವಿಭಿನ್ನ ವರ್ಣೀಯರಿಂದ ಕೂಡಿರುವ ಭಾರತ ಎಂದಿಗೂ ರಾಜಕೀಯವಾಗಿ ಒಂದು ಘಟಕಕ್ಕೆ ಬರಲಾರದೆಂದು ಅವರು ವಾದಿಸಿದ್ದರು.

ಅವರ ಈ ವಾದವನ್ನು ತಳ್ಳಿ ಹಾಕಿದ ಮಹಾತ್ಮಾಗಾಂಧಿಯವರು "ವಿಭಿನ್ನ ಭಾರತೀಯರನ್ನು ರಾಜಕೀಯವಾಗಿ ಏಕ ಸೂತ್ರದಲ್ಲಿ ಪೋಣಿಸುವ ಬುದ್ಧಿ ಬಲ ನಮಗಿದೆ". ಎಂದು ಬ್ರಿಟಿಷರಿಗೆ ಸವಾಲೆಸೆದಿದ್ದರು. 1924ರಲ್ಲಿ ಮಹಾತ್ಮಾಗಾಂಧಿಯವರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಬೆಳಗಾವಿ ಮಹಾಧಿವೇಶನದ ಅಧ್ಯಕ್ಷರಾಗಿ ಮಾಡಿದ ಭಾಷಣದಲ್ಲಿ ಭಾರತದ ಏಕತೆಯ ಸೂತ್ರಕ್ಕೆ ಹೆಚ್ಚು ಒತ್ತು ಕೊಟ್ಟರು. "ಸ್ವತಂತ್ರ ಭಾರತವು ಸ್ವಾಯತ್ತ ರಾಜ್ಯಗಳ ಒಕ್ಕೂಟವಾಗಬೇಕು ಮತ್ತು ರಾಷ್ಟ್ರೀಯ ಸರಕಾರದ ಕಾರ್ಯವ್ಯಾಪ್ತಿ ರಾಷ್ಟ್ರೀಯವೆನ್ನುವ ಕ್ಷೇತ್ರಗಳಿಗೆ ಮಾತ್ರ ಸೀಮಿತವಾಗಿರಬೇಕು. ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ಪುನರ್ವಿಂಗಡಿಸಿ ಅವುಗಳಿಗೆ ತಮ್ಮ ಅಭಿವೃದ್ಧಿ ಸಾಧಿಸಲು ಹಾಗೂ ಆಶೋತ್ತರಗಳನ್ನು ಈಡೇರಿಸಿಕೊಳ್ಳುವ ಸ್ವಾಯತ್ತ ಅಧಿಕಾರವಿರಬೇಕು." ಇಂತಹ ರಾಜ್ಯವ್ಯವಸ್ಥೆಯಲ್ಲಿ ಗ್ರಾಮಗಳು ರಾಜ್ಯ ವ್ಯವಸ್ಥೆಯ ಮೂಲ ಘಟಕಗಳಾಗಿ ಕೆಲಸ ಮಾಡಬೇಕು ಎನ್ನುವ ಸಿದ್ಧಾಂತವನ್ನು ಮಹಾತ್ಮಾಗಾಂಧಿ ಬೆಳಗಾವಿಯ ಐತಿಹಾಸಿಕ ಅಧಿವೇಶನದಲ್ಲಿ ನಿರೂಪಿಸಿದ್ದರು.

ಈ ಗಾಂಧಿ ಸಿದ್ಧಾಂತವನ್ನು ಅಂದಿನ ರಾಷ್ಟ್ರೀಯ ಕಾಂಗ್ರೆಸ್ ಸರ್ವಾನುಮತದಿಂದ ಅಂಗೀಕರಿಸಿತು. ಮಾರನೆಯ ವರ್ಷದಿಂದಲೇ ಭಾರತ ರಾಷ್ಟ್ರೀಯ ಕಾಂಗ್ರೆಸ್ ತನ್ನ ರಾಜ್ಯ ಘಟಕಗಳನ್ನು ಭಾಷೆಯ ಆಧಾರದಲ್ಲಿ ಪುನರ್ಘಟಿಸಿತು. ಈ ಗಾಂಧಿ ಸಿದ್ಧಾಂತ ಭಿನ್ನ ಭಾರತೀಯರಲ್ಲಿ ಪ್ರಾದೇಶಿಕ ಆಕಾಂಕ್ಷೆಗಳನ್ನು ಹುಟ್ಟಿಸಿ ರಾಷ್ಟ್ರೀಯ ಹೋರಾಟದಲ್ಲಿ ಅವರು ಪೂರ್ಣವಾಗಿ ಮೈಗೊಡುವಂತೆ ಮಾಡಿತೆಂಬುದನ್ನು ನಾವೀಗ ಮರೆಯಬಾರದು. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ವಿಶೇಷ ಚಾಲನೆ ಇದರಿಂದ ಸಿಕ್ಕಿತು.

ದೇಶ ಸ್ವಾತಂತ್ರ್ಯ ಗಳಿಸಿದ ಮೇಲೆ ಕೇಂದ್ರ ಸರಕಾರ ಭಾಷಾವಾರು ರಾಜ್ಯಗಳ ರಚನೆಯ ಬಗ್ಗೆ ಉದಾಸೀನ ಮಾಡಿದಾಗ 1953ರಲ್ಲಿ ಪೊಟ್ಟಿ ಶ್ರೀ ರಾಮುಲು ಎನ್ನುವ ವ್ಯಕ್ತಿ ಆತ್ಮಾಹುತಿ ಮಾಡಿಕೊಂಡದ್ದು ಮತ್ತು ಅದರಿಂದ ಆಂಧ್ರಪ್ರದೇಶಕ್ಕೆ ಬೆಂಕಿಹತ್ತಿಕೊಂಡದ್ದನ್ನೂ ನಾವು ಮರೆಯಬಾರದು.

ಇತಿಹಾಸದಿಂದ ನಾವು ಕಲಿತುಕೊಳ್ಳಬೇಕಾದ ಪಾಠಗಳು ಇಲ್ಲಿವೆ. ಕೇಂದ್ರೀಕೃತ ರಾಜ್ಯವ್ಯವಸ್ಥೆಯಲ್ಲಿ ಪ್ರಾದೇಶಿಕ ಸ್ವಾಯತ್ತೆಯನ್ನು ಅರ್ಥಹೀನವನ್ನಾಗಿ ಮಾಡಿ ನಾವು ರಾಷ್ಟ್ರೀಯ ಸಮಗ್ರತೆಯನ್ನು ರಕ್ಷಿಸುವೆವೆಂದು ತಿಳಿಯುವುದು ಒಂದು ಭ್ರಮೆ. ಈ ಭ್ರಮೆಯಿಂದ ಮುಕ್ತರಾಗಲು ನಮಗೀಗ ಒಂದು ಅವಕಾಶ ಬಂದಿದೆ. ಇಲ್ಲಿಯೂ ನಾವು ಭಾರತದ ರಾಷ್ಟ್ರೀಯತೆಯನ್ನು ಕೇಂದ್ರೀಕರಣದಲ್ಲಿ ಗುರುತಿಸಿ ಪ್ರಾದೇಶಿಕ ಸ್ವಾಯತ್ತೆಯ ಬೇಡಿಕೆಯನ್ನು ತಿರಸ್ಕರಿಸಿದರೆ ಆಗುವುದು ಅನಾಹುತವೇ. ಪಂಜಾಬಿನ ಸಿಕ್ಖರ ಮತಾಂಧತೆಯಷ್ಟೇ ನಮ್ಮ ಸಂಕುಚಿತ ರಾಷ್ಟ್ರೀಯತೆಯೂ ಖಂಡನೀಯವಾಗುತ್ತದೆ.

ಂಬ ಸಾಮಾಜಿಕ ಸಂಘಟನೆಯೊಂದನ್ನು
ಟ್ಟುಹಾಕಿದ್ದಾರೆ.

89-90ನೇ ಸಾಲಿನ ಪದಾಧಿಕಾರಿಗಳ
ಗಿ ಈ ಕೆಳಗಿನವರನ್ನು ಆಯ್ಕೆ ಮಾಡ
ಯಿತು.

ಸಿ. ಎಚ್. ಈಶ್ವರಭಟ್ (ಅಧ್ಯಕ್ಷ),
ಎಚ್. ಕೃಷ್ಣ ನ್ಯಾಕ್ (ಉಪಾಧ್ಯಕ್ಷ),
ಹಮ್ಮದ್ ಸಿ. ಎಚ್. (ಕಾರ್ಯದರ್ಶಿ)
ಭವ ಚೇರಾಲ್ (ಜತೆಕಾರ್ಯದರ್ಶಿ),
ಯುಪ್ಪಾಡಿ (ಖಜಾಂಚಿ), ಮತ್ತು 5
ಸದಸ್ಯರು.

ಅಭಿವೃದ್ಧಿಯನ್ನು ಗಮನದಲ್ಲಿಟ್ಟು
ಕೆಳಗಿನ 5 ಘಟಕಗಳನ್ನು ತೆರೆಯ
ಯಿತು.

ಮಹಮ್ಮದ್ ಅಬ್ದುಲ್ ರಹಿಮಾನ್
ಎಚ್. ಕೃಷಿಕರ ಸಂಘ, ರಮಬಿರಾಘವ
ಹಿಳಾ ಸಂಘ) ಅಬ್ದುಲ್ ರಜಾಕ್
(ಕ್ರೀಡಾಸಂಘ), ರಾಮ ಎ. (ಸಾಂಸ್ಕೃ
-ಶೈಕ್ಷಣಿಕ ಸಂಘ) ಮತ್ತು ಬಾಲ
ಸ-ಆರೋಗ್ಯ ಸಂಘ ವಸಂತ
ಮಾರ್ ಸಿ. ಕೆ.

ಸಿ. ಎಚ್. ಈಶ್ವರ ಭಟ್ ಸಭೆಯ
ಧ್ಯಕ್ಷತೆ ವಹಿಸಿದ್ದರು. ಮಹಮ್ಮದ್ ಸಿ.
ಚ್. ಪ್ರಾಸ್ತಾವಿಕ ಭಾಷಣಮಾಡಿದರು.
ಸಂತ ಕುಮಾರ್ ಸಿ. ಕೆ. ಸ್ವಾಗತಿಸಿದರು.
ಜಪ್ಪ ವಂದಿಸಿದರು.

ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಈ ಬೀಟೆ ಮರಗಳನ್ನು ಕಳ್ಳ ಸಾಗಾ
ಣಿಕೆ ಮಾಡುತ್ತಿರುವ ಬಗ್ಗೆ ನಿರ್ದಿಷ್ಟ
ಸುಳಿವು ಹೊಂದಿದ್ದ ಅರಣ್ಯ ಇಲಾಖೆಯ
ವರು ಶಿಕಾರಿಪುರ ತಾಲೂಕು ಎಕ್ಕಿನಸ್ಸಿ ಬಳಿ
ಕಳ್ಳ ಸಾಗಾಣಿಕೆದಾರರನ್ನು ತಡೆದರು.
ಆದರೆ ಅರಣ್ಯ ಇಲಾಖೆಯವರಿಗೆ ಶರಣಾ
ಗದ ಕಳ್ಳಸಾಗಾಣಿಕೆದಾರರು ಸಿಬ್ಬಂದಿಯೊಂ
ದಿಗೆ ಹೊಡೆದಾಟಕ್ಕೆ ಇಳಿದರು. ನಂತರ
ಕಳ್ಳ ಸಾಗಾಣಿಕೆದಾರರ ಗುಂಪಿನತ್ತ ಅರಣ್ಯ
ಇಲಾಖೆಯವರು ಗುಂಡು ಹಾರಿಸಿದಾಗ
ಆರೋಪಿಗಳು ಓಡಿ ಹೋದರು ಎಂದು
ಇಲ್ಲಿಗೆ ಬಂದ ವರದಿಗಳು ತಿಳಿಸಿವೆ.

ನಂತರ ವಲಯ ಅರಣ್ಯಾಧಿಕಾರಿ ನೀ
ಡಿದ ದೂರಿನನ್ವಯ ಸ್ಥಳಕ್ಕೆ ಧಾವಿಸಿದ
ಪೊಲೀಸರು ಮೊಕದ್ದಮೆಯೊಂದನ್ನು
ದಾಖಲು ಮಾಡಿಕೊಂಡು ಬೀಟೆ ಮರಗ
ಳನ್ನು ವಶಪಡಿಸಿಕೊಂಡಿದ್ದಾರೆ.

ಕಳ್ಳಸಾಗಾಣಿಕೆದಾರರೊಂದಿಗೆ ನಡೆದ
ಹೊಡೆದಾಟದಲ್ಲಿ ಅರಣ್ಯ ಇಲಾಖೆಯ
ಇಬ್ಬರು ಸಿಬ್ಬಂದಿಗಳು ಗಾಯಗೊಂಡಿ
ದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಹಾರಿ
ಸಿದ ಗುಂಡು ಇಬ್ಬರು ಆರೋಪಿಗಳಿಗೆ
ತಗುಲಿರಬಹುದೆಂದು ಪೊಲೀಸರು ಶಂಕಿಸಿ
ದ್ದಾರೆ.

ಆತಂಕ

[?] ಬಳಕೆದಾರರ ಮೇಲೆ ಇತ್ತೀಚೆಗೆ ರಾಜ್ಯ
ವಿದ್ಯುಚ್ಛಕ್ತಿ ಮಂಡಳಿಯವರು ವಿಧಿಸುತ್ತಿ
ರುವ ಠೇವಣಿ ಹೊರೆ ಬಗ್ಗೆ ಶಿವಮೊಗ್ಗದ

ಳನ್ನು ತುಂಬುಬೇಕಾಗುತ್ತದೆ ಎಂದು
ಸಮಿತಿ ಎಚ್ಚರಿಕೆ ನೀಡಿದೆ.

ಇತ್ತೀಚೆಗೆ ನಡೆದ ಸಮಿತಿಯ ಸಭೆ
ಯಲ್ಲಿ ಕೆ. ಶ್ರೀನಿವಾಸ ಅಯ್ಯಂಗಾರ್, ಎ.
ನಾಗೇಂದ್ರರಾವ್ ಮತ್ತು ಜಿ. ಗಣೇಶ್
ಮಾತನಾಡಿದರು.



ಹೊಸದಿಲ್ಲಿಯಲ್ಲಿ ಜನವರಿ 26ರಂದು
ನಡೆದ ಗಣರಾಜ್ಯೋತ್ಸವ ಪೆರೇಡಿನಲ್ಲಿ
ಭಾಗವಹಿಸಿದ ಶಿರ್ವ ಸ್ಯೆಂಟ್ ಮೇರಿಸ್
ಕಾಲೇಜಿನ ವಿದ್ಯಾರ್ಥಿ ಕಿಶೋರ್ ಹೆಗ್ಡೆ.

ಪ್ರಗತಿರಂಗದ ಸಭೆ

ಕಾರವಾರ, ಮಾ. 4– ಉತ್ತರ ಕನ್ನಡ
ದಲ್ಲಿ ಕರ್ನಾಟಕ ಪ್ರಗತಿ ರಂಗ ಶಾಖೆ
ಯನ್ನು ಪಕ್ಷದ ಸಂಘಟನೆ ಮಾಡಲು
ಇತ್ತೀಚೆಗೆ ಹೊನ್ನಾವರದಲ್ಲಿ ಸೇರಿದ ಸಭೆ
ಜಿಲ್ಲಾ ಸಂಚಾಲಕರನ್ನಾಗಿ
ವಿವೇಕಾನಂದ ತಾಂಡೇಲ ಅವರನ್ನು
ಆಯ್ಕೆ ಮಾಡಿದೆ.

ಪ್ರಗತಿ ಪರವಾಗಿ
ಯೋಚಿಸುವ ಹೊಸ ಗುಂಪೊಂದನ್ನು ಆ
ದಿಸೆಯಲ್ಲಿ ಸಂಘಟಿಸುವ ಪ್ರಯತ್ನ ಮಾಡ
ಬೇಕೆಂದು ಸಭೆ ನಿರ್ಧರಿಸಿತಲ್ಲದೆ, ಸ್ಪರ್ಧಾ
ತ್ಮಕ ಸಮಯ ಸಾಧಕರನ್ನು ದೂರವಿಡ
ಬೇಕೆಂದು ನಿರ್ಧರಿಸಲಾಗಿದೆ. ಗ್ರಾಮಾಂ
ತರ ಪ್ರದೇಶದಲ್ಲಿ ಪಕ್ಷವನ್ನು ಬಲಿಯುತ
ವಾಗಿ ಸಂಘಟಿಸಿ ಅಲ್ಲಿನ ಸಮಸ್ಯೆಗಳ ಬಗ್ಗೆ
ಅಭ್ಯಸಿ ಅವುಗಳ ಪರಿಹಾರಕ್ಕಾಗಿ ಪ್ರಯ
ತ್ನಿಸಬೇಕಾಗಿದೆ ಎಂದು ಸಭೆ ಅಭಿಪ್ರಾಯ
ಪಟ್ಟಿದೆ.

ಪ್ರಗತಿ ರಂಗದ ಕಾರ್ಯಕರ್ತರಿಗೆ
ಮತ್ತು ಆಸಕ್ತರಿಗೆ ಒಂದು ದಿನದ
ಅಭ್ಯಾಸ ವರ್ಗವನ್ನು ಮಾರ್ಚ್ ತಿಂಗಳ
ನಲ್ಲಿ ಹಮ್ಮಿಕೊಳ್ಳಲು ಸಭೆ ತೀರ್ಮಾನಿ
ಸಿದ್ದು, ಆಸಕ್ತರು ವಿವೇಕಾನಂದ
ತಾಂಡೇಲ ಮಾರದಕೇರಿ ಹೊನ್ನಾವರ
ಇವರನ್ನು ಸಂಪರ್ಕಿಸಬೇಕೆಂದು ಪ್ರಕಟಣೆ
ತಿಳಿಸಿದೆ.



ಕೊಂಕಣ ರೈಲು ಮಾರ್ಗ ಪೂರ್ಣಗೊಳಿಸಲು ಒತ್ತಾಯ

ಮಂಗಳೂರು, ಮಾ. 4– ಕೊಂಕಣ
ರೈಲು ಮಾರ್ಗವನ್ನು 8ನೇ ಪಂಚ
ವಾರ್ಷಿಕ ಯೋಜನೆಯಲ್ಲಿ ಪೂರ್ಣಗೊಳಿ
ಸುವಂತೆ ರಾಜ್ಯದ ಜನತಾ ದಳದ
ಸಂಸತ್ ಸದಸ್ಯರ ಮೂಲಕ ಕೇಂದ್ರ
ಸರಕಾರವನ್ನು ಒತ್ತಾಯಿಸಲು ಮಂಗ
ಳೂರು ತಾಲೂಕು ಜನತಾದಳ ಸಭೆ
ನಿರ್ಣಯ ಅಂಗೀಕರಿಸಿದೆ.

ಇತ್ತೀಚೆಗೆ ಜನತಾ ದಳ ಮಂಗಳೂರು
ತಾಲೂಕು ಘಟಕದ ಅಧ್ಯಕ್ಷ ಎಂ.
ಜೀವ ಅವರ ಅಧ್ಯಕ್ಷತೆಯಲ್ಲಿ ಜರಗಿದ
ಸಭೆಯಲ್ಲಿ ಪ್ರಧಾನ ಕಾರ್ಯದರ್ಶಿ
ಮಹಮ್ಮದ್ ಮಂಜನಾಡಿ ಅವರು
ಮಂಡಿಸಿದ ನಿರ್ಣಯವನ್ನು ಸಭೆ ಅಂಗೀ
ಕರಿಸಿತು.

ಮುಂದಿನ ಹಣಕಾಸು ವರ್ಷದಲ್ಲಿ
ಮಂಗಳೂರು–ಉಡುಪಿ ರೈಲು ಮಾರ್ಗ ವ
ಪೂರ್ಣಗೊಳ್ಳಲು ಬೇಕಾದ ಹಣವನ್ನು
ತೆಗೆದ ಮಾಡುವಂತೆಯೂ ಒತ್ತಾಯಿ
ಸಲಾಯಿತು.

ಪ್ರತೀ 5 ವರ್ಷಕ್ಕೊಮ್ಮೆ ಪುನರ್
ಪರಿಶೀಲನೆ ಮಾಡಬೇಕಾಗಿದ್ದರೂ ಕಳೆದ
ಸ್ಥಳೀಯ ನಗರ ಪಾಲಿಕೆಯು ಇದನ್ನು
ಮಾಡದಿದ್ದು, ಈಗ ಬರ್ಬಸ್ತು
ಎಡ ಬಳಕೆ ಸರಕಾರದ ಮೇಲೆ
ಹೇಪ ಹೊರಿಸುವ ದೃಷ್ಟಿಯಿಂದ
ಕೈಗೊಳ್ಳಲಾಗುತ್ತಿದೆ ಎಂದು
ಸಿದ ಸಭೆ ನಗರ ಪ್ರದೇಶದಲ್ಲಿ ಸ್ವಂತ
ಮಾಗಿರುವ ಮನೆ ಮಾಲೀಕರಿಗೆ ಈಗ
ಡಿದ ದರವು ಹೆಚ್ಚಿನ ಹೊರೆಯಾಗಿರು
ರಿಂದ ಪುನರ್ ಪರಿಶೀಲಿಸಬೇಕೆಂದು
ಯ ಪಡಿಸಲಾಗಿದೆ.

ಜಿಲ್ಲೆಯಾದ್ಯಂತ ಭೂ ಪರಿವರ್ತನೆ
ಮದಿಂದ ಸಾರ್ವಜನಿಕರಿಗೆ ತುಂಬಾ
ತೊಂದರೆ ಉಂಟಾಗುವುದರ ಬಗ್ಗೆ ಚರ್ಚಿ
ಜನತಾದಳ ಸಭೆ ಈ ಬಗ್ಗೆ ಜಿಲ್ಲಾ
ಧಿಕಾರಿಯವರಲ್ಲಿ ಚರ್ಚಿಸಿ ಸಾರ್ವಜನಿಕ
ಉಂಟಾಗುವ ತಿರುಕುಳವನ್ನು ತಪ್ಪಿ
ಸಲು ಕಾನೂನಿನಲ್ಲಿ ವಿನಾಯಿತಿ ನೀಡು
ವಂತೆ ಮುಖ್ಯ ಮಂತ್ರಿಯವರನ್ನು ಕೇಳಿ
ಕೊಳ್ಳಲು ನಿರ್ಣಯಿಸಲಾಯಿತು.

ಗ್ರಾಮಾಂತರ ಪ್ರದೇಶಗಳಲ್ಲಿ ವಸತಿ
ಹೀನರು ಸರಕಾರಿ ಜಮೀನನ್ನು ಮನೆ
ನಿವೇಶನಕ್ಕೆ ಕೋರಿ ಅರ್ಜಿ ಸಲ್ಲಿಸಿ ವರ್ಷಗ
ಳಾಗಿದ್ದರೂ ಸಂಬಂಧಿಸಿದ ಅಧಿಕಾರಿಗಳು
ಈ ಕುರಿತು ಕಾರ್ಯ ಪ್ರವೃತ್ತರಾಗದಿರು
ವುದಕ್ಕೆ ಸಭೆ ವಿಷಾದಿಸಿದೆ.

ಭತ್ತದ ಕೃಷಿ ಕಡಿಮೆ ಇರುವ
ಗ್ರಾಮಾಂತರ ಪ್ರದೇಶಗಳಿಗೂ ಪಡಿತರ
ಪ್ರದೇಶಕ್ಕೆ ಒದಗಿಸುವ ಪ್ರಮಾಣದಲ್ಲೇ
ಆಹಾರ ಸಾಮಾಗ್ರಿಗಳನ್ನು ಒದಗಿಸ
ಬೇಕೆಂದೂ ನಿರ್ಣಯಿಸಲಾಯಿತು.

ಸಿಟಿ ಬಸ್ ದರಗಳನ್ನು ಏರಿಸಿರುವು
ದನ್ನು ಜನತಾದಳ ಸಭೆ ಖಂಡಿಸಿ ಏರಿಸಿ
ರುವ ದರವನ್ನು ಕೂಡಲೇ ಇಳಿಸುವಂತೆ
ಒತ್ತಾಯಿಸಿ ನಿರ್ಣಯ ಕೈಗೊಂಡಿದೆ.

ಎಂದು ಅದೊಂದು ರುಚಿಯು
ವಸ್ತುವಾಗಿದೆಯೋ, ಮತ್ತು
ಏಕಾಂತದಲ್ಲಿ ಸವಿಯುತ್ತೀರೋ,

ಪಿ.ಜಿ.ಯ
ಹಸ್ಮುಖ್ ಚಹಾ
ನಿಮ್ಮ ದೈನಂದಿನ ಸಂತಸದಾಯಕದ ಒಂದು ಕಪ್
ಆಯ್ದ ಚಹಾ ಎಲೆಗಳಿಂದ ಅತ್ಯುತ್ಕೃಷ್ಟವಾಗಿ ಸಂಸ್ಕರಿಸಿದ
ಸ್ವಾದಿಷ್ಟ ಹಾಗೂ ಪರಿಮಳಯುಕ್ತ ಶ್ರೇಷ್ಠ ವರ್ಗದ ಸಂತೃಪ್ತಿ ನೀಡುವ ಚಹಾ.

ಹಸ್‌ಮುಖ್ ಎಂಡ್ ಕೊ (ಪಿ.ಜಿ.)
ಪ್ರಧಾನ ಕಛೇರಿ: 366, ಕಲ್ಬಾದೇವಿ ರಸ್ತೆ, ಡಾ. ವೇಗಸ್ ರಸ್ತೆಯ ತಿರುವು,
ಮುಂಬಾಯಿ-400 002 ಫೋನ್: 259887, 313520, 255855
ಶಾಖೆಗಳು: • ಪೈಧೋಣಿ: 327243 • ಘಾಟ್‌ಕೋಪರ್: 5139504
• ಥಾಣಾ: 506529 • ಫೋರ್ಟ್: 269597 • ದಾದರ್: 4303105
• ಮಲಾಡ್: 690592 • ಬೊರಿವಲಿ: 651164
Sai-HPG-7

ಮುಂಗಾರು

ಗುರುವಾರ, ಮಾರ್ಚ್ 23, 1989

ವಿಷ ಉಣ್ಣಿಸುವ ಕೆಲಸ ಮಾಡಬೇಡಿ

ಕೈಗಾದ ಅಣು ವಿದ್ಯುದಾಗರ ಸ್ಥಾಪನೆಗೆ ಯಾರು-ಎಷ್ಟೇ ವಿರೋಧ ಮಾಡಿದರೂ ಅದನ್ನು ಲೆಕ್ಕಿಸದೆ ಯೋಜನೆಯ ಕೆಲಸವನ್ನು ಮುಂದುವರಿಸಿಕೊಂಡು ಹೋಗುವುದಾಗಿ ಕಂದಾಯ ಸಚಿವ ಜೆ.ಎಚ್. ಪಟೇಲ್ ಮಂಗಳವಾರ ವಿಧಾನಸಭೆಯಲ್ಲಿ ಹೇಳಿದರೆಂದು ವರದಿಯಾಗಿದೆ. ಕೈಗಾ ಯೋಜನೆಯನ್ನು ಕೈಬಿಡುವಂತೆ ಒತ್ತಾಯಿಸಿ ಉತ್ತರ ಕನ್ನಡ ಜಿಲ್ಲಾ ಪರಿಷತ್ತು ಮಾಡಿರುವ ನಿರ್ಣಯವೂ ಯೋಜನೆಯ ಮೇಲೆ ಪ್ರಭಾವ ಬೀರದೆಂದೂ ಸಚಿವ ಪಟೇಲ್ ಹೇಳಿದರೆಂದು ವರದಿ ತಿಳಿಸುತ್ತದೆ.

ಕಳೆದ ಮೂರು ವರ್ಷಗಳಿಂದ ವಿವಾದಗ್ರಸ್ತವಾಗಿರುವ ಈ ಕೈಗಾ ಅಣುವಿದ್ಯುತ್ ಸ್ಥಾವರದ ಬಗ್ಗೆ ಸಚಿವ ಪಟೇಲ್ ಈಗ ಆಡಿರುವ ಸ್ಪಷ್ಟ ಮಾತುಗಳು "ಏನೇ ಆದರೂ ಕೈಗಾದಲ್ಲಿ ಅಣುವಿದ್ಯುತ್ ಸ್ಥಾವರವನ್ನು ಕಟ್ಟಿಯೇ ಸಿದ್ಧ" ಎನ್ನುವ ಸರಕಾರಿ ಉದ್ಧಟತನವನ್ನು ಪ್ರದರ್ಶಿಸುತ್ತದೆ. ಅಧಿಕಾರಸ್ಥ ಜನ ಮಾಡುವ ತೀರ್ಮಾನಕ್ಕೆ ಜನ ಮಣಿಯಲೇಬೇಕೆಂಬ "ಸರಕಾರಿ ಅಹಂ"ನ ವಾಸನೆಯೂ ಸಚಿವರ ಮಾತುಗಳಲ್ಲಿದೆ.

ಮಾನ್ಯ ಜೆ. ಎಚ್. ಪಟೇಲರು ಸಚಿವರಾಗಿರುವ ಸರಕಾರ ಜನಹಿತಕ್ಕೆ ಪೂರಕವಾದ ಕೆಲಸಗಳನ್ನು ಮಾಡಲು ಜನರಿಂದ ಆಯ್ಕೆಯಾದ ಸರಕಾರ. ಸರಕಾರಕ್ಕೆ ಸರಿಕಂಡುದೆಲ್ಲಾ ಜನಸಮೂಹಕ್ಕೆ ಹಿತಕಾರಿಯಾಗಬೇಕೆಂಬ ನಿಯಮವೇನಿಲ್ಲ. ತಮಗೆ ಏನು ಬೇಕು-ಯಾವುದು ಬೇಡ ಎನ್ನುವುದನ್ನು ಸರಕಾರಕ್ಕೆ ತಿಳಿಸುವ ಹಕ್ಕು ಜನತೆಗೆ ಇದೆ. ಅಣುವಿದ್ಯುದಾಗರ ನಿರ್ಮಾಣಕ್ಕೆ ಆಯ್ಕೆಯಾದ ಉತ್ತರ ಕನ್ನಡ ಜಿಲ್ಲೆಯ ಕೈಗಾದ ಸುತ್ತ-ಮುತ್ತಲಿನ ಜನ ಅಣುವಿದ್ಯುದಾಗರ ತಮ್ಮ ಹಿತಕ್ಕೆ ಮಾರಕವಾಗಲಿದೆಯೆಂಬುದನ್ನು ಹೇಳುತ್ತಲೇ ಬಂದಿದ್ದಾರೆ. ಪರಿಸರಕ್ಕೆ ಅಣು ವಿಕಿರಣವನ್ನು ಚಿಮುಕಿಸುತ್ತಲೇ ಬರುವ ಅಣುವಿದ್ಯುದಾಗರ ಸುತ್ತ-ಮುತ್ತಲಿನ ಜನರ ಬದುಕಿಗೆ ವಿಷ ಉಣ್ಣಿಸುವ ಕೇಂದ್ರವಾಗುವುದೆಂಬ ಭಯ ವ್ಯಕ್ತಪಡಿಸಿದ್ದಾರೆ. ಸಾಹಿತಿಗಳು, ವಿಜ್ಞಾನಾಸಕ್ತರು, ಪರಿಸರ ಪ್ರೇಮಿಗಳು ಹಾಗೂ ಪ್ರಜ್ಞಾವಂತ ಪ್ರಜಾ ಸಮೂಹ ಜನತಾಂತ್ರಿಕ ವಿಧಾನಗಳಲ್ಲಿ ತಮ್ಮ ಭಾವನೆಗಳನ್ನು ಪ್ರಕಟಪಡಿಸಿದ್ದಾರೆ.

ಒಂದು ನಾಗರಿಕ ಸಮಾಜದಲ್ಲಿ ಪ್ರಜಾವರ್ಗ ತಮ್ಮ ಬೇಕು-ಬೇಡಗಳನ್ನು ಪ್ರಭುತ್ವಕ್ಕೆ ತಿಳಿಸಲು ಅನುಸರಿಸಬಹುದಾದ ಎಲ್ಲ ಸಭ್ಯ ಮಾರ್ಗಗಳನ್ನೂ ಕೈಗಾ ಅಣುಸ್ಥಾವರ ವಿರೋಧಿಗಳು ಅನುಸರಿಸಿದ್ದಾರೆ. ಸಭೆ-ಮೆರವಣಿಗೆಗಳನ್ನು ನಡೆಸಿ ತಮಗಿದು ಬೇಡವಾದ ಯೋಜನೆಯೆಂದು ಹೇಳಿದ್ದಾರೆ. ಸತ್ಯಾಗ್ರಹ ಹೂಡಿದ್ದಾರೆ. ಅಣುಸ್ಥಾವರದ ಅದ್ವರ್ಯುಗಳಾದ ಅಣು ವಿಜ್ಞಾನಿಗಳ ವಾದಕ್ಕೆ ವಿಚಾರಗೋಷ್ಠಿಗಳಲ್ಲಿ ಸಮರ್ಥ ಸವಾಲೆಸೆದಿದ್ದಾರೆ. ಅಣುವಿದ್ಯುದಾಗರದ ಅಪಾಯಕಾರಿ ಆವಿಷ್ಕಾರಗಳ ಬಗ್ಗೆ ತರ್ಕಬದ್ಧವಾದ ಮಾಹಿತಿಗಳನ್ನು ಸಂಗ್ರಹಿಸಿ ಹೊತ್ತಗೆಗಳನ್ನು ಹೊರತಂದಿದ್ದಾರೆ. ವೈಜ್ಞಾನಿಕ ಅನ್ವೇಷಣೆಗಳಲ್ಲಿ ವಾಪ್ಪುಗಾಲಿಡುತ್ತಿರುವ ಮುಂದುವರಿದ ದೇಶಗಳು ಅಪಾಯಕಾರಿ ಅಣು ವಿದ್ಯುದಾಗರಗಳ ವಿಸರ್ಜನೆ ಮಾಡುತ್ತಿರುವುದರ ಮಾಹಿತಿಗಳನ್ನು ಸಂಗ್ರಹಿಸಿ ಮುಂದಿಟ್ಟಿದ್ದಾರೆ.

ಇಷ್ಟೆಲ್ಲ ಆದ ಮೇಲೂ ಸರಕಾರಿ ವಿಜ್ಞಾನಿಗಳು ಮತ್ತು ರಾಜಕೀಯ ಪ್ರಭುಗಳು 'ತಾವು ವಿರೋಧಿಗಳ ಚೀರಾಟಕ್ಕೆ ಬೆಲೆ ಕೊಡುವುದಿಲ್ಲ. ತಮಗಿಷ್ಟ ಬಂದಂತೆ ಮಾಡುತ್ತೇವೆ' ಎನ್ನುವ ಧಾಟಿಯಲ್ಲಿ ಮಾತನಾಡುತ್ತಿರುವುದು ತೀರಾ ವಿಷಾದನೀಯ ಸಂಗತಿ. ಒಂದು ವೇಳೆ ಪ್ರಜಾವರ್ಗ ಹಿಡಿದಿರುವ ಪಟ್ಟು ಸಾಧುವಾದುದಲ್ಲವೆಂದು ಸರಕಾರಿ ಪ್ರಭುಗಳಿಗೆ ಪ್ರಾಮಾಣಿಕವಾಗಿ ಅನ್ನಿಸಿದರೂ ಜನರಿಗೆ ಅದನ್ನು ತಿಳಿಯ ಹೇಳಿ ಅವರ ಒಲವನ್ನು ಗಳಿಸಬೇಕಾದ ಕರ್ತವ್ಯ ಸರಕಾರದ ಮೇಲಿದೆ.

ಆದರೆ ಮಂಗಳವಾರ ಸಚಿವ ಜೆ. ಎಚ್. ಪಟೇಲರು ವಿಧಾನಸಭೆಯಲ್ಲಿ ಮಾಡಿದ ಹೇಳಿಕೆಯಲ್ಲಿ ಪ್ರಜಾಭಿಪ್ರಾಯವನ್ನು ಕ್ಷುಲ್ಲಕವಾಗಿ ಕಾಣುವ ಅಧಿಕಾರದ ಅಮಲಿನ ದುರ್ವಾಸನೆ ಬಡಿಯುತ್ತಿದೆ. ಸಚಿವ ಪಟೇಲರು ಜನಾಭಿಪ್ರಾಯಕ್ಕೆ ಮಿಡಿಯುವ ಮನಸ್ಸುಳ್ಳ ಒಬ್ಬ ಅಪ್ಪಟ ಜನತಂತ್ರವಾದಿಯೆಂದು ನಂಬಿದ್ದ ನಮಗೆ ಅವರ ಮಾತಿನ ಧಾಟಿಯಿಂದ ಅತೀವ ಆಶ್ಚರ್ಯವಾಗಿದೆ. ಸಮೂಹ ಹಿತಕ್ಕೆ ಸಂಬಂಧಿಸಿದ ಯಾವುದೇ ವಿಚಾರವಾದರೂ ಅದು ಸಮೂಹ ಜಿಜ್ಞಾಸೆಯ ಮೂಸೆಯಲ್ಲಿ ಪುಟಗೊಳ್ಳಬೇಕೆಂಬ ಸಮಾಜವಾದಿ ಸಿದ್ಧಾಂತವನ್ನು ಒಂದು ಕಾಲದಲ್ಲಿ ಮೆರೆದಾಡಿಸಿದ ಸಚಿವ ಪಟೇಲರು ಈಗ ಜಿಜ್ಞಾಸೆಗೆ ಅಸಹನೆ ತೋರಿಸುತ್ತಿರುವುದು ನಿಜಕ್ಕೂ ಖೇದಕರ.

ಮಾನ್ಯ ಪಟೇಲರ ಸರಕಾರವೀಗ ಕೈಗಾದಲ್ಲಿ ಕಟ್ಟಲು ಹೊರಟಿರುವ ಅಣುವಿದ್ಯುತ್ ಸ್ಥಾವರ ಜಾರಿಗಾಗಿ ಇದರ ಸಾಧಕ-ಬಾಧಕಗಳನ್ನು ನಾಳೆ ಅನುಭವಿಸುವವರು ಇದೇ ಜನ. ಮೂರು ವರ್ಷಗಳ ಹಿಂದೆ ರಶ್ಯಾದ ಚೆರ್ನೋಬೈಲ್ ಅಣುವಿದ್ಯುತ್ ಸ್ಥಾವರದಲ್ಲಿ ವಿಕಿರಣ ಸೋರಿಕೆಯಾಗಿ ಸುತ್ತಲಿನ ಲಕ್ಷಾಂತರ ಮಂದಿಯ ಬದುಕನ್ನು ಬೂದಿ ಮಾಡಿದಂತೆ ನಾಳೆ ಪಟೇಲರ ಸರಕಾರ ಕಟ್ಟುವ ಕೈಗಾ ಅಣುವಿದ್ಯುತ್ ಸ್ಥಾವರದಲ್ಲಿ ವಿಕಿರಣ ಸೋರಿಕೆಯಾದರೆ ಸಾಲುಗಟ್ಟಿ ಸಾಯುವವರು ಈ ನಾಡಿನ ಬಡ ಕನ್ನಡಿಗರು. ಇಂತಹ ಸೋರಿಕೆಯಾಗದಂತೆ ಎಲ್ಲಾ ಭದ್ರತೆಯ ಕ್ರಮಗಳನ್ನೂ ಕೈಗೊಳ್ಳುವೆನೆಂಬ ಸರಕಾರಿ ವಿಜ್ಞಾನಿಗಳ ಭರವಸೆಯ ಮಾತುಗಳಲ್ಲಿ ನಂಬಿಕೆ ಇಡಲು ನಮ್ಮ ಜನ ಸಿದ್ಧರಿಲ್ಲವೆಂಬುದು ಸಚಿವ ಪಟೇಲರಿಗೆ ತಿಳಿದಿರಲೇಬೇಕು. ಈ ದೇಶದಲ್ಲಿ ನಡೆವ ಯಾವುದೇ ಸಾರ್ವಜನಿಕ ಕಾಮಗಾರಿಗಳಲ್ಲೂ ಕನಿಷ್ಠ ಗುಣಮಟ್ಟವನ್ನು ಉಳಿಸಿಕೊಳ್ಳಲಾಗದಷ್ಟು ನಮ್ಮ ಸರಕಾರಿ ವ್ಯವಸ್ಥೆ ಭ್ರಷ್ಟವಾಗಿದೆಯೆಂಬುದರ ಸ್ಪಷ್ಟ ಅರಿವು ಸಚಿವ ಪಟೇಲರಿಗೆ ಇರಲೇಬೇಕು. ಭೋಪಾಲದ ಅನಿಲ ಸ್ಥಾವರದಲ್ಲಿ ವಿಷಾನಿಲ ಸೋರಿಕೆಯಾಗಿ ಸಾವಿರಾರು ಮಂದಿ ಯಾಕೆ ಸತ್ತರೆಂಬುದರ ಸತ್ಯಕಥೆ ಸಚಿವ ಪಟೇಲರಿಗೆ ಗೊತ್ತಿರಲೇಬೇಕು. ಗುಜರಾತಿನ ಮೋರ್ವಿ ಜಲಾಶಯ ಯಾಕೆ ಒಡೆದು ಹೋಯಿತು-ಅದರಲ್ಲಿ ಹತ್ತು ಸಹಸ್ರ ಮಂದಿ ಹೇಗೆ ಕೊಚ್ಚಿಹೋದರೆಂಬುದರ ಒಳ-ತಳ ತಿಳಿಯದವರು ಪಟೇಲರಲ್ಲ. ಪಟೇಲರು ಈಗ ಪ್ರತಿನಿಧಿಸುತ್ತಿರುವ ಸರಕಾರಿ ವ್ಯವಸ್ಥೆ ಕಟ್ಟಿರುವ ಶಾಲಾ ಕಟ್ಟಡಗಳು ಮನೆಗಳು, ಸೇತುವೆಗಳು ಕುಸಿದು ಬೀಳುತ್ತಿರುವುದು ಮಾಮೂಲಿಯಾಗಿದೆ. ಇಂತಹ ಒಂದು ಭ್ರಷ್ಟ ಸರಕಾರಿ ವ್ಯವಸ್ಥೆ ಕೈಗಾದಲ್ಲಿ ಅಪಾಯ ರಹಿತವಾದ ಒಂದು ಭದ್ರ ಅಣುಸ್ಥಾವರವನ್ನು ಬಿಗಿಯುವುದೆಂಬ ಭರವಸೆ ಏನಿದೆ.?- ಎಂದೀಗ ಸಚಿವ ಪಟೇಲರನ್ನು ಕೇಳಬೇಕಾಗಿದೆ.

ಈ ನಾಡಿನಲ್ಲೀಗ ವಿದ್ಯುತ್ತಿನ ಅಭಾವವಿದೆ. ಇದರಿಂದಾಗಿ ನಾಡಿನ ಆರ್ಥಿಕ ಮುನ್ನಡೆ ಕುಂಠಿತವಾಗಿದೆ. ಆದ್ದರಿಂದ ಅಧಿಕ ವಿದ್ಯುತ್ ಉತ್ಪಾದನೆಗೆ ಆದ್ಯ ಗಮನ ಕೊಡಬೇಕಾದ ಹೊಣೆ ಸರಕಾರದ ಮೇಲಿದೆಯೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ವಿದ್ಯುತ್ ಉತ್ಪಾದನೆಗೆ ಅಣುಶಕ್ತಿಯೊಂದೇ ನಮಗಿರುವ ಮೂಲವಲ್ಲ. ಈ ನಾಡಿನಲ್ಲಿ ಅಪಾರವಾದ ಜಲ ವಿದ್ಯುನ್ಮೂಲಗಳಿವೆ. ಗೃಹ ಬಳಕೆಗೆ ವ್ಯಾಪಕವಾಗಿ ಜೈವಿಕ ಅನಿಲ ಉತ್ಪಾದನೆಯ ಅವಕಾಶಗಳಿವೆ. ಸೌರ ಶಕ್ತಿಯ ಸೆರೆ ಹಿಡಿವ ಸಾಧ್ಯತೆಗಳಿವೆ. ಇವೆಲ್ಲಾ ಅಧಿಕ ವೆಚ್ಚದ ಬಾಬುಗಳೆಂದು ಸರಕಾರ ತಿಳಿಯುವುದಾದರೆ ಇಂದು ಮುಂಬಯಿ ಬಳಿಯ ಪೆಟ್ರೋಲಿಯಂ ಬಾವಿಗಳಿಂದ ಹೊರಹೊಮ್ಮಿ ಸುಟ್ಟುಹೋಗುತ್ತಿರುವ ಗ್ಯಾಸಿಗೆ ಕೊಳವೆಗಳನ್ನು ಜೋಡಿಸಿ ಕರ್ನಾಟಕಕ್ಕೆ ತಂದು ನಮಗೆ ಬೇಕಾದಷ್ಟು ವಿದ್ಯುತ್ ಉತ್ಪಾದನೆ ಮಾಡಲು ಸಾಧ್ಯವಿದೆ. ಇವೆಲ್ಲಾ ವಿದ್ಯುತ್ ಉತ್ಪಾದನೆಗೆ ನಮ್ಮ ಮುಂದೆ ತೆರೆದಿರುವ ಅಪಾಯ ರಹಿತ ಅವಕಾಶಗಳು.

ಇಂತಹ ಉತ್ತಮ ಅವಕಾಶಗಳ ಬಳಕೆಗೆ ಶ್ರಮ ವಹಿಸುವುದನ್ನು ಬಿಟ್ಟು ಮನುಕುಲಕ್ಕೆ ಮಾರಕವಾಗಿ ಉಗಮಿಸಿರುವ ಅಣುಶಕ್ತಿಯ ಆಗರಗಳನ್ನು ನಿರ್ಮಿಸಿ ಈ ನಾಡಿನ ಮುಗ್ಧ ಜನರನ್ನು ನಿಧಾನವಾಗಿ ಸಾಯಿಸುವ ಕೆಲಸದಲ್ಲಿ ಯಾರೂ ಪಟ್ಟು ಹಿಡಿಯಬಾರದು.

ರಾಜಕಾರಣಿಗಳಾದವರು ಸಮಾಜ ಸ್ವಾಸ್ಥ್ಯದ ರಕ್ಷಕರಾಗಬೇಕು ಜನಜೀವನಕ್ಕೆ ಭವ್ಯತೆಯ ರೂಪುಗೊಡುವ ಶಿಲ್ಪಿಗಳಾಗಬೇಕು. ಜನರ ಒಡಲಿನಿಂದ ಉಕ್ಕಿ ಬರುವ ಭಾವನೆಗಳಿಗೆ ಸ್ಪಂದಿಸುವ ಸಹೃದಯಿಗಳಾಗಬೇಕು. ಸರಕಾರ ಮಾಡುವ ಕೆಲಸಗಳೆಲ್ಲಾ ಸರಿಯೆಂಬ ಉದ್ಧಟತನ ಇರಬಾರದು. ಸಚಿವ ಪಟೇಲರು ಈಗಲಾದರೂ ತಾವು ಮಾಡುತ್ತಿರುವ ತಪ್ಪಿನ ಮನವರಿಕೆ ಮಾಡಿಕೊಳ್ಳಲೆಂದು ನಾವು ಆಶಿಸುತ್ತೇವೆ.

'ಗ್ರಾಮೀಣ ಅಭಿವೃದ್ಧಿಗೆ ಆದ್ಯತೆ ನೀಡಬೇಕು'

ಪಕ್ಷಿಕೆರೆ, ಮಾ. 22– ಭಾರತದ ಸರ್ವಾಗ್ರ ಅಭಿವೃದ್ಧಿಯ ದೃಷ್ಟಿಯಿಂದ ಹಳ್ಳಿ ಪ್ರದೇಶಗಳಿಗೆ ಆದ್ಯ ಗಮನ ನೀಡುವುದು ತೀರಾ ಅವಶ್ಯವಾಗಿದೆ. ಈ ದಿಸೆಯಲ್ಲಿ ಸರಕಾರ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ಮುಂದಾಗಬೇಕು ಎಂದು ದ. ಕ. ಜಿಲ್ಲಾ ಪರಿಷತ್ ಉಪಾಧ್ಯಕ್ಷೆ ಲೀನಾ ಮಥಾಯಸ್ ಕರೆ ನೀಡಿದರು.

ಸ್ಥಳೀಯ ಸ್ವಉದ್ಯೋಗ ತರಬೇತಿ ಸಂಸ್ಥೆ 'ರುಸೆಟ್'ನ ತರಬೇತಿ ಶಿಬಿರವನ್ನು ಇತ್ತೀಚೆಗೆ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ದೇಶದ ಜನಸಂಖ್ಯೆಯ ಬಹುಭಾಗ ಗ್ರಾಮೀಣ ಪ್ರದೇಶಗಳಲ್ಲಿದ್ದರೂ, ನಮ್ಮ ಬಜೆಟ್, ಯೋಜನೆ ಇತ್ಯಾದಿಗಳು ನಗರ ಪ್ರದೇಶಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡು ಮಾಡುವುದಾಗಿದೆ. ಗ್ರಾಮೀಣ ನಿರುದ್ಯೋಗಿ ಯುವಕರಿಗೆ ಸ್ವೋದ್ಯೋಗ ಕಲ್ಪಿಸುವ ಸರಕಾರದ ಹಲವಾರು ಕಾರ್ಯಕ್ರಮಗಳಿದ್ದರೂ ಅದರ ಉಪಯೋಗವನ್ನು ಜನತೆ ಸರಿಯಾಗಿ ಪಡೆಯುತ್ತಿಲ್ಲ ಎಂದು ವಿಷಾದಿಸಿದರು.

ಈ ದಿಸೆಯಲ್ಲಿ 'ರುಸೆಟ್'ನ ಕಾರ್ಯಕ್ರಮಗಳು ಶ್ಲಾಘನೀಯ ಎಂದು ಅವರು ಹೇಳಿದರು. ನಂತರ ಅವರು ವಿವಿಧ ವೃತ್ತಿ ತರಬೇತಿ ಘಟಕಗಳಿಗೆ ಭೇಟಿಯಿತ್ತು ಅವುಗಳನ್ನು ವೀಕ್ಷಿಸಿದರು.

ಜಿಲ್ಲಾ ಪರಿಷತ್ ಸದಸ್ಯರಾದ ಸುಗಂಧಿ (ಹಳೆಯಂಗಡಿ) ಮತ್ತು ಎಮ್ಮಿನ್ ಸಿಕ್ವೇರಾ (ಕಿನ್ನಿಗೋಳಿ) ಅವರು ಮುಖ್ಯ ಅತಿಥಿಗಳಾಗಿದ್ದರು. ಕಿನ್ನಿಗೋಳಿ ರೋಟರಿ ಕ್ಲಬ್ ಅಧ್ಯಕ್ಷ ಡಾ। ಸತೀಶ್ ಹೊಳ್ಳ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ರಾಜ್ ಕುಮಾರ್ ಸ್ವಾಗತಿಸಿದರು. ಅಭ್ಯರ್ಥಿ ನೀಲಯ ವಂದಿಸಿದರು.

ಒಟ್ಟು 53 ಮಂದಿ ಅಭ್ಯರ್ಥಿಗಳು 6 ತಿಂಗಳ ತರಬೇತಿಗೆ ಸೇರ್ಪಡೆಯಾಗಿದ್ದಾರೆ.

ಅಜ್ಜಂಪುರ, ಮಾ. 22– ತರೀಕೆರೆ ಪುರಸಭಾ ಕಚೇರಿಯಲ್ಲಿ ಇತ್ತೀಚೆಗೆ ರೋಟರಿ ಕ್ಲಬ್‌ನವರ ಸಹಕಾರದಲ್ಲಿ ಗ್ರಾಹಕರ ದಿನವನ್ನು ಆಚರಿಸಲಾಯಿತು.

ತರೀಕೆರೆ ತಾಲೂಕು ತಹಸೀಲ್ದಾರ್ ಶಂಕರಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಶಿಕಲಾ ಆರ್. ಗುಪ್ತ, ಎ. ಎಂ. ನಾಗಭೂಷಣ, ಎಸ್. ಮಂಜುನಾಥ, ಬವರ್ ಲಾಲ್ ಅವರು ಮುಖ್ಯ ಭಾಷಣಕಾರರಾಗಿದ್ದರು.

ಸಂಗೀತ ರಸಗ್ರಹಣ ತರಬೇತಿ ಶಿಬಿರ

ಬೆಂಗಳೂರು, ಮಾ. 22 – ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯು ಯುವ ಕಲಾವಿದರಿಗೆ ಮತ್ತು ರಂಗಮಂದಿರ ಉತ್ಸಾಹಿಗಳಿಗೆ ಸಂಗೀತ ರಸಗ್ರಹಣ ಶಿಬಿರವನ್ನು ಏರ್ಪಡಿಸಿದೆ.

22–4–89 ರಿಂದ ಆರಂಭವಾಗಲಿರುವ ಈ ತರಬೇತಿ ಶಿಬಿರವು 15 ದಿನಗಳ ಅವಧಿಯದ್ದಾಗಿರುತ್ತದೆ. ದಿನಕ್ಕೆ ಎರಡು ಅಧಿವೇಶನಗಳನ್ನು ಹೊಂದಿರುತ್ತದೆ. ಶಿಬಿರದಲ್ಲಿ 30 ಅಭ್ಯರ್ಥಿಗಳಿಗೆ ತರಬೇತಿ ನೀಡುವ ಉದ್ದೇಶವಿರಿಸಿಕೊಳ್ಳಲಾಗಿದೆ.

ಭಾಗವಹಿಸುವ ಅಭ್ಯರ್ಥಿಗಳು 18 ವರುಷದಿಂದ 35 ವರ್ಷ ಮೀರದವರಾಗಿರಬೇಕು. ಪೂರ್ಣ ಅವಧಿಗೆ ಪ್ರತಿಯೊಬ್ಬರಿಗೆ 100 ರೂ. ಗಳ ಸಂಭಾವನೆ ನೀಡಲಾಗುವುದು. ಆಸಕ್ತರು ನಿಗದಿತ ಅರ್ಜಿ ಫಾರಂ ಅನ್ನು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, 14-3, ಕೆನರಾ ಫೈನಾನ್ಸ್ ಕಾರ್ಪೋರೇಶನ್ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು–2 ಇಲ್ಲಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿ ಫಾರಂಗಳನ್ನು 10-4-89ರ ಒಳಗೆ ಕಳುಹಿಸಿ ಕೊಡಬೇಕೆಂದು ಕೋರಲಾಗಿದೆ.

ಜೀವವಿಮಾ ನಿಗಮ ನೌಕರರ ಮುಷ್ಕರ

ಬಂಟ್ವಾಳ, ಮಾ. 22–ವೇತನ ಪರಿಷ್ಕರಣೆಯ ಮಾತುಕತೆಯಲ್ಲಿ ಆಡಳಿತ ವರ್ಗವು ತಳೆಯುತ್ತಿರುವ ನಕಾರಾತ್ಮಕ ಧೋರಣೆಯನ್ನು ಪ್ರತಿಭಟಿಸಿ ಬಂಟ್ವಾಳ ಜೀವವಿಮಾ ನೌಕರರು ಇತ್ತೀಚೆಗೆ ಒಂದು ಗಂಟೆ ಕಾಲ ಮುಷ್ಕರ ನಡೆಸಿದರು.

ಜೀವವಿಮಾ ನಿಗಮದ ಕಚೇರಿ ಮುಂದೆ ನಡೆದ ಮುಷ್ಕರ ಪ್ರದರ್ಶನದಲ್ಲಿ ನಿಗಮದ ಎಲ್ಲಾ ನೌಕರರ ಸಂಘಟನೆಗಳು ಭಾಗವಹಿಸಿದವು. ಚಳವಳಿಯ ಮುಂದಿನ ಹಂತವಾಗಿ ಮಾ.31 ರಂದು 2ಗಂಟೆಗಳ ಕಾಲ ನೌಕರರು ಮುಷ್ಕರವನ್ನು ನಡೆಸಲಿದ್ದಾರೆ.

ಖೇತಾನ್ ಬಗ್ಗೆ ಏನು ಹೇಳಲಿ
ಕೇವಲ ಹೆಸರೇ ಸಾಕು

ಖೇತಾನ್ – ಹೆಸರೊಂದೇ ಸಾಕು

ಇಲ್ಲಿ ದೊರೆಯುವುದು

ಹರ್ಷ
ಕವಿ ಮುದ್ದಣ್ಣ ಮಾರ್ಗ,
ಉಡುಪಿ, ಫೋನ್: 21841/23844

ವಿಶ್ವದೀಪ್
ಕೆ. ಎಸ್. ಆರ್. ರಸ್ತೆ,
ಮಂಗಳೂರು ಫೋನ್: 31495

ಲಕ್ಕಿ ಲೇಡಿ



ಬಹುಮಾನಗಳ ಯೋಜನೆ
ವಿಶೇಷ
20%+15%
ರಿಯಾಯಿತಿ

ಸಿಲ್ಕ್, ಕಾಟನ್ ಸೀರೆಗಳು
ಮತ್ತು ಡ್ರೆಸ್ ಮೆಟೀರಿಯಲ್

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪದ
ಷೋರೂಂನ್ನು ಸಂಪರ್ಕಿಸಿ

ಪ್ರಿಯದರ್ಶಿನಿ
ಹ್ಯಾಂಡ್ ಲ್ಯೂಮ್ಸ್
ಕರ್ನಾಟಕ ಕೈಮಗ್ಗ ಉದ್ಯಮ ಅಭಿವೃದ್ಧಿ ನಿಗಮದ ಘಟಕ.
(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಮಂಗಳೂರಿನ ಶೋರೂಮ್‌ನಲ್ಲಿ
"ಸೆಕೆಂಡ್ಸ್" ಮಾರಾಟದ ಮೇಲೆ
50% ರಿಯಾಯಿತಿ

ಶೋರೂಮ್‌ಗಳು :
- ಕಾರ್ನಾಡ್ ಸದಾಶಿವ ರಾವ್ ರಸ್ತೆ ಮಂಗಳೂರು – 575 001.
- ಕವಿ ಮುದ್ದಣ್ಣ ಮಾರ್ಗ, ಉಡುಪಿ. 576101

ಮುಂಗಾರು

ಶುಕ್ರವಾರ, ಮಾರ್ಚ್ 31, 1989

ಇನ್ನಾದರೂ ನಕಾರಾತ್ಮಕ ನಿಲುವು ಬಿಡಿ

ದಿನ ಕಳೆದಂತೆ ತೀರಾ ಜಟಿಲವಾಗುತ್ತಲೇ ಬಂದಿರುವ ಪಂಜಾಬ್ ಸಮಸ್ಯೆಯ ಪರಿಹಾರದ ಬಗ್ಗೆ ಆಶಾ ಧ್ವನಿಗಳು ಈಗ ಕೇಳಿ ಬರಲಾರಂಭಿಸಿವೆ. ದೊಡ್ಡ ಮಾತುಗಳ ಸುದ್ದಿ ಮಾಡುವುದಕ್ಕೆ ಪರಿಚಿತರಾಗಿರುವ ರಾಜ್ಯ ಸಭಾಸದಸ್ಯ ರಾಮ್ ಜೇಠ್ಮಲಾನಿ ತಮಗೆ ಸಂಧಾನದ ಅವಕಾಶ ಕೊಟ್ಟರೆ ಪಂಜಾಬಿನ ಸಮಸ್ಯೆಯನ್ನು ಹದಿನೈದೇ ದಿನಗಳಲ್ಲಿ ಬಗೆಹರಿಸುವುದಾಗಿ ಹೇಳಿದ್ದಾರೆ. ಬುಧವಾರ ಎಡ ಹಾಗೂ ಬಲ ಕಮ್ಯೂನಿಸ್ಟ್ ಪಕ್ಷಗಳ ಪ್ರಮುಖರು ಹೊಸದಿಲ್ಲಿಯ ಬೋಟ್‌ಕ್ಲಬ್‌ನಲ್ಲಿ ಧರಣಿ ನಡೆಸಿ ಪಂಜಾಬಿನ ಸಮಸ್ಯೆಯ ಪರಿಹಾರಕ್ಕೆ ಆರು ಸೂತ್ರಗಳನ್ನೊಳಗೊಂಡ ಮನವಿಯೊಂದನ್ನು ಪ್ರಧಾನಿಯವರಿಗೆ ಒಪ್ಪಿಸಿದ್ದಾರೆ.

ದೇಶದ ಗಣ್ಯ ರಾಜಕಾರಣಿಗಳು ಮತ್ತು ಪ್ರಮುಖ ರಾಜಕೀಯ ಪಕ್ಷಗಳು ಪಂಜಾಬ್ ಸಮಸ್ಯೆಯ ಶೀಘ್ರ ಪರಿಹಾರದಲ್ಲಿ ಆಸಕ್ತಿ ತೋರಿಸುತ್ತಿರುವುದು ಒಳ್ಳೆಯ ಲಕ್ಷಣವೇ. ಆದರೆ ಇವರು ಸೂಚಿಸಿರುವ ಪರಿಹಾರ ಸೂತ್ರಗಳಲ್ಲಿ ಪಂಜಾಬ್ ಸಮಸ್ಯೆಯ ಮೂಲವನ್ನು ಗುರುತಿಸುವ ಪ್ರಯತ್ನ ನಡೆದಂತೆ ಕಾಣುವುದಿಲ್ಲ.

ಬುಧವಾರ ವಾಮಪಂಥೀಯ ರಾಜಕೀಯ ಪಕ್ಷಗಳ ಮುಖಂಡರುಗಳು ಪ್ರಧಾನಿಯವರಿಗೆ ಒಪ್ಪಿಸಿದ ಮನವಿಯಲ್ಲಿ ಪಂಜಾಬಿನ ಜನರ ದೂರುಗಳನ್ನು ಕೇಳಿ ಪರಿಹರಿಸುವ ಏರ್ಪಾಡು ಮಾಡಬೇಕು. ಗ್ರಾಮ ಮಟ್ಟದಲ್ಲಿ ರಕ್ಷಣಾದಳಗಳನ್ನು ರಚಿಸಬೇಕು. 1984ರ ನವೆಂಬರ್‌ನಲ್ಲಿ ಹೊಸದಿಲ್ಲಿ ಮತ್ತಿತರ ನಗರಗಳಲ್ಲಿ ಸಿಕ್ಖರ ಹತ್ಯೆ ನಡೆಸಿದ ಅಪರಾಧಿಗಳನ್ನು ದಂಡಿಸಬೇಕು. ಸರ್ವ ಪಕ್ಷಗಳ ಸಭೆ ಕರೆಯಬೇಕು ಎಂಬಿತ್ಯಾದಿ ಸಲಹೆಗಳನ್ನು ಮಾಡಲಾಗಿದೆ. ವಾಮ ಪಂಥೀಯ ಪಕ್ಷಗಳ ಮುಖಂಡರು ಮುಂದಿಟ್ಟಿರುವ ಈ ಸೂತ್ರಗಳು ಸಿಕ್ಖ್ ಜನಾಂಗದ ಸದ್ಯದ ನೋವನ್ನು ಶಮನ ಮಾಡಬಲ್ಲವೇ ಹೊರತು ಸಮಸ್ಯೆಯ ಮೂಲಕ್ಕೆ ಹೋಗಲಾರವು. ಸಿಕ್ಖರ ನೋವನ್ನು ಶಮನ ಮಾಡಿ ಪಂಜಾಬಿನ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗಿದ್ದರೆ ಇದೇ ಮಾರ್ಚ್ 4ರಂದು ಪ್ರಧಾನಿ ರಾಜೀವ್‌ಗಾಂಧಿ ಘೋಷಿಸಿದ ಕೆಲವು ಕ್ರಮಗಳಿಂದ ಇದಾಗಬೇಕಿತ್ತು.

ಜೋಧಪುರ ಬಂಧಿಗಳ ಬಿಡುಗಡೆ ಮತ್ತು ಪಂಜಾಬಿನಲ್ಲಿ ಭದ್ರತಾ ಪಡೆಗಳ ಕಾರ್ಯಾಚರಣೆಯ ಕಾಠಿಣ್ಯವನ್ನು ಕಡಿಮೆ ಮಾಡಿದ್ದರಿಂದ ಸಮಗ್ರ ಸಿಕ್ಖ್ ಸಮೂಹ ಸಂತುಷ್ಟವಾಗಬೇಕಿತ್ತು. ಹಾಗೆ ಆಗಿಲ್ಲವೆಂಬುದು ವಾಸ್ತವಸ್ಥಿತಿ. ಭಯೋತ್ಪಾದಕರ ಚಟುವಟಿಕೆಗಳು ಮಾಮೂಲಿಯಾಗಿ ನಡೆದಿವೆ. ಅಲ್ಲಿನ ವಾತಾವರಣ ಇದುವರೆಗೆ ತಿಳಿಯಾಗಿಲ್ಲ.

ಸಿಕ್ಖರನ್ನು ಪ್ರೀತಿ-ವಾತ್ಸಲ್ಯದಿಂದ ಕಂಡು, ಅವರ ಕುಂದು-ಕೊರತೆಗಳನ್ನು ಕೇಳಿ ಪರಿಹರಿಸಿ ಅಥವಾ ಅವರ ವಿತ್ತ-ಜೀವಿತಕ್ಕೆ ರಕ್ಷಣೆ ನೀಡಿ ಬಗೆಹರಿಸಬಹುದಾದಷ್ಟು ಸರಳವಾದ ಸಮಸ್ಯೆ ಪಂಜಾಬಿನದ್ದಲ್ಲ. ಇದರಲ್ಲಿ ರಾಜಕೀಯ ಮತ್ತು ಧರ್ಮದ ವಿಚಿತ್ರ ಮಿಶ್ರಣವಿದೆ. ಈ ಮಿಶ್ರಣವನ್ನು ನಾವು 1973 ರಲ್ಲಿ ಅಕಾಲಿದಳವು ಆನಂದಪುರಸಾಹಿಬ್‌ನಲ್ಲಿ ಅಂಗೀಕರಿಸಿದ್ದ ನಿರ್ಣಯದಲ್ಲಿ ಕಾಣಬಹುದು. ಸಿಕ್ಖರು ಅಧಿಕ ಸಂಖ್ಯೆಯಲ್ಲಿರುವ ಪಂಜಾಬಿಗೆ ತನ್ನ ಸರ್ವಾಂಗೀಣ ವಿಕಸನ ಹೊಂದಲು ಪ್ರಾದೇಶಿಕ ಸ್ವಾಯತ್ತೆ ಬೇಕೆಂಬುದು ಆನಂದಪುರ ಸಾಹಿಬ್ ನಿರ್ಣಯದ ಮೂಲ ಮಂತ್ರ. ಚಂಡೀಗಢವು ಪಂಜಾಬಿನ ರಾಜಧಾನಿಯಾಗಬೇಕು ಮತ್ತು ರಾವಿ ಮತ್ತು ಬಿಯಾಸ್ ನದಿಗಳ ನೀರಿನ ಹಂಚಿಕೆಯಲ್ಲಿ ಪಂಜಾಬಿಗೆ ದೊಡ್ಡ ಪಾಲು ಸಿಗಬೇಕೆಂಬುದು ಇದಕ್ಕೆ ಪೂರಕವಾಗಿ ಸೇರಿಕೊಂಡ ಬೇಡಿಕೆಗಳು.

ಆನಂದಪುರ ಸಾಹಿಬ್ ನಿರ್ಣಯವು ಸಿಕ್ಖರ ಧಾರ್ಮಿಕ ಆಕಾಂಕ್ಷೆಗಳಿಗೆ ಅತೀವ ಒತ್ತುಕೊಟ್ಟಿದೆಯೆಂಬುದು ನಿಜ. ಸಮಗ್ರ ಸಿಕ್ಖ್ ಜನಸಮೂಹದ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ತೀರಾ ಭಿನ್ನವಾದ ಅಚ್ಚುಗಳನ್ನು ಗುರುತಿಸಿಕೊಂಡ ಸಿಕ್ಖ ಧರ್ಮ ತನ್ನ ಸ್ವಂತಿಕೆಯ ಆಕಾಂಕ್ಷೆಯನ್ನು ಹೊಂದಿದೆ. ಸಿಕ್ಖಿಸಂ ಹಿಂದೂ ಧರ್ಮದ ಒಂದು ಪಂಥವೆಂಬ ವರ್ಣನೆಗೆ ಸಿಕ್ಖರು ಅಸಹನೆ ತೋರಿಸುತ್ತಲೇ ಬಂದಿದ್ದಾರೆ.

ಭಾರತದ ರಾಷ್ಟ್ರೀಯ ವಾಹಿನಿಯಲ್ಲಿ ಮೇಳೈಸಿರುವ ಹಿಂದೂ ಧರ್ಮದ ಪ್ರಭಾವ ವಲಯದಲ್ಲಿ ಸಿಕ್ಖ್ ಧರ್ಮ ಶಿಥಿಲವಾಗುವುದೆಂಬ ಭಯ ಸಾಮಾನ್ಯವಾಗಿ ಎಲ್ಲ ಸಿಕ್ಖರಿಗೂ ಇದೆ. ಅವರ ಈ ಭಯವೇ ಆನಂದಪುರ ಸಾಹಿಬ್ ನಿರ್ಣಯಕ್ಕೆ ಪ್ರೇರಣೆಯಾಗಿತ್ತೆಂಬುದನ್ನು ನಾವು ಮರೆಯಬಾರದು.

ಆನಂದಪುರ ಸಾಹಿಬ್ ನಿರ್ಣಯವು ಸ್ವತಂತ್ರ ಖಲಿಸ್ತಾನದ ಕಲ್ಪನೆ ಮಾಡಿರಲಿಲ್ಲ. ಪಕ್ಷಭೇದವಿಲ್ಲದೆ ಭಾರತದ ಎಲ್ಲ ರಾಜಕಾರಣಿಗಳೂ ಆನಂದಪುರ ಸಾಹಿಬ್ ನಿರ್ಣಯವನ್ನು ಲಘುವಾಗಿ ಕಂಡರು. ಕೆಲವರು ಅಸಹನೆ ತೋರಿಸಿದರು. ರಾಷ್ಟ್ರೀಯವಾದಿಗಳ ಈ ನಕಾರಾತ್ಮಕ ನಿಲುವೇ ಖಲಿಸ್ತಾನದಂತಹ ನಕಾರಾತ್ಮಕ ಕಲ್ಪನೆಗೆ ಕಾರಣವಾಯಿತು.

ಪ್ರಾದೇಶಿಕ ಸ್ವಾಯತ್ತೆಯ ಒಕ್ಕೂಟ ಭಾರತದ ಅಂಗೀಕೃತ ತತ್ವವೆಂಬುದನ್ನು ನಮ್ಮ ರಾಜಕಾರಣಿಗಳು ಅರಿತು ವರ್ತಿಸಿದ್ದರೆ ಆನಂದಪುರ ಸಾಹಿಬ್ ನಿರ್ಣಯವು ಮತಾಂಧ ಸಿಕ್ಖರ ಸಂಕುಚಿತ ಭಾವನೆಯೆಂದು ತಿರಸ್ಕರಿಸಬೇಕಾಗಿರಲಿಲ್ಲ. ಸ್ವಾತಂತ್ರ್ಯಪೂರ್ವದಲ್ಲಿ ಭಾರತವು ಸ್ವಾಯತ್ತ ರಾಜ್ಯಗಳ ಒಕ್ಕೂಟ ರಾಷ್ಟ್ರವಾಗಬೇಕೆಂಬ ತತ್ವವನ್ನು ಎಲ್ಲ ರಾಜಕೀಯ ಪಕ್ಷಗಳೂ ಒಪ್ಪಿಕೊಂಡಿದ್ದವು. ಭಿನ್ನಭಾಷೆ ಮತ್ತು ಸಾಂಸ್ಕೃತಿಕ ಘಟಕಗಳಿಂದ ಕೂಡಿರುವ ಭಾರತದಂತಹ ಜನಬಾಹುಳ್ಯವಿರುವ ವಿಶಾಲವಾದ ದೇಶ ಒಂದು ಕೇಂದ್ರೀಕೃತ ರಾಜ್ಯ ವ್ಯವಸ್ಥೆಯಾಗಲು ಸಾಧ್ಯವಿಲ್ಲವೆನ್ನುವುದರ ಅರಿವು ಎಲ್ಲರಿಗೂ ಇತ್ತು. ಈ ಬಗ್ಗೆ ವಿಶೇಷವಾದ ಪ್ರಜ್ಞೆ ಹೊಂದಿದ್ದ ಮಹಾತ್ಮಾ ಗಾಂಧಿಯವರು ಇದಕ್ಕಾಗಿಯೇ ಸ್ವತಂತ್ರ ಭಾರತದ ರಾಷ್ಟ್ರೀಯ ಸರಕಾರವು ದೇಶ ರಕ್ಷಣೆ, ವಿದೇಶ ವ್ಯವಹಾರ, ಸಂಪರ್ಕ, ಹಣಕಾಸಿನ ಮುದ್ರಣದಂತಹ ರಾಷ್ಟ್ರವ್ಯಾಪಿಯಾದ ಹೊಣೆಗಳನ್ನು ಮಾತ್ರ ನಿರ್ವಹಿಸಿ ಇತರೆಲ್ಲ ಅಧಿಕಾರ ಕರ್ತವ್ಯಗಳನ್ನೂ ಸ್ವಾಯತ್ತ ರಾಜ್ಯಗಳಿಗೆ ಬಿಡಬೇಕು. ಇಂತಹ ಸ್ವಾಯತ್ತ ರಾಜ್ಯಸರಕಾರಗಳು ತಮ್ಮ ಅಧಿಕಾರಗಳನ್ನು ಗ್ರಾಮರಾಜ್ಯ ಸಂಸ್ಥೆಗಳೊಡನೆ ಹಂಚಿಕೊಳ್ಳಬೇಕೆಂದು ಹೇಳಿದ್ದರು.

ಆದರೆ ದುರ್ದೈವದಿಂದ ಸ್ವಾತಂತ್ರ್ಯ ನಂತರ ಗಾಂಧಿವಾದವನ್ನು ಪೂರ್ಣವಾಗಿ ಮರೆತ ಭಾರತ ಗಾಂಧಿ ಪ್ರತಿಪಾದಿಸಿದ ಸಿದ್ಧಾಂತಕ್ಕೆ ವಿರುದ್ಧವಾಗಿ ರಾಷ್ಟ್ರೀಯ ಸರಕಾರದಲ್ಲಿ ಎಲ್ಲ ಆಡಳಿತಾಧಿಕಾರಗಳ ಕೇಂದ್ರೀಕರಣ ಮಾಡಿಕೊಂಡಿದೆ. ಎಲ್ಲ ವಿಚಾರಗಳಲ್ಲೂ ರಾಜ್ಯಗಳು ಕೇಂದ್ರದ ಅವಲಂಬಿಗಳಾಗಿವೆ. ಅಪಾರ ಅಧಿಕಾರ ಮತ್ತು ಸಂಪನ್ಮೂಲಗಳನ್ನು ಹೊಂದಿರುವ ಕೇಂದ್ರೀಕೃತ ರಾಜ್ಯ ವ್ಯವಸ್ಥೆ ದೇಶದ ಎಲ್ಲ ರಾಜಕೀಯ ಪಕ್ಷಗಳಿಗೂ ಈಗ ಬಹುಪ್ರಿಯವಾಗಿದೆ. ದೇಶದ ಮುಗ್ಧ ಜನರನ್ನು ವಂಚಿಸಲು ಕೇಂದ್ರೀಕೃತ ರಾಜ್ಯ ವ್ಯವಸ್ಥೆ ಅವರಿಗೆಲ್ಲ ಉಪಕಾರಿಯಾಗಿದೆ.

ಅದ್ದರಿಂದಲೇ ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಜಕಾರಣಿಗಳು ಪ್ರಾದೇಶಿಕ ಆಶೋತ್ತರಗಳನ್ನು ವಿಧ್ವಂಸಕಾರಿಯೆಂದು ಖಂಡಿಸುತ್ತಿರುವುದು. ಮಾತು-ಮಾತಿಗೆ ರಾಷ್ಟ್ರೀಯ ವಾಹಿನಿಯ ಬೊಗಳೆ ಬಿಡುತ್ತಿರುವ ಈ ರಾಜಕಾರಣಿಗಳ ಸಣ್ಣತನವೇ ಇಂದು ದೇಶದ ಎಲ್ಲೆಡೆ ಪ್ರತ್ಯೇಕತಾವಾದಕ್ಕೆ ಪುಟಗೊಡುತ್ತಿದೆ.

ಪರಿಸ್ಥಿತಿಯನ್ನು ಹೀಗೆಯೇ ಮುಂದುವರಿಯಗೊಟ್ಟರೆ ಭಾರತ ಒಂದು ಸಮಗ್ರ ರಾಷ್ಟ್ರವಾಗಿ ಉಳಿಯಬಲ್ಲುದೆಂದು ಯಾರೂ ಭ್ರಮಿಸಬಾರದು. ಭಾರತದ ರಾಷ್ಟ್ರೀಯ ಸರಕಾರದ ಅಂಕಿತದಲ್ಲಿ ದೊಡ್ಡ ಸೇನಾಶಕ್ತಿಯನ್ನು ನಾಳೆ ಜನರ ಪ್ರಾದೇಶಿಕ ಆಕಾಂಕ್ಷೆಗಳನ್ನು ಹತ್ತಿಕ್ಕಲು ಬಳಸಬೇಕಾದೀತು. ಕಳೆದ ಸುಮಾರು ಐದು ವರ್ಷಗಳಿಂದ ಪಂಜಾಬಿನ ಸಿಕ್ಖರ ವಿರುದ್ಧ ಭದ್ರತಾ ಪಡೆಗಳ ಒಂದು ಲಕ್ಷ ಸಶಸ್ತ್ರ ಸೈನಿಕರನ್ನು ಬಳಸಿದರೂ ಅಲ್ಲಿ ಭಯೋತ್ಪಾದನೆಯನ್ನು ನಿಲ್ಲಿಸಲಾಗಿಲ್ಲ. ಮತ್ತೆ ಎರಡು ಲಕ್ಷ ಸೈನಿಕರನ್ನು ಕಳಿಸಿದರೂ ಬಲ ಪ್ರಯೋಗದಿಂದ ಸಿಕ್ಖರ ಬಾಯಿ ಮುಚ್ಚಿಸಲು ಸಾಧ್ಯವಿಲ್ಲ.

ಪಂಜಾಬಿನ ಸಿಕ್ಖರ ಸ್ವಾಯತ್ತೆಯ ಬೇಡಿಕೆ ತೀರಾ ಸಹಜವಾದುದೆಂಬುದನ್ನು ನಾವು ಈಗಲಾದರೂ ಅಂಗೀಕರಿಸಬೇಕು. ಆ ನೆಲೆಯಲ್ಲಿ ಪಂಜಾಬಿನ ಸಿಕ್ಖರೊಡನೆ ಸಂಧಾನ ನಡೆಸಬೇಕು. ಪಂಜಾಬಿಗೆ ಅನ್ವಯವಾಗುವ ಪ್ರಾದೇಶಿಕ ಸ್ವಾಯತ್ತೆ ಭಿನ್ನ ಜನಾಂಗಗಳಿಗೂ ಭಾಷಾ ಘಟಕಗಳಿಗೂ ಅನ್ವಯವಾಗಬೇಕು. ಆಗ ಮಾತ್ರ ಭಾರತದಲ್ಲೀಗ ಹರಡುತ್ತಿರುವ ಕ್ಷೋಭೆಯನ್ನು ತಣಿಸಲು ಸಾಧ್ಯ. ಹೀಗೆ ಭಾರತದ ಭೂಪಟವನ್ನು ಸ್ವಾಯತ್ತ ರಾಜ್ಯಗಳ ಒಕ್ಕೂಟವಾಗಿ ಪುನರ್ರಚಿಸಲು ರಾಜ್ಯಾಂಗವನ್ನು ಮೂಲಭೂತವಾಗಿ ಬದಲಿಸಬೇಕು. ಇದಕ್ಕಾಗಿಯೇ ಹೊಸ ರಾಜ್ಯಾಂಗ ಸಭೆಯನ್ನು ಆಯ್ಕೆ ಮಾಡಬೇಕು. ಅಗತ್ಯವೆನ್ನಿಸಿದರೆ ಪ್ರಾದೇಶಿಕ ಸ್ವಾಯತ್ತೆ ಅಥವಾ ಅಧಿಕಾರದ ವಿಕೇಂದ್ರೀಕರಣ ಸಿದ್ಧಾಂತದ ಮೇಲೆ ಜನಮತ ಗಣನೆ ನಡೆಯಲಿ.

ಎರಡು ಮಾರುತಿ ಕಾರುಗಳಲ್ಲಿ 6 ಕೋಟಿ ರೂ ಮೌಲ್ಯದ ಚಿನ್ನದ ಬಿಲ್ಲೆಗಳನ್ನು ಕರ್ನಾಟಕಕ್ಕೆ ಸಾಗಿಸುತ್ತಿದ್ದ ವೇಳೆ ತಲಪ್ಪಾಡಿಯಲ್ಲಿ ಡಿ. ಆರ್. ಐ ಅಧಿಕಾರಿಗಳು ಚಿನ್ನ ಸಹಿತ ಕಾರುಗಳನ್ನು ವಶಕ್ಕೆ ತೆಗೆದುಕೊಂಡ ಪ್ರಕರಣದ ಸಂಬಂಧವಾಗಿ ಚಿನ್ನದ ಬಿಲ್ಲೆಗಳನ್ನು ಸಾಗಿಸುತ್ತಿದ್ದ ವೇಳೆ ಮಾಳ್ಯೇರಿಯಾ ದಾರಿಯಾಗಿ ಬೇರೆ ಎರಡು ಕಾರುಗಳಲ್ಲಿ ಚಿನ್ನದ ಬಿಸ್ಕತ್ತುಗಳನ್ನು ತುಂಬಿಸಿ ಕರ್ನಾಟಕಕ್ಕೆ ಸಾಗುತ್ತಿರುವ ಬಗ್ಗೆ ಅಧಿಕಾರಿಗಳಿಗೆ ಮಾಹಿತಿ ಲಭಿಸಿತ್ತೆನ್ನಲಾಗಿದೆ.

ಮಂಗಳೂರು, ಮಾ. 27 – ಮಂಗಳೂರು ಜೂನಿಯರ್ ಚೇಂಬರ್‌ನ 1989ರ ಸಾಲಿನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಇತ್ತೀಚೆಗೆ ಜರಗಿ ಗಣೇಶ ಕಾಮತ್ ಅವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಮುಖ್ಯ ಅತಿಥಿಯಾಗಿ ನ್ಯಾಯವಾದಿ ಎಸ್. ಎನ್. ಹೆದ್ದಾರ ಆಗಮಿಸಿದ್ದರು. ಎಲ್. ಎನ್. ಕೂಡೂರ ನೂತನ ಅಧ್ಯಕ್ಷರಿಗೆ ಪ್ರಮಾಣವಚನ ಬೋಧಿಸಿದರು.

ಇತರ ಪದಾಧಿಕಾರಿಗಳಾಗಿ ಈ ಕೆಳಗಿನವರು ಆಯ್ಕೆಯಾಗಿದ್ದಾರೆ.

ವಿಲಿಯಂ ಅಲ್ಮೇಡಾ, ಹೀನ ಪೂಜಾರಿ, ದೀಪಕ ಪ್ರಸಾದ ಹೆಗ್ಡೆ (ಉಪಾಧ್ಯಕ್ಷರು) ಡಾ! ದೀಪಕ ನಾಯಕ (ನಿಕಟಪೂರ್ವ ಅಧ್ಯಕ್ಷ) ಚಂದ್ರಶೇಖರ ಶೆಟ್ಟಿ (ಕಾರ್ಯದರ್ಶಿ) ಎಸ್. ಎ. ಕುಲಕರ್ಣಿ (ಜತೆ ಕಾರ್ಯದರ್ಶಿ) ಗುರುದತ್ತ ರಾವ್, ಓಸ್ವಾಲ್ಡ್ ಕುಟಿಂಹ, ಸಂತೋಷ ಕುಮಾರ ರೈ, ಯಶೋಧರ (ನಿರ್ದೇಶಕರು) ರೋನಾಲ್ಡ್ ಪಿಂಟೊ (ಕೋಶಾಧಿಕಾರಿ)

ಸಾರ್ವಜನಿಕ ಹಾಗೂ ಉತ್ಸಾಹಿ ಯುವಕರ ಸಹಕಾರದಿಂದ ಇತ್ತೀಚೆಗೆ ನಡೆದ ಕಾಂದ್ರೋಳಿ ಶ್ರೀ ಭಗವತಿ ಕ್ಷೇತ್ರ ಕೊಡಿಯಾಲ್‌ಬೈಲ್ ಇದರ ವಾರ್ಷಿಕ ನಡವಳಿ ಉತ್ಸವ ಸಂದರ್ಭದಲ್ಲಿ ಏರ್ಪಡಿಸಿದ ಪಾನಕ ಸೇವೆ.

ವಿಮಾ ಪರಿಹಾರ: ಕಾನೂನು ತೊಡಕು ನಿವಾರಣೆಗೆ ಸಲಹೆ

ಮಂಗಳೂರು, ಮಾ. 30-ಜನಸಾಮಾನ್ಯರು ವೈಯಕ್ತಿಕ ಅಪಘಾತ ವಿಮಾ ಪರಿಹಾರ ಪಡೆದುಕೊಳ್ಳುವಲ್ಲಿ ಉದ್ಭವಿಸುವ ಕಠಿಣ ಕಾನೂನಿನ ತೊಡಕುಗಳನ್ನು ಪರಿಶೀಲಿಸಿ ಅವುಗಳನ್ನು ತಿದ್ದುಪಡಿಮಾಡಿ ಸಡಿಲಗೊಳಿಸುವಂತೆ ದ. ಕ. ಜಿಲ್ಲಾ ಪರಿಷತ್ ಅಧ್ಯಕ್ಷ ಬಿ. ಸಂಕಪ್ಪ ರೈ ಸಲಹೆ ಮಾಡಿದ್ದಾರೆ.

ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿಯವರು ನಗರದಲ್ಲಿ ಮಾ. 27 ರಂದು ಏರ್ಪಡಿಸಿದ ವೈಯಕ್ತಿಕ ಅಪಘಾತ ಮತ್ತು ಸಾಮಾಜಿಕ ಭದ್ರತಾ ಯೋಜನೆ ಹಾಗೂ ಗುಡಿಸಲು ವಿಮಾ ಯೋಜನೆಗಳ ಪ್ರಚಾರ ಸಭೆಯಲ್ಲಿ ಮುಖ್ಯ ಅತಿಥಿ ಸ್ಥಾನದಿಂದ ಅವರು ಮಾತನಾಡುತ್ತಿದ್ದರು.

ಪ್ರಸ್ತುತ ಯೋಜನೆಯು ಸಫಲತೆ ಪಡೆಯಲು ಜಿ. ಪ. ಸದಸ್ಯರು ಮಂಡಲ ಸದಸ್ಯರು ಹಾಗೂ ಕಾರ್ಯದರ್ಶಿಗಳು ಸೂಕ್ತ ತಿಳುವಳಿಕೆ ನೀಡಬೇಕೆಂದು ಸಂಕಪ್ಪ ರೈ ಕರೆಕೊಟ್ಟರು.

ದ. ಕ. ಜಿಲ್ಲಾ ಪರಿಷತ್ ಉಪಾಧ್ಯಕ್ಷೆ ಲೀನಾ ಮಥಾಯಸ್ ಅವರು ಮಾತನಾಡಿ ವಿಮಾ ಸೌಲಭ್ಯವನ್ನು ಸಂಬಂಧಿಸಿದವರಿಗೆ ಒದಗಿಸುವಲ್ಲಿ ಅಧಿಕಾರಿಗಳು ಮಾನವೀಯ ದೃಷ್ಟಿಯಿಂದ ಕಾನೂನು ಅಡೆತಡೆಗಳನ್ನು ನಿವಾರಿ ಕ್ರಮಿಸಬೇಕೆಂದು ಸಲಹೆ ಮಾಡಿದರು.

ಇನ್ನೋರ್ವ ಮುಖ್ಯ ಅತಿಥಿ ಡಿವೈ ಎಸ್. ಪಿ. ಪಿ. ಎಸ್. ರಾಣೆ ಹಾಗೂ ಮಂಗಳೂರು ಉಪವಿಭಾಗಾಧಿಕಾರಿ ಸಿ. ಸೋಮಶೇಖರ್ ಮಾತನಾಡಿದರು. ಜಿ. ಪ. ಮುಖ್ಯ ಕಾರ್ಯದರ್ಶಿ ರಂಜನಿ ಶ್ರೀಕುಮಾರ್ ಹಾಗೂ ಕೆನರಾ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಅರೂರು ಉಮಾಶಂಕರ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮ ನಿರೂಪಿಸಿದ ಡಾ! ಸುರೇಶ ಪ್ರಾಸ್ತಾವಿಕ ಭಾಷಣ ಮಾಡಿ ಮಂಗಳೂರು ವಿಭಾಗದ ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿಯು 1985ರಿಂದ ಈ ತನಕ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದ 625 ಪ್ರಕರಣಗಳಲ್ಲಿ 565 ಪ್ರಕರಣಗಳನ್ನು ಇತ್ಯರ್ಥಗೊಳಿಸಿ ಸುಮಾರು 16,95,000ರೂ. ಪರಿಹಾರ ವಿತರಣೆ ಮಾಡಿದೆ ಎಂದು ತಿಳಿಸಿದರು.

ಸಂಸ್ಥೆಯ ಎಂ.ಬಿ.ಜಯಪ್ರಕಾಶ್ ಸ್ವಾಗತಿಸಿದರು. ಮಂಗಳೂರು ವಿಭಾಗದ ಸೀನಿಯರ್ ಡಿವಿಜನಲ್ ಮ್ಯಾನೇಜರ್ ಎಸ್. ಎಸ್. ಕಾಮತ್ ವಂದಿಸಿದರು.

ವಿಚಾರ ಸಂಕಿರಣ

ಭದ್ರಾವತಿ, ಮಾ. 30– ಕುವೆಂಪು ವಿ. ವಿ. ಯ ದಲಿತ ವಿದ್ಯಾರ್ಥಿ ಒಕ್ಕೂಟದವರು "ಸಂಸದೀಯ ಪ್ರಜಾಸತ್ತೆ ಮತ್ತು ದಲಿತರ ಬಿಡುಗಡೆ" ಬಗ್ಗೆ ಇಲ್ಲಿನ ಪುರಸಭಾ ಆವರಣದಲ್ಲಿ ಇತ್ತೀಚೆಗೆ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು.

ಸರ್. ಎಂ. ವಿ. ಕಾಲೇಜಿನ ಪ್ರಿನ್ಸಿಪಾಲ್ ಪ್ರೊ॥ ಬಿ. ಕೃಷ್ಣಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಕಾಲೇಜ್ ಅಧ್ಯಾಪಕ ಟಿ. ಎಸ್. ವೇಣುಗೋಪಾಲ್, ಸಿ. ಪಿ. ಐ. ಜಿಲ್ಲಾ ಕಾರ್ಯದರ್ಶಿ ಜಿ. ಎಸ್. ನಾಗರಾಜು ಮಾತನಾಡಿದರು.

ಎ. 3: ಪೊಳಲಿಯಲ್ಲಿ ಪಟ್ಟೆಸೀರೆ ಮೆರವಣಿಗೆ

ಮಂಗಳೂರು, ಮಾ. 30– ಪೊಳಲಿಯ ಪಟ್ಟೆ ಸೀರೆ ಮೆರವಣಿಗೆಯನ್ನು ಉಭಯ ಕೋಮುಗಳ ಸಹಕಾರದಿಂದ ಎ. 3ರಂದು ನಡೆಸಲು ನಿರ್ಧರಿಸಲಾಗಿದೆ.

ಇತ್ತೀಚೆಗೆ ಅಡ್ಡೂರಿನಲ್ಲಿ ಜರಗಿದ ಸೌಹಾರ್ದ ಸಭೆಯ ಅಧ್ಯಕ್ಷತೆಯನ್ನು ಶಾಸಕ ಕೆ. ಅಮರನಾಥ ಶೆಟ್ಟಿ ವಹಿಸಿದ್ದರು.

ಸಭೆಯಲ್ಲಿ ಶಾಸಕ ಬಿ. ರಮಾನಾಥ ರೈ, ಮಾಜಿ ಶಾಸಕ ಬಿ. ಎ. ಮೊಯ್ದಿನ್ ಅವರು ಉಪಸ್ಥಿತರಿದ್ದು ಯಾವುದೇ ಅಹಿತಕರ ಘಟನೆ ನಡೆಯದಂತೆ ಉಭಯ ಕೋಮಿನವರು ಪರಸ್ಪರ ಸೌಹಾರ್ದತೆಯಿಂದ ಪಟ್ಟೆ ಸೀರೆ ಮೆರವಣಿಗೆಯನ್ನು ನಡೆಸುವುದೆಂದು ಸಭೆ ತೀರ್ಮಾನಿಸಿತು.

ಎ. 2: ದಲಿತ ನೌಕರರ ಸಭೆ

ಉಡುಪಿ, ಮಾ. 30–ಕರ್ನಾಟಕ ದಲಿತ ಸಂಘರ್ಷ ಸಮಿತಿ ಉಡುಪಿ ತಾಲೂಕು ಶಾಖೆಯ ಆಶ್ರಯದಲ್ಲಿ ಎ.2 ರಂದು ಅಪರಾಹ್ನ 2-30ಕ್ಕೆ ಬನ್ನಂಜೆ ಗಾಂಧಿ ಭವನದಲ್ಲಿ ಉಡುಪಿ ತಾಲೂಕು ದಲಿತ ನೌಕರರ ಒಕ್ಕೂಟ ರಚನಾ ಸಭೆ ನಡೆಯಲಿದೆ.

ಈ ಸಭೆಯಲ್ಲಿ ದ.ಸಂ.ಸ.ಜಿಲ್ಲಾ ಸಂಚಾಲಕರು, ತಾಲೂಕು ಶಾಖೆಯ ಅಧೀನ ಗ್ರಾಮ ಮತ್ತು ಹೋಬಳಿ ಶಾಖೆಗಳ ಸಂಚಾಲಕರು ಮತ್ತು ಕಾರ್ಯಕರ್ತರು ಭಾಗವಹಿಸಿ ನೌಕರರ ಒಕ್ಕೂಟದ ಕುರಿತು ವಿಚಾರ ವಿನಿಮಯ ನಡೆಸಲಿರುವರು.

ಸಮಾಜ ಬಾಂಧವರು ಈ ಸಭೆಯಲ್ಲಿ ಭಾಗವಹಿಸಬೇಕೆಂದು ದ. ಸಂ. ಸ. ತಾಲೂಕು ಶಾಖೆಯ ಸಂಚಾಲಕರ ವಿನಂತಿಸಿಕೊಂಡಿದ್ದಾರೆ.

ಲಾರಿಗೆ ಸ್ಕೂಟರ್ ಡಿಕ್ಕಿ: ಬ್ಯಾಂಕ್ ನೌಕರ ದುರ್ಮರಣ

(ಮಂಗಳೂರು ವರದಿ)

ಬೆಳ್ತಂಗಡಿ, ಮಾ. 30–ಇಲ್ಲಿಗೆ ಸಮೀಪದ ಮಂಗಳೂರು-ಚಾರ್ಮಾಡಿ ರಸ್ತೆ ಕಾಶಿಬೆಟ್ಟು [illegible] ಲಾರಿಗೆ ಸ್ಕೂಟರ್ ಡಿಕ್ಕಿಯಾಗಿ ಸ್ಕೂಟರ್ ಸವಾರ ಮೃತರಾದ ಘಟನೆ ವರದಿಯಾಗಿದೆ.

ಬುಧವಾರ ಮಧ್ಯರಾತ್ರಿ ಬೆಳ್ತಂಗಡಿಯಿಂದ ಉಜಿರೆಗೆ ಹೋಗುತ್ತಿದ್ದ ಲಾರಿಯ ಹಿಂಬದಿಗೆ ಸ್ಕೂಟರ್ ಸವಾರ ಶ್ರೀಪತಿ ರಾವ್ (35) ಡಿಕ್ಕಿ ಹೊಡೆದು ತೀವ್ರ ಗಾಯಗೊಂಡು ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿಗೆ ಸಾಗಿಸುತ್ತಿದ್ದಾಗ ಮೃತಪಟ್ಟರೆಂದು ತಿಳಿದು ಬಂದಿದೆ.

ಮೃತರು ಸಿಂಡಿಕೇಟ್ ಬ್ಯಾಂಕ್ ಕಕ್ಕಿಂಜೆ ಶಾಖೆಯ ಉದ್ಯೋಗಿಯಾಗಿದ್ದು ಪತ್ನಿ ಹಾಗೂ ಒಂದು ಪುಟ್ಟ ಹೆಣ್ಣು ಮಗುವನ್ನು ಅಗಲಿದ್ದಾರೆ.

ನಿವೃತ್ತ ಶಿಕ್ಷಕರ ಸಂಘ ಅಸ್ತಿತ್ವಕ್ಕೆ

ಬೆಂಗಳೂರು, ಮಾ. 30–ರಾಜ್ಯದ ವಿವಿಧ ಜಿಲ್ಲೆಗಳ ನಿವೃತ್ತ ಶಿಕ್ಷಕರ ಸಂಘಗಳ ಸಭೆಯು ಎನ್.ಜಿ. ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ರಾಜ್ಯ ಸರಕಾರೀ ನೌಕರರ ಸಂಘದ ಕಟ್ಟಡದಲ್ಲಿ ನಡೆಯಿತು.

ದ.ಕ.ಜಿಲ್ಲಾ ನಿವೃತ್ತ ಶಿಕ್ಷಕರ ಸಂಘದ ಪ್ರತಿನಿಧಿಯಾಗಿ ಕಾರ್ಯದರ್ಶಿ ಇ. ಸೂರ್ಯನಾರಾಯಣರಾವ್ ಉಪಸ್ಥಿತರಿದ್ದ ಈ ಸಭೆಯಲ್ಲಿ ಕರ್ನಾಟಕ ರಾಜ್ಯ ನಿವೃತ್ತ ಅಧ್ಯಾಪಕರ ಸಂಘವನ್ನು ಹುಟ್ಟುಹಾಕಲಾಯಿತು. ಈ ಸಂಘದ ತಾತ್ಕಾಲಿಕ ಸಮಿತಿಯನ್ನು ಈ ಕೆಳಗಿನಂತೆ ರಚಿಸಲಾಯಿತು.

ವೀ.ಮ.ರಾಜಣ್ಣ (ಅಧ್ಯಕ್ಷ), ಕೃಷ್ಣಮೂರ್ತಿ ಮತ್ತು ಜಿ.ಅರಸು (ಉಪಾಧ್ಯಕ್ಷರು) ಶೇಷಗಿರಿರಾವ್ (ಕಾರ್ಯದರ್ಶಿ) ನಾರಾಯಣ ಆಚಾರ್ಯ (ಉಪಕಾರ್ಯದರ್ಶಿ) ಎಚ್.ಜೆ. ರಾಜಣ್ಣ (ಕೋಶಾಧಿಕಾರಿ).

ಶುಭ ವಿವಾಹ

ಶ್ರೀ ಕೆ. ಕೃಷ್ಣನ್ ಮತ್ತು ಶ್ರೀಮತಿ ಮೇರಿ ಮ್ಯಾಥ್ಯೂ ಕೆ. ಕೃಷ್ಣನ್

"ಜಾತಿ ಮತಗಳೆಂಬ ಭಾವನಾತ್ಮಕ ಕೊಂಡಿಯನ್ನು ಕಳಚಿ ಜೀವನಸಂಗಾತಿಯನ್ನಾಗಿ ಒಬ್ಬರನ್ನೊಬ್ಬರು ಆರಿಸಿಕೊಂಡು 26-3-89ರಂದು ವಿವಾಹ ಬಂಧನಕ್ಕೊಳಗಾಗಿ ಸಮಾಜಕ್ಕೆ ಆದರ್ಶಪ್ರಾಯವಾದ 'ಕೇರಳ ಕೌಮುದಿ' ಪ್ರಸಿದ್ಧ ದಿನಪತ್ರಿಕೆಯ ಜಿಲ್ಲಾ ವರದಿಗಾರ ಶ್ರೀ ಕೆ. ಕೃಷ್ಣನ್ ಹಾಗೂ ಅಧ್ಯಾಪಿಕೆ ಶ್ರೀಮತಿ ಮೇರಿ ಮ್ಯಾಥ್ಯೂ ಇವರ ದಾಂಪತ್ಯ ಜೀವನವು ಸುಖಮಯವಾಗಲೆಂದು ಹಾರೈಸುವ,

ಪ್ರವೀಣ್ ರಾಜ್ ಕೋಟೆಕಾರ್,
ಶ್ರೀ ವೇಣುಗೋಪಾಲ್ ಮಂಜೇಶ್ವರ,
ಹಾಗೂ ಐಡಿಯಲ್ ಟೆಕ್ನಿಕಲ್
ಇನ್ಸ್ಟಿಟ್ಯೂಟ್‌ನ ಸಿಬಂದಿ ವರ್ಗ.

ಮುಂಗಾರು

ಗುರುವಾರ, ಮಾರ್ಚ್ 30, 1989

ಧಾವನ್-ದುರಂತದ ಮುನ್ಸೂಚನೆ!

ಇಂದಿರಾಗಾಂಧಿ ಹತ್ಯೆಯ ತನಿಖೆ ನಡೆಸಿದ ನ್ಯಾಯಮೂರ್ತಿ ಠಕ್ಕರ್ ಆಯೋಗದ ವರದಿಯ ಒಳ ತಿರುಳು ಏನೆಂಬುದರ ಬಗ್ಗೆ ಇದುವರೆಗೆ ನಡೆದಿದ್ದ ಊಹಾಪೋಹಗಳಿಗೆ ಈಗ ತೆರೆ ಬಿದ್ದಿದೆ. ದೇಶದ ಸಂಸತ್ತಿನಲ್ಲಿ ಸೋಮವಾರ ಮಂಡಿಸಿದ ಈ ವರದಿಯು ಇಂದಿರಾಗಾಂಧಿ ಹತ್ಯೆಯಲ್ಲಿ ಅವರ ಆಪ್ತ ಸಹಾಯಕನಾಗಿದ್ದ ಆರ್. ಕೆ. ಧಾವನ್ ಅವರ ಕೈವಾಡದ ಸ್ಪಷ್ಟ ಸುಳಿವಿದೆಯೆಂದು ತಿಳಿಸಿದೆ. ಅಲ್ಲದೆ ಈ ಹತ್ಯೆಯಲ್ಲಿ ವಿದೇಶೀ ಶಕ್ತಿಗಳು ಶಾಮೀಲಾಗಿರುವ ಸಾಧ್ಯತೆ ಇದೆಯೆಂದೂ ಠಕ್ಕರ್ ಆಯೋಗದ ವರದಿ ತಿಳಿಸಿದೆ. ದೇಶದ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರ ಜೀವರಕ್ಷಣೆಯ ಹೊಣೆ ಹೊತ್ತಿದ್ದ ಪೊಲೀಸ್ ಅಧಿಕಾರಿಗಳನೇಕರ ಅಸಡ್ಡೆ ಮತ್ತು ಕರ್ತವ್ಯಲೋಪದ ಮೇಲೂ ಠಕ್ಕರ್ ಆಯೋಗ ಬೆಳಕು ಚೆಲ್ಲಿದೆ.

ಠಕ್ಕರ್ ಆಯೋಗದ ವರದಿಯಲ್ಲಡಕವಾಗಿರುವ ಅನೇಕ ಮುಖ್ಯಾಂಶಗಳನ್ನು ಗಮನಿಸಿದಾಗ ಈ ದೇಶದ ರಾಜ್ಯ ವ್ಯವಸ್ಥೆಯಲ್ಲಿ ಉಗಮಿಸಿರುವ ವಾಮಾಚಾರಗಳ ಸ್ಪಷ್ಟ ಪರಿಚಯವಾಗುತ್ತದೆ. ಇಂತಹ ಒಂದು ಗಹನವಾದ ನ್ಯಾಯಾಂಗ ವರದಿಯನ್ನು ಎರಡು ವರ್ಷಗಳ ಕಾಲ ಗೋಪ್ಯವಾಗಿಟ್ಟ ದೇಶದ ಸರಕಾರದ ಪ್ರಾಮಾಣಿಕತೆ ಪ್ರಶ್ನಾರ್ಹವಾಗುತ್ತದೆ. ಠಕ್ಕರ್ ಆಯೋಗದ ವರದಿ ದೇಶದ ಪತ್ರಿಕೆಯೊಂದಕ್ಕೆ ಸೋರಿ ಹೋಗಿ ಸಂಸತ್ತಿನಲ್ಲಿ ವಿರೋಧ ಪಕ್ಷಗಳು ಪಟ್ಟು ಹಿಡಿಯದಿದ್ದರೆ ಸರಕಾರ ಈ ವರದಿಯನ್ನು ಪ್ರಕಟಿಸುವ ಗೋಜಿಗೆ ಹೋಗುತ್ತಿರಲಿಲ್ಲವೆಂಬುದು ಸ್ಪಷ್ಟ.

ಅಧಿಕಾರಸ್ಥ ಜನರಿಗೆ ಕಿರಿ-ಕಿರಿಯನ್ನುಂಟು ಮಾಡುವ ಎಲ್ಲ ನ್ಯಾಯಾಂಗ ವರದಿಗಳನ್ನೂ ಗೌಣವಾಗಿ ಕಾಣುವ ಅಥವಾ ಅವುಗಳನ್ನು ಕಡತದಲ್ಲಿ ಕಟ್ಟಿಡುವ ಕೆಲಸವನ್ನು ದೇಶದ ಸರಕಾರ ಮಾಡುತ್ತಲೇ ಬಂದಿದೆ. ಸರಕಾರ ಇಷ್ಟಪಟ್ಟರೆ ಯಾವುದೇ ನ್ಯಾಯಾಂಗ ವರದಿಯನ್ನಾದರೂ ಪ್ರಕಟಿಸಲು ನಿರಾಕರಿಸಬಹುದಾದ ಶಾಸನವನ್ನೂ ಮಾಡಲಾಗಿದೆ. ನ್ಯಾಯಾಂಗ ತನಿಖಾ ವರದಿಗಳ ಬಗ್ಗೆ ಸರಕಾರ ಈಗೀಗ ತಳೆಯುತ್ತಿರುವ ನಿಲುವು ಮತ್ತು ಮಾಡಿರುವ ಶಾಸನ ಜನತಂತ್ರ ರಾಜ್ಯ ವ್ಯವಸ್ಥೆಯ ತಿರುಳನ್ನು ಕೆಡಿಸುತ್ತಿವೆ. ಇದೇನೂ ಹೊಸತಾಗಿ ಹುಟ್ಟಿಕೊಂಡ ಜಾಡ್ಯವಲ್ಲ. ಕೆಲವು ವರ್ಷಗಳಿಂದ ಇದು ಬೆಳೆದುಕೊಂಡು ಬಂದಿದೆ. ಆದರೆ ನಾವು ಬೊಗಳೆ ಬಿಡುತ್ತಿರುವ ರಾಷ್ಟ್ರೀಯ ಹಿತದ ಪ್ರಜ್ಞೆ ಇಂತಹ ಅನಿಷ್ಟ ಪ್ರವೃತ್ತಿಯನ್ನು ದಮನಿಸುವ ಕೆಲಸ ಮಾಡಲಿಲ್ಲ. ಸಮಸ್ಯೆಯ ಮೂಲಕ್ಕೆ ಹೋಗಲು ನಿರಾಕರಿಸುವ ಭಾರತೀಯ ಮನೋಧರ್ಮವೇ ಇದಕ್ಕೆ ಕಾರಣ. ಸಾರ್ವಜನಿಕ ಜೀವನದಲ್ಲಿ ಸತ್ಯನಿಷ್ಠುರತೆ ಮತ್ತು ಮೌಲ್ಯಗಳ ರಕ್ಷಣೆಯನ್ನು ಅಧಿಕಾರಸ್ಥ ಜನರಿಂದ ನಿರೀಕ್ಷಿಸುವುದು ತೀರಾ ತಪ್ಪೆಂಬ ಸತ್ಯದ ಮನವರಿಕೆ ಪ್ರಜಾ ವರ್ಗಕ್ಕೆ ಆಗದಿರುವುದೇ ಇದಕ್ಕೆಲ್ಲ ಕಾರಣ.

ಸರಕಾರವು ಸತ್ಯಾಂಶಗಳ ಮೇಲೆ ಹೇಗೆ ಮಣ್ಣೆರಚುತ್ತದೆಯೆಂಬುದಕ್ಕೆ ಠಕ್ಕರ್ ಆಯೋಗದ ಮೇಲೆ ಸರಕಾರ ತನ್ನ ವಿಶೇಷ ತನಿಖಾ ಮಂಡಳಿಯ ಮೂಲಕ ನಡೆಸಿದ ತನಿಖಾ ವರದಿಯನ್ನು ಒಂದು ನಿದರ್ಶನವಾಗಿ ಎತ್ತಿಕೊಳ್ಳಬಹುದು. ಇಂದಿರಾಗಾಂಧಿಯವರ ಹತ್ಯೆಯಲ್ಲಿ ಅವರ ಆಪ್ತ ಸಹಾಯಕನಾಗಿದ್ದ ಆರ್. ಕೆ. ಧಾವನ್ ಅವರ ಕೈವಾಡದ ಸ್ಪಷ್ಟ ಸುಳಿವಿದೆಯೆಂದು ಠಕ್ಕರ್ ಆಯೋಗ ಹೇಳಿದೆ. ತನ್ನ ಈ ತೀರ್ಮಾನಕ್ಕೆ ಆಧಾರವಾದ ಹಲವಾರು ಅಂಶಗಳನ್ನು ಆಯೋಗ ಪ್ರಸ್ತಾಪಿಸಿದೆ. ಆದರೂ ಇದರ ಮೇಲೆ ಸರಕಾರದ ವಿಶೇಷ ತನಿಖಾ ಮಂಡಳಿ ನಡೆಸಿದ ತನಿಖೆಯಲ್ಲಿ ಧಾವನ್ ನಿರ್ದೋಷಿಯೆಂಬ ತೀರ್ಮಾನಕ್ಕೆ ಬರಲಾಗಿದೆಯಂತೆ! ರಾಜಕೀಯ ಪ್ರಭುತ್ವಕ್ಕೆ ತನಗೆ ಅನುಕೂಲವಾದ ರೀತಿಯಲ್ಲಿ ಸತ್ಯಾಂಶಗಳನ್ನು ತಿರುಚಲು ಇರುವ ಅವಕಾಶಗಳನ್ನು ಇದು ಎತ್ತಿ ತೋರಿಸುತ್ತದೆ.

'ಮುಂಗಾರು' ಓದುಗರಲ್ಲಿ ಕೆಲವರಿಗಾದರೂ ನೆನಪಿರಬಹುದಾದಂತೆ ಇಂದಿರಾ ಹತ್ಯೆಯ ಘಟನೆಗಳ ಬಗ್ಗೆ 'ಮುಂಗಾರು' 1984ರ ನವೆಂಬರ್ 12ರಂದು ಪ್ರಕಟಿಸಿದ ವರದಿಯಲ್ಲಿ ಇಂದಿರಾಗಾಂಧಿಯವರ ಸುತ್ತಲಿರುವ ಅಧಿಕಾರಶಾಹಿ "ಪೂರ್ಣವಾಗಿ ಹೃದಯಹೀನವಾಗಿದೆ ಮತ್ತು ವಾಮಾಚಾರಗಳ ಗೂಡು ಕಟ್ಟಿಕೊಂಡು ಒಳಗೆ ಬಂದ ಎಲ್ಲರನ್ನೂ ನುಂಗುವ ರಾಕ್ಷಸೀ ಶಕ್ತಿಯಾಗಿದೆ". ಎಂದು ಬರೆಯಲಾಗಿತ್ತು. ಈ ಮಾತಿಗೆ ಪೂರಕವಾಗಿ ಆ ವರದಿಯಲ್ಲಿ ಕೆಲವು ವಿಷಯಗಳನ್ನು ಪ್ರಸ್ತಾಪಿಸಲಾಗಿತ್ತು.

1984ರ ಅಕ್ಟೋಬರ್ 31ರಂದು ಬೆಳಗ್ಗೆ ಸುಮಾರು 9 ಗಂಟೆಯ ಹೊತ್ತಿಗೆ ಪೀಟರ್ ಉಸ್ತಿನೋವ್ ಅವರಿಗೆ ಟಿ. ವಿ. ಸಂದರ್ಶನ ನೀಡಲು ತಮ್ಮ ವಾಸದ ಮನೆಯಿಂದ ಪಕ್ಕದ ಗೃಹ ಕಚೇರಿಗೆ ಹೋಗುವಾಗ ಅವರ ಹಿಂದೆ ಒಬ್ಬ ಅಂಗರಕ್ಷಕನಿದ್ದ. ಎಡಪಕ್ಕದಲ್ಲಿ ಆಪ್ತ ಸಹಾಯಕ ಆರ್. ಕೆ. ಧಾವನ್ ಇದ್ದರು. ಬಲಪಕ್ಕದಲ್ಲಿ ಪತ್ರಿಕಾ ಸಲಹೆಗಾರ ಎಚ್.ವೈ. ಶಾರದಾಪ್ರಸಾದ್ ಮತ್ತು ವಿದೇಶಾಂಗ ವ್ಯವಹಾರ ಇಲಾಖೆಯ ವಿಶೇಷಾಧಿಕಾರಿ ಜಿ. ಪಾರ್ಥಸಾರಥಿ ಇದ್ದರು. ಹೀಗೆ ತನ್ನ ಆಪ್ತ ಸಹಾಯಕರೊಡನೆ ಮಾತನಾಡುತ್ತಾ ನಡೆದಿದ್ದ ಇಂದಿರಾಗಾಂಧಿಯವರ ಮೇಲೆ ಮೊದಲು ಬಿಯಾಂತ್‌ಸಿಂಗ್ ಮತ್ತೆ ಸತ್ವಂತ್‌ಸಿಂಗ್ ಗುಂಡಿನ ಮಳೆಗರೆದಾಗ ಇವರೆಲ್ಲಾ ಅಲ್ಲಿಂದ ಕಾಲ್ಕಿತ್ತರೆಂಬುದನ್ನು ಮುಂಗಾರು ಅಂದು ವರದಿ ಮಾಡಿತ್ತು.

ಗುಂಡಿನ ಏಟಿನಲ್ಲಿ ಕುಸಿದುಬಿದ್ದ ಇಂದಿರಾಗಾಂಧಿಯವರ ಹತ್ತಿರ ಇವರ್ಯಾರೂ ಇರಲಿಲ್ಲ. ಗುಂಡಿನ ಸದ್ದು ಕೇಳಿ ಮನೆಯಿಂದ ಹೊರಗೆ ಓಡಿಬಂದ ಸೊಸೆ ಸೋನಿಯಾಗಾಂಧಿ ತನ್ನ ಅತ್ತೆಯನ್ನು ಎತ್ತಿ ಕೂಗಿದರು. ಸೇವಕರನ್ನು ಕರೆದು ಗಾಯಗೊಂಡ ಅತ್ತೆಯನ್ನು ಆಸ್ಪತ್ರೆಗೆ ಕೊಂಡೊಯ್ದರು. ಮನೆಯಿಂದ ಆಸ್ಪತ್ರೆಗೆ ಸೇರಲು 25 ನಿಮಿಷ ತಗಲಿತ್ತು. ಈ ಅವಧಿಯಲ್ಲಿ ಇಂದಿರಾಗಾಂಧಿಯವರ ಆಪ್ತ ಸಹಾಯಕರ್ಯಾರೂ ಆಸ್ಪತ್ರೆಗೆ ಸುದ್ದಿ ಮುಟ್ಟಿಸಲಿಲ್ಲ. ಹಾಗಾಗಿ ಆಸ್ಪತ್ರೆಗೆ ಸೇರಿದ ಮೇಲೂ ಇಂದಿರಾಗಾಂಧಿಯವರನ್ನು ಚಿಕಿತ್ಸಾ ವಿಭಾಗಕ್ಕೆ ಸಾಗಿಸುವಲ್ಲಿ ವಿಳಂಬವಾಯಿತೆಂಬುದನ್ನು ಅಂದು 'ಮುಂಗಾರು' ವರದಿ ಮಾಡಿತ್ತು.

'ಮುಂಗಾರು' ವಿನ ಈ ವರದಿ ಇಂದಿರಾಗಾಂಧಿಯವರ ಆಪ್ತ ಸಹಾಯಕ ವರ್ಗದ ನಡೆವಳಿಕೆಯನ್ನು ಸಂಶಯದಿಂದ ಕಂಡಿತ್ತು. ಅಂದು ನಾವು ವ್ಯಕ್ತಪಡಿಸಿದ್ದ ಸಂಶಯವನ್ನು ನ್ಯಾಯಮೂರ್ತಿ ಠಕ್ಕರ್ ಈಗ ಪುಷ್ಟೀಕರಿಸಿದ್ದಾರೆ. "ಇಂದಿರಾಗಾಂಧಿಯವರ ಸುತ್ತ ವಾಮಾಚಾರಗಳ ಗೂಡು ಕಟ್ಟಿ ಕೂತಿದ್ದ ಅಧಿಕಾರಶಾಹಿಯ ರಾಣಿ ನೊಣ" ಆರ್. ಕೆ. ಧಾವನ್ ಎಂಬುದನ್ನು ನ್ಯಾಯಮೂರ್ತಿ ಠಕ್ಕರ್ ಗುರುತಿಸಿದ್ದಾರೆ.

ಇಂದಿರಾಗಾಂಧಿಯವರ ಹತ್ಯೆಗೆ ಮೊದಲೇ "ಅತಿ ಪ್ರಭಾವಿ" ಎನ್ನಿಸಿದ್ದ ಅವರ ಆಪ್ತ ಸಹಾಯಕ ಆರ್. ಕೆ. ಧಾವನ್ ಕುಖ್ಯಾತರಾಗಿಯೇ ಇದ್ದರು. ಪ್ರಧಾನಿ ಕಾರ್ಯಾಲಯದ ಎಲ್ಲ ಕುಕೃತ್ಯಗಳಿಗೂ ಈ ಧಾವನ್ ಎನ್ನುವ ವ್ಯಕ್ತಿಯೇ ಕಾರಣವೆಂಬ ಅಭಿಪ್ರಾಯ ವ್ಯಾಪಕವಾಗಿತ್ತು. ಪ್ರಧಾನಿ ರಾಜೀವ್‌ಗಾಂಧಿ ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲಿ ಧಾವನ್‌ರನ್ನು ಮನೆಗೆ ಕಳಿಸಿದಾಗ ಎಲ್ಲರೂ ಅದನ್ನು ಮೆಚ್ಚಿದ್ದರು. ಯುವ ಪ್ರಧಾನಿ ರಾಜೀವ್‌ಗಾಂಧಿ ತಮ್ಮ ಕಾರ್ಯಾಲಯದ ಕಸಗುಡಿಸುತ್ತಿರುವರೆಂಬ ಪ್ರಶಂಸೆ ಬಂದಿತ್ತು.

ಇದಾದ ನಾಲ್ಕೂವರೆ ವರ್ಷಗಳ ಬಳಿಕ ಪ್ರಧಾನಿ ರಾಜೀವ್‌ಗಾಂಧಿಗೆ ತಮ್ಮ ಆಪ್ತ ಸಹಾಯಕನಾಗಿ ಅದೇ ಕುಖ್ಯಾತ ಧಾವನ್ ಯಾಕೆ ಬೇಕಾದರೆಂಬುದು ತೀರಾ ಒಗಟಾಗಿ ಕಾಣುತ್ತಿದೆ. ಹೇಳಿದ ಕೆಲಸವನ್ನು ನಿಷ್ಠೆಯಿಂದ ನಿರ್ವಹಿಸಬಲ್ಲ ಶೀಘ್ರ ಲಿಪಿಕಾರರೊಬ್ಬ ನಮ್ಮ ಪ್ರಧಾನಿಯವರಿಗೆ ಯಾಕೆ ಸಿಗಲಿಲ್ಲ?- ಎಂಬ ಪ್ರಶ್ನೆ ಏಳುತ್ತದೆ. ಅದರಲ್ಲಿಯೂ ನ್ಯಾಯಮೂರ್ತಿ ಠಕ್ಕರ್ ತಮ್ಮ ವರದಿಯಲ್ಲಿ ಇಂದಿರಾಗಾಂಧಿ ಹತ್ಯೆಯಲ್ಲಿ ಧಾವನ್ ಕೈವಾಡದ ಸ್ಪಷ್ಟ ಸೂಚನೆ ಇದೆಯೆಂದು ಹೇಳಿದ ಮೇಲೂ ಪ್ರಧಾನಿ ರಾಜೀವ್‌ಗಾಂಧಿಯವರಿಗೆ ಆಪ್ತ ಸಹಾಯಕರಾಗಿ ಧಾವನ್ ಅವರೇ ಯಾಕೆ ಬೇಕಾದರು? ಎಂಬುದು ತೀರಾ ನಿಗೂಢವಾಗಿ ಕಾಣುತ್ತಿದೆ.

ರಾಜಕೀಯವಾಗಿ ತೀರಾ ಸೂಕ್ಷ್ಮವಾದ ಮಜಲುಗಳು ತೆರೆದುಕೊಳ್ಳುತ್ತಿರುವ ಇಂದಿನ ಸನ್ನಿವೇಶದಲ್ಲಿ ದೇಶದ ಪ್ರಧಾನಿ ರಾಜೀವಗಾಂಧಿಯವರು ಧಾವನ್‌ರಂತಹ ಪ್ರಶ್ನಾರ್ಹ ಪ್ರಾಮಾಣಿಕತೆಯ ವ್ಯಕ್ತಿಗೆ ಅಧಿಕಾರದ ಕವಚ ತೊಡಿಸಬಾರದಿತ್ತು. ಭಾರತದಂತಹ ಒಂದು ದೊಡ್ಡ ದೇಶದ ಪ್ರಧಾನಿಗೆ ಧಾವನ್‌ರಂತಹ ವ್ಯಕ್ತಿಯ ಸೇವೆ ಅನಿವಾರ್ಯವೆನ್ನಿಸಿರುವುದು ಬರಲಿರುವ ದುರಂತದ ಮುನ್ಸೂಚನೆಯೆಂದು ಹೇಳಲಿಚ್ಛಿಸುತ್ತೇವೆ.

ರಾಜೀವ್‌ಗಾಂಧಿಯವರಿಗೆ ತಮ್ಮ ರಾಜಕೀಯ ಹಿತದ ಸರಿಯಾದ ಪ್ರಜ್ಞೆ ಇರುವುದಾದರೆ ಈಗಲಾದರೂ ಧಾವನ್‌ರನ್ನು ದೂರೀಕರಿಸಬೇಕು.

1988ರ ನವೆಂಬರ್ 12ಮತ್ತು 14ರ ಮಧ್ಯೆ ಉಪವಿಭಾಗಾಧಿಕಾರಿಯವರ ಮನೆಯಲ್ಲಿ ಈ ಟಿ. ವಿ. ಕಳ್ಳತನ ಆಗಿತ್ತು. ಇದಕ್ಕೆ ಸಂಬಂಧಿಸಿದಂತೆ ರಾಮು ಎಂಬ ಯುವಕನನ್ನು ಮಡಿಕೇರಿಯ ಪೊಲೀಸರು ಬಂಧಿಸಿದ್ದರು ಎಂದು ವರದಿಯಾಗಿದೆ.

ರಾಮು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ "ಮಹಮ್ಮದಾಲಿ ಎಂಬ ಗುಜರಿ ವ್ಯಾಪಾರಸ್ಥರಿಗೆ ತಾನು ಕದ್ದ ಟಿ. ವಿ. ಮಾರಾಟ ಮಾಡಿದ್ದಾಗಿ" ತಿಳಿಸಿದ ಪ್ರಕಾರ, ಮಹಮ್ಮದಾಲಿ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ಈ ದಿಸೆಯಲ್ಲಿ ಅವರು ನೋವನ್ನನುಭವಿಸಿ ಆಸ್ಪತ್ರೆಗೂ ಸೇರಿದ್ದರು.

ವಿಚಿತ್ರವೆಂದರೆ, ವ್ಯವಹಾರದ ಸಂಬಂಧದಲ್ಲಿ ಮೈಸೂರಿಗೆ ಹೋಗಿದ್ದ ಮಹಮ್ಮದಾಲಿ ಅವರಿಗೆ 13-3-89ರಂದು ಮಡಿಕೇರಿಗೆ ಬಂದಿಳಿದಾಗ ಅವರ ಮನೆ ನಂ. 4019/88) ಹಾಜರಾದಾಗ ಬಂಧನದಲ್ಲಿದ್ದ ರಾಮು ಟಿ. ವಿ. ಕದ್ದನೆ? ಇದು ಸಾಧ್ಯವೆ? ಇಲ್ಲದಿದ್ದರೆ ಟಿ. ವಿ. ಕದ್ದವರು ಯಾರು? ಇವು ಸಾರ್ವಜನಿಕ ವಲಯದಲ್ಲಿ ಚರ್ಚೆಗೀಡಾಗಿರುವ ಪ್ರಶ್ನೆಗಳಾಗಿವೆ.

ಈ ಪ್ರಕರಣವು ಇದೀಗ ಸಾರ್ವಜನಿಕ ಪ್ರತಿಭಟನಾ ಕಾರ್ಯಕ್ರಮಕ್ಕೂ ದಾರಿ ಮಾಡಿಕೊಟ್ಟಿವೆ. ಮಾರ್ಚ್ 25ರಂದು ಮಡಿಕೇರಿಯಲ್ಲಿ ವೀರಾಜಪೇಟೆ ಶಾಸಕ ಸುಮಾವಸಂತ್‌ರವರ ಅಧ್ಯಕ್ಷತೆಯಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಪೊಲೀಸರ ಕ್ರಮವನ್ನು ಖಂಡಿಸಲಾಯಿತು. ವಿಧಾನ ಪರಿಷತ್ ಸದಸ್ಯ ಎ. ಕೆ ಸುಬ್ಬಯ್ಯ, ಜಿ. ಪ. ಉಪಾಧ್ಯಕ್ಷ ಟಿ. ಎಂ ಖಾಸಿಂ, ಮಡಿಕೇರಿ ಪುರಸಭೆಯ ಮಾಜಿ ಅಧ್ಯಕ್ಷ ಕೆ. ಎಸ್. ದೇವಯ್ಯ ಮುಂತಾದವರು ಸಭೆಯಲ್ಲಿ ಮಾತನಾಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎನ್. ಕೆ ಮಾಚಯ್ಯ ಅವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕೃ ತ ಜ್ಞ ತೆ

ಬೈಂದೂರು, ಮಾ. 29- ಬೈಂದೂರು ಪೋಸ್ಟ್ ಆಫೀಸಿನ ಮುಖಾಂತರ ಎಸ್. ಟಿ.ಡಿ. ದೂರವಾಣಿ ಸಂಪರ್ಕ ಸೌಲಭ್ಯ ದೊರಕಿಸಿಕೊಟ್ಟಿದ್ದಕ್ಕಾಗಿ ಲೋಕ ಸಭಾ ಸದಸ್ಯ ಹಾಗೂ ಎ.ಐ.ಸಿ.ಸಿ. (ಐ) ಪ್ರಧಾನ ಕಾರ್ಯದರ್ಶಿ ಆಸ್ಕರ್ ಫೆರ್ನಾಂಡಿಸ್ ಮತ್ತು ಇಲಾಖಾ ಅಧಿಕಾರಿಗಳಿಗೂ ಬೈಂದೂರು ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ರಿಯಾಜ್ ಅಹಮ್ಮದ್ ಅವರಿಗೆ ಜನತೆಯ ಪರವಾಗಿ ಕೃತಜ್ಞತೆ ಸಲ್ಲಿಸಿದ್ದಾರೆ

ಬಯೋಗ್ಯಾಸ್ ಪ್ಲಾಂಟ್ ಉದ್ಘಾಟನೆ

ಮಂಗಳೂರು, ಮಾ. 29- ರಾಷ್ಟ್ರೀಯ ಯೋಜನೆಯನ್ವಯ ಸಿಂಡಿಕೇಟ್ ಬ್ಯಾಂಕ್ ಕುಲಶೇಖರ ಶಾಖೆಯ ಆರ್ಥಿಕ ನೆರವು ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದಿಂದ ಅಂಗೀಕಾರ ಪಡೆದ ದ. ಕ. ಕೃಷಿ ಅಭಿವೃದ್ಧಿ ಸಹಕಾರ ಸಂಘದ ಸಂಪೂರ್ಣ ತಾಂತ್ರಿಕ ನೆರವಿನೊಂದಿಗೆ ಮಂಗಳೂರಿನ ಕೋಟಿ ಮಠದಲ್ಲಿ ಲಿಲ್ಲಿ ಡಿ'ಸೋಜ ಅವರು ನಿರ್ಮಿಸಿದ ಬಯೋಗ್ಯಾಸ್ ಪ್ಲಾಂಟ್‌ನ್ನು ಇತ್ತೀಚೆಗೆ ಶಾಖಾ ಮ್ಯಾನೇಜರ್ ಎಸ್. ಜಯಶೀಲ ಹೆಗ್ಡೆ ಉದ್ಘಾಟಿಸಿದರು.

ಈ ಸಮಾರಂಭದಲ್ಲಿ ಬ್ಯಾಂಕಿನ ಗ್ರಾಮೀಣ ಅಭಿವೃದ್ಧಿ ಅಧಿಕಾರಿ ಆರ್. ಪಿ. ಜಯಶಂಕರ್ ಹಾಗೂ ಸ್ಟ್ಯಾಂಡರ್ಡ್‌ನ ಗೋಬರ್ ಗ್ಯಾಸ್ ಸೂಪರ್ ವೈಸರ್ ಬಾಲಕೃಷ್ಣ ನಾಯ್ಕ ಹಾಗೂ ಲೆಕ್ಕಾಧಿಕಾರಿ ಗಣಪತಿ ಕೆ. ಅವರು ಉಪಸ್ಥಿತರಿದ್ದರು.

ನಾಟಕ ಸಂಸ್ಥೆಗಳ ಒಕ್ಕೂಟದ ಮಹಾಸಭೆ

ಸುಳ್ಯ, ಮಾ. 29-ಕರಾವಳಿ ಹವ್ಯಾಸಿ ನಾಟಕ ಸಂಸ್ಥೆಗಳ ಒಕ್ಕೂಟದ ಮಹಾಸಭೆಯು 'ಅಭಿನಯ ಸುಳ್ಯ' ಇದರ ಆಶ್ರಯದಲ್ಲಿ ಎ. 2ರಂದು ಸುಳ್ಯದ ಗುರುಭವನದಲ್ಲಿ ನಡೆಯಲಿದೆ.

ಬೆಳಗ್ಗೆ 9-30 ರಿಂದ 12 ರ ತನಕ ನಡೆಯುವ ಮಹಾಸಭೆಯ ಬಳಿಕ 1 ಗಂಟೆಯಿಂದ ಒಕ್ಕೂಟದ ಸದಸ್ಯ ತಂಡಗಳಿಂದ 'ಕಿರುರಂಗ ಪ್ರದರ್ಶನ' ಕಾರ್ಯಕ್ರಮ ಹಾಗೂ ಸಂಜೆ 5ರಿಂದ ಸುಳ್ಯದ ಬೀದಿಗಳಲ್ಲಿ 'ಸಾಂಸ್ಕೃತಿಕ ಮೆರವಣಿಗೆ' ನಡೆಯಲಿದೆ.

ಮಧ್ಯಾಹ್ನ ರಂಗ ಪ್ರದರ್ಶನ ಕಾರ್ಯಕ್ರಮದ ಉದ್ಘಾಟನೆಯು ಸಮಾರಂಭದಲ್ಲಿ ಕವಿ ಸುಬ್ರಾಯ ಚೊಕ್ಕಾಡಿ ಹಾಗೂ ರಂಗ ಪ್ರೇಮಿ ಚಲನಚಿತ್ರ ನಿರ್ಮಾಪಕ ಎನ್. ಎಸ್. ದೇವಿಪ್ರಸಾದ್ ಸಂಪಾಜೆ ಇವರು ಉಪಸ್ಥಿತರಿರುವರು.

128 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ

ಮಂಗಳೂರು, ಮಾ. 29 — ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಈ ವರೆಗೆ 49,772 ಅಭ್ಯರ್ಥಿಗಳು ಉದ್ಯೋಗಕ್ಕಾಗಿ ತಮ್ಮ ಹೆಸರನ್ನು ನೋಂದಾಯಿಸಿದ್ದು ಕಳೆದ 3 ತಿಂಗಳಲ್ಲಿ 128 ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ಕಲ್ಪಿಸಲಾಗಿದೆ.

ಪ್ರಿಯಾ ಮಹಿಳಾ ಮಂಡಳ ಉದ್ಘಾಟನೆ

ಮಂಗಳೂರು, ಮಾ. 29- ನಗರದ ಕಾಂಜಿಕ್ಷ ಬೈಲಿನಲ್ಲಿ ಇತ್ತೀಚೆಗೆ ಪ್ರಿಯಾ ಮಹಿಳಾ ಮಂಡಲವನ್ನು ಸಿಸ್ಟರ್. ಅಗಸ್ಟ್ರಾಮೇರಿಯವರು ಉದ್ಘಾಟಿಸಿದರು.

ಅಧ್ಯಕ್ಷತೆಯನ್ನು ಕಾರ್ಮಿಲ್ ಪಜರತ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶೀರ್ಥ ಹಳ್ಳಿ ವಿಶ್ವನಾಥ ಶೆಟ್ಟಿ, ಮಾಜಿ ಕಾರ್ಪೋರೇಟರ್ ಮಹಮ್ಮದ್ ಶರೀಫ್ ಅವರು ಮಾತನಾಡಿದರು. ವಿಜಯ ಲಕ್ಷ್ಮೀ ಅವರು ಸ್ವಾಗತಿಸಿ, ಕರುಣಾಕ್ಷಿ ವಂದಿಸಿದರು.

...ಡಿಸಲಿದ್ದಾರೆ.

ಅಭಿಯಾನದಂಗವಾಗಿ ಯೋಗ ತರಗತಿ ವಿಚಾರಗೋಷ್ಠಿ ಹಾಗೂ ಸ್ಪರ್ಧೆಗಳು ಜೂನ್ ತಿಂಗಳ ವರೆಗೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಗುಂಡಿಬೈಲು ಶಾಲೆಯ ಸುವರ್ಣ ಮಹೋತ್ಸವ

ಉಡುಪಿ, ಮಾ. 29- ಗುಂಡಿಬೈಲು ಹಿರಿಯ ಪ್ರಾಥಮಿಕ ಶಾಲೆಯ ಸುವರ್ಣ ಮಹೋತ್ಸವವು ಇತ್ತೀಚೆಗೆ ಹರಿಕೃಷ್ಣ ಪುನರೂರು ಅವರ ಅಧ್ಯಕ್ಷತೆಯಲ್ಲಿ ಜರಗಿತು.

ವಿದ್ಯಾಧೀಶ ತೀರ್ಥರು ಸ್ಮಾರಕ ಸದನವನ್ನು ಉದ್ಘಾಟಿಸಿದರು. ಸಹಾಯಕ ವಿದ್ಯಾಧಿಕಾರಿ ಕೆ. ಆನಂದ ಅವರು ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು. ಗುಂಡಿಬೈಲು ಛತ್ರಬ್ರದರ್ಸ್ ಅವರು ಶಾಲೆಗೆ ಒದಗಿಸಿದ ಪ್ರವೇಶ ದ್ವಾರವನ್ನು ಈ ಸಂದರ್ಭದಲ್ಲಿ ತೆರೆಯಲಾಯಿತು.

ಮುಖ್ಯ ಅತಿಥಿಗಳಾಗಿ ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕ ಬಿ. ವಿ. ಗೋಪಾಲಕೃಷ್ಣ ರಾವ್, ಬಸ್ ಉದ್ಯಮಿ ಪಿ. ರವೀಂದ್ರ ನಾಯಕ್ ಭಾಗವಹಿಸಿದ್ದರು. ನಿವೃತ್ತರಾದ ಕೆ. ವಾದಿರಾಜ ಭಟ್ ಮತ್ತು ಎಲಿಜ್ ಡಯಾಸ್‌ರನ್ನು ಸನ್ಮಾನಿಸಲಾಯಿತು.

ಕಾರ್ಯದರ್ಶಿ ಎಸ್. ಎಸ್. ಕಾಮತ್, ಅಧ್ಯಕ್ಷ ಪಿ. ಶೀನ ಶೆಟ್ಟಿ, ಸಂಚಾಲಕ ವಿ. ಕೃಷ್ಣಮೂರ್ತಿ ಭಟ್, ಮುಖ್ಯೋಪಾಧ್ಯಾಯ ಪಿ. ನರಸಿಂಹ ಉಪಾಧ್ಯಾಯ, ಪಿ. ದಯಾನಂದ ಶೆಟ್ಟಿ ಮೊದಲಾದವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕೊನೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದುವು. ನಿವೃತ್ತ ಸೈನ್ಯ ಅಧಿಕಾರಿ ಕೆ. ನಾರಾಯಣ ಶೆಟ್ಟಿ ಅವರು ಧ್ವಜಾರೋಹಣವನ್ನು ಮಾಡಿದ್ದರು.

ಗ್ರಾಮ ನೈರ್ಮಲ್ಯ ಮಾಹಿತಿ ಶಿಬಿರ

ಉಳ್ಳಾಲ, ಮಾ. 29- ದ.ಕ. ಜಿಲ್ಲಾ ಪಂಚಾಯತ್ ತಾಂತ್ರಿಕ ಉಪವಿಭಾಗ ಮಂಗಳೂರು ತಾಲೂಕು ಪಂಚಾಯತ್ ಸಮಿತಿ ಮತ್ತು ಪೆರ್ಮನ್ನೂರು ಮಂಡಲ ಪಂಚಾಯತ್‌ನ ಸಂಯುಕ್ತ ಆಶ್ರಯದಲ್ಲಿ ಮಂಡಲ ಪಂಚಾಯತ್ ಮಟ್ಟದ ಗ್ರಾಮೀಣ ನೈರ್ಮಲ್ಯ ಕಾರ್ಯಾಗಾರವನ್ನು ಇತ್ತೀಚೆಗೆ ಕೋಟೆಕಾರ್ ಕ್ಷೇತ್ರದ ಜಿ. ಪ. ಸದಸ್ಯ ಲೂವಿಸ್ ಮೊಂತೇರೋ ಅವರು ಉದ್ಘಾಟಿಸಿದರು.

ಸಮಾರಂಭದ ಅಧ್ಯಕ್ಷತೆಯನ್ನು ಹರೇಕಳ ಕ್ಷೇತ್ರದ ಜಿ. ಪ. ಸದಸ್ಯ ಡಾ। ರಾಮಾನುಜಂ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಅಂಬ್ಲಮೊಗರು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ। ವೀರಪ್ ಆಗಮಿಸಿದ್ದರು.

ಈ ಸಂದರ್ಭದಲ್ಲಿ ಸಾಲ ವಿಸ್ತರಣಾಧಿಕಾರಿ ಎಂ. ಶಂಕರ ಶೆಟ್ಟಿ ಮತ್ತು ಸಹಾಯಕ ಕಾರ್ಯ ನಿರ್ವಾಹಕ ಇಂಜನಿಯರ್ ಕೆ. ತಿಮ್ಮಪ್ಪಯ್ಯ ಹಾಜರಿದ್ದರು.

ಮಂಡಲ ಪಂಚಾಯತ್ ಕಾರ್ಯದರ್ಶಿ ಎಂ. ನರಹರಿ ಭಟ್ ಸ್ವಾಗತಿಸಿದರು ಮಂಡಲ ಪ್ರಧಾನ ಮಹಾಬಲ ಶೆಟ್ಟಿ ವಂದಿಸಿದರು.



ಇಲ್ಲಿ ದೊರೆಯುವದು
ಉಷಾ ಎಲೆಕ್ಟ್ರಾನಿಕ್ಸ್, ಸೆಂಟ್ರಲ್ ಮಾರ್ಕೆಟ್, ಮಂಗಳೂರು. ಫೋನ್: 24704
ಯುನಿವರ್ಸಲ್ ಏಜನ್ಸೀಸ್ ಬೈಂದಾರ್ 1ನೇ ಕ್ರಾಸ್ ಮಂಗಳೂರು. ಫೋನ್: 33908

ಮುಂಗಾರು

ಗುರುವಾರ, ಫೆಬ್ರವರಿ 2, 1989

ವಿಸರ್ಜನೆಯ ಹಾದಿಯಲ್ಲಿ ಕಾಂಗ್ರೆಸ್

ಜನ ಬಾಹುಳ್ಯದಲ್ಲಿ ಜಗತ್ತಿನ ಎರಡನೆಯ ಅತಿ ದೊಡ್ಡ ದೇಶವಾದ ಭಾರತವನ್ನು ಆಳುತ್ತಿರುವ ಕಾಂಗ್ರೆಸ್ ಪಕ್ಷದ ಒಳಗಿನ ವಿದ್ಯಮಾನಗಳು ಕಳೆದ ಕೆಲವು ದಿನಗಳಿಂದ ತೀರಾ ಕುತೂಹಲಕಾರಿಯಾದ ತಿರುವನ್ನು ಪಡೆಯುತ್ತಿದೆ. ಕಳೆದ ಹದಿನೇಳು ವರ್ಷಗಳಿಂದ ಶ್ರೀಮತಿ ಇಂದಿರಾ ಗಾಂಧಿ ಮತ್ತು ಅವರ ಮಗ ರಾಜೀವ ಗಾಂಧಿ ಕಾಂಗ್ರೆಸ್ ಪಕ್ಷದಲ್ಲಿ ಉಳಿಸಿ ಬೆಳೆಸಿಕೊಂಡು ಬಂದಿರುವ ನೇಮಕ ರಾಜಕೀಯದಿಂದ ಸಂಚಿತವಾದ ಆಂತರಿಕ ಅತೃಪ್ತಿ ಎಲ್ಲೆಡೆ ಉಕ್ಕಿ ಹರಿಯಲಾರಂಭಿಸಿದೆ.

ಕಳೆದ ತಿಂಗಳು ತಮಿಳುನಾಡಿನಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕಾದ ದಯನೀಯ ಸೋಲಿನ ಬೆನ್ನಲ್ಲೇ ದೇಶದ ಅನೇಕ ರಾಜ್ಯಗಳಲ್ಲಿ ಆ ಪಕ್ಷವು ಆಂತರಿಕ ಕಲಹದಲ್ಲಿ ಕಂಪಿಸಲಾರಂಭಿಸಿರುವುದು ಸ್ವಾರಸ್ಯಕರವಾಗಿದೆ.

ತಮಿಳುನಾಡಿನಲ್ಲಾದ ಸೋಲಿನ ನೋವು ಹಸಿಹಸಿಯಾಗಿರುವಾಗಲೇ ಕಾಂಗ್ರೆಸ್ ಅಧ್ಯಕ್ಷ ರಾಜೀವ್ ಗಾಂಧಿ ಮಧ್ಯಪ್ರದೇಶದಲ್ಲಿ ಅನಗತ್ಯವಾಗಿ ಜೇನು ಗೂಡಿಗೆ ಕೈಹಾಕಿದರು. ಕಳೆದ ವರ್ಷವಷ್ಟೇ ದಿಲ್ಲಿಯಿಂದ ಮಧ್ಯ ಪ್ರದೇಶದ ಮುಖ್ಯಮಂತ್ರಿಯಾಗಿ ಕಳುಹಿಸಿದ್ದ ಅರ್ಜುನ್ ಸಿಂಗ್ ಅವರನ್ನು ಮನೆಗೆ ಕಳುಹಿಸುವ ಆಣತಿ ಮಾಡಿದರು. ಅರ್ಜುನ್ ಸಿಂಗ್ ಮನೆಗೆ ಹೋಗಲು ಒಪ್ಪಿದರಾದರೂ ಮುಖ್ಯಮಂತ್ರಿ ಪದಕ್ಕೆ ರಾಜೀವ್ ನಾಮಕರಣಕ್ಕೆ ಅವಕಾಶ ಕೊಡಲಾರೆನೆಂಬ ಸವಾಲೊಡ್ಡಿದರು. ಈ ಪ್ರಕರಣ ಕೊನೆಯಲ್ಲಿ ರಾಜೀವ ಗಾಂಧಿಯವರ ರಾಜಕೀಯ ಮರ್ಯಾದೆ ಉಳಿಸುವುದರಲ್ಲಿ ಪರ್ಯವಸನಗೊಂಡಿತಾದರೂ ಅವರ ಪ್ರತಿಷ್ಠೆಗೆ ಇದರಿಂದ ಸಾಕಷ್ಟು ಹಾನಿಯಾಗಿದೆ.

ಹೇಗೋ ಒಂದು ಸಮಸ್ಯೆ ಬಗೆ ಹರಿಯಿತೆಂದು ಸಮಾಧಾನದ ಉಸಿರೆಳೆಯಲೂ ರಾಜೀವ್‌ಗಾಂಧಿಯವರಿಗೆ ಈಗ ಅವಕಾಶವಿಲ್ಲದಾಗಿದೆ. ಬಿಹಾರದಲ್ಲಿ ಕಾಂಗ್ರೆಸ್ ಬಣಕ್ಕೆ ಬೆಂಕಿ ಬಿದ್ದಿದೆ. ಹೋದ ವರ್ಷ ರಾಜೀವ್ ಗಾಂಧಿ ನೇಮಿಸಿದ್ದ ಮುಖ್ಯಮಂತ್ರಿ ಭಗವತ್ ಝಾ ಆಜಾದ್ ಅವರನ್ನು ಮನೆಗೆ ಕಳಿಸಲೇ ಬೇಕೆಂದು ಬಿಹಾರದ ಭಿನ್ನಮತೀಯ ಶಾಸಕರು ಪಟ್ಟು ಹಿಡಿದಿದ್ದಾರೆ. ರಾಜೀವ್ ಗಾಂಧಿಯವರ ಕಾಂಗ್ರೆಸ್ ವರಿಷ್ಠ ಮಂಡಳಿಯ ಆಶಯಕ್ಕಾಗಲೀ ಆಣತಿಗಾಗಲೀ ಅಲ್ಲೀಗ ಬೆಲೆ ಇಲ್ಲದಾಗಿದೆ.

ಗುಜರಾಥಿನಲ್ಲಿ ಕಾಂಗ್ರೆಸ್ ಮುಖ್ಯ ಮಂತ್ರಿ ಅಮರಸಿನ್ಹಾ ಚೌಧರಿಯವರ ವಿರುದ್ಧ ಕಾಂಗ್ರೆಸ್ ಶಾಸಕರು ವಿಧಾನ ಸಭೆಯಲ್ಲೇ ತಿರುಗಿ ಬಿದ್ದಿದ್ದಾರೆ. ಮಹಾರಾಷ್ಟ್ರದಲ್ಲಿ ಮುಖ್ಯ ಮಂತ್ರಿ ಶರದ್ ಪವಾರ್ ವಿರುದ್ಧ ಕಾಂಗ್ರೆಸ್ ಶಾಸಕರು ಬಹಿರಂಗ ಸಮರ ಸಾರಿದ್ದಾರೆ. ಉತ್ತರ ಪ್ರದೇಶದಲ್ಲೂ ಮುಖ್ಯ ಮಂತ್ರಿ ಎನ್. ಡಿ. ತಿವಾರಿ ವಿರುದ್ಧ ಅತೃಪ್ತಿಯ ಹೊಗೆಯಾಡುತ್ತಿದೆ.

ರಾಷ್ಟ್ರ ರಾಜಕಾರಣದಲ್ಲಿ ಬಲದ ನೆಲೆಯನ್ನು ಕಳೆದು ಕೊಳ್ಳುತ್ತಿರುವ ರಾಜೀವ್ ಗಾಂಧಿಯವರಿಗೆ ತಮ್ಮ ಕಾಂಗ್ರೆಸ್ ಪಕ್ಷದಲ್ಲಿ ಕಾಣಿಸಿಕೊಳ್ಳುತ್ತಿರುವ ಈ ಆಂತರಿಕ ಕಲಹವನ್ನು ಶಮನಗೊಳಿಸಲು ಸಾಧ್ಯವಾಗದೆನ್ನಿಸುತ್ತದೆ. ಮಧ್ಯಯುಗದ ಸಾಮ್ರಾಟರುಗಳು ಸಮರವೊಂದರಲ್ಲಿ ಸೋತಾಗ ಅವರ ಆಶ್ರಿತ ರಾಜರುಗಳು ಸ್ವತಂತ್ರರಾಗುತ್ತಿದ್ದರಂತೆ ಅದೇ ಪ್ರವೃತ್ತಿ ಈಗ ಭಾರತದಲ್ಲಿ ಕಾಂಗ್ರೆಸ್ ಪಕ್ಷದ ಸಾರ್ವಭೌಮಾಧಿಕಾರದ ವಿಸರ್ಜನೆಯ ಕೆಲಸ ಮಾಡುತ್ತಿದೆಯೆನ್ನಬೇಕಾಗುತ್ತದೆ. ಇದುವರೆಗೆ ಪಕ್ಷದ ವರಿಷ್ಠ ನಾಯಕನ ಆಣತಿಗೆ ಮರು ಮಾತಿಲ್ಲದೆ ಮಣಿಯುತ್ತಿದ್ದ ಭಿನ್ನರಾಜ್ಯಗಳ ಕಾಂಗ್ರೆಸ್ ಪಾಳೇಗಾರರು ಈಗ ತಿರುಗಿ ಬೀಳುತ್ತಿದ್ದಾರೆ. ನಾಯಕ ರಾಜೀವ್ ಗಾಂಧಿಯವರ 'ನಾಮಬಲ' ಇನ್ನು ಮೇಲೆ ತಮ್ಮನ್ನು ಅಧಿಕಾರ ಗದ್ದುಗೆಗೇರಿಸಲಾರದೆಂಬ ಅರಿವು ರಾಜ್ಯಗಳ ಕಾಂಗ್ರೆಸ್ ಮಂದಿಗೆ ಆಗಿರಬೇಕು.

ಕಾಂಗ್ರೆಸ್ ಪಕ್ಷದ ಇಂದಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದೀಗ ನಿಶ್ಚಿತವಾಗಿ ವಿಸರ್ಜನೆಯ ಹಾದಿ ಹಿಡಿದಿದೆ. ಈ ಬಿಕ್ಕಟ್ಟಿನಿಂದ ಅದನ್ನು ಪಾರು ಮಾಡಿ ಅದನ್ನೊಂದು ಸಹಮತದ ಸಂಯೋಜಿತ ಶಕ್ತಿಯಾಗಿ ಮಾಡಬಲ್ಲ ಮುತ್ಸದ್ದಿತನವಾಗಲೀ ರಾಜಕೀಯ ಪ್ರೌಢಿಮೆಯಾಗಲೀ ರಾಜೀವ್‌ಗಾಂಧಿಯವರಿಗಿದೆಯೆಂದು ನಮಗನ್ನಿಸುತ್ತಿಲ್ಲ. ತಾಯಿ ಇಂದಿರಾ ಗಾಂಧಿಯವರು ಅನುಸರಿಸಿಕೊಂಡು ಬಂದಿದ್ದ ನೇಮಕ ರಾಜಕೀಯವನ್ನು ಮುಂದುವರಿಸಿ ಕೊಂಡು ಬಂದಿರುವುದೇ ಇಂದು ರಾಜೀವ್ ಗಾಂಧಿಯವರಿಗೆ ಕುತ್ತಾಗುತ್ತಿದೆ.

ಅಂತಿಮವಾಗಿ ಕಾಂಗ್ರೆಸ್ಸಿನ ನೇಮಕ ರಾಜಕೀಯ ಈ ವಿಸರ್ಜನೆಯ ಹಾದಿ ಹಿಡಿವುದೆಂದು ನಾವು 1987ರ ಜನವರಿ 22ರ ಸಂಪಾದಕೀಯದಲ್ಲಿ ಎಚ್ಚರಿಕೆ ನೀಡಿದ್ದೆವು. ಅಂದು ನಾವು ನೀಡಿದ್ದ ಎಚ್ಚರಿಕೆ ಇಂದು ನಿಜವಾಗುತ್ತಿದೆ. ಆಳುವ ಪಕ್ಷವು ಅನುಸರಿಸುತ್ತಿರುವ ನೇಮಕ ರಾಜಕೀಯ ಸರ್ವಾಧಿಕಾರಕ್ಕೆ ದಾರಿ ಮಾಡುವುದೆಂದು ಎಚ್ಚರಿಸಿದ್ದೆವು. ಆದರೆ ರಾಜೀವ್ ಗಾಂಧಿಯವರಿಗೆ ಸರ್ವಾಧಿಕಾರಿಯಾಗುವ ಸಾಮರ್ಥ್ಯ ಇಲ್ಲವೆಂಬುದೇ ದೇಶದ ಮುಂದೀಗ ಇರುವ ಬೆಳ್ಳಿಗೆರೆ.

ಓದುಗರ ಅವಗಾಹನೆಗಾಗಿ ನಾವು 1987ರ ಜನವರಿ 22 ರಂದು ಬರೆದ ಸಂಪಾದಕೀಯದ ಆಯ್ದ ಕೆಲ ಭಾಗಗಳನ್ನು ಈ ಕೆಳಗೆ ಕೊಡುತ್ತಿದ್ದೇವೆ:-

> "......ಅನೇಕ ಕಾಲದಿಂದ ಕಾಂಗ್ರೆಸ್ ಪಕ್ಷದಲ್ಲಿ ಪದಾಧಿಕಾರಿಗಳ ಚುನಾವಣೆಯೇ ನಡೆದಿಲ್ಲ. ಎಲ್ಲವೂ ನೇಮಕ ಮತ್ತು ವಜಾ ವಿಧಾನದಲ್ಲೇ ನಡೆದುಕೊಂಡು ಬಂದಿದೆ. ಇದೆಲ್ಲವೂ ನಾಯಕನಿಗೆ ವರ್ಚಸ್ಸು ಮತ್ತು ಜನರನ್ನು ಆಕರ್ಷಿಸುವ ಸಾಮರ್ಥ್ಯ ಇರುವ ತನಕ ನಡೆದುಕೊಂಡು ಬರುತ್ತದೆ. ಈ ಪ್ರಕ್ರಿಯೆಯಲ್ಲಿ ನಾಯಕನು ಸರ್ವಾಧಿಕಾರಿಯಾಗುವ ಸಕಲ ಸಾಧ್ಯತೆಗಳೂ ವಿಕಾಸವಾಗುತ್ತ ಹೋಗುತ್ತವೆ......ಆಂತರಿಕ ಪ್ರಜಾಪ್ರಭುತ್ವವಿಲ್ಲದೆ ನೇಮಕ ರಾಜಕೀಯದಲ್ಲಿ ಆಳ್ವಿಕೆ ನಡೆಸುವುದರಿಂದ ಬರುವ ಅಪಾಯವನ್ನು ರಾಜೀವ್‌ಗಾಂಧಿಯವರು ಪರಿಗಣಿಸಬೇಕು. ಇದೇ ದಾರಿಯಲ್ಲಿ ಮುಂದುವರಿಯುವುದರಿಂದ ತನ್ನ ಅಧಿಕಾರ ಭದ್ರವೆಂಬ ಹುಸಿ ನಂಬಿಕೆ ಅವರಿಗಿರಬಹುದು. ತನ್ನ ನಾಯಕತ್ವ ಅಜರಾಮರವೆಂಬ ಆತ್ಮ ವಿಶ್ವಾಸ ಬೆಳೆಯಬಹುದು. ಆದರೆ ಇದರಿಂದ ದೇಶದ ರಾಜಕೀಯ ವ್ಯವಸ್ಥೆಗೆ ಅಪಾರ ಹಾನಿಯಿದೆ...."

ಕಾಂಗ್ರೆಸ್ ಪಕ್ಷ ವಿಸರ್ಜನೆಯ ಹಾದಿ ಹಿಡಿದಿರುವುದರಿಂದ ನಮಗೆ ಖೇದವೆನಿಸಿಲ್ಲ. ಆದರೆ ಈ ಪಕ್ಷ ನಾವು ಅತಿಯಾಗಿ ನೆಚ್ಚಿಕೊಂಡಿರುವ ಜನತಂತ್ರದ ಅಂದಗೆಡಿಸಿದೆಯೆಂಬ ನೋವಿದೆ. ಅದರ ಮೇಲಿಗೆ ಒಂದು ಭಯವೂ ಇದೆ. ಅದೆಂದರೆ ಶಿಥಿಲವಾಗುತ್ತಿರುವ ತಮ್ಮ ಅಧಿಕಾರವನ್ನು ವಾಮಮಾರ್ಗದಲ್ಲಿ ಭದ್ರಪಡಿಸಿಕೊಳ್ಳುವ ದಾರಿಯನ್ನು ಅವರು ಹಿಡಿಯಬಹುದೆಂಬುದು. ದೇಶದ ಪರಿಸ್ಥಿತಿ ಇಂದು ತೀರಾ ಗೊಂದಲಮಯವಾಗಿದೆ. ಆಡಳಿತ ಯಂತ್ರವು ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸಲಾರದಷ್ಟು ಜಡವಾಗಿದೆ. ಆರ್ಥಿಕವಾಗಿ ದೇಶ ಬಿಕ್ಕಟ್ಟನ್ನು ಎದುರಿಸುತ್ತಿದೆ. ಪ್ರಾದೇಶಿಕ ಆಕಾಂಕ್ಷೆಗಳು ಉಮ್ಮಳಿಸುತ್ತಿವೆ. ಪಂಜಾಬಿನ ಕ್ಷೋಭೆ ಉಲ್ಬಣಿಸುತ್ತಿದೆ. ಇವೆಲ್ಲಾ ತುರ್ತು ಪರಿಸ್ಥಿತಿಯ ಹೇರಿಕೆಗೆ ಪೂರಕವಾದ ಪರಿಸ್ಥಿತಿಗಳು. ದೇಶದ ಪರಿಸ್ಥಿತಿ ವಿಷಮಿಸುತ್ತಿದೆಯೆಂಬುದರಲ್ಲಿ ಸಂದೇಹವೇ ಇಲ್ಲ.

ಇಂತಹ ಪರಿಸ್ಥಿತಿಯಲ್ಲಿ ಜನಮತ ಗಳಿಸಿ ಅಧಿಕಾರಕ್ಕೆ ಬರುವ ಯಾವ ಆಸೆಯನ್ನಿರಿಸಿಕೊಳ್ಳಲೂ ರಾಜೀವ್‌ಗಾಂಧಿಯವರಿಗೆ ಅವಕಾಶವಿಲ್ಲ. ರಾಜೀವ್ ಗಾಂಧಿಯವರ ಇತ್ತೀಚಿನ ನಡೆವಳಿಕೆಯನ್ನು ಗಮನಿಸಿದರೆ ಅವರು ಅಧಿಕಾರವನ್ನು ಸುಲಭದಲ್ಲಿ ಬಿಟ್ಟು ಕೊಡಲಾರರು ಅನ್ನಿಸುತ್ತಿದೆ. ಅಧಿಕಾರಸ್ಥಾನವು ಆಯಸ್ಕಾಂತದ ಕೆಲಸ ಮಾಡುತ್ತದೆ. ರಾಜಕೀಯ ವ್ಯವಸ್ಥೆ ಮತ್ತು ನಾಯಕತ್ವದಲ್ಲಿ ತೆರವು ಇರುವ ಒಂದು ದೇಶದಲ್ಲಿ ಅಧಿಕಾರಕ್ಕೆ ಅಂಟಿಕೊಳ್ಳುವ ಆಸೆ ಅನಾಹುತಕಾರಿಯಾಗಬಲ್ಲುದು. ನಮ್ಮ ಅಭಿಪ್ರಾಯದಲ್ಲಿ ಭಾರತವು ಎದುರಿಸುತ್ತಿರುವ ನಿಜವಾದ ಅಪಾಯವಿದು.

ಗ್ರಾಮೀಣ ನೈರ್ಮಲ್ಯ ಕಾರ್ಯಾಗಾರ

ಪುತ್ತೂರು, ಫೆ. 1–ಗುತ್ತಿಗಾರು ಮಂಡಲ ಪಂಚಾಯತ್‌ನಲ್ಲಿ ಇತ್ತೀಚೆಗೆ ಗ್ರಾಮೀಣ ನೈರ್ಮಲ್ಯ ಕಾರ್ಯಾಗಾರ ನಡೆಯಿತು.

ಮಂಡಲ ಪ್ರಧಾನ ಮುಳಿಯ ತಿಮ್ಮಪ್ಪಯ್ಯ ಅವರು ಈ ಕಾರ್ಯಾಗಾರವನ್ನು ಉದ್ಘಾಟಿಸಿದರು. ಸುಳ್ಯ ತಾಲೂಕು ಪಂಚಾಯತ್ ಸಮಿತಿ ಕಾರ್ಯದರ್ಶಿ ಕೆ.ಹನುಮಂತಪ್ಪ ಅವರು ಕಾರ್ಯಾಗಾರದ ಉದ್ದೇಶವನ್ನು ವಿವರಿಸಿದರು.

ಡಾ| ಕೃಷ್ಣಮೂರ್ತಿ, ಸ್ನೇಹಲತಾ ಮಲ್ಲಾರ್ ಅವರು ಉಪನ್ಯಾಸ ನೀಡಿದರು.

ಮಂಡಲ ಕಾರ್ಯದರ್ಶಿ ಜಯಣ್ಣ ಗೌಡ ವಂದಿಸಿದರು.

ಬದಿಯಡ್ಕದಲ್ಲಿ ಮುಳಿಯ ತಿಮ್ಮಪ್ಪಯ್ಯ ಜನ್ಮಶತಾಬ್ಧ

ಬದಿಯಡ್ಕ, ಫೆ. 1– ಮುಳಿಯ ತಿಮ್ಮಪ್ಪಯ್ಯ ಜನ್ಮ ಶತಮಾನೋತ್ಸವ ಮತ್ತು ಶತಕವಿಗಳ ಗೋಷ್ಠಿ ಇತ್ತೀಚೆಗೆ ಇಲ್ಲಿ ಜರಗಿತು.

ಕವಿಗೋಷ್ಠಿಯನ್ನು ಕವಿ, ಲೇಖಕ ಡಾ|ರಮಾನಂದ ಬನಾರಿ ಅವರು ನವಜೀವನ ಹೈಸ್ಕೂಲಿನಲ್ಲಿ ಉದ್ಘಾಟಿಸಿದರು. ಹಿರಿಯ ಕವಿ ಕಯ್ಯಾರ ಕಿಂಞಣ್ಣ ರೈ ಅವರ ಕಾವ್ಯ ಲಹರಿಯೊಂದಿಗೆ ಪ್ರಾರಂಭವಾದ ಈ ಗೋಷ್ಠಿಯಲ್ಲಿ ನಾಡಿನ ಮತ್ತು ಹೊರನಾಡಿನ ಕನ್ನಡ-ಮಲಯಾಳದ 106 ಕವಿಗಳು ಭಾಗವಹಿಸಿದ್ದರು. ವೆಂಕಟರಾಜ ಪುಣಿಂಚಿತ್ತಾಯ ಅಧ್ಯಕ್ಷತೆ ವಹಿಸಿದ್ದರು. ಎಸ್.ಆರ್.ಶೇಟ್ ಸ್ವಾಗತಿಸಿದರು. ಸಮಿತಿಯ ಪ್ರಧಾನ ಕಾರ್ಯದರ್ಶಿ ಬಿ.ಕೃಷ್ಣ ಪೈ ಕಾರ್ಯಕ್ರಮವನ್ನು ನಿರ್ವಹಿಸಿದರೆ ಎ.ಪಿ. ಕೆದಿಲಾಯ ವಂದಿಸಿದರು. ಎಂ.ಡಿ.ಪಾಲ್ ರಾವ್ ಜಾದವ್ ಮತ್ತು ನೆಕ್ರಾಜೆ ಸೀತಾರಾಮ ಭಟ್ ಸ್ವಾಗತ ಗೀತೆ ಹಾಡಿದ್ದರು.

ಮುಳಿಯ ಕುರಿತ ವಿಚಾರಗೋಷ್ಠಿಯಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಉಪ್ಪಂಗಳ ಸುಬ್ರಹ್ಮಣ್ಯ ಭಟ್ಟರು ಮುಳಿಯರ ಬಾಲ್ಯ ಮತ್ತು ಕೃತಿಗಳ ಬಗ್ಗೆ ಮಾತನಾಡಿದರು. ಮುಳಿಯರ ಆದರ್ಶ ಜೀವನದ ಬಗ್ಗೆ ಅವರ ಶಿಷ್ಯರಲ್ಲೊಬ್ಬರಾದ ನ್ಯಾಯವಾದಿ ಮು. ವಿ.ಕುಣಿಕುಳ್ಳಾಯ ಸವಿವರ ನೀಡಿದರು.

ಸಮಾರೋಪ ಸಮಾರಂಭದಲ್ಲಿ ಡಾ| ಕೆ.ಸುಬ್ರಹ್ಮಣ್ಯ ಭಟ್ ಮತ್ತು ಡಾ| ಉಪ್ಪಂಗಳ ರಾಮ ಭಟ್ ಮುಳಿಯರ ಕೃತಿಗಳ ಸಮಗ್ರ ಪರಿಚಯವಿತ್ತರು. ಮುಖ್ಯ ಅತಿಥಿಗಳಾಗಿ ಕಾಸ್ಕಾಡಿ ಮಾಧವ ಪೈ ಮತ್ತು ಎ.ಎನ್.ಪಬ್ಬಾರ್ ಪಾಲ್ಗೊಂಡಿದ್ದರು. ಬಿಂಡಿಗೆ ಶ್ಯಾಮಭಟ್ಟರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ ಮುಳಿಯ ತಿಮ್ಮಪ್ಪಯ್ಯನವರ ಪುತ್ರರಾದ ಮುಳಿಯ ಮಹಾಬಲ ಭಟ್ಟರನ್ನು ಶಾಲು ಹೊದಿಸಿ, ಫಲಪುಷ್ಪ ನೀಡಿ ಸನ್ಮಾನಿಸಲಾಯಿತು.

ಸಮಿತಿಯ ಗೌರವಾಧ್ಯಕ್ಷ ಕಯ್ಯಾರ ಕಿಂಞಣ್ಣ ರೈ ಸ್ವಾಗತಿಸಿದರೆ ಶಂಕರ್ ಸಾರಡ್ಕ ಕಾರ್ಯಕ್ರಮ ನಿರ್ವಹಿಸಿದರು. ಸುಬ್ರಾಯ ಅನಂತಪುರ ವಂದಿಸಿದರು.

...ಮಂತ್ರಣಕ್ಕೆ ರಚನೆ

ಕಲ್ಯಾಣ ಅಧಿಕಾರಿಗಳಾದ ಡಾ| ಎ. ಪಿ. ಮೂರ್ತಿಯವರು ಮಂಗನ ಕಾಯಿಲೆಯ ಕುರಿತು ಸಭೆಯಲ್ಲಿ ವಿವರಣೆಯನ್ನು ನೀಡಿ ಈ ರೋಗವನ್ನು ತಡೆಯಲು ಸಾರ್ವಜನಿಕರ ಸಹಕಾರವನ್ನು ಕೋರಿದರು. ಮಂಗ ಸಾಯುವುದು ಈ ರೋಗದ ಮುನ್ಸೂಚನೆಯಾದುದರಿಂದಾಗಿ ಮಂಗ ಸತ್ತ ಕಾಡಿಗೆ ಜನ, ಜಾನುವಾರುಗಳು ಹೋಗಕೂಡದೆಂದು ಸೂಚಿಸಿದರು. ಎಲ್ಲಿಯೋ ಮಂಗ ಸತ್ತಲ್ಲಿಯೂ ಜನರು ಜ್ವರ, ತಲೆನೋವು, ಮೈ, ಕೈ ನೋವು ಮುಂತಾದ ಚಿಹ್ನೆಗಳಿಂದ ನರಳುತ್ತಾ ಇದ್ದಲ್ಲಿ ಕೂಡಲೇ ಸ್ಥಳೀಯ ಆರೋಗ್ಯ ಕಾರ್ಯಕರ್ತರಲ್ಲಿಯೂ ಆಸ್ಪತ್ರೆಗಳಲ್ಲಿ ತಿಳಿಸಬೇಕಾಗಿ ವಿನಂತಿಸಿದರು.

ಸೇವಾ ಸಮಿತಿಯ ಅಧ್ಯಕ್ಷ ಜಗನ್ನಾಥ ಶೆಟ್ಟರು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಾರ್ವಜನಿಕರು ಈ ಕಾಯಿಲೆಯನ್ನು ಯಶಸ್ವಿಯಾಗಿ ನಿಯಂತ್ರಿಸಲು ಸಹಕಾರ ನೀಡಬೇಕೆಂದು ವಿನಂತಿಸಿದರು.

ಸಂಗೀತ ಕಾರ್ಯಕ್ರಮ

(ಮುಂಗಾರು ವರದಿ)

ವೀರಾಜಪೇಟೆ, ಫೆ. 1 – ಇಲ್ಲಿನ ಯಂಗ್‌ಮೆನ್ಸ್ ಕ್ರಿಕೆಟ್ ಕ್ಲಬ್‌ನ ಆಶ್ರಯದಲ್ಲಿ ಗಣರಾಜ್ಯೋತ್ಸವದಂದು ಸ್ಥಳೀಯ ಕಾವೇರಿ ಕಲ್ಯಾಣ ಮಂಟಪದಲ್ಲಿ 'ಪುರಾನ ಗೀತ ಮಾಲ' ಸಂಗೀತ ಕಾರ್ಯಕ್ರಮ ನಡೆಯಿತು.

ತಹಸೀಲ್ದಾರ್ ಬಿ. ಸಿದ್ದಯ್ಯ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಜಿಲ್ಲಾ ಕ್ರಿಕೆಟ್ ಅಸೋಸಿಯೇಷನಿನ ನಿರ್ದೇಶಕ ಡಾ| ಅಪ್ಪುರಾಯ ಅಧ್ಯಕ್ಷತೆ ವಹಿಸಿದ್ದರು.

ವೀರಾಜಪೇಟೆ ವಲಯ ಡಿವೈ. ಎಸ್ಪಿ. ಎಂ. ಬಿ. ಜಯರಾಂ ಮುಖ್ಯ ಅತಿಥಿಯಾಗಿದ್ದರು. ಕೆ.ಜಿ. ಅನಂತ್ ಸ್ವಾಗತಿಸಿದರು.

ಸುಳ್ಯ ವಲಯ ಅರಣ್ಯಾಧಿಕಾರಿ ಕಚೇರಿ ಉದ್ಘಾಟನೆ

ಸುಳ್ಯ, ಫೆ. 1– ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ವಲಯ ಅರಣ್ಯಾಧಿಕಾರಿ ಅವರ ಸುಳ್ಯ ತಾಲೂಕಿನ ಕಚೇರಿಯನ್ನು ಸುಳ್ಯ ಮಂ. ಪ್ರ., ಕೆ. ಬಾಲಕೃಷ್ಣ ಗೌಡರು ಇತ್ತೀಚೆಗೆ ಉದ್ಘಾಟಿಸಿದರು.

ಜಿಲ್ಲಾ ಪರಿಷತ್ ಸದಸ್ಯ ದೇವಪ್ಪ ನಾಯ್ಕ, ಕಡೆಕಾರು ರಾಮಣ್ಣ ಗೌಡ ಅವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಸುಳ್ಯ ತಾಲೂಕಿನ ಶಾಸಕ ಕುಶಲ ಅವರು ವಹಿಸಿದ್ದರು. ವಲಯ ಅರಣ್ಯಾಧಿಕಾರಿ ಕೆ. ನಾರಾಯಣ ರೈ ಸ್ವಾಗತಿಸಿ ವಂದಿಸಿದರು.

...ಪ್ರಚಂಡ ಶಕ್ತಿಯ ಹಗುರ ವಾಹನಗಳು.
...ರಿಸ್ಥಿತಿಗಳಿಗೆ ಕೇವಲ ಹೊಂದಿಸಿದ್ದಲ್ಲ,
...ನಿರ್ಮಿತವಾದದ್ದು.

ಮುಂಗಾರು

ಶನಿವಾರ, ಫೆಬ್ರವರಿ 25, 1989

ಚುನಾವಣೆ ಮೇಲೆ ಕಣ್ಣಿಟ್ಟಿರುವ 'ರೈಲ್ವೆ ಬಜೆಟ್'

ಕೇಂದ್ರ ಸರಕಾರವು 1989-90 ರ ಸಾಲಿನ ರೈಲ್ವೆ ಮುಂಗಡ ಪತ್ರವನ್ನು ಮಂಡಿಸಿದೆ. ರೈಲ್ವೆ ಖಾತೆ ಸಚಿವ ಮಾಧವರಾವ್ ಸಿಂಧಿಯಾ ಅವರು ಈ ಮುಂಗಡ ಪತ್ರದಲ್ಲಿ 140 ಕೋಟಿ ರೂ. ಗಳ ಮಿಗತೆಯನ್ನು ತೋರಿಸಿದ್ದಾರೆ. ಪ್ರಯಾಣದರವನ್ನು ಏರಿಸಲಾಗಿಲ್ಲವಾದರೂ ಪಾರ್ಸೆಲ್ ಹಾಗೂ ಸರಕುಸಾಗಣೆ ದರವನ್ನು ಶೇಕಡಾ 11 ರಷ್ಟು ಏರಿಸಲಾಗಿದೆ.

ಸದ್ಯದಲ್ಲೇ ಚುನಾವಣೆಗಳು ಎದುರಾಗುವ ದೂರದೃಷ್ಟಿಯಿಂದ ಪ್ರಯಾಣದರವನ್ನು ಏರಿಸುವ ಸಾಹಸಕ್ಕೆ ಕೈ ಹಾಕದೆ ಸರಕು ಸಾಗಣೆಯ ದರ ಏರಿಸಿ ಆ ಮೂಲಕ 876 ಕೋಟಿ ರೂ.ಗಳ ಹೆಚ್ಚುವರಿ ಆದಾಯಕ್ಕೆ ದಾರಿ ಮಾಡಿಕೊಂಡು 1989-90 ರ ಸಾಲಿನ ಮುಂಗಡಪತ್ರದಲ್ಲಿ 805 ಕೋಟಿ ರೂ.ಗಳ ಡಿವಿಡೆಂಡ್‌ನ್ನು ಕಳೆದು 140 ಕೋಟಿ ರೂ. ಗಳ ಮಿಗತೆಯನ್ನು ತೋರಿಸುವ ಚಾಣಾಕ್ಷತನವನ್ನು ಕೇಂದ್ರ ಸರಕಾರ ಮೆರೆದಿದೆ.

ಮುಂದಿನ ಚುನಾವಣೆಗಳ ಮೇಲೆ ಕಣ್ಣಿಟ್ಟು ನೇರವಾಗಿ ಜನಸಾಮಾನ್ಯರಿಗೆ ಆಘಾತ ಕೊಡದೆ ತೆರೆಯಮರೆಯಿಂದ ಎಂಬಂತೆ ಸರಕು ಸಾಗಾಟದ ದರಗಳನ್ನು ಇಷ್ಟು ಭಾರಿ ಪ್ರಮಾಣದಲ್ಲಿ ಏರಿಸಿರುವುದು ಹಣದುಬ್ಬರಕ್ಕೆ ಪೂರಕವಾಗಿ ಒಟ್ಟು ಆರ್ಥಿಕತೆಯ ಮೇಲೆ ದುಷ್ಪರಿಣಾಮಗಳನ್ನು 'ಬೀರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ.

ಉಳಿದೆಲ್ಲಾ ಅಂಶಗಳು ಹಿಂದಿನ ವರುಷಗಳಂತೆ ಮಾಮೂಲಿಯಾಗಿದ್ದು ಹೊಸತೇನನ್ನೂ ಕಾಣಲು ಸಾಧ್ಯವಿಲ್ಲ. ಸಾರಿಗೆ ದರ ಏರಿಕೆಯನ್ನು ಪ್ರಕಟಿಸುತ್ತಾ ಖಾದ್ಯ ಉಪ್ಪು, ಹಣ್ಣು, ತರಕಾರಿ, ಬೆಲ್ಲಗಳಂತಹ ಕೆಲವು ವಸ್ತುಗಳಿಗೆ ಈ ಏರಿಕೆಯಿಂದ ವಿನಾಯಿತಿ ನೀಡಲಾಗಿದೆ. ಕೆಲವು ಖ್ಯಾತ ಕ್ರೀಡಾಪಟುಗಳಿಗೆ ಪ್ರಯಾಣದಲ್ಲಿ ರಿಯಾಯಿತಿ ಕೊಡಲಾಗಿದೆ. ರೈತರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ದುರ್ಬಲವರ್ಗ ಹಾಗೂ ಗ್ರಾಮೀಣ ಪ್ರದೇಶದವರಿಗೆ ರಿಯಾಯಿತಿಗಳನ್ನು ನೀಡಲಾಗಿದೆ ಎಂಬ ತಮ್ಮ ಹಳೆ ಮಾತುಗಳನ್ನೇ ಈ ಬಾರಿ ಕೂಡಾ ರೈಲ್ವೆ ಸಚಿವರು ಪುನರುಚ್ಚರಿಸಿದ್ದಾರೆ.

ಈ ಸಲ 876 ಕೋಟಿ ರೂ. ಗಳಷ್ಟು ದೊಡ್ಡ ಪ್ರಮಾಣದ ಹೆಚ್ಚುವರಿ ಆದಾಯಂದ ಗುರಿ ತೋರಿಸಿ 140 ಕೋಟಿ ರೂ. ಗಳ ಮಿಗತೆಯ ಮುಂಗಡ ಪತ್ರ ಮಂಡಿಸಿರುವ ರೈಲ್ವೆ ಸಚಿವರು ಈ ಬಗ್ಗೆ ಹೆಮ್ಮೆ ಪಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ಈ ಹೆಚ್ಚುವರಿ ಆದಾಯ ಜನಸಾಮಾನ್ಯರ ಮೇಲಿನ ಹೊರೆಯ ಪರಿಣಾಮವಾಗಿಯೇ ಬಂದದ್ದೆಂಬುದನ್ನೂ ಗಮನಿಸಬೇಕಿದೆ.

ರೈಲ್ವೆ ಇಲಾಖೆ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡು ಹೆಚ್ಚುಹೆಚ್ಚು ಜನರನ್ನು ತನ್ನೆಡೆ ಆಕರ್ಷಿಸಿ ಆ ಮೂಲಕ ತನ್ನ ಸಂಪನ್ಮೂಲಗಳನ್ನು ಹೆಚ್ಚಿಸಿಕೊಂಡಿದ್ದರೆ ಆಗ ರೈಲ್ವೆ ಇಲಾಖೆಯ ಸಾಮರ್ಥ್ಯವನ್ನು ಮೆಚ್ಚಬಹುದಿತ್ತು. ಆದರೆ ಇಲ್ಲಿ ಪರೋಕ್ಷವಾಗಿ ಜನರ ಮೇಲೆಯೇ ಹೊರೆ ಏರಿ ಆ ಮೂಲಕ ತನ್ನ ಸಾಮರ್ಥ್ಯವನ್ನು ಹೇಳಿಕೊಳ್ಳುತ್ತಿರುವ ರೈಲ್ವೆ ಇಲಾಖೆಯದು ಬರೇ ಅಸಾಮರ್ಥ್ಯದ ಹಳಹಳಿಕೆಆಗಿದೆ ಅಷ್ಟೆ.

ರೈಲಿನಲ್ಲಿ ಪ್ರಯಾಣಿಸುವವರು ಮಧ್ಯಮ ವರ್ಗದವರು ಹಾಗೂ ಕೆಳ ಆದಾಯದವರು ಎಂಬುದನ್ನು ಗಮನದಲ್ಲಿರಿಸಿಕೊಂಡು ಪ್ರಯಾಣದರದಲ್ಲಿ ಯಾವುದೇ ಹೆಚ್ಚಳ ಮಾಡದಿರಲು ನಿರ್ಧರಿಸಲಾಗಿದೆ ಎಂದು ರೈಲ್ವೆ ಸಚಿವ ಮಾಧವರಾವ್ ಸಿಂಧಿಯಾ ಅವರು 1989-90 ರ ಸಾಲಿನ ರೈಲ್ವೆ ಮುಂಗಡ ಪತ್ರ ಮಂಡಿಸುತ್ತಾ ತಿಳಿಸಿದ್ದಾರೆ.

ಕಳೆದ ವರುಷ 1988-89ರ ಸಾಲಿನ ರೈಲ್ವೆ ಮುಂಗಡ ಪತ್ರ ಮಂಡಿಸಿದ್ದಾಗ ಇದೇ ರೈಲ್ವೆ ಸಚಿವ ಸಿಂಧಿಯಾ ಅವರು ಪ್ರಯಾಣದರ, ಸರಕುಸಾಗಣೆದರ, ಪಾರ್ಸೆಲ್‌ದರ, ಪ್ಲಾಟ್‌ಫಾರಂ ಟಿಕೆಟ್ ದರ ಹೀಗೆ ಸಾಧ್ಯವಿರುವ ಎಲ್ಲಾ ದರಗಳನ್ನೂ ಏರಿಸಿ ಜನತೆಯನ್ನು ದಿಗ್ಭ್ರಮೆಗೊಳಿಸಿ ಆ ಮೂಲಕ ಒಟ್ಟು 622 ಕೋಟಿ ರೂ. ಗಳ ಹೆಚ್ಚುವರಿ ಸಂಪನ್ಮೂಲ ರೂಡಿಸಿದ್ದರು. ಅಂದರೆ ಸಿಂಧಿಯಾ ಅವರ ಪ್ರಕಾರ ಕಳೆದ ವರುಷ ರೈಲಿನಲ್ಲಿ ಕೆಳ ಆದಾಯದವರು ಮಧ್ಯಮವರ್ಗದವರು ಪ್ರಯಾಣಿಸುತ್ತಿರಲಿಲ್ಲವೆಂದಾಗುತ್ತದೆ.

ಒಟ್ಟಾರೆ, ಒಂದಲ್ಲಾ ಒಂದು ರೀತಿಯ ಸವಿ ಮಾತುಗಳನ್ನು ಜನರಿಗೆ ಹೇಳುತ್ತಾ ಎಲ್ಲೋ ಒಂದಷ್ಟು ರಿಯಾಯಿತಿಗಳನ್ನು ತೋರಿ ಅವುಗಳಿಗೆ ತಾತ್ವಿಕ ಜನಪರ ಧೋರಣೆ ಇತ್ಯಾದಿ ಬಣ್ಣ ಹಚ್ಚುವ ಪ್ರಯತ್ನಗಳನ್ನು ಹಿಂದಿನಿಂದಲೂ ಸರಕಾರ ತನ್ನ ಮುಂಗಡ ಪತ್ರಗಳಲ್ಲಿ ತೋರುತ್ತಲೇ ಬಂದಿದೆ. ಈ ನೀತಿ ತಂತ್ರಗಳಿಂದ ಈ .ರೈಲ್ವೆ ಮುಂಗಡಪತ್ರ ಕೂಡಾ ಹೊರತಾಗಿಲ್ಲ ಎನ್ನುವುದಂತು ಸ್ಪಷ್ಟ.

ಈ ಬಾರಿಯ ಮುಂಗಡಪತ್ರದಲ್ಲಿ ದಕ್ಷಿಣ ಭಾರತದಲ್ಲಿ ಕೆಲವು ಹೊಸ ರೈಲ್ವೆ ಯೋಜನೆಗಳಿಗೆ ಒಂದಿಷ್ಟು ಹಣ ಮಂಜೂರು ಮಾಡಲಾಗಿದೆ. ಇದರಲ್ಲಿ ಮಂಗಳೂರು-ಉಡುಪಿ ರೈಲು ಮಾರ್ಗವೂ ಸೇರಿದೆ. ಮಂಗಳೂರಿನಿಂದ ಮುಂಬೈತನಕದ ಪಶ್ಚಿಮ ಕರಾವಳಿಯ ರೈಲು ಹಾದಿಯ ಎರಡನೇ ಹಂತವಾದ ಮಂಗಳೂರು ಮತ್ತು ಉಡುಪಿ ನಡುವಿನ 60ಕಿ.ಮೀ. ದೂರದ ಹೊಸ ಬ್ರಾಡ್‌ಗೇಜ್ ಲೈನಿನ ನಿರ್ಮಾಣಕ್ಕಾಗಿ 1989-90 ನೇ ಸಾಲಿನಲ್ಲಿ 50 ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿದೆ. ಆದರೆ ಇದು ರೈಲ್ವೆ ಲೈನಿನ ನಿರ್ಮಾಣದ ಪೂರ್ವಭಾವಿ ಪರಿಶೀಲನೆಗೆ ಸಾಲುವಷ್ಟಿಲ್ಲವೇನೋ ಎಂಬ ಸಂಶಯ ಬರುತ್ತಿದೆ. ಈ ಪ್ರದೇಶದ ಜನಸಮೂಹದ ಪ್ರಮುಖ ಬೇಡಿಕೆಯಾಗಿರುವ ಈ ಅಂಶವನ್ನು ಕಡೆಗಣಿಸಲಾಗದೆ ಒಂದಿಷ್ಟು ಕಣ್ಣೊರೆಸುವ ರೀತಿಯಲ್ಲಿ ಈ ಮಂಜೂರಾತಿ ನಡೆದಂತಿದೆ.

ಗುಲ್ಬರ್ಗ-ವಾಡಿ, ರಾಯಚೂರು ಕರ್ನಾಟಕ ಎಕ್ಸ್‌ಪ್ರೆಸ್ ಮತ್ತು ಸೊಲ್ಲಾಪುರ-ಬೆಂಗಳೂರು ನಡುವಿನ ಉದ್ಯಾನ ಎಕ್ಸ್‌ಪ್ರೆಸ್‌ಗಳೆರಡಕ್ಕೆ ಜೋಡಿ ಎಂಜಿನ್‌ಗಳನ್ನು ಸೇರಿಸುವ ಪ್ರಸ್ತಾಪವನ್ನೂ ರೈಲ್ವೆ ಸಚಿವರು ಮಾಡಿದ್ದಾರೆ. ಆದರೆ ಚಿತ್ರದುರ್ಗ-ರಾಯದುರ್ಗ ರೈಲ್ವೆ ಲೈನ್ ಯೋಜನೆಗೆ ಕೇವಲ 2 ಕೋಟಿ ರೂ.ಗಳನ್ನು ನೀಡಿ ನಿರಾಶೆಗೊಳಿಸಲಾಗಿದೆ. ಒಟ್ಟಾರೆ, ಈ ಮುಂಗಡ ಪತ್ರದಲ್ಲಿ ಉಡುಪಿ-ಮಂಗಳೂರು ಮಾರ್ಗವೂ ಸೇರಿದಂತೆ ಒಟ್ಟು 15 ಹೊಸ ಮಾರ್ಗಗಳ ನಿರ್ಮಾಣದ ಬಗ್ಗೆ ರೈಲ್ವೆ ಇಲಾಖೆ ಮನಸ್ಸು ಮಾಡಿರುವುದು ಸಮಂಜಸವಾಗಿದೆ.

ಒಟ್ಟಾರೆ, ಪ್ರಯಾಣದರದಲ್ಲಿ ಏರಿಕೆಯಾಗದೆ ಪರೋಕ್ಷವಾಗಿ ಸರಕು ಸಾಗಣೆ ದರದಲ್ಲಿ ಶೇಕಡ 11 ರಷ್ಟು ಏರಿಕೆಯಾಗಿ ಮೇಲ್ನೋಟಕ್ಕೆ ಕಾಣುವಂತೆ ಕೆಲವು ಗಿಲೀಟಿನ ರಿಯಾಯಿತಿಗಳನ್ನು ಘೋಷಿಸಿರುವ 1989-90ರ ರೈಲ್ವೇ ಮುಂಗಡ ಪತ್ರ ಮುಂದಿನ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟು ಕೊಂಡು ಮೂಡಿಬಂದ ಒಂದು ಸಾಮಾನ್ಯ ಮುಂಗಡ ಪತ್ರವಾಗಿದೆ ಅಷ್ಟೆ.

ಹೆಗ್ಗಡೆ ಅವರು ವಹಿಸಿಕೊಂಡಿರುವುದು

ಶಿಶು ಮಂದಿರದ ವಾರ್ಷಿಕ ವರ್ಧಂತಿ

ಗಂಗೊಳ್ಳಿ, ಫೆ. 24–ಸ್ಥಳೀಯ ವಿವೇದಿತಾ ಶಿಶು ಮಂದಿರದ ದ್ವಿತೀಯ ವಾರ್ಷಿಕೋತ್ಸವವು ವಿಜಯ ವಿಠಲ ಮಂಟಪದಲ್ಲಿ ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ಪ್ರಾಧ್ಯಾಪಕ ಎಚ್. ವಿ. ನರಸಿಂಹ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆಯಿತು.

ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ 'ಸೇವಾ ಸಂಗಮ'ದ ಅಧ್ಯಕ್ಷ ಡಾ। ಎಸ್. ಎನ್. ಪಡಿಯಾರ ಅವರು ಆಗಮಿಸಿದ್ದರು.

ಗಜಾನನ ಭಟ್ಟ ಕಾರ್ಯಕ್ರಮ ನಿರೂಪಣೆ ಮಾಡಿದರು. ಶಿಶುಮಂದಿರದ ಶಿಕ್ಷಕಿ ಚಂದ್ರಮತಿ ಭಟ್ ವಂದಿಸಿದರು.

ಸಾಮೂಹಿಕ ಕಾರ್ಯಕ್ರಮ

ಮಹಮದ್‌ಗುತ್ತಿಗಾರು ಹಾಗೂ ದಕ್ಷತಾ ಟ್ರಸ್ಟ್‌ನ ರೆ। ಫಾ। ಸಾಲಿನ್ಸ್ ಅವರು ಕಾರ್ಯಕ್ರಮಸಂಯೋಜಕರಾಗಿ ಹಾಗೂ ಜಿಲ್ಲಾಸಂಪರ್ಕ ಪ್ರತಿನಿಧಿಗಳಾಗಿ ಆಯ್ಕೆಯಾಗಿದ್ದಾರೆ.

ಗೋಕರ್ಣ: ರೂರಲ್ ಎಜುಕೇಶನ್ ಸೊಸೈಟಿಯ ಶತಮಾನೋತ್ಸವ

ಗೋಕರ್ಣ, ಫೆ. 24–ಇಲ್ಲಿಗೆ ಸಮೀಪದ ಬಂಕಿಕೊಡ್ಲದ ರೂರಲ್ ಎಜುಕೇಶನ್ ಸೊಸೈಟಿಯ ಶತಮಾನೋತ್ಸವವು ಫೆ.25–26 ರಂದು ಇದೇ ಸಂಸ್ಥೆ ನಡೆಸುತ್ತಿರುವ ಆನಂದಾಶ್ರಮ ಹೈಸ್ಕೂಲ್ ಆವರಣದಲ್ಲಿ ನಡೆಯಲಿದ್ದು ರಾಜ್ಯ ಸಮಾಜಕಲ್ಯಾಣ ಸಚಿವ ಪಿ.ಜಿ.ಆರ್. ಸಿಂಧ್ಯಾ ಕಾರ್ಯಕ್ರಮವನ್ನು ಉದ್ಘಾಟಿಸುವರು.

ನಗರಾಭಿವೃದ್ಧಿ ಸಚಿವ ಆರ್.ವಿ. ದೇಶಪಾಂಡೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ರಾಜ್ಯ ಸಭಾಸದಸ್ಯ ಆರ್.ಎಸ್. ನಾಯ್ಕ, ಸಂಸತ್ ಸದಸ್ಯ ರಾಮರಾಯ ನಾಯ್ಕ, ಶಾಸಕ ಎನ್.ಎಚ್.ಗೌಡ ಮತ್ತು ಜಿ.ಪ. ಅಧ್ಯಕ್ಷ ರಮಾನಂದ ನಾಯ್ಕ ಭಾಗವಹಿಸುವರು.

ಫೆ.25 ರಂದು ಸಂಜೆ 4ಗಂಟೆಯಿಂದ ರಾತ್ರಿ 9ರವರೆಗೆ ಶಾಲಾಮಕ್ಕಳ ಕಾರ್ಯಕ್ರಮ ಹಾಗೂ ಫೆ. 26 ರಂದು ಬೆಳಿಗ್ಗೆ 9-30 ರಿಂದ ಕವಿಗೋಷ್ಠಿ ಮತ್ತು ಮಧ್ಯಾಹ್ನ 3–30 ರಿಂದ ಸಾಹಿತ್ಯ ಗೋಷ್ಠಿ ನಡೆಯಲಿವೆ. ಎರಡೂ ಗೋಷ್ಠಿಗಳ ಅಧ್ಯಕ್ಷತೆಯನ್ನು ಖ್ಯಾತಸಾಹಿತಿ ಡಾ॥ ಶಿವರಾಮ ಕಾರಂತ ವಹಿಸಲಿದ್ದಾರೆ.

ಆಂದೋಲನ

ಕರೆ

ಭಂಡಾರಿ ಹಾಗೂ ದೇಜಪ್ಪ ನಾಯ್ಕ ಅವರು ಆಗಮಿಸಿದ್ದರು. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿ ಕಮಲಾಕರಹಾಲಂಬಿ ಆಂದೋಲನದ ಹಿನ್ನೆಲೆ ಹಾಗೂ ಯೋಜನೆಗಳ ಬಗ್ಗೆ ವಿವರಿಸಿದರು.

ಮಂಗಳೂರು ವಿ.ವಿ. ಶಿಕ್ಷಕೇತರ

ಅಧ್ಯಕ್ಷರಾ...

ಅವರು, ಇತ್ತೀಚೆಗೆ ಇಲ್ಲಿನ ವಿಜಾಂಬಾ ಪದವಿ ಪೂರ್ವ ಕಾಲೇಜಿನಲ್ಲಿ ಕವಿನಜೀರ್ ಚಂದಾವರರ ಕವನ ಸಂಕಲನವಾದ ಕಾತರದ ಬಿಡುಗಡೆ ಸಮಾರಂಭದ ಮುಖ್ಯ ಅತಿಥಿಗಳಲ್ಲೊಬ್ಬರಾಗಿ ಮಾತನಾಡುತ್ತಿದ್ದರು.

'ಕಾತರ'ಸಂಕಲನವನ್ನು ಸರಕಾರಿಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಂ.ಪಿ. ಜೋಶಿ ಅವರು ಬಿಡುಗಡೆ ಮಾಡಿದರು.

ಕೈಗಾರಿಕಾ ಕಟ್ಟಡಕ್ಕೆ ಸಿಮೆಂಟ್ ಲಭ್ಯ

ಮಂಗಳೂರು, ಫೆ. 24–ಕೈಗಾರಿಕಾ ಕಟ್ಟಡಗಳನ್ನು ನಿರ್ಮಾಣ ಮಾಡಲು ಅಥವಾ ಇದ್ದ ಕೈಗಾರಿಕಾ ಕಟ್ಟಡಗಳನು ವಿಸ್ತರಣೆ ಮಾಡಲು ಬೇಕಾಗುವ ಸಿಮೆಂಟನ್ನು ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಡಿಯಾಲ್‌ಬೈಲ್ ಮಂಗಳೂರು ಇವರ ಕಚೇರಿಯಿಂದ ಲೆವಿ ದರದಲ್ಲಿ ಬಿಡುಗಡೆ ಮಾಡಲಾಗುವುದು.

ಸಿಮೆಂಟಿನ ಅವಶ್ಯಕತೆ ಇದ್ದವರು ಕಟ್ಟಡದ ನಕಾಶೆಯನ್ನು ಸ್ಥಳೀಯ ಸಂಸ್ಥೆಗಳಿಂದ ಅಂಗೀಕಾರ ಪಡೆದು ಸಿಮೆಂಟ್ ಬೇಡಿಕೆ ಬಗೆಗಿನ ಎಸ್ಟಿಮೇಟ್ ಮತ್ತು ಕೈಗಾರಿಕಾ ನೋಂದಣಿ ಪತ್ರದೊಡನೆ ಮಂಗಳೂರಿನ ಜಿಲ್ಲಾ ಕೈಗಾರಿಕಾ ಕೇಂದ್ರಕ್ಕೆ ಕಳುಹಿಸಿಕೊಟ್ಟಲ್ಲಿ, ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕರಿಂದ ಪರಿಶೀಲನೆ ಮಾಡಿಸಿ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ ಶಾಖೆ ಎಯ್ಯಾಡಿ ಮಂಗಳೂರು ಇವರ ಗೋದಾಮಿನಿಂದ ಸಿಮೆಂಟ್ ಸರಬರಾಜು ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹರ ಮಲ್ಯನೆ ಸ್ವಾಗತಿಸಿದರು. ರಾಜೀವ ಅಜ್ಜಿಬೆಟ್ಟು, ನಜೀರ್‌ರನ್ನು ಪರಿಚಯಿಸಿದರು. ಮುರಳೀಧರ ಕುಮುನದಾನ ಕಾರ್ಯಕ್ರಮ ನಿರ್ವಹಿಸಿದ್ದರು. ರವೀಂದ್ರನಾಥ ನಾಯ್ಕ ವಂದಿಸಿದರು.

ಮಾನವನಿಗೆ ಮಣಿದ ಗೂಳಿ

ಉಡುಪಿ, ಫೆ. 24- ತನಗಿಂತ ಅಧಿಕ ಪಟ್ಟು ಶಕ್ತಿಯುತವಾದ ಭಾರಿ ಗೂಳಿಯೊಂದನ್ನು ಸಾಮಾನ್ಯ ಮಾನವನೊಬ್ಬ ಪ್ರಸಂಗಾವಧಾನತೆಯಿಂದ ಮಣಿಸಿದ ಘಟನೆ ಮೊನ್ನೆ ರಾತ್ರಿ ಇಲ್ಲಿಗೆ ಸಮೀಪದ ಬ್ರಹ್ಮಗಿರಿಯಲ್ಲಿ ಜರಗಿದೆ.

ಹುಸೇನ್ ಇಬ್ರಾಹಿಂ (50) ಎಂಬವರು ನಾಯರ್‌ಕೆರೆಮಸೀದಿಯಲ್ಲಿ ಮೊನ್ನೆ ರಾತ್ರಿ ಪ್ರಾರ್ಥನೆ ಮುಗಿಸಿ ಬರುವಾಗ ಯಾವಾಗಲೂ ಆ ದಾರಿಯಲ್ಲಿ ತಿರುಗಾಡುವ ಭಾರಿ ಗೂಳಿಯೊಂದು ಅವರನ್ನು ಹಠಾತ್ತಾಗಿ ತಿವಿಯಲು ಬಂತು. ದಿಕ್ಕು ತೋಚದೆ ಹುಸೇನ್ ಅವರು ಆತ್ಮರಕ್ಷಣೆಗಾಗಿ ತಮ್ಮ ಕಡೆಗೆ ನುಗ್ಗಿಬಂದ ಗೂಳಿಯ ಕುತ್ತಿಗೆಯನ್ನು ಬಲವಾಗಿ ಹಿಡಿದು ಜಗ್ಗತೊಡಗಿದರು. ಈ ಗೂಳಿ ಕಾಳಗವನ್ನು ಆಸುಪಾಸಿನವರು ನೋಡಿದರೂ ಕೂಡಾ ಅಸಹಾಯಕತೆಯಿಂದ ಸುಮ್ಮನಿದ್ದರು.

ಕುತ್ತಿಗೆಯನ್ನು ಹಿಡಿದ ಹುಸೇನ್‌ರವರು ಪಟ್ಟು ಬಿಡದೆ ಜಗ್ಗತೊಡಗಿದಾಗ, ಉಸಿರು ಕಟ್ಟಿದಂತಾದ ಗೂಳಿ ನೆಲಕ್ಕೆ ಕುಸಿಯಿತು. ಆಗ ಅವರು ತಮ್ಮ ಹಿಡಿತ ಬಿಟ್ಟು ನಿಡಿದಾದ ಉಸಿರು ಬಿಡತೊಡಗಿದರು. ಕೊನೆಗೆ ಬಸವಳಿದು ಬಿದ್ದ ಗೂಳಿಗೆ ನೀರು ಚೆಲ್ಲಿ, ಅದನ್ನು ಎಳೆಸಿದಾಗ, ಸಮ್ಮ ಪಾರಾದರೆ ಸಾಕೆಂದು ಅದು ಒಮ್ಮೆಲೇ ಅಲ್ಲಿಂದ ಓಟಕಿತ್ತಾಗ ನೆರೆದವರು ಹುಸೇನರ ಸಾಹಸಕ್ಕೆ ಮೆಚ್ಚುಗೆ ಸೂಚಿಸಿದರು.

ಬ್ಲಾಕ್ ನೈಟ್®
ಕೇಶ್ ಕಾಲಾ ತೇಲ್‌ನಿಂದ ಮೂರೇ ದಿನಗಳಲ್ಲಿ ಬಿಳಿಯ ಕೂದಲು ನೈಸರ್ಗಿಕವಾದ ಕಪ್ಪು ಬಣ್ಣಕ್ಕೆ ತಿರುಗುತ್ತದೆ.
ಬ್ಲಾಕ್ ನೈಟ್
ಕಾಲಿ ಮೆಹಂದಿಯಿಂದ
ಬಿಳಿ ಕೂದಲುಗಳು ಮುವತ್ತು ನಿಮಿಷಗಳಲ್ಲಿ ನೈಸರ್ಗಿಕವಾದ ಕಪ್ಪು ಬಣ್ಣಕ್ಕೆ ತಿರುಗುತ್ತವೆ.
ಅನುಕರಣೆಗಳ ಬಗ್ಗೆ ಎಚ್ಚರಿಕೆ ವಹಿಸಿರಿ

ಬೇಕಾಗಿದ್ದಾರೆ
ಪಂಚಕವಾರರು/ ಮಾರಾಟಗಾರರು ಬೇಕಾಗಿದ್ದಾರೆ
ತಯಾರಕರು :
ಮೆಟ್ರೊ ಬ್ಯೂಟಿ ಪ್ರಾಡಕ್ಟ್ಸ್ (ಇಂಡಿಯಾ)
ಪೋಸ್ಟ್ ಬಾಕ್ಸ್ ನಂ. 1501. ದೆಹಲಿ–6.

ಕರ್ನಾಟಕದ
ಉದ್ಯಮಶೀಲರಿಗೊಂದು
ಅಪೂರ್ವ ಅವಕಾಶ


ಮುಂಗಾರು

ಭಾನುವಾರ, ಫೆಬ್ರವರಿ 19, 1989

ಅನಧಿಕೃತ ಮಾತು ಸಂಚಿನ ಸಂಕೇತವೇ ?

ಕರ್ನಾಟಕದಲ್ಲಿ ಈಗ ರಾಜ್ಯಾಧಿಕಾರವನ್ನು ನಿರ್ವಹಿಸುತ್ತಿರುವ ಮುಖ್ಯಮಂತ್ರಿ ಎಸ್. ಆರ್. ಬೊಮ್ಮಾಯಿಯವರ ಜನತಾ ದಳದ ಸರಕಾರ ಅಧಿಕೃತವಾದುದಲ್ಲವೆಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ವೀರೇಂದ್ರ ಪಾಟೀಲರು ಶುಕ್ರವಾರ ಶಿರಸಿಯ ಪತ್ರಿಕಾ ಗೋಷ್ಠಿಯಲ್ಲಿ ಹೇಳಿದರೆಂದು ವರದಿಯಾಗಿದೆ. ಇದೇ ಧಾಟಿಯ ಮಾತನ್ನು ಕೇಂದ್ರದ ಸಚಿವ ಸಿ. ಕೆ.ಜಾಫರ್ ಷರೀಫ್ ಅವರು ಹುಬ್ಬಳ್ಳಿಯಲ್ಲಾಡಿರುವುದು ವರದಿಯಾಗಿದೆ. ರಾಜ್ಯ ವಿಧಾನ ಮಂಡಲದ ಎರಡೂ ಸದನದ ಕಾಂಗ್ರೆಸ್ ನಾಯಕರುಗಳು ಕೂಡಾ ಗುರುವಾರ ವಿಧಾನ ಮಂಡಲದಲ್ಲಿ ಇದೇ ಪ್ರಶ್ನೆಯನ್ನೆತ್ತಿದ್ದಾರೆ.

ರಾಜ್ಯದ ಕಾಂಗ್ರೆಸ್ ನಾಯಕರುಗಳು ಇತ್ತೀಚಿನ ದಿನಗಳಲ್ಲಿ ತಮಗೆ ಲಭ್ಯವಿರುವ ಎಲ್ಲ ವೇದಿಕೆಗಳಲ್ಲಿ ಜನತಾ ದಳ ಸರಕಾರದ ಸಾಂವಿಧಾನಿಕ ಪ್ರಾಮಾಣ್ಯವನ್ನು ಪ್ರಶ್ನಿಸುತ್ತಿರುವುದನ್ನು ಗಮನಿಸಿದಾಗ ಅವರು ಇದನ್ನೇ ಒಂದು ದೊಡ್ಡ ರಾಜಕೀಯ ಪ್ರಶ್ನೆಯನ್ನಾಗಿ ಮಾಡುವ ಸಂಕಲ್ಪಕ್ಕೆ ಬಂದಿರುವಂತೆ ಕಾಣುತ್ತದೆ.

ಜನತಾ ಪಕ್ಷದ ಸರಕಾರವು ಜನತಾ ದಳದ ಸರಕಾರವಾಗಿ ಮಾರ್ಪಟ್ಟಿರುವ ಸನ್ನಿವೇಶದಲ್ಲಿ ಇಂತಹ ಪ್ರಶ್ನೆಯನ್ನೆತ್ತಲು ಅವಕಾಶವೇ ಇಲ್ಲವೆನ್ನಲಾಗದು. ವಿಧಾನ ಮಂಡಲದ ಅಧಿವೇಶನದಲ್ಲಿ ಈ ಪ್ರಶ್ನೆಯನ್ನೆತ್ತಿ ಆಳುವ ಪಕ್ಷಕ್ಕೆ ರಾಜಕೀಯ ಕಿರಿ-ಕಿರಿ ಉಂಟು ಮಾಡುವುದರಲ್ಲಿ ಅರ್ಥವಿದೆ. ರಾಜಕೀಯ ಸೆಣಸಾಟದಲ್ಲಿ ಇದೆಲ್ಲಾ ಮಾಮೂಲಿಯಾದ ವಿಚಾರವೇ. ಆದರೆ ಕಾಂಗ್ರೆಸ್ ಪಕ್ಷದ ನಾಯಕರು ತೀರಾ ತಾಂತ್ರಿಕವಾದ ಈ ಪ್ರಶ್ನೆಗೆ ವಿವಾದದ ಗಾಳಿ ಊದಿ ಅದನ್ನೊಂದು ಸಾಂವಿಧಾನಿಕ ಬಿಕ್ಕಟ್ಟಿನ ಗಾತ್ರಕ್ಕೆ ಬೆಳೆಸುತ್ತಿರುವುದು ವಿಚಿತ್ರವಾಗಿ ಕಾಣುತ್ತಿದೆ.

ಹಿಂದೆ 139 ಮಂದಿ ಶಾಸಕರ ಬಲ ಹೊಂದಿದ್ದ ಜನತಾ ಪಕ್ಷದ ನಾಯಕನಾಗಿ ಅಧಿಕಾರ ವಹಿಸಿಕೊಂಡಿದ್ದ ಎಸ್. ಆರ್. ಬೊಮ್ಮಾಯಿಯವರು ವಸ್ತುತಃ ಈಗ ಕೇವಲ 111 ಮಂದಿ ಶಾಸಕರ ಬಲವಿರುವ ಜನತಾ ದಳದ ನಾಯಕರಾಗಿರುವುದರಿಂದ ಅವರು ವಿಧಾನ ಸಭೆಯಲ್ಲಿ ತಮ್ಮ ಬಲಪರೀಕ್ಷೆ ಮಾಡಬೇಕೆಂದು ಕಾಂಗ್ರೆಸ್ ಪಕ್ಷ ಕೇಳಬಹುದು. ಸಂಸದೀಯ ನಡೆವಳಿಕೆಯಲ್ಲಿ ಇದು ತೀರಾ ಸಾಧುವಾದ ಕ್ರಮವೆನ್ನಿಸುತ್ತದೆ. ಒಂದು ವೇಳೆ ಮುಖ್ಯಮಂತ್ರಿ ಬೊಮ್ಮಾಯಿಯವರು ತಮ್ಮ ಬಲಪರೀಕ್ಷೆಯ ರಾಜಮಾರ್ಗ ಅನುಸರಿಸಲು ನಿರಾಕರಿಸಿದರೆ ಅವರಿಗದು ಅನಿವಾರ್ಯವಾಗುವಂತೆ ಮಾಡುವ ಅವಕಾಶ ಕಾಂಗ್ರೆಸ್ ಪಕ್ಷಕ್ಕಿದೆ. ರಾಜಕೀಯ ಪಕ್ಷಗಳ ನಡುವಿನ ಸಂಸದೀಯ ಸಮರದಲ್ಲಿ ಲಭ್ಯವಿರುವ ಸಭ್ಯ ಮಾರ್ಗವಿದು.

ಆದರೆ ರಾಜ್ಯ ಕಾಂಗ್ರೆಸ್ ಪಕ್ಷದ ನಾಯಕರುಗಳು ಈ ಮಾರ್ಗವನ್ನು ಬಿಟ್ಟು ಸರಕಾರದ ಸಾಂವಿಧಾನಿಕ ಅಸ್ತಿತ್ವವನ್ನು ಸಾರ್ವಜನಿಕ ಸಭೆಗಳ ಚರ್ಚಾ ವಿಷಯವಾಗಿ ಮಾಡುತ್ತಿರುವುದು ವಿಚಿತ್ರ ನಡೆವಳಿಕೆಯೆಂದೇ ಹೇಳಬೇಕಾಗುತ್ತದೆ. ಮುಖ್ಯಮಂತ್ರಿ ಬೊಮ್ಮಾಯಿಯವರು ಬೆಂಬಲ ಪಡೆದಿರುವ ಶಾಸಕರ ಗುಂಪಿನ ಹೆಸರಿನಲ್ಲಾದ ಬದಲಾವಣೆ ಅವರ ಸರಕಾರವನ್ನು 'ಅನಧಿಕೃತ'ವನ್ನಾಗಿ ಮಾಡಲು ಸಾಧ್ಯವಿಲ್ಲ. ಜನತಾ ದಳಕ್ಕೆ ದೇಶದ ಚುನಾವಣಾ ಆಯೋಗ ಮನ್ನಣೆ ನೀಡಿಲ್ಲವೆಂಬ ಕಾರಣಕ್ಕಾಗಿ ಜನತಾ ದಳದ ಅಸ್ತಿತ್ವ ಅಳಿದು ಹೋಗುವುದಿಲ್ಲ. ಒಂದು ವೇಳೆ ಚುನಾವಣಾ ಆಯೋಗ ಜನತಾ ದಳವನ್ನು ಮನ್ನಿಸಲು ನಿರಾಕರಿಸಿದರೂ ಬೊಮ್ಮಾಯಿ ಸರಕಾರದ ಸಿಂಧುತ್ವ ಹೋಗುವುದಿಲ್ಲ. ಎಂದಿನವರೆಗೆ ಅವರಿಗೆ ವಿಧಾನ ಸಭೆಯಲ್ಲಿ ಬಹುಮತದ ಬೆಂಬಲವಿರುವುದೋ ಅಲ್ಲಿಯವರೆಗೆ ಅವರ ಸರಕಾರವು ಅಧಿಕೃತವೂ, ರಾಜ್ಯಾಂಗ ಬದ್ಧವೂ ಆಗಿರುತ್ತದೆ. ಜನ ಪ್ರಾತಿನಿಧ್ಯದ ಬಲವೂ ಅದಕ್ಕೆ ಇರುತ್ತದೆ.

ಬದಲಾದ ರಾಜಕೀಯ ಸನ್ನಿವೇಶದ ರಾಜಕೀಯ ಲಾಭ ಗಳಿಸುವ ಇಚ್ಛೆ ಕಾಂಗ್ರೆಸ್ ನಾಯಕರುಗಳಿಗೆ ಇರುವುದಾದರೆ ಅವರು ಈ ಸಂದರ್ಭದಲ್ಲಿ ಬೊಮ್ಮಾಯಿಯವರ ರಾಜೀನಾಮೆ ಕೇಳಬಹುದು. "ಜನತಾ ಪಕ್ಷದ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ನೀವೀಗ ಬೇರೆ ಪಕ್ಷಕ್ಕೆ ಸೇರಿರುವುದರಿಂದ ಈ ಬದಲಾವಣೆಗೆ ಜನ ಮನ್ನಣೆ ಗಳಿಸಲು ಚುನಾವಣೆಯನ್ನೆದುರಿಸಿ," ಎಂದು ಒತ್ತಾಯ ಮಾಡಬಹುದು. ಇವೆಲ್ಲ ಕಾಂಗ್ರೆಸ್ ಪಕ್ಷಕ್ಕಿರುವ ಸಂಸದೀಯ ಮಾರ್ಗಗಳು.

ಅದನ್ನು ಬಿಟ್ಟು ಅವರೀಗ ಸರಕಾರದ ಸಿಂಧುತ್ವವನ್ನು ಬೀದಿ ರಾಜಕೀಯ ವಸ್ತುವಾಗಿ ಮಾಡುತ್ತಿರುವುದು ಕಾಂಗ್ರೆಸ್ ಪಕ್ಷವನ್ನು ಬಾಧಿಸುತ್ತಿರುವ ರಾಜಕೀಯ ಅಪಕ್ವತೆಯನ್ನು ಎತ್ತಿ ತೋರಿಸುತ್ತದೆ. ಕಾಂಗ್ರೆಸ್ ಪಕ್ಷದಲ್ಲಿ ರಾಜಕೀಯವನ್ನು ಒಂದು ವಿಜ್ಞಾನ ವಿಷಯವಾಗಿ ಅಧ್ಯಯನ ಮಾಡಿದವರ ಸಂಖ್ಯೆ ತೀರಾ ವಿರಳವೆಂಬುದು ನಿಜ. ಇವರಲ್ಲಿ ಹೆಚ್ಚಿನವರು ನೇಮಕ ರಾಜಕೀಯ ಪರಂಪರೆಯಲ್ಲಿ ನಾಯಕ ನಿಷ್ಠೆಯನ್ನೇ ಬಂಡವಾಳವಾಗಿ ಮಾಡಿಕೊಂಡವರು. ಆದರೆ ಮಾಜಿ ಮುಖ್ಯಮಂತ್ರಿಯಾದ ವೀರೇಂದ್ರ ಪಾಟೀಲರೂ ಕಾಂಗ್ರೆಸ್ ಪಕ್ಷದ ರಾಜಕೀಯ ಅಪಕ್ವತೆಯನ್ನು ಪ್ರದರ್ಶಿಸುತ್ತಿರುವುದು ಅಚ್ಚರಿಯ ಸಂಗತಿ.

ಕಳೆದ ಮೂವತ್ತೆರಡು ವರ್ಷಗಳಿಂದ ಸಕ್ರಿಯ ರಾಜಕೀಯದಲ್ಲಿ ಪಳಗಿದವರಿವರು. ಸಂಸದೀಯ ಸಂಪ್ರದಾಯಗಳ ಆಳ ಅರಿವಿರುವವರು. ಅಧಿಕಾರ ಸ್ಥಾನದಲ್ಲಿದ್ದು ಗಾಂಭೀರ್ಯವನ್ನು ಉಳಿಸಿಕೊಂಡವರು. ವಿರೋಧಿ ರಾಜಕಾರಣದಲ್ಲೂ ಸಭ್ಯತೆಯ ಎಲ್ಲೆ ಮೀರಿದವರು ಇವರಲ್ಲ. ಸಾರ್ವಜನಿಕ ಜೀವನದಲ್ಲಿ ಇಂತಹ ಉತ್ತಮ ದಾಖಲೆಗಳ ಹಿನ್ನೆಲೆಯುಳ್ಳ ವೀರೇಂದ್ರಪಾಟೀಲರಂತಹ ಒಬ್ಬ ರಾಜಕಾರಣಿ ಇಂದು ಹೋದ-ಹೋದಲ್ಲಿ ಬೊಮ್ಮಾಯಿ ಸರಕಾರ 'ಅನಧಿಕೃತ' ವಾದುದೆಂದು ಹೇಳುತ್ತಿರುವುದು ಸೋಜಿಗವೆನ್ನಿಸುವಷ್ಟೇ ನಿಗೂಢವೂ ಆಗಿದೆ.

ಬೊಮ್ಮಾಯಿ ಸರಕಾರ ನಿಜವಾಗಿಯೂ 'ಅನಧಿಕೃತ'ವೆಂದು ವೀರೇಂದ್ರ ಪಾಟೀಲರು ನಂಬಿರುವುದಾದರೆ ಅವರ ಮಾತುಗಳಿಗೆ ನಿಖರವಾದ ರಾಜಕೀಯ ಉದ್ದೇಶವಿರಲೇಬೇಕು. 'ಅನಧಿಕೃತವಾದ' ಒಂದು ಸರಕಾರ ರಾಜ್ಯವನ್ನಾಳಲು ಅವಕಾಶ ಕೊಡಬಾರದೆಂಬ ಬೇಡಿಕೆಯನ್ನು ಅವರು ಮುಂದೊಡ್ಡಬಹುದು. ಅವರ ಈ ಬೇಡಿಕೆಯನ್ನು ಗೌರವದಿಂದ ಕಾಣುವ ಕೇಂದ್ರ ಸರಕಾರವಿದೆ. ರಾಜಕೀಯ ಗೊಂದಲಗಳ ಸನ್ನಿವೇಶದಲ್ಲಿ ರಾಜ್ಯ ಸರಕಾರಗಳನ್ನು ವಜಾ ಮಾಡಿದ ದಾಖಲೆಗಳೂ ಇವೆ. ಕರ್ನಾಟಕದ ಜನತಾದಳ ಸರಕಾರದ ವಿರುದ್ಧ ಇಂತಹ ಒಂದು ಸಂಚಿನ ಸಂಕೇತವಾಗಿ ವೀರೇಂದ್ರ ಪಾಟೀಲರು ಅದನ್ನು 'ಅನಧಿಕೃತ' ಸರಕಾರವೆಂದು ಜಪಿಸುತ್ತಿರುವರಾದರೆ, ಅವರು ರಾಜಕೀಯವಾಗಿ ತೀರಾ ಅಪಾಯಕಾರಿಯಾಗಬಲ್ಲ ವಾಮ ಮಾರ್ಗ ಹಿಡಿದಿರುವರೆಂದು ಎಚ್ಚರಿಸಬಯಸುತ್ತೇವೆ.

...ದಿಲ್ಲಿಯಲ್ಲಿ ಕನ್ನಡ ...ನ್ಯಾಸ ಮಾಲೆ ಉದ್ಘಾಟನೆ

...ಲ್ಲಿ. ಫೆ. 18– ದಿಲ್ಲಿಯಲ್ಲಿ ...ರವಾಗಬೇಕೆಂಬ ಉದ್ದೇಶವ ...ು 'ದೆಹಲಿ ಕನ್ನಡಿಗ' ಮಾಸ ...ಕೊಂಡ ಉಪನ್ಯಾಸಮಾಲೆ ...ಫೆ. 16ರಂದು ಉದ್ಘಾಟನೆ

...ರು ವಿಶ್ವವಿದ್ಯಾನಿಲಯದ ... ಹಾಗೂ ಗಣಿತತಜ್ಞ ಪ್ರೊ ...ಅವರು 'ಕನ್ನಡದಲ್ಲಿ ಆರ್ಯಭಟ' ...ದ ಕುರಿತು ಉಪನ್ಯಾಸ ...ರ್ವಜ ಹಾಗೂ ತಾತ್ವಿಕ ... ವೈಜ್ಞಾನಿಕ ಸಂಶೋಧನೆ ... ಎಂದು ಹೇಳಿ ಆರ್ಯಭಟ ...ನಾಗಿರಬಹುದೆಂಬ ವಾದ ...ಸಿದರು.

...ವಿಶ್ವವಿದ್ಯಾನಿಲಯದ ಪ್ರೊ| ಗೋಪಾಲ ಕಡೆಕೋಡಿ ಅವರು ಕನ್ನಡದ ಲ್ಲಿವ ಸಂಶೋಧನೆಗಳ ಬಗ್ಗೆ ಕನ್ನಡಿಗರಿಗೇ ಅರಿವಿಲ್ಲದಿರುವುದು ನಾಚಿಕೆಯ ವಿಷಯ ಎಂದರು.

ಅಧ್ಯಕ್ಷತೆ ವಹಿಸಿದ್ದ ಸುಪ್ರೀಂಕೋರ್ಟಿನ ವಕೀಲ ನಾರಾಯಣ ನೆಟ್ಟಾರ್ ಅವರು ದಿಲ್ಲಿಯಲ್ಲಿ ಕನ್ನಡದ ಬಗ್ಗೆ ಕನ್ನಡಿಗರು ಆಸಕ್ತಿಯಿಂದ ಕೆಲಸ ಮಾಡಬೇಕೆಂದು ಕರೆ ನೀಡಿದರು.

ಪತ್ರಿಕೆ ಸಂಪಾದಕ ಬಾ. ಸಾಮಗ ಕಾರ್ಯಕ್ರಮ ನಿರ್ವಹಿಸಿದರು. [illegible] ವೇದವ್ಯಾಸ ಭಟ್ ಪ್ರಾರ್ಥನಾ ಗೀತೆ ಹಾಡಿದರು. ಕರ್ನಾಟಕ ಸಂಘದ ಕಾರ್ಯದರ್ಶಿ ಕೆ. ಆರ್. ನಾಗರಾಜ, ಕವಿ ಜಿ. ಆರ್. ರಂಗಸ್ವಾಮಿ ಮೊದಲಾದವರ ವಿಚಾರ ವಿನಿಮಯದಲ್ಲಿ ಪಾಲ್ಗೊಂಡಿದ್ದರು.

[illegible]

[illegible] ... 18 ... [illegible]

... ಹೆಗ್ಡೆ ... [illegible] ... ಜಿ.ಕೆ. ಭಟ್ಟ ... ಎ.ಎಸ್. ಹೆಗ್ಡೆ ... [illegible]

ಶಿಬಿರದಲ್ಲಿ 160 ... [illegible]

... ಎಂ. ಶಾನಭಾಗ್ ... [illegible] ...ದ್ದರು.

...ಹಿತ್ಲುವಿನಲ್ಲಿ ದಕ್ಷಿಣೋತ್ತರ ...ಸ್ಕೃತಿಗಳ ಸಮ್ಮಿಲನ

...ಕಲ್. ಫೆ. 18– ಇತ್ತೀಚೆಗೆ ... ಸಸಿಹಿತ್ಲುವಿನಲ್ಲಿ ಇತ್ತೀಚೆಗೆ ...ಭಾರತ ಹಾಗೂ ದಕ್ಷಿಣ ಭಾರ...ತಿಯ ಸಮ್ಮಿಲನ ನಡೆಯಿತು.

... ನೆಹರು ಯುವ ಕೇಂದ್ರದ ... ಏಕತಾ ಯೋಜನೆಯಡಿ ...ಸಿಹಿತ್ಲು ಯುವಕ ಮತ್ತು ...ಮಂಡಲಗಳ ಆತಿಥೇಯತ್ವದಲ್ಲಿ ...ಾದ ಸಾಂಸ್ಕೃತಿಕ ಕಾರ್ಯಕ್ರಮ ...ಪುರದ ಠೌಬಾಲ್ ಜಿಲ್ಲೆ ...ರಾಜ್ಯ)ಯ 50 ಮಂದಿ ...ಯುವತಿಯರು ಪ್ರತಿನಿಧಿಗಳಾಗಿ ...ಸಿದ್ದರು.

ಮಂಗಳೂರು ನೆಹರು ಯುವ ಕೇಂದ್ರದ ಯುವಜನ ಸಮನ್ವಯಾಧಿಕಾರಿ ಐ. ಎಚ್. ಹುಲಕೋಟಿ ಅವರು ಅತಿಥಿ ಪ್ರತಿನಿಧಿಗಳ ಕರ್ನಾಟಕ ಪ್ರವಾಸದ ಉಸ್ತುವಾರಿಯನ್ನು ವಹಿಸಿಕೊಂಡಿದ್ದರು.

ಮಣಿಪುರದ ಯುವಕ ಯುವತಿಯರು ಸ್ಥಳೀಯ ಯುವಕ–ಯುವತಿಯರ ಸಹಕಾರದೊಂದಿಗೆ ಮನೆ ಮನೆಗೆ ಭೇಟಿ ನೀಡಿ ಇಲ್ಲಿನ ಜನರ ನಡೆ–ನುಡಿ, ಜೀವನ ಮಟ್ಟದ ಬಗ್ಗೆ ಅಧ್ಯಯನ ನಡೆಸಿದರಲ್ಲದೆ ಕಡಲ ಕಿನಾರೆಯಲ್ಲಿನಸಸಿಹಿತ್ಲುವಿನನಿಸರ್ಗ ರಮಣೀಯ ಸವಿಯನ್ನು ಉಂಡರು. ಇಲ್ಲಿನ ಕೃಷಿ ಮತ್ತು ಮೀನುಗಾರಿಕೆಯ ಕುರಿತ ಪ್ರತ್ಯಕ್ಷ ಮಾಹಿತಿಯನ್ನೂ ಸಂಗ್ರಹಿಸಿದರು.

ಎರಡನೆಯ ದಿನ (ಜ. 22)ದಂದು ಸಮಾರೋಪದಂಗವಾಗಿ ಯುವಕ ಮಂಡಲದ ಕಲಾಮಂಟಪದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅತಿಥಿಗಳು ಮಣಿಪುರದ ವಿವಿಧ ಜನಪದ ನೃತ್ಯ ಮತ್ತು ಸಂಗೀತ ರೂಪಕಗಳನ್ನು ಪ್ರದರ್ಶಿಸಿದರೆ ಆತಿಥೇಯ ಯುವಕ–ಯುವತಿ ಮಂಡಲದ ಸದಸ್ಯರು ಇಲ್ಲಿನ ಜನಪದ ನೃತ್ಯ ಮತ್ತು ಭೂತ ಕೋಲ ಕಲೆಯನ್ನು ಪ್ರದರ್ಶಿಸಿದರು.

ಕಾರ್ಯಕ್ರಮವನ್ನು [illegible] ಸಸಿಹಿತ್ಲುವಿನಲ್ಲಿ ಯುವಕ ಮಂಡಲದ ಸಂಘಟನಾ ಕಾರ್ಯದರ್ಶಿ ನಾಗೇಶ ಬಂಗೇರ ನಿರ್ವಹಿಸಿದರು. ಯುವಜನ ಸಮನ್ವಯಾಧಿಕಾರಿ ಐ. ಎಚ್. ಹುಲಕೋಟಿ ಪ್ರಾಸ್ತಾವಿಕ ಭಾಷಣ ಮಾಡಿದರು.

...ಜಿಗೆ ಹಿಂಸೆ ...ಸ. ಆಗ್ರಹ

...ಕು ಮತ್ತು ಪುಂಡು ಗಂದಾಯ ...ಕು ಎಂದು ಕರ್ನಾಟಕ ದಲಿತ ... ಸಮಿತಿ ಸರಕಾರವನ್ನು ಒತ್ತಾ...

... ಬಗ್ಗೆ ಸ್ವಾಮೀಜಿ ಸಚಿವರಿಗೆ, ...ಗೆ ದೂರು ನೀಡಿ ನ್ಯಾಯ ಕೇಳಿ ...ನೂ ಕ್ರಮ ಕೈಗೊಂಡಿಲ್ಲ. ಕಳೆದ ... ಮೇಲ್ಜಾತಿ ಜನರು ಪರಿಶಿಷ್ಟ ...ರ ಮೇಲೆ ಹಲ್ಲೆ ನಡೆಸಿದ್ದಾಗ ...ಸೂಕ್ತ ಕ್ರಮ ಜರುಗಿಸಿದ್ದರೆ ಈಗ ...ುತ್ತಿರಲಿಲ್ಲ ಎಂದು ಸಮಿತಿಯ ...ರ್ಶಕ ಎಸ್. ಮೂರ್ತಿ ತಿಳಿ...

...ಳ್ಳಿ ದೇವಸ್ಥಾನದಲ್ಲಿ ಹರಿಕಥೆ ...ನಾರನೇ ದಿನ ಹೋದಲು ಅನು... ಸ್ವಾಮೀಜಿಯವರು ಪರಿಶಿಷ್ಟ ...ವರೆಂದು ತಿಳಿದು ಅವರನ್ನು ...ಕಟ್ಟಿಹಾಕಿ ಥಳಿಸಿ, ಹಿಂಸಿಸಿ ಮಾನ ... ಅಘಾತ ಮಾಡಿದ್ದಾರೆ. ಅಸ್ಪೃ...ಶ್ಯ ...ಧ ಕಾಯ್ದೆ ಪ್ರಕಾರ ಈ ಜನರ ...ಕ್ರಮ ಜರುಗಿಸಬೇಕು ಎಂದು ...ರ್ ವಾಹಿನಿ ಸಂಪಾದಕ ಆರ್.

'ಅನುಮತಿ ಇಲ್ಲದೆ ಬೋರ್‌ವೆಲ್ ತೋಡದಿರಿ'

ಪುತ್ತೂರು, ಫೆ. 18– ಪುತ್ತೂರು ಪುರಸಭಾ ಕ್ಷೇತ್ರದೊಳಗೆ ಪುರಸಭೆಯ ಅನುಮತಿ ಇಲ್ಲದೆ ಸಾರ್ವಜನಿಕರು ಅಲ್ಲಲ್ಲಿ ಬೋರ್‌ವೆಲ್‌ಗಳನ್ನು ತೆಗೆಸುತ್ತಿರುವುದು ಪುರಸಭೆಯ ಗಮನಕ್ಕೆ ಬಂದಿದೆ.

ಪುರಸಭೆಯ ಅನುಮತಿ ಇಲ್ಲದೆ ಬೋರ್‌ವೆಲ್‌ಗಳನ್ನು ತೆಗೆಸುವುದು ಕಂಡು ಬಂದಲ್ಲಿ 1964ನೇ ಕರ್ನಾಟಕ ಪುರಸಭಾ ಕಾಯ್ದೆಯಂತೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪುರಸಭಾ ಮುಖ್ಯಾಧಿಕಾರಿಯವರು ತಿಳಿಸಿದ್ದಾರೆ.

ಸಾರ್ವಜನಿಕರು ಬೋರ್‌ವೆಲ್‌ಗಳನ್ನು ತಮ್ಮ ಸ್ಥಳಗಳಲ್ಲಿ ತೆಗೆಸುವಾಗ ಪುರಸಭೆಯಿಂದ ಮುಂದಾಗಿ ಅನುಮತಿ ಪಡೆಕೊಳ್ಳಬೇಕೆಂದು ಅವರು ಪ್ರಕಟಣೆ ಮೂಲಕ [illegible]

ಯುವಕ ಮಂಡಲಕ್ಕೆ ...

ಬೆಳ್ತಂಗಡಿ, ಫೆ. 18– ನಾರಾವಿಯ ಸೂರ್ಯ ನಾರಾಯಣ ಯುವಕ ಮಂಡಲದ 8ನೇ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಜರಗಿ 88-89ನೇ ಸಾಲಿನ ಪದಾಧಿಕಾರಿಗಳಾಗಿ ಈ ಕೆಳಗಿನವರು ಅವಿರೋಧ ಆಯ್ಕೆಯಾದರು.

ಸುಧಾಕರ ಭಂಡಾರಿ (ಅಧ್ಯಕ್ಷ), ಶ್ರೀನಿವಾಸ ಪೈ ಮತ್ತು ಸುಂದರ ಹೆಗ್ಡೆ (ಉಪಾಧ್ಯಕ್ಷ...), [illegible] (ಕಾರ್ಯದರ್ಶಿ), [illegible] ಕಾರ್ಯದರ್ಶಿಗಳು), ಆರ್. ಸಂತೋಷ ಕುಮಾರ (ಖಜಾಂಚಿ), ನಾಣುಟೈಲರ್ ಅಚ್ಚ ಪೂಜಾರಿ ಸದಾನಂದ, ವಿಶ್ವನಾಥ ಶೆಟ್ಟಿ, ಶಿವಾನಂದ ... (ಕಾರ್ಯಕಾರಿ ಸಮಿತಿ), ಜೀವಂಧರ ಕುಮಾರ್, ರವಿ ಹೆಗ್ಡೆ, ಶಾಂತಯ್ಯ ಪೂಜಾರಿ ವಿಜಯ ಕುಮಾರ್ ಬಂಗ ಮತ್ತು ಎಸ್. ಜಿ. ಅಂಗ, (ಸಲಹಾ ಸಮಿತಿ ಸದಸ್ಯರು).

[illegible]

ಪಣಂಬೂರು, ಫೆ. 18–ನವಮಂಗಳೂರು ಬಂದರು ಕಲಾ ಸಂಘದ 8ನೇ ವಾರ್ಷಿಕ [illegible] ಇತ್ತೀಚೆಗೆ [illegible]

89-90ನೇ ಸಾಲಿನ ಪದಾಧಿಕಾರಿಗಳಾಗಿ ಈ ಕೆಳಗಿನವರು ಆಯ್ಕೆಯಾದರು. ಟಿ. ನಿರಂಜನ್ (ಅಧ್ಯಕ್ಷ), [illegible] (ಉಪಾಧ್ಯಕ್ಷ), ಎ. ಉಮೇಶ್ (ಕಾರ್ಯದರ್ಶಿ), ಸುಮಿತ್ರ (ಕಾರ್ಯದರ್ಶಿ), ನಾರಾಯಣ ಬಾಕೂರು (ಖಜಾಂಚಿ), ಬಿ. ಮಾಧವ ಕೋಟ್ಯಾನ್ (ಸಾಂಸ್ಕೃತಿಕ ಕಾರ್ಯದರ್ಶಿ) ಮತ್ತು ಜೋಗೇಂದ್ರ ಕಲ್ಲೀರ್ (ಸಂಘಟನಾ ಕಾರ್ಯದರ್ಶಿ).

ಎ. ಉಮೇಶ್ ಧನ್ಯವಾದ ಅರ್ಪಿಸಿ...

ಮುಂಗಾರು

ಶುಕ್ರವಾರ, ಫೆಬ್ರವರಿ 10, 1989

ಈ ನಷ್ಟದ ವ್ಯವಹಾರ ಬೇಕಾಗಿಲ್ಲ

ಬಿರ್ಲಾ ಮಾಲೀಕತ್ವದ ಹರಿಹರ ಪಾಲಿಫೈ…ಬರ್ಸ್ ಸಂಸ್ಥೆಯೊಂದಿಗಿನ ರಾಜ್ಯಸರಕಾರದ ಒಪ್ಪಂದ…ದಿಂದಾಗಿ ರಾಜ್ಯದ ಬೊಕ್ಕಸಕ್ಕೆ ಭಾರಿ ನಷ್ಟ ಉಂಟಾಗಿ…ರುವ ಅಂಶ ಬೆಳಕಿಗೆ ಬಂದಿದೆ. ಈ ವಿಚಾರವನ್ನು …ಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿ…ಯು ಇತ್ತೀಚೆಗೆ ಬಹಿರಂಗ ಪಡಿಸಿದೆ. ಉತ್ಪಾದನಾ …ಚ್ಚಕ್ಕಿಂತ ಕಡಿಮೆ ಬೆಲೆಗೆ ನೀಲಗಿರಿ ಮರ ಪೂರೈಸುವ …ರಕಾರದ ನಿರ್ಧಾರದಿಂದಾಗಿ ರಾಜ್ಯದ ಬೊಕ್ಕಸಕ್ಕೆ …971ರಿಂದ ಈವರೆಗೆ ಸುಮಾರು ಒಂಬತ್ತು ಕೋಟಿ …ರೂ. ನಷ್ಟವಾಗಿದೆ ಎಂದು ಸ್ಪಷ್ಟವಾಗಿದೆ. ಇದು …ನಾಚಿಕೆಗೇಡಿನ ವಿಚಾರ. ಸಾಮಾನ್ಯ ಜನರ ಆರ್ಥಿಕ ಸ್ಥಿತಿಗತಿಗಳನ್ನು ಉನ್ನತ ಮಟ್ಟಕ್ಕೇರಿಸುವ ಕುರಿತು, …ಧಾರಿತ ರಾಜಕಾರಣದ ಕುರಿತು, ಸಮಾಜವಾ…ದದ ಕುರಿತು ಮಾತನಾಡುವ ನಮ್ಮ ರಾಜಕಾರಣಿಗಳು …ಷ್ಟರ ಮಟ್ಟಿಗೆ ಭ್ರಷ್ಟರಾಗಿದ್ದಾರೆಂಬುದಕ್ಕೆ ಇದು …ಷ್ಟ ಉದಾಹರಣೆಯಾಗಿದೆ. ಈ ರಾಜಕಾರಣಿಗಳು …ರ್ಲಾ ಸಂತಹ ದೊಡ್ಡ ಉದ್ಯಮ ಪ್ರಭುಗಳ ಕಿಸೆಯೊ…ಳಗೆ ಬೆಚ್ಚಗೆ ಕುಳಿತು ಈ ನಾಡಿನ ಜನಸಾಮಾನ್ಯರ …ದುಕಿನ ಬಗ್ಗೆ ಚಿಂತನೆ ನಡೆಸುತ್ತಿದ್ದಾರೆನ್ನುವುದಕ್ಕೆ …ದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲವೆನಿಸುತ್ತದೆ.

ನೀಲಗಿರಿ ಮರಗಳನ್ನು ಬೆಳೆಸುವುದೇ ಜನ…ರೋಧಿ ನೀತಿ ಎಂಬುದನ್ನು ಈ ನಾಡಿನ ಬಹುತೇಕ …ಪರ ಸಂಘಟನೆಗಳೆಲ್ಲಾ ತಮ್ಮ ತೀವ್ರ ಪ್ರತಿಭಟನೆ… …ಲಕ ಸರಕಾರಕ್ಕೆ ಮನವರಿಕೆ ಮಾಡಿಕೊಟ್ಟರೂ …ತಾ ಸರಕಾರ ಇಂತಹ ಯಾವುದೇ ಜನಪ್ರತಿಭಟನೆ…ಗಳಿಗೂ ಮಣಿಯದೆ ಎಲ್ಲೆಂದರಲ್ಲಿ ನೀಲಗಿರಿ ಕಾಡು ಬೆಳೆಸಿದ್ದೇ ಬೆಳೆಸಿದ್ದು. ಈ ರೀತಿ ನೀಲಗಿರಿ ಬೆಳೆಸಿದುದರ ಪರಿಣಾಮವಾಗಿಯೇ ಇಥಿಯೋಪಿಯ ಇಂದು ಬೆಂಗಾಡಾಗಿದೆ ಎಂಬ ವಾಸ್ತವವನ್ನು ಸರಕಾರದ ಮುಂದಿಟ್ಟರೂ ಕೂಡಾ. ಈ ನಾಡಿನ ಪ್ರಮುಖ ವಿಜ್ಞಾನಿಗಳೆಲ್ಲಾ ನೀಲಗಿರಿಯ ಅಪಾಯದ ಬಗ್ಗೆ ಸವಿವರ ವೈಜ್ಞಾನಿಕ ವಿಶ್ಲೇಷಣೆ ನೀಡಿದರೂ ಕೂಡಾ ಸರಕಾರ ನೀಲಗಿರಿ ಬೆಳೆಸುವುದನ್ನು ನಿಲ್ಲಿಸಲೇ ಇಲ್ಲ.

ಅಂತೆಯೇ ಹರಿಹರದಲ್ಲಿರುವ ಪಾಲಿಫೈಬರ್ಸ್ ಕಾರ್ಖಾನೆ ಹೊರಬಿಡುವ ಕಲ್ಮಷದಿಂದ ಪರಿಸರ ಮಾಲಿನ್ಯ ಆ ಪ್ರದೇಶದಾದ್ಯಂತ ಅದೆಷ್ಟು ತೀವ್ರವಾಗಿ ನಡೆದಿದೆ ಮತ್ತು ಜನ ನಾನಾ ತೆರನಾದ ವಿಚಿತ್ರ ರೋಗಗಳಿಗೆ ಬಲಿಯಾಗುತ್ತಿದ್ದಾರೆಂಬುದನ್ನು ದಾಖಲೆಗಳ ಸಮೇತ ಸರಕಾರದ ಮುಂದೆ ಹಿಡಿದರೂ ಕೂಡ ಸರಕಾರ ಈ ನಿಟ್ಟಿನಲ್ಲಿ ಕಣ್ಣು ತೆರೆಯಲೇ ಇಲ್ಲ.

ನೀಲಗಿರಿಯ ಅನಾಹುತಗಳ ಬಗ್ಗೆಯೇ ಆಗಲಿ, ಪಾಲಿಫೈಬರ್ಸ್ ಕಾರ್ಖಾನೆಯ ಕಲ್ಮಷಗಳ ಬಗ್ಗೆಯೇ ಆಗಲಿ ಸರಕಾರ ಕುರುಡಾಗಿಯೇ ವರ್ತಿಸುತ್ತಾ ಬಂದಿದೆ.

ಈಗ ವಿಧಾನಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಪ್ರಕಾರವೇ ನೋಡಿದಾಗ ಇದೊಂದು ಸರಕಾರಕ್ಕೆ ಭಾರಿ ನಷ್ಟದಾಯಕ ವ್ಯವಹಾರವೇ ಆಗಿದೆ ಎಂದು ಗೊತ್ತಾಗಿದೆ. ರಾಜ್ಯದ ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಯವರ ಪ್ರಕಾರವೇ ಒಂದು ಟನ್ ನೀಲಗಿರಿ ಬೆಳೆಯಲು ತಗಲುವ ವೆಚ್ಚ 44.17 ರೂ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಉತ್ಪಾದನಾ ವೆಚ್ಚದ ಅರ್ಧ ಬೆಲೆಗೆ ಅಂದರೆ ಟನ್‌ಗೆ 24 ರೂ. ನಂತೆ ಇದನ್ನು ಕಾರ್ಖಾನೆಗೆ ಕೊಡುವ ನಿರ್ಧಾರವನ್ನು ಅರಣ್ಯ ಇಲಾಖೆ ಕೈಗೊಂಡಿದೆ. ಇದರಿಂದಾಗಿಯೇ ಸರಕಾರ ಈ ಭಾರೀ ಪ್ರಮಾಣದ ನಷ್ಟವನ್ನು ಅನುಭವಿಸಿದೆ.

ವಿಧಾನ ಮಂಡಲದ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಅಧ್ಯಕ್ಷ, ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಎಂ. ಮಲ್ಲಿಕಾರ್ಜುನ ಖರ್ಗೆ ಅವರು ವಿವರಗಳನ್ನು ನೀಡುತ್ತಾ ಈ ನಿರ್ಧಾರದ ಮೂಲಕ ಸರಕಾರ ಉದ್ಯಮ ಪ್ರಭುಗಳ ಪ್ರಭಾವಕ್ಕೆ ಒಳಗಾಗಿದೆ ಎಂದೂ ಅವರಿಗೆ ಭಾರೀ ಪ್ರಮಾಣದ ರಿಯಾಯಿತಿಗಳನ್ನು ನೀಡಿದೆ ಎಂದೂ ಆರೋಪಿಸಿದ್ದಾರೆ. ಈ ಮಾತು ಅಕ್ಷರಶಃ ಸತ್ಯ.

ಸರಕಾರ ಬೇರೆ ಬೇರೆ ರಂಗಗಳಲ್ಲಿ ಕೂಡಾ ಉದ್ಯಮ ಪ್ರಭುಗಳ ಹಿತಾಸಕ್ತಿಗಳಿಗೆ ಪೂರಕವಾದ ಒಪ್ಪಂದಗಳನ್ನು ಮಾಡಿಕೊಳ್ಳುತ್ತಾ ಬಂದುದನ್ನು ನಾವು ಕಾಣಬಹುದಾಗಿದೆ. ಜನಸಾಮಾನ್ಯರ ಎದುರಿನಲ್ಲಿ ಕೈಗಾರಿಕೋದ್ಯಮಿಗಳನ್ನು ವಾಚಾಮಗೋಚರವಾಗಿ ಬಯ್ಯುವ ನಮ್ಮ ರಾಜಕಾರಣಿಗಳು ತೆರೆಯ ಮರೆಯಲ್ಲಿ ಅದೇ ಕೈಗಾರಿಕೋದ್ಯಮಿಗಳ ಕೃಪಾಕಟಾಕ್ಷಕ್ಕಾಗಿ ಏನನ್ನು ಮಾಡಲೂ ಹಿಂಜರಿಯದೆ ಹಲ್ಲು ಗಿಂಜಿ ಅಂಗಲಾಚುತ್ತಾನಿಂತಿರುವ ಸ್ಥಿತಿ ಇವತ್ತಿನ ರಾಜಕಾರಣಿಗಳದ್ದಾಗಿದೆ ಎನ್ನುವುದಕ್ಕೆ ಪಾಲಿಫೈಬರ್ಸ್ ಕಾರ್ಖಾನೆ ಪ್ರಕರಣವೇ ಪ್ರತ್ಯಕ್ಷ ನಿದರ್ಶನವಾಗಿದೆ.

ಈ ನಾಡಿನ ಬಹುಸಂಖ್ಯಾತ ರೈತರು ನೀಲಗಿರಿ ಮರಗಳಿಂದ ತಮ್ಮ ಫಸಲಿಗೆ ಧಕ್ಕೆ ಬರುತ್ತದೆ ಎಂಬುದನ್ನು ವೈಜ್ಞಾನಿಕ ವಿಶ್ಲೇಷಣೆಗಳ ಮೂಲಕ ಸರಕಾರಕ್ಕೆ ತಿಳಿ ಹೇಳಿದರೂ ಇವರ ಮಾತಿಗೆ ಗಮನ ನೀಯದ ಸರಕಾರ ಬಿರ್ಲಾರ ಹಣದ ಕೋಟೆಗೆ ಮತ್ತೊಂದು ಮಾಳಿಗೆ ನಿರ್ಮಿಸುವ ತಮ್ಮ ಕೈಂಕರ್ಯದಲ್ಲಿ ಬಂಡತನದಿಂದ ಮುಂದಾಯಿತು. ಇದು 1971 ರಿಂದಲೂ ಅವ್ಯಾಹತವಾಗಿ ನಡೆದು ಕೊಂಡು ಬಂದಿದೆ.

ಈ ವ್ಯವಹಾರದಿಂದ ತನಗೆ ನಷ್ಟವೇ ಹೆಚ್ಚು ಎಂಬುದು ಗೊತ್ತಿದ್ದರೂ ಕೂಡಾ ಸರಕಾರ, ಕಣ್ಣು ಮುಚ್ಚಿಕೊಂಡು ಇದಕ್ಕೆ ಬೆಂಬಲವೀಯುತ್ತಾ ಬಂದುದಕ್ಕೆ ಕಾರಣಗಳಾದರೂ ಏನು ? ಈ ಅಪರಾಧದಲ್ಲಿ ಕೇವಲ ಜನತಾ ಸರಕಾರ ಒಂದೇ ಭಾಗಿಯಲ್ಲ. ಇದಕ್ಕೂ ಹಿಂದಿನ ಕಾಂಗ್ರೆಸ್ ಸರಕಾರವೂ ಭಾಗಿಯಾಗಿದೆ.

ಆದ್ದರಿಂದ ಪ್ರಸ್ತುತ ಈ ನಷ್ಟದ ವ್ಯವಹಾರವನ್ನು ಅತ್ಯಂತ ಬಂಡತನದಿಂದ ಮುಂದುವರಿಸಿಕೊಂಡೇ ಹೋಗುತ್ತಿರುವ ಸರಕಾರ ಇದರ ಬಗ್ಗೆ ವಿವರಗಳನ್ನು ಜನರ ಮುಂದಿಡಬೇಕಾಗಿದೆ. ಇಲ್ಲದಿದ್ದರೆ ಸರಕಾರಕ್ಕೂ ನಷ್ಟ ತರುತ್ತಿರುವ ಜನರ, ಆರೋಗ್ಯವನ್ನು ಕೆಡಿಸುತ್ತಿರುವ ಈ ವ್ಯವಹಾರ ಮುಂದುವರಿಸಿಕೊಂಡು ಹೋಗುವ ಹಿಕ್ಮತ್ತಿನಲ್ಲಿ ಸಂಬಂಧಪಟ್ಟ ರಾಜಕಾರಣಿಗಳು ಮತ್ತು ಬಿರ್ಲಾಗುಂಪಿನ ನಡುವೆ ಏನೋ 'ನಿಗೂಢ ವ್ಯವಹಾರ' ಇರಬೇಕೆಂದು ಜನ ಸಂಶಯಪಡಲು ಸಾಧ್ಯತೆಗಳಿವೆ.

ಆದ್ದರಿಂದ ಈ ಬಗ್ಗೆ ಎಲ್ಲಾ ವಿವರಗಳನ್ನು ಜನರ ಮುಂದಿಡುವುದೇ ಅಲ್ಲದೆ ಈ ನಷ್ಟದ ವ್ಯವಹಾರವನ್ನು ಇಲ್ಲಿಗೇ ಕೊನೆಗೊಳಿಸಬೇಕಾದ ಅನಿವಾರ್ಯತೆ ಕೂಡಾ ಈಗ ಸರಕಾರದ ಮುಂದಿದೆ. ಈ ಬಗ್ಗೆ ಸರಕಾರ ಪ್ರಾಮಾಣಿಕವಾಗಿ ಚಿಂತಿಸಿ ಕಾರ್ಯೋನ್ಮುಖವಾಗಲಿ.

... ಅವರ ಕಾರ್ಯಕ್ಕೆ ಸಹಕರಿಸಬೇಕೆಂದು ... ಸಾಲ್ಯಾನ್ ಮನವಿ ಮಾಡಿದರು.

ಶ್ರೀಮತಿ ಲೀನಾ ಮಥಾಯಸ್, ಜಿ. ಪ. ಸದಸ್ಯರಾದ ಸರಸು ಡಿ. ಬಂಗೇರ, ದಮಯಂತಿ, ಮಂ. ಪ. ಪ್ರಧಾನರು, ಉಪಪ್ರಧಾನರು ಹಾಗೂ ಮುಂತಾದ ಮಂದಿ ಉಪಸ್ಥಿತರಿದ್ದರು.

ಬ್ಲಾಕ್ ಕಾಂಗ್ರೆಸ್ ಕಾರ್ಯದರ್ಶಿ ಎಂ. ಎ. ಗಫೂರ್ ಸ್ವಾಗತಿಸಿ, ವಂದಿಸಿದರು.

ಜಿಲ್ಲಾ ಕೈಗಾರಿಕಾ ಸಂಘದ ಹೊಸ ಕಟ್ಟಡ ಉದ್ಘಾಟನೆ

ಮಂಗಳೂರು, ಫೆ. 9– ಯೆಯ್ಯಾಡಿ ಕೈಗಾರಿಕಾ ಪ್ರದೇಶದಲ್ಲಿ ನಿರ್ಮಿಸಿರುವ ಜಿಲ್ಲಾ ಸಣ್ಣ ಕೈಗಾರಿಕಾ ಸಂಘ, ಮಂಗಳೂರು ಇದರ ಹೊಸ ಕಟ್ಟಡವನ್ನು ಕರ್ನಾಟಕ ಸರಕಾರದ ಕೈಗಾರಿಕಾ ಅಭಿವೃದ್ಧಿ ಕಮಿಷನರ್ ಮತ್ತು ವಾಣಿಜ್ಯೋದ್ಯಮದ ನಿರ್ದೇಶಕ ವಿಠಲ ರೈ ಅವರು ಇತ್ತೀಚೆಗೆ ಉದ್ಘಾಟಿಸಿದರು.

ಸಂಘದ ತಾಂತ್ರಿಕ ವ್ಯವಸ್ಥಾಪಕರಾದ ಕಟ್ಟಡದ ಶಂಕುಸ್ಥಾಪನೆಯನ್ನು ಪ್ರಕಾಶ್ ಬೀಡಿಸಂಸ್ಥೆಯ ಆಡಳಿತ ನಿರ್ದೇಶಕ ಕೆ.ಎಂ.ಶಂಕರ ಪ್ರಭು ಅವರು ನೆರವೇರಿಸಿದರು.

ಸಮಾರಂಭದಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರದ ಜನರಲ್ ಮ್ಯಾನೇಜರ್ ಕೆ. ವಿಠಲ ಶೆಟ್ಟಿ, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘ(ಕೆ ಎ ಎಸ್ಎಸ್ ಐ ಎ) ದ ಅಧ್ಯಕ್ಷ ಎಚ್.ಎಂ. ಅನಂತರಾಮು, ಉಪಾಧ್ಯಕ್ಷರಾದ ಡಿ.ಆರ್.ಕಾಮತ್, ಮತ್ತು ಪಂಡಿತಾರಾಧ್ಯ, ಮಾಜಿ ಅಧ್ಯಕ್ಷರಾದ ಡಿ.ಆರ್ ಶ್ರೀಕಂಠಯ್ಯ, ಕೆ.ಎನ್.ಜಯಲಿಂಗಪ್ಪ ಕಾರ್ಯದರ್ಶಿ ಡಿ.ಎಚ್.ಗಂಗಾಧರ್ ಜಿಲ್ಲಾ ಸಣ್ಣ ಕೈಗಾರಿಕಾ ಸಂಘ ಮಂಗಳೂರು, ಮತ್ತು ನವಮಂಗಳೂರು ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.



Available at :

Horticultural Show, Kadri Park, Mangalore Feb 10th to 12th

- KARNATAKA EXPLOSIVES LIMITED, C/o. Chowgule Bros, River View Bunder, P. B. No. 144, Mangalore-575 001 Phones: 26968, 26664.
- Kings Garden, Seminary View, Jeppu, Mangalore-575 002
- Arun Nursery, Balmatta New Road, Mangalore-575 001
- The Garden Centre, Balmatta, Mangalore-575 001.
- ORIM Plants, Vivekananda Road Nanthoor, Mangalore-575 005

ಮಂಗಳೂರಿನಲ್ಲಿ ಈ ನಮ್ಮ ಮಳಿಗೆಯಲ್ಲಿ ಹೊಸ ಸಂಗ್ರಹದ ...
ರಿಯಾಯಿತಿ:ಅನುಪಮ್ ಟೆಕ್ಸ್‌ಟೈಲ್ಸ್, ಕೇರಳಸಮಾಜ...
ಕೆ.ಎಸ್.ಆರ್. ರಸ್ತೆ.

ಇಂದಿರಾ ಮತ್ತು ಕಿಸಾನ್ ವಿಕಾಸ ಪತ್ರಗಳ



ಮುಂಗಾರು

ಮಂಗಳವಾರ, ಜನವರಿ 10, 1989

ಈಗಲಾದರೂ ತಪ್ಪು ತಿದ್ದಿಕೊಳ್ಳಿ

ಕಳೆದ ಎರಡು ವರ್ಷಗಳಿಂದ ಹಲವು ವಿಧದ ವಿವಾದಗಳ ಸುಳಿಯಲ್ಲಿ ಸಿಕ್ಕಿ ತನ್ನ 'ವಿದ್ವತ್ ಪ್ರತಿಷ್ಠೆ' ಕಳೆ ಗುಂದಿಸಿಕೊಂಡು ಬಂದಿರುವ ಮಂಗಳೂರು ವಿಶ್ವ ವಿದ್ಯಾನಿಲಯವು ಈಗ ಮತ್ತೊಮ್ಮೆ ತನ್ನ ಪ್ರಶ್ನಾರ್ಹ ನಡವಳಿಕೆಯನ್ನು ಪ್ರದರ್ಶಿಸಿದೆ. ಕನ್ನಡ ನಾಡಿನ ಜನ ರಿಗೆ ತೀರಾ ಅಪರಿಚಿತರಾದ ಆಂಧ್ರ ಪ್ರದೇಶದ ಚಲನ ಚಿತ್ರ ಉದ್ಯಮಿಯೊಬ್ಬರಿಗೆ ಗೌರವ ಡಾಕ್ಟರೇಟ್ ಪದ ವಿ ನೀಡಿ ಗೌರವಿಸಲು ಮಂಗಳೂರು ವಿಶ್ವವಿದ್ಯಾನಿ ಲಯವೀಗ ಮುಂದಾಗಿದೆ.

ಟಿ. ಸುಬ್ಬಿರಾಮರೆಡ್ಡಿ ಎನ್ನುವ ಈ ಶ್ರೀಮಂತ ನಿಗೆ ಮಂಗಳೂರು ವಿಶ್ವವಿದ್ಯಾನಿಲಯವು, ಗೌರವ ಡಾಕ್ಟರೇಟ್ ಪದವಿ ಕೊಡಲು ನಿರ್ಧರಿಸಿದೆಯೆಂಬುದು ವಿದ್ವಜ್ಜನರಿಗೆ ಅಚ್ಚರಿ ಹಾಗೂ ಆಘಾತವನ್ನುಂಟು ಮಾಡುವ ಸುದ್ದಿಯಾಗಿ ಹೊರಬಿದ್ದಿದೆ. ಅದರಲ್ಲಿಯೂ ಮಂಗಳೂರು ವಿಶ್ವವಿದ್ಯಾನಿಲಯವು ಗೌರವ ಡಾಕ್ಟ ರೇಟ್ ಪದವಿಗೆ ರಾಷ್ಟ್ರಕವಿ ಕುವೆಂಪು ಮತ್ತು ಮೈಸೂ ರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾ ಕೇಂದ್ರದ ಮುಖ್ಯಾಧಿಕಾರಿ ಡಾ|| ಅಮ್ಲಾ ಅವರ ಸಾಲಿಗೆ ಈ ಅಪರಿಚಿತ ಸುಬ್ಬಿರಾಮಿ ರೆಡ್ಡಿಯವರನ್ನೂ ಸೇರಿಸಿ ರುವುದು ತೀರಾ ಕುತೂಹಲಕಾರಿಯಾಗಿದೆ.

ವಿಶ್ವವಿದ್ಯಾನಿಲಯವೊಂದು ಕೊಡುವ ಗೌರವ ಡಾಕ್ಟರೇಟ್ ಪದವಿಗೆ ಅಸಾಮಾನ್ಯವಾದ ಮಾನ್ಯತೆ ಇದೆ. ಸಮಾಜದ ಸಾಂಸ್ಕೃತಿಕ, ಆರ್ಥಿಕ, ಆಧ್ಯಾತ್ಮಿಕ [illegible]ಥವಾ ಸಾಮಾಜಿಕ ಕ್ಷೇತ್ರಗಳನ್ನು ಹಸನುಗೊಳಿಸಿದ [illegible]ಸಾಧಕರನ್ನು ಗುರುತಿಸಿ ಸಲ್ಲಿಸುವ ಗೌರವವಿದು. [illegible]ಂತಹ ಸಾಧಕರ ಆಯ್ಕೆ ಮಾಡುವಾಗ ಸಂಬಂಧ ಪಟ್ಟ ಎಲ್ಲರನ್ನೂ ತೃಪ್ತಿಪಡಿಸಲು ಸಾಧ್ಯವಿಲ್ಲವೆಂಬು ದನ್ನು ನಾವು ಒಪ್ಪಿಕೊಳ್ಳುತ್ತೇವೆ. ಆದರೆ ವಿಶ್ವವಿದ್ಯಾ ನಿಲಯವು ಗೌರವಕ್ಕೆ ಆಯ್ಕೆ ಮಾಡುವ ವ್ಯಕ್ತಿಯಲ್ಲಿ ಅರ್ಹತೆ ಇರಬೇಕಾಗುತ್ತದೆ. ಸುಬ್ಬಿರಾಮಿ ರೆಡ್ಡಿಯವ ರನ್ನು ಗೌರವ ಡಾಕ್ಟರೇಟ್ ಪದವಿಗೆ ಆಯ್ಕೆ ಮಾಡಿ ರುವುದಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಯವರು ಕೊಟ್ಟಿರುವ ಕಾರಣ ವಿಲಕ್ಷಣವಾ ಗಿದೆ. ಸುಬ್ಬಿರಾಮಿರೆಡ್ಡಿಯವರು ಆಂಧ್ರಪ್ರದೇಶದ ಒಬ್ಬ ಶ್ರೀಮಂತ ಚಲನ ಚಿತ್ರೋದ್ಯಮಿ ಹಾಗೂ ಅವರೊಬ್ಬ "ಮಹಾದಾನಿ" ಎಂದು ಉಪಕುಲಪತಿ ಹೇಳಿದ್ದಾರೆ.

ಉಪಕುಲಪತಿಯವರು ಹೇಳಿರುವಂತೆ ಸುಬ್ಬಿ ರಾಮಿ ರೆಡ್ಡಿಯವರು ಒಬ್ಬ ಶ್ರೀಮಂತ ಅಥವಾ ಖ್ಯಾತ ಚಲನ ಚಿತ್ರೋದ್ಯಮಿ ಇರಬಹುದು. ಅವ ರೊಬ್ಬ 'ಮಹಾದಾನಿ' ಯೂ ಇರಬಹುದು. ಆದರೆ ಶ್ರೀಮಂತಿಕೆ ಮತ್ತು ಅದರ ಅಟ್ಟಹಾಸದ ಸಂಕೇತ ವಾದ 'ದಾನ' ಒಬ್ಬ ವ್ಯಕ್ತಿಯನ್ನು ಗೌರವ ಡಾಕ್ಟ ರೇಟ್ ಪದವಿಗೆ ಅರ್ಹನನ್ನಾಗಿ ಮಾಡುವುದಿಲ್ಲ. ಒಂದು ವೇಳೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಪಂಡಿತರಿಗೆ ಶ್ರೀಮಂತರನ್ನು ದಾನಿಗಳಾಗಿ ಪರಿವರ್ತಿ ಸಲು ಗೌರವ ಡಾಕ್ಟರೇಟ್ ಪದವಿ ಒಂದು ಆಮಿಷ ಅನ್ನಿಸಿದ್ದರೆ ಸುಬ್ಬಿರಾಮಿ ರೆಡ್ಡಿಯವರಂತಹ ಶ್ರೀಮಂ ತರು ಕರಾವಳಿ ಕರ್ನಾಟಕದಲ್ಲಿ ಅನೇಕ ಮಂದಿ ಇದ್ದಾರೆ. ಗೌರವ ಡಾಕ್ಟರೇಟ್ ಪದವಿಯ ಬಗ್ಗೆ ಕಿಂಚಿತ್ತೂ ಯೋಚಿಸದೆ ಮಹಾ ದಾನಿಗಳಾಗಿರುವ ಮಂದಿ ಇಲ್ಲಿ ಬಹಳಷ್ಟು ಇದ್ದಾರೆ. ಸುಬ್ಬಿರಾಮಿ ರೆಡ್ಡಿಯಂತಹ ಶ್ರೀಮಂತ ದಾನಿಯನ್ನು ಹುಡುಕಿಕೊಂಡು ಆಂಧ್ರ ಪ್ರದೇಶದ ರಂಗಿನ ಪ್ರಪಂಚಕ್ಕೆ ಹೋಗಬೇಕಾದ ಅಗತ್ಯ ಮಂಗಳೂರು ವಿಶ್ವವಿದ್ಯಾನಿಲಯಕ್ಕಿರಲಿಲ್ಲ. ನಿರ್ಮಲ ಮನಸ್ಸಿನಿಂದ ಸುತ್ತ ದೃಷ್ಟಿ ಹಾಯಿಸಿದ್ದರೆ ದಾನವನ್ನೇ ಜೀವನದ ಬಗೆಯಾಗಿ ಅಂಗೀಕರಿಸಿಕೊಂಡು ಬಂದಿರುವ ವ್ಯಕ್ತಿಗಳು ನಾಡಿನ ಈ ಭಾಗದಲ್ಲಿ ಹೇರಳ ವಾಗಿ ಸಿಗುತ್ತಿದ್ದರು.

ಆದರೆ ವಿಶ್ವವಿದ್ಯಾನಿಲಯದ ನೀತಿ ನಿರೂಪಕರು ಆವಶ್ಯಕತೆ ಮತ್ತು ಔಚಿತ್ಯಗಳ ಸೀಮೋಲ್ಲಂಘನ ಮಾಡಿ ಆಂಧ್ರಪ್ರದೇಶದ ಶ್ರೀಮಂತ ಕುಳವನ್ನು ಹೇಗೆ ಹುಡುಕಿದರು? ಮತ್ತು ಯಾಕೆ ಹುಡುಕಿದರು?- ಎಂಬವು ನಿಗೂಢ ಪ್ರಶ್ನೆಗಳಾಗುತ್ತವೆ. ವಿಶ್ವವಿದ್ಯಾ ನಿಲಯದ ಸಿಂಡಿಕೇಟ್ ಸದಸ್ಯರಲ್ಲಿ ಎಷ್ಟು ಮಂದಿ ಸುಬ್ಬಿರಾಮಿ ರೆಡ್ಡಿಯ ಹೆಸರು ಕೇಳಿದ್ದರು? ಅವರ ಪರಿಚಯ ಇವರ್‍ಯಾರಿಗಾ[illegible]ರೂ ಇತ್ತೇ? - ಗೌರವ ಡಾಕ್ಟರೇಟ್ ಪದವಿಗೆ ಸುಬ್ಬಿರಾಮಿ ರೆಡ್ಡಿಗೆ ಅರ್ಹತೆ ಇದೆಯೆಂದು ಪ್ರಾಮಾಣಿಕವಾಗಿ ನಿಮಗೆ ಅನ್ನಿಸಿ ದೆಯೇ? ಅಥವಾ ಅದ್ಯಾರೋ ಪ್ರಭಾವಿ ವ್ಯಕ್ತಿಯ ಅನಿಸಿಕೆಗೆ ಮಣಿದು ನೀವು ಇಂತಹ ಆತ್ಮವಂಚನೆಯ ಕೆಲಸ ಮಾಡಿದಿರೇ? - ಎಂದು ನಾವೀಗ ಕೇಳಬೇಕಾ ಗುತ್ತದೆ.

ಒಂದು ಜನಾಂಗದ ಹೃದಯ ಶ್ರೀಮಂತಿಕೆಯ ಹಾಗೂ ಸಾಂಸ್ಕೃತಿಕ ಬದುಕಿನ ಸೌರಭವಾಗಿ ಉಳಿಯ ಬೇಕಾದ ವಿಶ್ವವಿದ್ಯಾನಿಲ[illegible]ವನ್ನು ಹೀಗೆ ವಿವಾದದ ಬೀದಿಗೆಳೆಯುವುದು [illegible]ವುಲ್ಲ. ಅದರಲ್ಲಿಯೂ ಗೌರವ ಡಾಕ್ಟರೇಟ್ ಪದವಿಗೂ ಸುಬ್ಬಿರಾಮಿರೆಡ್ಡಿಯ ವರು ವಿಶ್ವವಿದ್ಯಾನಿಲ[illegible]ಕ್ಕೆ ನೀಡಿರುವರೆನ್ನಲಾದ "ದೊಡ್ಡದಾನ"ಕ್ಕೂ ಸ[illegible]ಂಧವಿದೆಯೆಂಬ ಸುದ್ದಿ ವಿಷಯವನ್ನು ಇನ್ನಷ್ಟು ಕ್ಲಿಷ್ಟವಾಗಿ ಮಾಡುತ್ತದೆ. ಸುಬ್ಬಿರಾಮಿ ರೆಡ್ಡಿಯವ[illegible]ದ ದಾನ ಕೇಳಿದವರ್‍ಯಾರು? ಅವರಿಗೂ ವಿಶ್ವವಿದ್ಯಾನಿ[illegible]ಕ್ಕೂ ಇರುವ ಸಂಬಂಧ ವೇನು?-ಎಂಬೆಲ್ಲ ಪ್ರ[illegible]ಗಳು ಏಳುತ್ತವೆ. ಇಲ್ಲಿ ಬೇಡವೆಂದರೂ ವಿಶ್ವ[illegible]ಲಯದ ಕುಲಪತಿಯಾದ ರಾಜ್ಯಪಾಲ ಪಿ. ವೆಂ[illegible]ಯ್ಯ (ಆಂಧ್ರ ಪ್ರದೇಶ ದವರು) ಮತ್ತು [illegible]ಪ್ರದೇಶದ ಶ್ರೀಮಂತ ಕುಳ ಸುಬ್ಬಿರಾಮಿರೆಡ್ಡಿ[illegible]ರಿಗೂ ಇದೆಯೆನ್ನಲಾದ ವಿಶಿಷ್ಟ ಸಂಬಂಧದ ಮೇ[illegible] ಬೆಳಕು ಬೀಳುತ್ತದೆ. ಇವೆಲ್ಲಾ ಯಾರಿಗೂ ಗೌರವ [illegible]ವ ಸಂಗತಿಯಲ್ಲ.

ಯಾರಿಗಾದರೂ [illegible] ಅವಕಾಶವಿ ರುವ ಸಂಗತಿ ಇದಾಗುತ್ತ[illegible] ಈ ಕೊನೆಯ ಗಳಿಗೆಯಲ್ಲಾದರೂ [illegible]ದ ಗೌರವ ಡಾಕ್ಟರೇಟ್ ಪದವಿ ಪ್ರ[illegible] ಪಟ್ಟವರೆ ಲ್ಲರೂ ತಪ್ಪನ್ನು ತಿ[illegible]ಇಲ್ಲವಾದರೆ ಮಂಗಳೂರು ವಿಶ್ವವಿದ್ಯಾ[illegible]ವ ಡಾಕ್ಟ ರೇಟ್ ಪದವಿಯನ್ನು ಮ[illegible] ಅದನ್ನು ವಿಕ್ರ ಯದ ವಸ್ತುವಾಗಿ ಮಾಡಿದ ಕುಖ್ಯಾತಿಗೆ ಎಲ್ಲರೂ ಪಾತ್ರರಾಗುತ್ತಾರೆ. ಹಾಗಾಗದಿರಲೆಂಬುದೇ ನಮ್ಮ ಹಾರೈಕೆ.

'ಟೆಲ್ಲರ್' ಕೌಂಟರ್ ಆರಂಭ

ಮಂಗಳೂರು, ಜ. 9–ವಿಜಯಬ್ಯಾಂಕಿನ ಅಶೋಕನಗರ ಶಾಖೆಯಲ್ಲಿ 'ಟೆಲ್ಲರ್' ಕೌಂಟರನ್ನು ಇತ್ತೀಚೆಗೆ ಬ್ಯಾಂಕಿನ ಮಂಗಳೂರು ವಲಯದ ಸಹಾಯಕ ಜನರಲ್ ಮ್ಯಾನೇಜರ್ ಕೆ. ಭೋಜ ಶೆಟ್ಟಿ ಅವರು ಉದ್ಘಾಟಿಸಿದರು.

ಚೆಕ್ ನೀಡಿದ ಕೂಡಲೇ ಸೇವಿಂಗ್ಸ್ ಖಾತೆಯಲ್ಲಿ 3000ರೂ ತನಕ ಯಾವ ವಿಳಂಬವಿಲ್ಲದೆ ಗ್ರಾಹಕರಿಗೆ ಈ ಟೆಲ್ಲರ್ ಕೌಂಟರಿನಲ್ಲಿ ನಗದು ಪಾವತಿಸಲಾಗುತ್ತದೆ.

ಉದ್ಘಾಟನಾ ಸಮಾರಂಭದಲ್ಲಿ ಮಂಗಳೂರು ವಿಭಾಗೀಯ ಅಧಿಕಾರಿ ಬಿ.ದೇರಣ್ಣ ರೈ, ಮಾಜಿ ಮೇಯರ್ ಸದಾಶಿವ ಭಂಡಾರಿ ಹಾಗೂ ಉರ್ವ ಚರ್ಚಿನ ಧರ್ಮಗುರು ಫಾ! ಜೋಸ್ ಡಿ'ಸೋಜ ಮೊದಲಾದವರು ಉಪಸ್ಥಿತರಿದ್ದರು.

ಬ್ಯಾಂಕಿನ ಶಾಖಾಧಿಕಾರಿ ಕೆ. ಜಯರಾಜ್ ಬಿ. ರೈ ವಂದಿಸಿದರು. ಕೆ. ಭೋಜ ಶೆಟ್ಟಿ ಅವರು ಟೆಲ್ಲರ್ ಕೌಂಟರ್‌ನ್ನು ಉದ್ಘಾಟಿಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಕಡಬ ಮಂ. ಪ. ಉಪ ಪ್ರಧಾನರ ರಾಜೀನಾಮೆ

ಮಂಗಳೂರು, ಜ. 8–ಪುತ್ತೂರು ತಾಲೂಕಿನ ಕಡಬ ಮಂಡಲ ಪಂಚಾಯತ್ ಉಪಪ್ರಧಾನ ಕೆ.ಸೀತಾರಾಮ ಗೌಡ ಅವರು ತಮ್ಮ ಸ್ಥಾನಕ್ಕೆ ಇತ್ತೀಚೆಗೆ ರಾಜಿನಾಮೆ ನೀಡಿದ್ದಾರೆಂದು ತಿಳಿದು ಬಂದಿದೆ.

ಇತ್ತೀಚೆಗೆ ಕಡಬ ಮಂಡ[illegible] ಪಂಚಾಯತ ಪ್ರಧಾನರ ಮೇಲೆ ಬಂದಿರುವ ಆರೋಪಗಳು ಹಾಗೂ ಮಂ.ಪ.ದಲ್ಲಿ [illegible]ತ್ತೀಚೆಗೆ ಜರಗಿದ ಕೆಲವು ವಿದ್ಯಮಾನಗಳಿಂದ ಬೇಸತ್ತು ಅವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಿರುತ್ತಾರೆಂದು ಗೊತ್ತಾಗಿದೆ.

ಗಣರಾಜ್ಯೋತ್ಸವ: 15 ಸ್ವಾತಂತ್ರ್ಯ ಹೋರಾಟಗಾರರಿಗೆ ಸನ್ಮಾನ

ಮಂಗಳೂರು, ಜ. 9– ಗ[illegible]ರಾಜ್ಯೋತ್ಸವ ದಿನದಂದು ಸಂಜೆ 5.30 ಗಂಟೆಯಿಂದ 8–30ರ ತನಕ [illegible]ದ ಪುರಭವನದಲ್ಲಿ ಸಾಂಸ್ಕೃತಿಕ ಕಾ[illegible]ಕ್ರಮಗಳನ್ನು ಏರ್ಪಡಿಸಲು ನಿರ್ಧರಿಸ[illegible]ಗಿದೆ.

ಅಂದು [illegible]ಜಿಲ್ಲೆಯ 15 ಜ[illegible] ಸ್ವಾತಂತ್ರ ಹೋರಾಟಗಾರರಿಗೆ ತಾಮ[illegible] ನೀಡಿ ಗೌರವಿಸಲಾಗುವುದು ನಂತ[illegible].ಬಾಳಿಗಾ ಚಿದಂಬರ ಬೈಕಂಪಾಡಿ [illegible]ರಮಾನಂದ ಬನಾರಿ. ಹಾಗೂ ಶ[illegible]ನಬ್ಬ ಇವರುಗಳಿಂದ ಕವನ ವ[illegible]ಸಲಾಗಿದೆ.

ನಗರದ ಕಾಲೇಜಿನ [illegible]ರ್ಥಿ–ವಿದ್ಯಾರ್ಥಿನಿಯರಿಂದ ಆಕ[illegible]ಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು [illegible]ರ್ಪಡಿಸಲಾಗಿದೆ.

ಸಾರ್ವಜನಿಕ [illegible]ತಿಕ ಕಾರ್ಯಕ್ರಮಕ್ಕೆ ಹೀ[illegible]) ಬಂದು ಭಾಗವಹಿ[illegible]ಸಚೆ[illegible] ಕಾರ್ಯಕ್ರಮಗಳ ಸ[illegible]ಸೋಮಶೇಖರ ವಿನಂ[illegible]

ವಾರ್ಷಿ[illegible]ತ್ಸವ

ಕಾಸರಗೋಡು, ಜ. 9–ಇಲ್ಲಿಗೆ ಸಮೀಪದ ಬೆಳ್ಳೂರು ಅಯ್ಯಪ್ಪ ಭಜನಾ ಮಂದಿರದ 11ನೇ ವಾರ್ಷಿಕೋತ್ಸವವು ಸ್ಥಳೀಯ ಪಂಚಾಯತ್ ಅಧ್ಯಕ್ಷತ ಮಂಡಳಿ ಸದಸ್ಯ ವಿಯಾಸ್ ಸುಬ್ರಹ್ಮಣ್ಯ ಕಡಂಬಳ [illegible]

ಪಡಿತರ ಹಂಚಿಕೆ ನ್ಯೂನತೆ ನಿವಾರಣೆಗೆ ಸರಕಾರಕ್ಕೆ ಆಗ್ರಹ

ಮಂಗಳೂರು, ಜ. 9– ರಾಜ್ಯದಲ್ಲಿನ ಪಡಿತರ ಹಂಚಿಕೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಿಗೆ ಇಂಡಿಯನ್ ಯೂತ್ ವೆಲ್‌ಫೇರ್ ಫೆಡರೇಶನ್ ಮನವಿ ಸಲ್ಲಿಸಿದೆ.

ಪಡಿತರ ಚೀಟಿಯಲ್ಲಿ ಭಾವಚಿತ್ರ ಲಗ್ತೀಕರಿಸುವಂತೆ ಮಾಡಿರುವ ಸರಕಾರದ ಕ್ರಮವನ್ನು ಸ್ವಾಗತಿಸಿರುವ ಫೆಡರೇಶನ್, ಪಡಿತರ ಚೀಟಿಗಳಿಗೆ ಉತ್ತಮ ದರ್ಜೆಯ ಸಾಮಗ್ರಿಗಳನ್ನು ವಿತರಿಸಬೇಕೆಂದು ಒತ್ತಾಯಿಸಿದೆ.

ಜನವರಿ 12ರಿಂದ ದೂರದರ್ಶನದಲ್ಲಿ ಕೃಷ್ಣ ನೀ ಬೇಗನೆ ಬಾರೊ

ಬೆಂಗಳೂರು, ಜ. 9- ಖ್ಯಾತ ಲೇಖಕಿ ಉಷಾ ನವರತ್ನರಾಮ್–ಅವರ, 'ಕೃಷ್ಣ ನೀ ಬೇಗನೆ ಬಾರೊ' ಕಾದಂಬರಿಯ ಸರಣಿ ಬೆಂಗಳೂರು ದೂರದರ್ಶನದಿಂದ, ಜನವರಿ 12ರಿಂದ ಪ್ರತಿ ಗುರುವಾರ ಸಂಜೆ 7ರಿಂದ 7.30ರವರೆಗೆ (20 ವಾರಗಳು) ಮೂಡಿ ಬರಲಿದೆ.

ಕನ್ನಡದಲ್ಲಿ ಪ್ರಪ್ರಥಮ ಬಾರಿಗೆ 1985ರ ಕನ್ನಡ ರಾಜ್ಯೋತ್ಸವದಂದು, 'ಸಿಹಿ–ಕಹಿ' ಸರಣಿಯನ್ನು ದೂರದರ್ಶನ ಮೂಲಕ ಅರ್ಪಿಸಿದ ಖ್ಯಾತ ಓಂ ಶ್ರೀ ಫಿಲಂಸ್, ಬೆಂಗಳೂರು–ಇದರ ನಿರ್ಮಾಪಕರು.

ಸಂಭಾಷಣೆ: ಗೋಟೂರಿ, ಸಂಗೀತ: ಎಚ್.ಕೆ. ನಾರಾಯಣ, ನೃತ್ಯ: ರಾಧಾ ಶ್ರೀಧರ್, ನಿರ್ದೇಶನ: ಎಚ್. ಎಂ. ಕೆ. ಮೂರ್ತಿ.

ತಾರಾಗಣದಲ್ಲಿ: ಗೋಟೂರಿ. ಎಚ್[illegible] ವಿ. ಪ್ರಕಾಶ್, ಎಸ್. ಆರ್. ನಾಡಿ[illegible] ಮಾಲತಿ. ಶೋಭಾರಾಘವೇಂದ್ರ, ಲಲಿ[illegible] ತಮ್ಮ, ನೃತ್ಯ ಕಲಾವಿದರಾದ ರಾಮ[illegible] ಶ್ರೀದೇವಿ. ದೇಬಿ ಹಿತ್ಲೆಪಿ. ವ[illegible] ಸಂಜಯ್ ಮುಂತಾದವರು ಇರು[illegible] ಎಂದು ಪ್ರಕಟಣೆಯೊಂದು ತಿಳಿಸಿದೆ.

ಕಾಸರಗೋಡು ತಾಲೂಕಿನ

ಗ್ರಾಮಾಂತರಕ್ಕೆ ಸರಕಾ[illegible] ಬಸ್ ಓಡಿಸಲು ಆಗ್ರಹ

ಮಂಜೇಶ್ವರ, ಜ. 9 - ಕಾಸರಗೋಡು ತಾಲೂಕಿನ ಗ್ರಾಮಾಂತರ ಪ್ರದೇಶದ ವಿವಿಧ ಭಾಗಗಳಿಗೆ ಕೇರಳ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಓಡಿಸಬೇಕು ಎಂದು ಸಿ. ಪಿ. ಐ.ನ ಮಂಜೇಶ್ವರ ಮಂಡಲ ಸಮಿತಿ ಸರಕಾರವನ್ನು ಒತ್ತಾಯಿಸಿದೆ.

ಇತ್ತೀಚೆಗೆ ನಡೆದ ಸಮಿತಿಯ ಸಮ್ಮೇಳನದಲ್ಲಿ ನಿರ್ಣಯಿಸಿದಂತೆ ಈ ಬಗ್ಗೆ ಮನವಿಯನ್ನು ಕೇರಳದ ಸಾರಿಗೆ ಸಚಿವರಿಗೆ ಸಲ್ಲಿಸಲಾಗಿದೆ ಎಂದು ಸಮಿತಿ ಕಾರ್ಯದರ್ಶಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಸರಗೋಡಿನಲ್ಲಿ ರಾಜ್ಯ ಸಾರಿಗೆ ನಿಗಮದ ಬಸ್ ಡಿಪೋ ಸ್ಥಾಪನೆಯಾದ ನಂತರ ಹೊಸದುರ್ಗ ತಾಲೂಕಿನ ಗ್ರಾಮೀಣ ಪ್ರದೇಶಗಳಿಗೆ ಮಾತ್ರ ಕೆಲವೊಂದು ಬಸ್ಸುಗಳನ್ನು ಓಡಿಸಲು ಪ್ರಾರಂಭಿಸಿದೆ. ಕಾಸರಗೋಡು ತಾಲೂಕಿನಲ್ಲಿ ಮಧೂರು–ಕಾಸರಗೋಡು ರೂಟಿನಲ್ಲಿ ಒಂದೇ ಒಂದು ಬಸ್ಸಿನ ಓಡಾಟವನ್ನು ಮಾತ್ರ ಪ್ರಾರಂಭಿಸಲಾಗಿದೆ ಎಂಬ ವಿಷಯವನ್ನು ಸಿ ಪಿ ಐ ಸಾರಿಗೆ ಸಚಿವರ ಗಮನಕ್ಕೆ ತಂದಿದೆ.

ಈ ಒಂದೆ ಕರ್ನಾಟಕ ಸರಕಾರ [illegible]

ಒತ್ತಾಯಿಸಿದೆ. ಶಿವಮೊಗ್ಗ–ಕಾಸರಗೋಡು, ಕಾರವಾರ–ಎರ್ನಾಕುಳಂ, ಮಣಿಪಾಲ-ಕಾಸರಗೋಡು, ಕುಂದಾಪುರ–ಕಾಸರಗೋಡು ಮತ್ತು ಮಂಗಳೂರು–ಕಾಸರಗೋಡು ಎಂಬ ಈ ಐದು ಅಂತರ್ರಾಜ್ಯ ರೂಟುಗಳಲ್ಲಿ ಬಸ್ಸುಗಳನ್ನು ಓಡಿಸುವಾಗ ಅವುಗಳನ್ನು ಮಂಜೇಶ್ವರ ಪೇಟೆ ಮುಖೇನ ಹೋಗುವಂತೆ ಮಾಡಬೇಕೆಂದೂ ಮನವಿಯಲ್ಲಿ ಕೇಳಿಕೊಳ್ಳಲಾಗಿದೆ.

ಗಣರಾಜ್ಯೋತ್ಸವ ಪೆರೇಡ್‌ಗೆ ಸಿದ್ಧತೆ

ಮಂಗಳೂರು, ಜ. 9 – ಗಣರಾಜ್ಯೋತ್ಸವ ದಿನಾಚರಣೆ ಅಂಗವಾಗಿ ಪೆರೇಡ್ ಸಮಿತಿಯ ಪೂರ್ವ ಭಾವಿ ಸಿದ್ಧತೆಗಾಗಿ ಇತ್ತೀಚೆಗೆ ಜಿಲ್ಲಾ ಪೊಲೀಸ್ ಅಧಿಕಾರಿ ನೀಲಂ ಅಚ್ಯುತ ರಾವ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

26ರಂದು ಬೆಳಿಗ್ಗೆ 8–30ಕ್ಕೆ ನಗರದ ಮಂಗಳಾ ಸ್ಟೇಡಿಯಂನಲ್ಲಿ ಧ್ವಜಾರೋಹಣದ ಬಳಿಕ ಜಿಲ್ಲೆಯ ಆಯ್ದ 15 ತಂಡಗಳಿಂದ ಪಥಚಲನ, ಶಾಲಾಮಕ್ಕಳಿಂದ ವಿವಿಧ ಕಾರ್ಯಕ್ರಮಗಳು [illegible]

ಮುಂಗಾರು

ಬುಧವಾರ, ಜನವರಿ 4, 1989

ಅನಗತ್ಯ ಅನಾಹುತಗಳಿಗೆ ಅವಕಾಶ

ಇಂದಿರಾಗಾಂಧಿ ಕೊಲೆ ಪ್ರಕರಣದಲ್ಲಿ ಮರಣ ದಂಡನೆಗೆ ಗುರಿಯಾಗಿರುವ ಕೇಹರ್‌ಸಿಂಗ್ ಅವರ ಕ್ಷಮಾದಾನ ಅರ್ಜಿಯನ್ನು ರಾಷ್ಟ್ರಪತಿಯುವರು ತಳ್ಳಿ ಹಾಕಿದ್ದಾರೆಂಬ ವರದಿ ಬಂದಿದೆ. ಇದೊಂದು ತೀರಾ ಅವಮಾನವೀಯ ಮತ್ತು ವಿವೇಚನಾ ರಹಿತ ನಿರ್ಧಾರವಾಗಿದೆ. ಕೇಹರ್‌ಸಿಂಗ್ ಅವರನ್ನು ಕ್ಷಮಿಸಬೇಕೆಂದು ಇಡಿ ರಾಷ್ಟ್ರದ ಬಹುಸಂಖ್ಯಾತ ಮಂದಿ ಮತ್ತು ಮಾಧ್ಯಮಗಳೆಲ್ಲಾ ಜನಾಭಿಪ್ರಾಯ ಮೂಡಿಸಿದ್ದರೂ ಕೂಡಾ ರಾಷ್ಟ್ರಪತಿಯವರು ಇದನ್ನು ಗಣನೆಗೆ ತೆಗೆದುಕೊಳ್ಳದೆ ತಮ್ಮ ಮೂಗಿನ ನೇರಕ್ಕೆ ನಿರ್ಧಾರ ತೆಗೆದುಕೊಂಡು ಬಿಟ್ಟಿದ್ದಾರೆ. ಇದು ತೀರಾ ಅವಸರದ ಮತ್ತು ಅವಿವೇಕದ ತೀರ್ಮಾನ. ಈ ತೆರನಾದ ತೀರ್ಮಾನದಿಂದ ಪಂಜಾಬ್ ಸಮಸ್ಯೆಯನ್ನು ರಾಷ್ಟ್ರಪತಿಯವರು ಇನ್ನೂ ಉಲ್ಬಣಾವಸ್ಥೆಗೆ ಕೊಂಡೊಯ್ಯುತ್ತಿದ್ದಾರೆಂದರೆ ಅತಿಶಯೋಕ್ತಿ ಎನಿಸದು.

1988 ರ ಡಿಸೆಂಬರ್ 16 ರಂದು ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಅರ್ಜಿಯನ್ನು ಜಾಗರೂಕತೆಯಿಂದ ಪರಿಶೀಲಿಸಿದ ರಾಷ್ಟ್ರಪತಿಯವರು ಕೇಹರ್‌ಸಿಂಗ್ ಅವರಿಗೆ ಸಂವಿಧಾನದ ವಿಧಿ 72 ರಲ್ಲಿ ಹೇಳಲಾದ ಯಾವುದೇ ಪರಿಹಾರವನ್ನು ಅಥವಾ ಕ್ಷಮಾದಾನವನ್ನು ನೀಡಲು ನಿರಾಕರಿಸಿದ್ದಾರೆ. ಆದರೆ ರಾಷ್ಟ್ರಪತಿಯವರು ಈ ಪ್ರಕರಣವನ್ನು ಇನ್ನಷ್ಟು ಸೂಕ್ಷ್ಮವಾಗಿ ಜನರ ಮನಸ್ಸಿನ ಭಾವನೆಗಳನ್ನು ಕೂಡಾ ಅರ್ಥಮಾಡಿಕೊಂಡು ವಿಶ್ಲೇಷಣೆ ನಡೆಸಬೇಕಾದ ಅಗತ್ಯವಿತ್ತು.

ಕೇಹರ್‌ಸಿಂಗ್ ಅವರು ಇಂದಿರಾಗಾಂಧಿ ಕೊಲೆ ಪ್ರಕರಣದಲ್ಲಿ ನೇರವಾಗಿ ಭಾಗಿಯಾದವರೂ ಅಲ್ಲ. ಕೊಲೆ ಆರೋಪಿ ಬಿಯಾಂತ್‌ಸಿಂಗ್ ಅವರ ಚಿಕ್ಕಪ್ಪನಾಗಿರುವ ಮತ್ತು ಅವರ ಮನೆಗೆ ಬಂದು ಹೋಗುತ್ತಿದ್ದ ಕಾರಣ ಒಂದನ್ನೇ ವೈಭವೀಕರಿಸಿ ಕೇಹರ್‌ಸಿಂಗ್‌ರನ್ನು ಬಂಧಿಸಿ ತನಿಖೆ ನಡೆಸಿ ಮರಣದಂಡನೆ ವಿಧಿಸಿರುವುದರ ಬಗ್ಗೆ ಜನಸಮೂಹದಲ್ಲಿ ಸಾಕಷ್ಟು ಅಸಮಾಧಾನಕ್ಕೆ ಎಡೆಕೊಟ್ಟಿದೆ.

ಇಂದಿರಾಗಾಂಧಿ ಕೊಲೆ ಪ್ರಕರಣದ ಬಗ್ಗೆ ವಿಚಾರಣೆ ನಡೆಸಲು ಠಕ್ಕರ್ ಆಯೋಗವನ್ನು ಸರಕಾರ ನೇಮಿಸಿತ್ತು. ಅಂತೆಯೇ ನಿವೃತ್ತ ಐ. ಪಿ. ಎಸ್. ಅಧಿಕಾರಿಯವರ ನೇತೃತ್ವದ ತನಿಖಾ ದಳವನ್ನೂ ಕೂಡಾ ಸರಕಾರ ನೇಮಿಸಿತ್ತು. ಇವೆರಡೂ ಕೂಡಾ ವ್ಯಾಪಕವಾದ ತನಿಖೆ ನಡೆಸಿವೆ ನಿಜ. ಆದರೆ ಕೊಲೆ ಪ್ರಕರಣದ ಹಿನ್ನೆಲೆ ಮತ್ತು ಅದರ ಜಾಲವನ್ನು ಪತ್ತೆಹಚ್ಚುವಲ್ಲಿ ಈ ವಿಚಾರಣಾ ಆಯೋಗಗಳು ವಿಫಲಗೊಂಡಿವೆ ಏನೋ ಎಂಬ ಸಂಶಯ ಕಾಡುತ್ತಿದೆ.

ಏಕೆಂದರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಮರ್‌ಜಿತ್‌ಸಿಂಗ್ ಮಾನ್ ಎಂಬ ಐ. ಪಿ. ಎಸ್. ಅಧಿಕಾರಿಯನ್ನು ಬಂಧಿಸಿ ಜೈಲಿನಲ್ಲಿಡಲಾಗಿದೆ. ಅಂತೆಯೇ ಅತಿಂದರ್‌ಪಾಲ್‌ಸಿಂಗ್ ಎಂಬ ವಿದ್ಯಾರ್ಥಿ ಮುಖಂಡ ಕೂಡಾ ತನಿಖೆಯನ್ನು ಎದುರು ನೋಡುತ್ತಾ ಪಾಟಿಯಾಲ ಜೈಲಿನಲ್ಲಿದ್ದಾನೆ. ಅಂತೆಯೇ ಗುರುಬಕ್ಷ್‌ಸಿಂಗ್, ಬಲಬೀರ್‌ಸಿಂಗ್ ಹೀಗೆ ಈ ಕೊಲೆ ಪ್ರಕರಣದ ಸಂಶಯಾಸ್ಪದ ವ್ಯಕ್ತಿಗಳ ಪಟ್ಟಿ ಉದ್ದಕ್ಕೂ ಇವೆ.

ಇವೆಲ್ಲವೂ ಎದುರುಗಿರುವಂತೆ ಕೇಹರ್‌ಸಿಂಗ್ ಅವರಿಗೆ ಏಕಾಏಕಿ ಮರಣದಂಡನೆ ಶಿಕ್ಷೆ ವಿಧಿಸಿರುವ ಬಗ್ಗೆ ಪ್ರಶ್ನೆಗಳು ಏಳತೊಡಗಿವೆ. ಸುಪ್ರೀಂಕೋರ್ಟ್ ತೀರ್ಪು ಅಂತಿರಲಿ. ಆದರೆ ಈ ಬಗ್ಗೆ ಅಂತಿಮ ತೀರ್ಪು ನೀಡಬೇಕಾದ ಅವಕಾಶ ರಾಷ್ಟ್ರಪತಿಯವರ ಮುಂದೆ ಬಂದಿತ್ತು. ಆದರೆ ಅವರು ಕೂಡಾ ತೀರಾ ನಿಷ್ಠುರವಾಗಿ ವಿವೇಕಹೀನವಾಗಿ ವರ್ತಿಸಿರುವುದು ಖಂಡನೀಯವಾಗಿದೆ.

ಕೇಹರ್‌ಸಿಂಗ್ ಪ್ರಕರಣ ಸಾಮಾನ್ಯವಾದುದಲ್ಲ. ಇಡಿ ಪಂಜಾಬ್ ಜನತೆಯ ಭಾವನಾತ್ಮಕ ಸ್ಪಂದನ ಇದರಲ್ಲಿ ಅಡಗಿದೆ ಎಂಬುದನ್ನು ಕೂಡಾ ರಾಷ್ಟ್ರಪತಿಯವರು ಅರಿತುಕೊಳ್ಳಬೇಕಿತ್ತು. ಇತ್ತೀಚಿನ ದಿನಗಳಲ್ಲಿ ಪಾಕಿಸ್ತಾನದಲ್ಲಿ ಕೂಡಾ ಸರಕಾರ ಬದಲಾವಣೆಯಾಗಿ ಧರ್ಮೋತ್ಪಾದಕತೆಯ ವಿರುದ್ಧ ಅಲ್ಲಿಯ ಸರಕಾರ ಕೂಡಾ ಧ್ವನಿ ಎತ್ತಿದೆ. ಇಂತಹ ಸುಸಂದರ್ಭದಲ್ಲಿ ಎಲ್ಲವನ್ನೂ ಸರಳವಾಗಿ ಬಗೆಹರಿಸುವ ದಿಕ್ಕಿನಲ್ಲಿ ಕೇಂದ್ರ ಸರಕಾರ ಹೆಜ್ಜೆಗಳನ್ನಿಡಬೇಕಿತ್ತು.

ಆದರೆ ಈಗ ಹಾಗಾಗುತ್ತಿಲ್ಲ. ಕೇಹರ್‌ಸಿಂಗ್ ಅವರನ್ನು ಗಲ್ಲಿಗೇರಿಸಿದ್ದೇ ಆದರೆ ಇಡಿ ಪಂಜಾಬ್ ಮತ್ತೊಮ್ಮೆ ಹೊತ್ತಿ ಉರಿಯಲಿದೆ. ಸಿಕ್ಖರು ಇದನ್ನು ತಮ್ಮ ಸ್ವಾಭಿಮಾನದ ಪ್ರಶ್ನೆಯನ್ನಾಗಿ ಮಾಡಿಕೊಳ್ಳುವ ಸಾಧ್ಯತೆಗಳಿವೆ. ಹಾಗೇನಾದರೂ ಆದಲ್ಲಿ ಅನಗತ್ಯವಾದ ಗೊಂದಲಗಳಿಗೆ ಸರಕಾರವೇ ಹಾದಿ ಮಾಡಿಕೊಟ್ಟಂತಾಗುತ್ತದೆ. ಹಿಂದೆ ಪಾಕಿಸ್ತಾನದಲ್ಲಿ ಭುಟ್ಟೊ ಅವರನ್ನು ಜಿಯಾ ಸರಕಾರ ಗಲ್ಲಿಗೇರಿಸುವ ಸಂದರ್ಭದಲ್ಲಿ ಅದರ ವಿರುದ್ಧ ಜಗತ್ತಿನಾದ್ಯಂತ ಜನಾಭಿಪ್ರಾಯ ಮೂಡಿಸಿದ ಇದೇ ಭಾರತ ಸರಕಾರ ಈಗ ಕೇಹರ್‌ಸಿಂಗ್ ಅವರನ್ನು ಗಲ್ಲಿಗೇರಿಸುತ್ತಿದೆ. ಇದೊಂದು ವಿಪರ್ಯಾಸ. ಹೀಗಾಗ ಬಾರದಿತ್ತು. ರಾಷ್ಟ್ರಪತಿಯವರು ಸಿಕ್ಖರ ಭಾವನೆಗಳನ್ನು ಅರ್ಥಮಾಡಿಕೊಂಡು ಕೇಹರ್‌ಗೆ ಕ್ಷಮೆ ನೀಡಬೇಕಿತ್ತು. ಈಗ ಅವರು ಅನಗತ್ಯ ಗೊಂದಲ, ದ್ವೇಷಗಳಿಗೆ ಎಡೆ ಮಾಡಿಕೊಟ್ಟಿದ್ದಾರೆ.



...ಗ್ರಾಮದಲ್ಲಿ ...ಎಸ್. ಶಿಬಿರ

ಎಸ್. ಆಚಾರ್ ಶಿಬಿರದ ಉಪಯುಕ್ತತೆ ವಿದ್ಯಾರ್ಥಿಗಳ ಜವಾಬ್ದಾರಿ ವಿವರಿಸಿ ಶಿಬಿರಕ್ಕೆ ಯಶಸ್ಸು ಕೋರಿದರು.

ಬಿ. ಮಾಧವ ಹೆಬ್ಬಾರ್ ಶುಭ ಹಾರೈಸಿದರು. ಕೊನೆಯಲ್ಲಿ ವಿದ್ಯಾರ್ಥಿ ಘಟಕದ ನಾಯಕ ರಘು ವಂದಿಸಿದರು.

ಕಂಕನಾಡಿಯಲ್ಲಿ ನಾಳೆ 'ಹಳ್ಳಿ ಹುಡುಗಿ' ನಾಟಕ

ಮಂಗಳೂರು, ಜ. 3– ನಗರದ ಕಂಕನಾಡಿ ಗರಡಿಯ ಸರ್ವಮಂಗಳಾ ಸಭಾಭವನದಲ್ಲಿ ಜ. 5ರಂದು ಅಯನ ತಂಡದವರಿಂದ ಸಂಜೆ 6-30 ಗಂಟೆಗೆ 'ಹಳ್ಳಿ ಹುಡುಗಿ' ಎಂಬ ನಾಟಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ಉಳ್ಳಾಲ ಕ್ಷೇತ್ರದ ಶಾಸಕ ಬಿ. ಎಂ. ಇದಿನಬ್ಬ ಅಧ್ಯಕ್ಷತೆ ವಹಿಸಲಿರುವರು. ಮುಖ್ಯ ಅತಿಥಿಯಾಗಿ ಶ್ರೀಗರಡಿ ಕ್ಷೇತ್ರದ ಅಧ್ಯಕ್ಷ ಎ. ವಿಶ್ವನಾಥ ಆಗಮಿಸುವರು.

ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ.

ಸಂಘಟನೆಯಿಂದ ಮಹಿಳೆಯರ ಸಮಸ್ಯೆ ನಿವಾರಣೆಗೆ ಕರೆ

ಪಡುಬಿದ್ರಿ, ಜ. 3–ಮಹಿಳೆಯರ ಸಮಸ್ಯೆಗಳ ನಿವಾರಣೆಯು ಮಹಿಳೆಯರ ಸಂಘಟನೆಯ ಬಲವರ್ಧನೆಯಿಂದ ಮಾತ್ರ ಸಾಧ್ಯವೆಂದು ದರ್ಮದರ್ಶಿ ಹರಿಕೃಷ್ಣ ಪುನರೂರು ಅಭಿಪ್ರಾಯ ಪಟ್ಟರು.

ಇತ್ತೀಚೆಗೆ ಅವರು ಇಲ್ಲಿ ನಡೆದ 'ನವಶಕ್ತಿ ಮಹಿಳಾ ಮಂಡಳಿ' ಇದರ ವಾರ್ಷಿಕ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ದ.ಕ. ಜಿಲ್ಲಾ ಪರಿಷತ್ ಅಧ್ಯಕ್ಷ ಸಂಕಪ್ಪರೈ ಅಧ್ಯಕ್ಷತೆ ವಹಿಸಿದ ಈ ಸಮಾರಂಭಕ್ಕೆ ಶಾರದಾ ಆಚಾರ್, ವಸಂತಿ ಪೈ, ದೇವಣ್ಣ ಶೆಟ್ಟಿ, ರವೀಂದ್ರನಾಥ ಹೆಗ್ಡೆ ಮತ್ತು ರತ್ನಾಕರ ರಾಜ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.

ಕಟ್ಟಡ ಸಾಮಗ್ರಿ ಸಂಚಾರಕ್ಕೆ ಅಡ್ಡಿ: ನಗರಪಾಲಿಕೆಗೆದೂರು

ಮಂಗಳೂರು, ಜ. 3–ನಗರದ ಚಿಲಿಂಬಿ ಪ್ರದೇಶದಲ್ಲಿ ಕೆಲವರು ಸಾರ್ವಜನಿಕರಿಗೆ ಓಡಾಡಲು ಆತಂಕವಾಗುವ ರೀತಿಯಲ್ಲಿ ಮರಳು, ಜಲ್ಲಿ ಇತ್ಯಾದಿಗಳನ್ನು ರಾಶಿಹಾಕಿರುವುದನ್ನು ತೆಗೆಸಬೇಕೆಂದು ಸ್ಥಳೀಯ ನಾಗರಿಕರು ಮಹಾನಗರ ಪಾಲಿಕೆಯನ್ನು ವಿನಂತಿಸಿದ್ದಾರೆ.

ರಸ್ತೆಬದಿಯಲ್ಲಿ ಕಟ್ಟಡ ಕಟ್ಟುವ ಸಾಮಗ್ರಿಗಳನ್ನು ರಾಶಿಹಾಕಿರುವುದರಿಂದ ಸಾರ್ವಜನಿಕರಿಗೆ ತೀರ ತೊಂದರೆ ಉಂಟಾಗಿದೆ ಎಂದು ನಾಗರಿಕರು ತಿಳಿಸಿದ್ದಾರೆ.

ಶಾಲಾ ವಾರ್ಷಿಕೋತ್ಸವ

ಕೋಡಪದವು, ಜ. 3–ಸ್ಥಳೀಯ ಶಾಲಾ ವಾರ್ಷಿಕೋತ್ಸವವು ಬಂಟ್ವಾಳ ಸಹಾಯಕ ಶಿಕ್ಷಣಾಧಿಕಾರಿ ರಾಮಶೇಷ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು.

ಈ ಸಂದರ್ಭದಲ್ಲಿ 40 ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ ಈಶ್ವರ ಭಟ್ ಅವರನ್ನು ಸನ್ಮಾನಿಸಲಾಯಿತು.

ಕೊಳ್ನಾಡು ಮಂಡಲಪ್ರಧಾನ ಕೆ.ಎಸ್ ಮಹಾಬಲ ಶೆಟ್ಟಿ ಸ್ವಾಗತಿಸಿದರು. ಅಧ್ಯಾಪಕ ಕೆ.ಕೃಷ್ಣಭಟ್ ವಂದಿಸಿದರು.

ಕ್ರಿಸ್ತಜಯಂತಿ ಆಚರಣೆ

ವೇಣೂರು, ಜ. 3– ಇಲ್ಲಿನ ಪದವಿಪೂರ್ವ ಕಾಲೇಜಿನ ವಠಾರದಲ್ಲಿ ಸಾಹಿತ್ಯ ಮತ್ತು ಕಲಾಸಂಘದ ಆಶ್ರಯದಲ್ಲಿ ಕ್ರಿಸ್ತಜಯಂತಿಯ ಪ್ರಯುಕ್ತ ವೈವಿಧ್ಯಮಯ ಕಾರ್ಯಕ್ರಮ ಇತ್ತೀಚೆಗೆ ಜರುಗಿತು.

ಜಿ. ವಿ. ಚಿಕ್ಕಮಠ ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ರೆಫಾ! ವಿಲಿಯಂ ಮಾರ್ಟಿಸ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿದ್ದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕರಿಮಣೇಲು ಸಂತಜೂಡರ ಹಿ. ಪ್ರಾ. ಶಾಲಾ ಮಕ್ಕಳಿಂದ 'ಕ್ರಿಸ್ತಜನ್ಮ' ಎಂಬ ಕಿರು ನಾಟಕವು ಪ್ರದರ್ಶಿಸಲ್ಪಟ್ಟಿತು.

ಕೃಷಿ ಬಗ್ಗೆ ಉಪನ್ಯಾಸ

ಜಾಲ್ಸೂರು, ಜ. 3–ಸಿಂಡಿಕೇಟ್ ಬ್ಯಾಂಕ್ ಜಾಲ್ಸೂರು ಮತ್ತು ಕೃಷಿ ವಿಚಾರವಿನಿಮಯ ಕೇಂದ್ರದ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ಕೃಷಿ ಉಪನ್ಯಾಸ ಕಾರ್ಯಕ್ರಮ ಜರುಗಿತು.

ಉಳ್ಳಾಲದ ಗೇರುಕೃಷಿ ಸಂಶೋಧನಾ ಕೇಂದ್ರದ ಪ್ರಧಾನ ವಿಜ್ಞಾನಿ ಡಿ.ಪಿ. ಕುಮಾರ್ ಗೇರು ಕೃಷಿ ಎಂಬ ವಿಷಯದ ಕುರಿತು, ಯುನೈಟೆಡ್ ಇಂಡಿಯಾ ಇನ್ಸೂರೆನ್ಸ್‌ನ ಸಹಾಯಕ ನಿರ್ವಹಣಾಧಿಕಾರಿ ಡಾ! ಎಸ್. ಪಿ. ಕ್ವಾರೇಶಿಯಾ ಅವರು 'ಗ್ರಾಮೀಣ ವಿಮಾಯೋಜನೆಗಳು' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ಕೃಷಿ ವಿಚಾರ ವಿನಿಮಯ ಕೇಂದ್ರದ ಅಧ್ಯಕ್ಷ ಚೆನ್ನಪ್ಪಗೌಡರ ಅಧ್ಯಕ್ಷತೆಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಯಸ್ವಿನಿ ಜೇಸೀಸ್‌ನ ಜೆ.ಕೆ. ಸದಾನಂದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಶಾಖಾ ಮ್ಯಾನೇಜರ್ ಜೈನುದ್ದೀನ್ ವಂದಿಸಿದರು.

ಜ.8: ಅಡ್ಡೂರಿನಲ್ಲಿ ಚರ್ಮರೋಗ ತಪಾಸಣೆ

ಮಂಗಳೂರು, ಜ. 3– ಕಣ್ಣೂರು ಮಂ.ಪ. ಹಾಗೂ ಹಿಂದ್ ಕುಷ್ಠನಿವಾರಣಾ ಸಂಘದ ವತಿಯಿಂದ ಜ. 8 ರಂದು ಅಡ್ಡೂರಿನಲ್ಲಿ ಉಚಿತ ಚರ್ಮರೋಗ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ.

ಶಾಸಕ ಕೆ. ಅಮರನಾಥ ಶೆಟ್ಟಿ ಇದನ್ನು ಉದ್ಘಾಟಿಸಲಿದ್ದು ಮುಖ್ಯ ಅತಿಥಿಗಳಾಗಿ ವಿಧಾನ ಪರಿಷತ್ ಸದಸ್ಯ ಬಿ. ಅಪ್ಪಣ್ಣ ಹೆಗ್ಡೆ ಜಿ.ಪ. ಸದಸ್ಯ ಡಾ! ರಾಮಾನುಜಂ ಎಂ. ಸುನಂದ ಅವರು ಆಗಮಿಸಲಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಎಂ. ಸಂಜೀವ ಅವರು ವಹಿಸಲಿದ್ದಾರೆ.

ಶಿಬಿರದಲ್ಲಿ ಚಿಕಿತ್ಸಕರಾಗಿ ಡಾ! ಜೆ. ಎನ್. ಶೆಟ್ಟಿ, ಡಾ! ಎಂ. ಸುಭಾಷ್ ಆಗಮಿಸುವರು.

ವಾರ್ಷಿಕ ಮಹಾಸಭೆ

ಕುಂದಾಪುರ, ಜ. 3– ಗಂಗೊಳ್ಳಿ ದೋಣಿ ಯೂನಿಯನ್‌ನ ವಾರ್ಷಿಕ ಮಹಾಸಭೆಯು ಪ್ರಕಾಶ್ ಸೋನ್ಸ್ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಜರಗಿತು.

ಕಾರ್ಯದರ್ಶಿ ಲೋಕೇಶ್ ಸಾಲ್ಯಾನ್ ಅವರು ವಾರ್ಷಿಕ ವರದಿ ಹಾಗೂ ಆಯವ್ಯಯ ಪತ್ರ ಮಂಡಿಸಿದರು.

ಯೂನಿಯನಿನ ನೂತನ ಪದಾಧಿಕಾರಿಗಳನ್ನಾಗಿ ಈ ಕೆಳಗಿನವರನ್ನು ಆರಿಸಲಾಯಿತು.

ಕೆ. ಸಿ. ಕುಂದರ್-ಗೌರವ ಅಧ್ಯಕ್ಷ, ಪ್ರಕಾಶ್ ಸೋನ್ಸ್–ಅಧ್ಯಕ್ಷ, ಎಡ್ವಿನ್ ಕ್ರಾಸ್ತಾ, ಎಚ್. ಸಿ. ಕುಂದರ್–ಉಪಾಧ್ಯಕ್ಷರು, ಲೋಕೇಶ್ ಸಾಲ್ಯಾನ್–ಕಾರ್ಯದರ್ಶಿ, ಮಂಜುನಾಥ ಖಾರ್ವಿ–ಜತೆ ಕಾರ್ಯದರ್ಶಿ, ಸಂಜೀವ ಶ್ರೀಯಾನ್–...

ಮುಂಗಾರು

ಶನಿವಾರ, ಜನವರಿ 7, 1989

ಇದು ಅವಸರದ ತೀರ್ಮಾನ

ಇಂದಿರಾಗಾಂಧಿ ಕೊಲೆ ಪ್ರಕರಣದಲ್ಲಿ ಮರಣ ದಂಡನೆಗೆ ಒಳಗಾಗಿರುವ ಸತ್ವಂತ್ ಮತ್ತು ಕೇಹರ್ ಸಿಂಗ್ ಅವರನ್ನು ಗಲ್ಲಿಗೇರಿಸಲಾದ ಸುದ್ದಿ ಬಂದಿದೆ. ಮುಖ್ಯನ್ಯಾಯಾಧೀಶರ ನೇತೃತ್ವದಲ್ಲಿ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಕೇಹರ್‌ಸಿಂಗ್ ಅವರ ವಿಶೇಷ ಮೇಲ್ಮನವಿಯನ್ನೂ ತಳ್ಳಿಹಾಕಿ ಗಲ್ಲು ಶಿಕ್ಷೆಯನ್ನು ವಿಧಿಸಿದೆ. ರಾಷ್ಟ್ರಪತಿಯವರು ತಮ್ಮ ಮುಂದೆ ಬಂದಿದ್ದ ಕೇಹರ್‌ಸಿಂಗ್‌ರ ಕ್ಷಮಾಯಾಚನೆಯ ಮನವಿಯನ್ನು ತಿರಸ್ಕರಿಸಿದರು. ಇದೊಂದು ತೀರಾ ಅವಸರದ ತೀರ್ಮಾನ ಎನ್ನುವುದರಲ್ಲಿ ಎರಡು ಮಾತಿಲ್ಲ.

ಕೇಹರ್‌ಸಿಂಗ್ ಅವರಿಗೆ ಕ್ಷಮಾದಾನ ನೀಡಬೇಕೆಂದು ಈ ದೇಶದ ಬಹುಸಂಖ್ಯಾತ ಪ್ರಜ್ಞಾವಂತರೆಲ್ಲಾ ರಾಷ್ಟ್ರಪತಿಯವರ ಮೇಲೆ ಒತ್ತಡ ತಂದಿದ್ದರು. ಈ ದೇಶದ ಬಹುತೇಕ ಮಾಧ್ಯಮಗಳೆಲ್ಲಾ ಈ ನಿಟ್ಟಿನಲ್ಲಿ ಭಾರಿ ಜನಾಭಿಪ್ರಾಯ ಮೂಡಿಸಿದ್ದವು.

ರಾಷ್ಟ್ರಪತಿಯವರು ಬಹುಮುಖ್ಯವಾದ ಠಕ್ಕರ್ ಆಯೋಗದ ವರದಿ ಮತ್ತು ಶಂಕಿತ ಭಯೋತ್ಪಾದಕ ಅತೀಂದರ್‌ಪಾಲ್ ಸಿಂಗ್ ಮಾಡಿರುವನೆನ್ನಲಾದ ತಪ್ಪೊಪ್ಪಿಗೆಯನ್ನು ಪರಿಶೀಲಿಸದೆ ಕ್ಷಮಾದಾನ ಅರ್ಜಿಯನ್ನು ತಿರಸ್ಕರಿಸಿರುವುದರಿಂದ ಕೇಹರ್‌ಸಿಂಗ್ ಗಲ್ಲು ಶಿಕ್ಷೆಗೆ ತಡೆಯಾಜ್ಞೆ ನೀಡಬೇಕೆಂದು ಕೇಹರ್‌ಸಿಂಗ್ ಪರ ವಕೀಲರು ವಾದಿಸಿದ್ದರು. ಇದರಲ್ಲಿಯೂ ಹುರುಳಿಲ್ಲದೆ ಇಲ್ಲ. ಕೇಹರ್‌ಸಿಂಗ್ ಅವರು ಇಂದಿರಾಗಾಂಧಿ ಕೊಲೆ ಪ್ರಕರಣದಲ್ಲಿ ನೇರವಾಗಿ ಭಾಗಿಯಾಗಿದ್ದವರೇ ಅಲ್ಲ. ಅವರು ಇಂದಿರಾಗಾಂಧಿಗೆ ಗುಂಡಿಕ್ಕಿದ್ದ ಬಿಯಾಂತ್‌ಸಿಂಗ್ ಅವರ ಚಿಕ್ಕಪ್ಪ. ಇವರ ಮನೆಗೆ ಆಗಿಂದಾಗ್ಗೆ ಭೇಟಿಕೊಡುತ್ತಿದ್ದವರು. ಈ ಕಾರಣವನ್ನೇ ಮುಂದಿಟ್ಟುಕೊಂಡು ಕೇಹರ್‌ಸಿಂಗ್‌ರನ್ನು ವಿಚಾರಣೆಗೆ ಒಳಪಡಿಸಿ ಈಗ ಗಲ್ಲುಶಿಕ್ಷೆಗೆ ಒಳಪಡಿಸಲಾಗಿದೆ.

ಆದರೆ ಇದೊಂದು ಅತ್ಯಂತ ಸೂಕ್ಷ್ಮವಾದ ರಾಜಕೀಯ ಪ್ರಕರಣ ಎನ್ನುವುದನ್ನು ಕೂಡಾ ರಾಷ್ಟ್ರಪತಿಯವರು ಮನಗಾಣಬೇಕಿತ್ತು. ಇಡಿ ಪಂಜಾಬ್ ಸಮಸ್ಯೆಯ ಸೂಕ್ಷ್ಮತಂತುಗಳಲ್ಲಿ ಕೂಡಾ ಈ ಗಲ್ಲು ಶಿಕ್ಷೆಯ ಪರಿಣಾಮಗಳು ಉಸಿರು ಪಡೆಯುವುದನ್ನೂ ನಾವು ಈ ಹಂತದಿಂದ ಗುರುತಿಸಬಹುದಾಗಿದೆ.

ಹಿಂದೆ ಪಾಕಿಸ್ತಾನದಲ್ಲಿ ಜಿಯಾ ಸರಕಾರ ಭುಟ್ಟೋ ಅವರನ್ನು ಗಲ್ಲಿಗೇರಿಸುವ ಸಂದರ್ಭದಲ್ಲಿ ಮಾನವತೆಯ ನೆಲೆಯಲ್ಲಿ ಅದನ್ನು ತೀವ್ರವಾಗಿ ಖಂಡಿಸಿದ್ದ ಇದೇ ಭಾರತ ಸರಕಾರ ಮತ್ತೆ ತಾನೇ ಅಂತಹ ಅಪರಾಧವನ್ನು ಎಸಗಿದೆ.

ಗಲ್ಲುಶಿಕ್ಷೆ ಸರಿಯೋ ತಪ್ಪೋ ಎನ್ನುವ ವಿಶ್ಲೇಷಣೆ ಕೂಡಾ ಅಲ್ಲ. ಉಲ್ಬಣಗೊಂಡಿರುವ ಪಂಜಾಬ್ ಸಮಸ್ಯೆಯನ್ನು ತಹಬಂದಿಗೆ ತರುವ ದಿಕ್ಕಿನಲ್ಲಿ ಕೇಹರ್ ಸಿಂಗ್‌ಗೆ ಕೊಟ್ಟ ಈ ಶಿಕ್ಷೆಯ ಬಗ್ಗೆ ಒಂದಿಷ್ಟು ಉದಾರತೆಯನ್ನು ತೋರುವ ಸೌಜನ್ಯವನ್ನಾದರೂ ರಾಷ್ಟ್ರಪತಿಯವರು ತೋರಬೇಕಿತ್ತು.

ಇದೊಂದು ಮಾನವೀಯತೆಯ ಪ್ರಶ್ನೆ. ತನ್ನ ತಂದೆಯನ್ನು ಕೊಲೆ ಮಾಡಲಾಗುತ್ತಿದೆ, ಸರಕಾರಿ ಹಿಂಸೆಗೆ ಆತನೊಬ್ಬ ಬಲಿ ಎಂದು ಕೇಹರ್‌ಸಿಂಗ್‌ರ ಮಗ ಹೇಳಿರುವುದನ್ನು ಇಡಿ ಸಿಕ್ಖ್ ಜನಾಂಗ ಗಂಭೀರವಾಗಿ ಪರಿಗಣಿಸದಿರಲಿಕ್ಕಿಲ್ಲ ಎನ್ನುವಂತಿಲ್ಲ.

ಈವರೆಗೆ ಪಂಜಾಬ್ ಭಯೋತ್ಪಾದಕ ಚಟುವಟಿಕೆಗಳಿಗೆ ನೆರೆಯ ಪಾಕಿಸ್ತಾನದಿಂದ ನೆರವು ಸಿಗುತ್ತಿತ್ತು ಎಂಬುವನ್ನೇ ಮುಂದೆ ಮಾಡಿ ಭಾರತ ಸರಕಾರ ಜನಾಭಿಪ್ರಾಯ ಮೂಡಿಸುತ್ತಿತ್ತು. ಆದರೆ ಪ್ರಸ್ತುತ ಪಾಕ್‌ನಲ್ಲೂ ಸಾಕಷ್ಟು ರಾಜಕೀಯ ಬದಲಾವಣೆಗಳಾಗಿದ್ದು ನೂತನ ಪ್ರಧಾನಿ ಬೆನಜೀರ್ ಅವರು ಭಯೋತ್ಪಾದಕ ಚಟುವಟಿಕೆಗಳನ್ನು ನಿಗ್ರಹಿಸುವುದಕ್ಕೆ ತಾವೂ ಭಾರತದೊಡನೆ ಕೈಜೋಡಿಸುವುದಾಗಿ ಹೇಳಿದ್ದಾರೆ. ಇಂತಹ ಸುಸಮಯದಲ್ಲಿ ಪಂಜಾಬ್ ಜನತೆಯ ಮನಸ್ಸನ್ನು ಗೆಲ್ಲುವ ಕೆಲಸವನ್ನು ಭಾರತ ಸರಕಾರ ಮಾಡಬೇಕಿತ್ತು.

ಆದರೆ ಕೇಹರ್ ಸಿಂಗ್ ಪ್ರಕರಣದಿಂದ ಮತ್ತೆ ಪಂಜಾಬ್ ಜನತೆಯ ಮನಸ್ಸಿನಲ್ಲಿ ಅಸಮಾಧಾನದ ಹೊಗೆ ಎದ್ದಿದೆ. ಕೇಂದ್ರ ಸರಕಾರದ ವಿರುದ್ಧ ದ್ವೇಷ ಮಡುಗಟ್ಟುತ್ತಿರುವಂತಿದೆ. ಹೀಗಾಗಬಾರದಿತ್ತು.

ಈಗ ಎಲ್ಲಾ ನಡೆದು ಹೋಗಿದೆ. ಹಿಂದೆ ಅಮೃತಸರದ ಸ್ವರ್ಣ ದೇಗುಲದ ಮೇಲೆ ಸೇನೆ ದಾಳಿ ನಡೆದಾಗ ಸಿಕ್ಖರ ಮನಸ್ಸಿನಲ್ಲಿ ಯಾವ ರೀತಿಯ ಪರಿಣಾಮ ಮೂಡಿತ್ತೋ ಅಷ್ಟೇ ಪರಿಣಾಮಕಾರಿಯಾದ ಘಟನೆ ಕೇಹರ್‌ಸಿಂಗ್‌ರ ಗಲ್ಲಿನ ಪ್ರಕರಣ ಎಂಬುದನ್ನೂ ಕೂಡಾ ಯಾರೂ ಅಲ್ಲಗಳೆಯುವಂತಿಲ್ಲ. ಒಟ್ಟಾರೆ, ಇದು ರಾಷ್ಟ್ರಪತಿಯವರ ಒಂದು ತೀರಾ ಅವಸರದ ತೀರ್ಮಾನ ಎನ್ನುವುದರಲ್ಲಿ ಎರಡು ಮಾತಿಲ್ಲ.

'ಜವಾಬ್ದಾರಿಕೆಯಿಂದ ಕೆಲಸ ಮಾಡಿದರೆ ಯೋಜನೆ ಫಲಪ್ರದ'

ಉಡುಪಿ, ಜ. 6– ಜನರು ಜವಾಬ್ದಾರಿಯನ್ನರಿತು ಸಹಕರಿಸಿದರೆ ಸರಕಾರದ ಯೋಜನೆಗಳು ಫಲ ಪ್ರದವಾಗುತ್ತವೆ ಎಂದು ಶಾಸಕ ಬಸವರಾಜ್ ಹೇಳಿದರು.

ಅವರು ಇತ್ತೀಚೆಗೆ ಸಾಸ್ತಾನ ಮಂಡಲ ಪಂಚಾಯತ್‌ಗೊಳಪಟ್ಟ ಕೋಡಿ ಗ್ರಾಮಕ್ಕೆ ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಅಡಿಯಲ್ಲಿ ಮಂಜೂರಾದ ಬಾವಿಯ ಶಂಕು ಸ್ಥಾಪನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಬಾವಿಯ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿದ ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷ ಕೆ. ಸಿ. ಕುಂದರ್ ಅವರು, ಸಮಗ್ರ ಗ್ರಾಮೀಣ ಅಭಿವೃದ್ಧಿಯ ಸಾಧನೆಗಾಗಿ ಪಂಚ ವಾರ್ಷಿಕ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಹಲವಾರು ಯೋಜನೆಗಳಲ್ಲಿ ಅಂತರ್ ಜಲ ಶುದ್ಧ ನೀರಿನ ಪೂರೈಕೆ ಒಂದಾಗಿದೆ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಗ್ರಾಮೀಣ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿವೆ ಎಂದರು.

ಜಿ. ಪ. ಇಂಜಿನಿಯರಿಂಗ್ ಉಡುಪಿ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಎಚ್. ಎಚ್. ಚಂದ್ರ ಶೇಖರ್, ಜಿ. ಪ. ಸದಸ್ಯೆ ಸರಳಾ ಕಾಂಚನ್, ಉಡುಪಿ ತಾಲೂಕು ಪಂಚಾಯತ್ ಸಮಿತಿ ಕಾರ್ಯದರ್ಶಿ ನಟರಾಜ ಅವರು ಈ ಸಂದರ್ಭದಲ್ಲಿ ಮಾತನಾಡಿದರು.

ಮಂಡಲ ಪ್ರಧಾನ ಎ. ಜಗದೀಶ ಕಾರಂತ ಸ್ವಾಗತಿಸಿದರು. ಕಾರ್ಯದರ್ಶಿ ಡಿ. ಎಚ್. ನಾಯ್ಕ ಸಂದೇಶ ಓದಿದರು. ಜನಾರ್ದನ ಮಯ್ಯ ವಂದಿಸಿದರು.

ವರದಕ್ಷಿಣೆ ಪೀಡೆ: ಗಂಡ, ಅತ್ತೆ ಮೈದುನ ಬಂಧನ

(ಮಂಗಳೂರು ವರದಿ)

ಕಾರವಾರ, ಜ. 5– ತಾನು ವರದಕ್ಷಿಣೆಯಲ್ಲಿ ನೀಡಬೇಕಾದ ಉಳಿದ ಹಣ ನೀಡಲಿಲ್ಲವೆಂದು ತನಗೆ ಕಿರುಕುಳ ನೀಡುತ್ತಿದ್ದಾರೆಂದು ಕುಮಟಾ ಕೋರ್ಟಿನಲ್ಲಿ ಕಮಲಾಬಾಯಿ ಎಂಬ ಮಹಿಳೆ ದಾಖಲಿಸಿದ ದೂರಿನನ್ವಯ ಕಾರವಾರ ಹೊಟೇಗಾಳಿಯ ಆಕೆಯ ಪತಿ ಸುಭಾಷ್ ಮಾಳಸೇಕರ್, ಮೈದುನ ಜ್ಞಾನೇಶ್ವರ ಮತ್ತು ಅತ್ತೆಯನ್ನು ಚಿತಾಕುಲ ಪೊಲೀಸ್ ಠಾಣೆಯ ಅಧಿಕಾರಿ ಪ್ರಮೋದರಾವ್ ಅವರು ಇತ್ತೀಚೆಗೆ ಬಂಧಿಸಿದ್ದಾರೆ.

ಫಿರ್ಯಾದು ನೀಡಿದ ಕಮಲಾಬಾಯಿ ಕುಮಟಾ ತಾಲೂಕಿನ ಕತಗಾಲದವರೆಂದು ಅವರು ಇತ್ತೀಚೆಗೆ ಹೊಟೇಗಾಳಿಯ ಸುಭಾಷ್ ಎಂಬವರನ್ನು ಮದುವೆಯಾಗಿದ್ದರು. ಮದುವೆಯ ಸಂದರ್ಭದಲ್ಲಿ 15 ಸಾವಿರರೂ. ಪೈಕಿ ಮಧು.ವಿಗೆ7ಸಾವಿರರೂ. ಗಳನ್ನು ನೀಡಿದ್ದರಾಗಿ ಉಳಿದ ಹಣ ತನಗೆ ಬೇಕೆಂದು ಗಂಡ ಒತ್ತಾಯಿಸುತ್ತಿದ್ದನೆಂದು ಗೊತ್ತಾಗಿದೆ. ಈ ಕುರಿತಾಗಿ ಅವಳ ಮೈದುನ ಮತ್ತು ಅತ್ತೆ ಸಹ ಕಿರುಕುಳ ಕೊಡುತ್ತಿದ್ದರೆಂದು ಗೊತ್ತಾಗಿದೆ.

ಈಗ ಆರೋಪಿಗಳನ್ನು ಕಾರವಾರ ಜೆ. ಎಮ್. ಎಫ್. ಸಿ. ಕೋರ್ಟ್ ಮೂಲಕ ಬಿಡುಗಡೆ ಮಾಡಲಾಗಿದೆ.

ಮಟ್ಕಾ ಜೂಜಾಟ: 6 ಬಂಧನ

(ಮಂಗಳೂರು ವರದಿ)

ಕಾರವಾರ, ಜ. 6– ಕಾರವಾರದ ಚಿತಾಕುಲ ಪೊಲೀಸ್ ಠಾಣೆ ವ್ಯಾಪ್ತಿಗೆ ಬರುವ ಪ್ರದೇಶದಲ್ಲಿ ಇತ್ತೀಚೆಗೆ ಮಟ್ಕಾ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಪಿ. ಎಸ್. ಐ. ಎನ್. ಟಿ. ಪ್ರಮೋದರಾವ್ 5 ಪ್ರಕರಣಗಳನ್ನು ದಾಖಲು ಮಾಡಿಕೊಂಡಿರುವುದಾಗಿ ಗೊತ್ತಾಗಿದೆ.

ಈ ಐದು ಪ್ರಕರಣಗಳಲ್ಲಿ 4 ಪ್ರಕರಣಗಳನ್ನು ಕದ್ರಾದಲ್ಲಿ ಪತ್ತೆ ಹಚ್ಚಲಾಗಿದೆ ದಸ್ತಗಿರಿಯಾದವರೆಂದರೆ ಚಂದ್ರಕಾಂತ ನಾಯ್ಕ, ತಂಗಚ್ಚ, ನಾರಾಯಣ ನಂಬಿಯಾರ್, ಸಂತೋಷ ನಾಯ್ಕ, ರಾಜಾರಾಮ ನಾಯ್ಕ, ಚಿತಾಕುಲದಲ್ಲಿ ಉದಯ ಅತೋಸ್ಕರ.

ಇವರನ್ನು ಜಾಮೀನು ಮೇಲೆ ಬಿಡುಗಡೆ ಮಾಡಲಾಗಿದೆ.

ಸಾಣೂರು ಮಂ.ಪ: ಗ್ರಾಮೀಣ ನೈರ್ಮಲ್ಯ ಕಾರ್ಯಾಗಾರ

ಕಾರ್ಕಳ, ಜ. 6– ಯೂನಿಸೆಫ್ ಸಹಭಾಗಿತ್ವದಲ್ಲಿ ಸಾಣೂರು ಮಂಡಲ ಪಂಚಾಯತ್ ಮಟ್ಟದ ಗ್ರಾಮೀಣ ನೈರ್ಮಲೀಕರಣ ಕಾರ್ಯಾಗಾರವು ಡಿ. 30 ರಂದು ಸಾಣೂರು ಮಂಡಲ ಪಂಚಾಯತ್ ಕಚೇರಿಯಲ್ಲಿ ಮಂಡಲ ಪ್ರಧಾನ ಐ. ರವಿರಾಜ ಅತಿಕಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾರ್ಯಾಗಾರವನ್ನು ಉಡುಪಿ ವಿಭಾಗದ ದ. ಕ. ಜಿಲ್ಲಾ ಪರಿಷತ್ ಇಂಜಿನಿಯರಿಂಗ್ ವಿಭಾಗದ ಕಾರ್ಯ ನಿರ್ವಾಹಕ ಇಂಜಿನಿಯರ್ ಎಚ್. ಎಚ್. ಚಂದ್ರಶೇಖರಯ್ಯನವರು ಉದ್ಘಾಟಿಸಿದರು.

ಕಾರ್ಯಾಗಾರದ ಮುಖ್ಯ ಉಪನ್ಯಾಸಕರಾಗಿ ಶ್ರೀಪಾಲ ಚಂದ್ರ ರಾವ್ (ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್) ರವೀಂದ್ರ ಉಳ್ಳಾಲ್ (ಕ್ಷೇತ್ರಾಭಿವೃದ್ಧಿ ಅಧಿಕಾರಿ) ಜನಾರ್ದನ (ಯೋಜನಾಧಿಕಾರಿ, ಬಾಲ ವಿಕಾಸ ಯೋಜನೆ) ಶಿವಪ್ಪ ಮೂಲ್ಯ ಮತ್ತು ರಘುನಾಥ ರಾವ್ (ಆರೋಗ್ಯ ಇಲಾಖೆ) ಆಗಮಿಸಿದ್ದರು.

ಸಾಣೂರು ಮಂಡಲ ಪಂಚಾಯತ್ ಸದಸ್ಯ ಎಂ. ಮಾಧವ ಕಾಮತ್ ಕಾರ್ಯಕ್ರಮವನ್ನು ನಿರ್ವಹಿಸಿದರು. ಮಂಡಲ ಉಪಪ್ರಧಾನ ಚಂದ್ರಶೇಖರ್ ವಂದಿಸಿದರು.

ಕಾರ್ಕಳದಲ್ಲಿ ಅಯ್ಯಪ್ಪ ದೀಪೋತ್ಸವ

ಕಾರ್ಕಳ, ಜ. 5–ಸ್ಥಳೀಯ ಬಂಡೀಮಠ ಆಟದ ಬಯಲಿನಲ್ಲಿ ಅಯ್ಯಪ್ಪ ಭಕ್ತ

ಹಸ್ತಿ ಕೊಲೆ

ಕೋರ್ಟಿನಲ್ಲಿ

ಮುಂಗಾರು

ಭಾನುವಾರ, ಜೂನ್ 25, 1989

ಬೇಕು ರಾಜಕೀಯ ಮುತ್ಸದ್ದಿತನ

ಶ್ರೀಲಂಕಾದ ಸ್ಥಿತಿ ದಿನದಿಂದ ದಿನಕ್ಕೆ ಹದಗೆಟ್ಟು ಸ್ಫೋಟಕ ಹಂತಕ್ಕೆ ತಲುಪಿದೆ.

ಒಂದೆಡೆ 50ಸಾವಿರಕ್ಕೂ ಹೆಚ್ಚು ಮಂದಿ ಸಾರಿಗೆ ಸಿಬ್ಬಂದಿಗಳು ಮುಷ್ಕರ ನಡೆಸುತ್ತಿದ್ದಾರೆ. ಮುಷ್ಕರ ನಿರತರು ಕೆಲಸಕ್ಕೆ ಹಾಜರಾಗದಿದ್ದಲ್ಲಿ ಕೆಲಸದಿಂದ ವಜಾ ಮಾಡಲಾಗುವುದೆಂದು ಸರಕಾರ ಬೆದರಿಕೆ ಹಾಕಿದ್ದರೂ ಕಾರ್ಮಿಕರು ಲೆಕ್ಕಿಸಿಲ್ಲ. ಜತೆಗೆ ಈಗ ದೂರ ಸಂಪರ್ಕ ಹಾಗೂ ಬ್ಯಾಂಕುಗಳ ನೌಕರರೂ ಈ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಇನ್ನೊಂದೆಡೆ ಸಿಂಹಳೀಯ ಉಗ್ರಗಾಮಿ ಸಂಘಟನೆ ಜೆವಿಪಿಯ ದಾಳಿ ಜೋರಾಗುತ್ತಿದೆ. ಮತ್ತೊಂದೆಡೆ ಭಾರತೀಯ ಶಾಂತಿ ಪಡೆ ಹಾಗೂ ತಮಿಳು ಉಗ್ರಗಾಮಿ ಸಂಘಟನೆ ಎಲ್ ಟಿ ಟಿ ಇ ಮಧ್ಯೆ ಕದನ ನಿರಂತರವಾಗಿ ನಡೆದಿದೆ. ಈ ಎಲ್ಲ ಸ್ಥಿತಿಯನ್ನು ನಿಭಾಯಿಸಲು ಲಂಕಾ ಪ್ರಧಾನಿ ಪ್ರೇಮದಾಸ ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿಯನ್ನು ಹೇರಿಯಾಗಿದೆ.

ಭಾರತೀಯ ಶಾಂತಿಪಡೆ ಶ್ರೀಲಂಕಾದಿಂದ ವಾಪಸಾಗುವ ಪ್ರಶ್ನೆ ಈಗ ಮತ್ತೆ ತೊಡಕಿಗೆ ಸಿಲುಕಿದೆ. ಶ್ರೀಲಂಕಾದಲ್ಲಿ ನೆಲೆಸಿರುವ ತಮಿಳರ ಹಿತಾಸಕ್ತಿಗಳನ್ನು ರಕ್ಷಿಸುವ ಕೆಲಸಕ್ಕಾಗಿ ಶ್ರೀಲಂಕಾದ ಹಿಂದಿನ ಸರಕಾರದಿಂದ 'ಬಲವಂತದ ಆಹ್ವಾನ' ಪಡೆದು ಅಲ್ಲಿಗೆ ತೆರಳಿದ್ದ ಭಾರತೀಯ ಶಾಂತಿ ಪಡೆ ಹಿಂತೆರಳಬೇಕೆಂದು ಶ್ರೀಲಂಕಾ ಪ್ರಧಾನಿ ಪ್ರೇಮದಾಸ ಪದೇ ಪದೇ ಒತ್ತಾಯಿಸಿದ್ದಾರೆ. ಶಾಂತಿ ಪಡೆ ವಾಪಸಿಗೆ ನಿರ್ದಿಷ್ಟ ದಿನಾಂಕವೊಂದರ ಗಡುವನ್ನೂ ಅವರು ವಿಧಿಸಿದ್ದಾರೆ. ಜುಲೈ 29 ರೊಳಗೆ ಶಾಂತಿ ಪಡೆ ಶ್ರೀಲಂಕಾದಿಂದ ತೆರಳದಿದ್ದಲ್ಲಿ ಅವುಗಳನ್ನು ಬ್ಯಾರಕ್ಕಿನಲ್ಲೇ ತಡೆಯುವುದಾಗಿಯೂ ಈಗ ಪ್ರೇಮದಾಸ ಹೇಳಿಕೆ ಕೊಟ್ಟಿದ್ದಾರೆ.

ಪ್ರೇಮದಾಸರ ಈ ಹೇಳಿಕೆ ಅವರ ಅಪಕ್ವ ಮುತ್ಸದ್ದಿತನವನ್ನಷ್ಟೆ ಪ್ರತಿಬಿಂಬಿಸುತ್ತದೆ ಎನ್ನದೆ ವಿಧಿಯಿಲ್ಲ. ಈ ಮಾತನ್ನು ಹೇಳುವಾಗ ಶ್ರೀಲಂಕಾ ಒಂದು ಸ್ವತಂತ್ರ ರಾಷ್ಟ್ರ ಹಾಗೂ ಪ್ರೇಮದಾಸ ಆ ರಾಷ್ಟ್ರದ ಪ್ರಧಾನಿ ಎಂಬ ಸತ್ಯವನ್ನು ಒಪ್ಪಿಕೊಂಡೇ ಹೇಳುತ್ತಿದ್ದೇವೆ. ಎರಡು ದಿನಗಳ ಹಿಂದೆ ಭಾರತದ ಶಾಂತಿ ಪಡೆ ವಾಪಸಾಗದಿರುವ ಬಗ್ಗೆ ವಿಶ್ವಸಂಸ್ಥೆಗೆ ದೂರು ನೀಡುವುದಾಗಿ ಹೇಳಿದ ಪ್ರೇಮದಾಸ ಅವರು ಈಗ ಶಾಂತಿಸೇನೆ ವಿರುದ್ಧ ಪ್ರತಿರೋಧದ ಮಾತನ್ನಾಡುತ್ತಿರುವುದು ಅವರ ನಿರ್ಧಾರಗಳ ಅಸ್ಪಷ್ಟತೆಯನ್ನಷ್ಟೆ ತೋರುತ್ತದೆ.

ಭಾರತೀಯ ಉಪಖಂಡದಲ್ಲಿ ಶಕ್ತರಾಷ್ಟ್ರವೆನಿಸಿರುವ ಭಾರತದ ಜತೆ ಸೌಹಾರ್ದ ಸಂಬಂಧ ಸ್ಥಾಪಿಸಿಕೊಳ್ಳಬೇಕಾದ ಶ್ರೀಲಂಕಾದಂತಹ ಪುಟ್ಟ ದ್ವೀಪ ರಾಷ್ಟ್ರದ ಅನಿವಾರ್ಯತೆಯನ್ನು ಪ್ರೇಮದಾಸ ಮೊದಲು ಒಪ್ಪಿಕೊಳ್ಳಬೇಕಿದೆ. ಆರಂಭದಲ್ಲಿ ಎಲ್ ಟಿ ಟಿ ಇಯನ್ನು ಎದುರಿಸಲು ಭಾರತದ ನೆರವು ಯಾಚಿಸಿದ ಶ್ರೀಲಂಕಾ ಈಗ ಎಲ್ ಟಿ ಟಿ ಇ ಯನ್ನು ನೇರ ವಿಶ್ವಾಸಕ್ಕೆ ತೆಗೆದುಕೊಂಡಿರುವುದು ಭಾರತಕ್ಕೂ ಇರಿಸುಮುರಿಸುಂಟು ಮಾಡಿದೆ. ಎಲ್ ಟಿ ಟಿ ಇ ಯನ್ನು ಸಂಧಾನಕ್ಕೆ ಮಣಿಸುವ 'ಹಿರಿಯಣ್ಣನ ಪಾತ್ರ' ವಹಿಸಿ ಶ್ರೀಲಂಕಾದ ದಟ್ಟಕಾಡುಗಳಿಗೆ ಶಾಂತಿ ಪಡೆ ಕಳುಹಿಸಿದ್ದ ಭಾರತ ಈಗ ಏಕಾಏಕಿ ಎಲ್ ಟಿ ಟಿ ಇ ಹಾಗೂ ಶ್ರೀಲಂಕಾ ಸರಕಾರ ಮಿತ್ರರಾದಂತಹ ಸ್ಥಿತಿಯನ್ನು ಎದುರಿಸಲು ಸಿದ್ಧವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಈ ಹಿನ್ನೆಲೆಯಲ್ಲಿಯೇ ರಾಜೀವ್ ಗಾಂಧಿಯವರು ಕೂಡಾ ಶ್ರೀಲಂಕಾ ಸರಕಾರ ವಿಶ್ವಸಂಸ್ಥೆಗೆ ದೂರು ನೀಡಿದರೆ ಆ ಬಗ್ಗೆ ಸೂಕ್ತ ಮಾಹಿತಿ ಸಿಕ್ಕಿದ ಮೇಲೆ ಪ್ರತಿಕ್ರಿಯಿಸಬಹುದು ಎಂಬ ಗಡಸು ಧೋರಣೆ ತಾಳಿದ್ದಾರೆ.

ಪ್ರೇಮದಾಸ ಅವರು ಶ್ರೀಲಂಕಾವನ್ನು ಒಂದೇ ರಾಷ್ಟ್ರವಾಹಿನಿಯ ಹಿನ್ನೆಲೆಯಲ್ಲಿ ಒಂದುಗೂಡಿಸುವ ನಿಟ್ಟಿನಲ್ಲಿ ಬಹಳಷ್ಟು ಶ್ರಮಪಡಬೇಕಾದ ಶ್ರೀಲಂಕಾದಲ್ಲಿ ಇಪತ್ತು ಇವೆ. ಈ ಹಂತದಲ್ಲಿ ಸಿಟ್ಟಿನ ಅಥವಾ ಉದ್ವೇಗದ ಯಾವುದೇ ಹೇಳಿಕೆಗಳು ಫಲಕಾರಿಯಾಗಲಾರವು. ಒಂದೆಡೆ ಎಲ್ ಟಿ ಟಿ ಇ, ಇನ್ನೊಂದೆಡೆ ಜೆವಿಪಿ ಇವೆರಡನ್ನೂ ಮಾತುಕತೆಗೆ ಎಳೆಯಲಾಗದ ಅಸಹಾಯಕತೆ ಇರುವಾಗಲೇ ಭಾರತದ ಜತೆ ಕೂಡಾ ಸಂಘರ್ಷಕ್ಕಿಳಿದು ಸಮಸ್ಯೆಯನ್ನು ಇನ್ನಷ್ಟು ಗೋಜಲಾಗಿಸುವುದು ಉತ್ತಮ ಮುತ್ಸದ್ದಿಯೊಬ್ಬನ ಲಕ್ಷಣವಲ್ಲ. ಅದರ ಬದಲಾಗಿ ಭಾರತವನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಭಾರತದ ಶಾಂತಿ ಪಡೆಯ ನೆರವನ್ನು ಬಳಸುವ ಕೆಲಸಕ್ಕೆ ಅವರು ಕೈಹಾಕಬಹುದಿತ್ತು.

ಹಿಂಸಾಕೃತ್ಯಗಳು ದಿನನಿತ್ಯದ ಆಗುಹೋಗುಗಳಾಗಿರುವ ಶ್ರೀಲಂಕಾದಲ್ಲಿ ಜನಜೀವನ ಎಂದಿನ ಸ್ಥಿತಿಗೆ ಮರಳಿ ಸೌಹಾರ್ದತೆ ನೆಲೆಸಬೇಕಾದಲ್ಲಿ ಈಗ ಆವಶ್ಯಕವಾಗಿರುವುದು ಇನ್ನಷ್ಟು ಶಸ್ತ್ರಾಸ್ತ್ರಗಳಲ್ಲ ಎಂಬುದನ್ನು ಭಾರತ ಹಾಗೂ ಶ್ರೀಲಂಕಾ ಸರಕಾರ ಎರಡೂ ಮನಗಾಣಬೇಕಿದೆ. ತಮಿಳರಿಗೆ ಪೂರ್ಣ ರೂಪದ ಸ್ವಾಯತ್ತೆ ನೀಡುವ ಕೆಲಸವನ್ನು ಚುನಾವಣೆ ಮೂಲಕ ನಿರ್ವಹಿಸಿದ ಪ್ರೇಮದಾಸರಿಗೆ ಭಾರತದ ಶಾಂತಿಸೇನೆಯನ್ನು ಹರ್ಷದೊಂದಿಗೆ ವಾಪಸು ಕಳುಹಿಸುವುದು ಹಾಗೂ ಶ್ರೀಲಂಕಾಗೆ ಮೊದಲು ಕಾಲಿಡುವಾಗ ಪಡೆದ ಸಂಭ್ರಮದ ಸ್ವಾಗತವನ್ನೇ ಮರಳಿ ಬರುವಾಗಲೂ ಭಾರತದ ಶಾಂತಿಪಡೆ ಪಡೆಯುವಂತಾಗಲು ಪ್ರೇಮದಾಸ ಮತ್ತು ರಾಜೀವ್ ಹೆಚ್ಚು ಶ್ರಮಪಡಬೇಕಾಗಿಲ್ಲ. ಈಗ ಬೇಕಾಗಿರುವುದು ವೃಥಾ ಪ್ರತಿಷ್ಠೆಯನ್ನು ತೊರೆಯುವ ಮನೋಭಾವ.

ರಾಜಕೀಯ ಒಳಸೆಳೆತಗಳ ಪರಿಪಕ್ವ ಅನುಭವವಿದ್ದೆಡೆ ಅನಗತ್ಯ ಸಂಘರ್ಷಗಳಿಗೆ ಎಡೆ ಇರುವುದಿಲ್ಲ. ಪ್ರೇಮದಾಸ ಅವರು ಸಾಕಷ್ಟು ತಾಳ್ಮೆ ಹಾಗೂ ವ್ಯವಧಾನದಿಂದ ವ್ಯವಹರಿಸಬೇಕಾದ ಕಾಲಘಟ್ಟವಿದು. ಇಲ್ಲಿ ಎಡವಿದರೆ ಮತ್ತೆ ಎದ್ದೇಳಲು ಅವಕಾಶ ಸಿಗದಂತಹ ಸ್ಥಿತಿ ಬರಬಹುದು.

ಅವಶ್ಯಕತೆಗಳ ಬಗ್ಗೆ ವಿಚಾರಿಸಿದರು.

ಈ ಸಂದರ್ಭದಲ್ಲಿ ಮಳೆಗಾಳಿಯಿಂದಾಗಿ ಹಾನಿಗೊಂಡ ಸೀತಾರಾಮ ಬಂಗೇರ, ದಾಮೋದರ ಆಚಾರಿ ಮತ್ತು ಸುಂದರಿ ಶೆಟ್ಟಿ ಅವರ ಮನೆಗಳಿಗೆ ಭೇಟಿ ನೀಡಿದರು.

ಹಕ್ಕು ಪತ್ರ, ಕುಡಿಯುವ ನೀರು, ಹುಡ್ಕೋ ಮನೆಗಳ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ನಿವಾಸಿಗಳು ಸಾಲ್ಮಾನ್ ಅವರನ್ನು ಕೇಳಿಕೊಂಡರು. ಈ ಕುರಿತು ಕಂದಾಯ ಇಲಾಖೆ ಅಲ್ಲದೆ ಸ್ಥಳೀಯ ಮಂ. ಪ. ಮತ್ತು ಜಿ. ಪ. ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಾಲ್ಮಾನ್ ಭರವಸೆ ನೀಡಿದರು. ಮನೆ ಹಾನಿಯಾದವರಿಗೆ ಸರಕಾರದಿಂದ ಪರಿಹಾರ ಧನವನ್ನು ಒದಗಿಸುವುದಾಗಿ ಅವರು ತಿಳಿಸಿದರು.

ಸಾಲ್ಮಾನ್ ಅವರ ಭೇಟಿಯ ಜತೆಗೆ ಮೂದರಂಗಡಿ ಮಂಡಲ ಅಧ್ಯಕ್ಷ ಡಾ| ಬಾಲಕೃಷ್ಣ ರಾವ್, ಸೀತಾರಾಮ ಬಂಗೇರ ಮೊದಲಾದವರಿದ್ದರು.

ಮಂಗಳೂರು, ಜೂ. 24 – ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗೇರು ಅಭಿವೃದ್ಧಿಗಾಗಿ ಕೆನರಾ ಬ್ಯಾಂಕ್ ಶಾಖೆಗಳಿಂದ 1989ರ ಮಾರ್ಚ್ ಅಂತ್ಯಕ್ಕೆ 35 ಲಕ್ಷ ರೂಪಾಯಿ ಆರ್ಥಿಕ ನೆರವು ಒದಗಿಸಲಾಗಿದೆ ಎಂದು ಕೆನರಾ ಬ್ಯಾಂಕಿನ ಮಂಗಳೂರು ವೃತ್ತ ಕಚೇರಿಯ ಡೆಪ್ಯುಟಿ ಜನರಲ್ ಮೆನೇಜರ್ ಯು. ಗಣೇಶ್ ರಾವ್ ತಿಳಿಸಿದ್ದಾರೆ.

ವಿಶ್ವ ಬ್ಯಾಂಕ್ ನೆರವಿನ ಗೇರು ಅಭಿವೃದ್ಧಿ ಯೋಜನೆಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 1300 ಎಕರೆ ಜಮೀನಿನಲ್ಲಿ ಗೇರು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದಾರೆ.

ಕರ್ನಾಟಕ ಕರಾವಳಿಯಲ್ಲಿ ಖಾಲಿ ಇರುವ ನಿರುಪಯುಕ್ತ ಭೂಮಿಯನ್ನು ಗೇರು ಕೃಷಿಗೆ ಬಳಸಿಕೊಳ್ಳಲು ಅವಕಾಶಗಳಿವೆ.

ಕೆನರಾ ಬ್ಯಾಂಕ್ ಗೇರು ಅಭಿವೃದ್ಧಿಗಾಗಿ ವಿಶೇಷ ಯೋಜನೆ ರೂಪಿಸಿದ್ದು, [illegible] ಭೂಮಿಯಲ್ಲಿ ಗೇರು ಕೃಷಿ ಕೈಗೊಳ್ಳುವಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಉದ್ದೇಶಕ್ಕಾಗಿ ದ.ಕ., ಉತ್ತರ ಕನ್ನಡ ಜಿಲ್ಲೆಯ ರೈತರಿಗೆ 21.6 ಲಕ್ಷ ರೂಪಾಯಿ ಸಾಲ ಒದಗಿಸಲಾಗುವುದು ಎಂದಿದ್ದಾರೆ.

ದೇಶದಲ್ಲಿ ಒಂದು ಗೇರು ಮರ ಸರಾಸರಿ 1.7 ಕಿಲೋ ಗೇರು ಬೀಜ ಇಳುವರಿ ಕೊಡುತ್ತದೆ. ಆದರೆ ಉತ್ತಮ ಕಸಿ ಗೇರು ಸಸಿ ಅಳವಡಿಸಿದರೆ ಸುಮಾರು 8–10 ಕಿಲೋ ಬೀಜ ಲಭ್ಯವಾಗುವುದು ಎಂದು ವಿವರಿಸಿದ್ದಾರೆ.

ಕೆನರಾ ಬ್ಯಾಂಕಿನ ಯೋಜನೆಯನ್ವಯ ಒಂದು ಎಕ್ರೆ ಭೂಮಿಯಲ್ಲಿ ಗೇರು ಬೆಳೆಸಲು 4 ವರ್ಷಗಳಲ್ಲಿ 3200 ರೂಪಾಯಿ ವೆಚ್ಚವಾಗಲಿದೆ ಎಂದಿದ್ದಾರೆ.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ

ಭೂ ಸ್ವಾಧೀನ ಕಾಯ್ದೆ ಪ್ರಕರಣ ಕಲಂ 4(1)ರನ್ವಯ

ಅಧಿಸೂಚನೆ

ನಂಬರ: ಭೂಸ್ವಾಧೀನ/ಜಿಎನ್-4/89-90 **ದಿನಾಂಕ: 15ನೇ ಏಪ್ರಿಲ್, 1989**

ಈ ಮುಂದಿನ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕೆ ಆದವರೆ ಹಾಸನ ಟೌನಿನ ದಕ್ಷಿಣ ದಿಕ್ಕಿಗೆ ರಾಷ್ಟ್ರೀಯ ಹೆದ್ದಾರಿ ನಂಬರ 48ಕ್ಕೆ ಬೈಪಾಸ್ ರಸ್ತೆ ನಿರ್ಮಿಸುವ ಕುರಿತು ಬೇಕಾಗಬಹುದೆಂದು ಕರ್ನಾಟಕ ಸರಕಾರದವರಿಗೆ ಕಂಡು ಬಂದಿದೆ.

1961ನೇ ಸಾಲಿನ ಕರ್ನಾಟಕ ಅಧಿನಿಯಮ 17ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನಲ್ಲಿ ಭೂ ಸ್ವಾಧೀನ ಅಧಿನಿಯಮ (1894ನೇ ಸಾಲಿನ) ಭೂ ಸ್ವಾಧೀನ ಅಧಿನಿಯಮ 4(2)ನೇ ಪ್ರಕರಣದಿಂದ ವಿಹಿತವಾದ ಅಧಿಕಾರವನ್ನು ಉಪಯೋಗಿಸಲು ವಿಶೇಷ ಭೂ ಸ್ವಾಧೀನ ಅಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಧಾರವಾಡ ಇವರಿಗೆ ಮತ್ತು ಇವರ ಸಿಬ್ಬಂದಿ ಕೆಲಸದವರಿಗೆ ಈ ಮೂಲಕ ಪ್ರಾಧಿಕಾರ ನೀಡಿರುವರು.

ಸದರೀ ಜಮೀನುಗಳಲ್ಲಿ ಆಸಕ್ತಿಯುಳ್ಳ ಯಾವನೊಬ್ಬ ವ್ಯಕ್ತಿಯು ಈ ಬಗ್ಗೆ ಆಕ್ಷೇಪಣೆಗಳನ್ನು ಮಾಡುವಪಕ್ಷದಲ್ಲಿ ಅಂತಹ ಆಕ್ಷೇಪಣೆಗಳನ್ನು ಈ ಅಧಿಸೂಚನೆಯು ಪ್ರಸಿದ್ಧಿಯಾದ 30 ದಿವಸದೊಳಗಾಗಿ 1961ನೇ ಸಾಲಿನ ಕರ್ನಾಟಕ ಅಧಿನಿಯಮ 17ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣ ಅಧಿನಿಯಮ 3(ಕ) ಕಲಂದ ಮೇರೆಗೆ ಜಿಲ್ಲಾಧಿಕಾರಿಯವರ ಪ್ರಕಾಶ[illegible] ಕಾರ್ಯಗಳನ್ನು ನಿರ್ವಹಿಸಲು ಕರ್ನಾಟಕ ಸರಕಾರವು ನೇಮಕ ಮಾಡಿದ ವಿಶೇಷ ಭೂ ಸ್ವಾಧೀನ ಅಧಿಕಾರಿಗಳು, ರಾಷ್ಟ್ರೀಯ ಹೆ[illegible]ಗಳು, ಧಾರವಾಡ ಇವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು.

ಸದರೀ ಜಮೀನುಗಳ ಅಧಿಕೃತ ಸ್ವಾಧೀನತೆಗೆ ನಿಯೋಜಿಸಿದ ಯಾವೊಬ್ಬ ಮೋಜಣಿದಾರ ಅಥವಾ ಬೇರೆ ವ್ಯಕ್ತಿಗೆ [illegible]ಪಣೆಗಳನ್ನುಂಟು ಮಾಡುವುದಾಗಲೀ, ಅತಿಕ್ರಮಿಸುವುದಾಗಲೀ ಮಾಡಬಾರದೆಂದು ಸದರೀ ಜಮೀನಿನಲ್ಲಿ ಆಸಕ್ತಿಯುಳ್ಳವರಿಗೆಲ್ಲಾ ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರೀ ಜಮೀನಿನ ವಿಲೇವಾರಿಗಾಗಿ ಮಾರಾಟ, ಗುತ್ತಿಗೆ, ಅಡಮಾನ ಹಸ್ತಾಂತರ, ವಿನಿಮಯ ಅಥವಾ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವುದೊಂದು ವೆಚ್ಚ ಯಾ ಅಭಿವೃದ್ಧಿಗಳನ್ನು ಈ ಅಧಿಸೂಚನೆಯು ಪ್ರಕಟವಾದ ನಂತರ ಜಿಲ್ಲಾಧಿಕಾರಿ, ಹಾಸನ ಇವರ ಮಂಜೂರಾತಿಯನ್ನು ಪಡೆಯದೇ ಇದ್ದ ಪಕ್ಷದಲ್ಲಿ ಅಂತಿಮವಾಗಿ ಅಧಿಕೃತ ಸಂಗ್ರಹಣೆ ಸದರೀ ಜಮೀನಿನ ಅಂತಹ ಭಾಗಗಳಿಗೆ ಪರಿಹಾರವನ್ನು ನಿರ್ಧರಿಸುವ ಅಧಿಕಾರಿಯಿಂದ ಸದರೀ ಅಧಿನಿಯಮದ 24 ನೇ ಪ್ರಕರಣ 7ನೇ ಖಂಡದ ಮೇರೆಗೆ ಉಪೇಕ್ಷಿಸಲಾಗುವುದು

[illegible] ಜಮೀನುಗಳ ಒಂದು ನಕ್ಷೆಯನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಪೂನಾ ಬೆಂಗಳೂರು ರಸ್ತೆ, ಲಕ್ಷ್ಮೀ ಟಾಕೀಜ ಎದುರಿಗೆ, ಧಾರವಾಡ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗೆ ಇಡಲಾಗಿದೆ

ಅನುಸೂಚಿ

ಜಿಲ್ಲೆ: ಹಾಸನ ತಾಲೂಕು: ಹಾಸನ ಹೋಬಳಿ: ಕಸಬಾ ಗ್ರಾಮ: ಚಿಕ್ಕಮಂಡನಹಳ್ಳಿ

[illegible]ದಾರ ಹಾಗೂ ಅನುಭವದಾರರ ಹೆಸರು	ಸರ್ವೆ ನಂ	ತರಹ	ಬೇಕಾದ ಜಮೀನಿನ ವಿಸ್ತೀರ್ಣ ಎ--ಗುಂ
1	2	3	[illegible]
[illegible]	16	[illegible]	0-01
ಜಯ ಪದ್ಮಾವತಮ್ಮ ಕೋಂ. ಲಲಿತಕುಮಾರ	17	ತರಿ	0-01
ಜಯ ಪದ್ಮಾವತಮ್ಮ ಕೊಂ. ಲಲಿತಕುಮಾರ	18	ತರಿ	0-01
ಜಯ ಪದ್ಮಾವತಮ್ಮ ಕೊಂ. ಲಲಿತಕುಮಾರ	19	ತರಿ	0-03
ಎನ್. ಲಕ್ಷ್ಮಣ ಗೌಡ ಬಿನ್ ನಂಜುಂಡಯ	20:1	ಖುಷ್ಕಿ	[illegible]

ಮುಂಗಾರು

ಭಾನುವಾರ, ಜೂನ್ 25, 1989

ಬೇಕು ರಾಜಕೀಯ ಮುತ್ಸದ್ದಿತನ

ಶ್ರೀಲಂಕಾದ ಸ್ಥಿತಿ ದಿನದಿಂದ ದಿನಕ್ಕೆ ಹದಗೆಟ್ಟು ಸ್ಫೋಟಕ ಹಂತಕ್ಕೆ ತಲುಪಿದೆ.

ಒಂದೆಡೆ 50ಸಾವಿರಕ್ಕೂ ಹೆಚ್ಚು ಮಂದಿ ಸಾರಿಗೆ ಸಿಬ್ಬಂದಿಗಳು ಮುಷ್ಕರ ನಡೆಸುತ್ತಿದ್ದಾರೆ. ಮುಷ್ಕರ ನಿರತರು ಕೆಲಸಕ್ಕೆ ಹಾಜರಾಗದಿದ್ದಲ್ಲಿ ಕೆಲಸದಿಂದ ವಜಾ ಮಾಡಲಾಗುವುದೆಂದು ಸರಕಾರ ಬೆದರಿಕೆ ಹಾಕಿದ್ದರೂ ಕಾರ್ಮಿಕರು ಲೆಕ್ಕಿಸಿಲ್ಲ. ಜತೆಗೆ ಈಗ ದೂರ ಸಂಪರ್ಕ ಹಾಗೂ ಬ್ಯಾಂಕುಗಳ ನೌಕರರೂ ಈ ಮುಷ್ಕರಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಇನ್ನೊಂದೆಡೆ ಸಿಂಹಳೀಯ ಉಗ್ರಗಾಮಿ ಸಂಘಟನೆ ಜೆವಿಪಿಯ ದಾಳಿ ಜೋರಾಗುತ್ತಿದೆ. ಮತ್ತೊಂದೆಡೆ ಭಾರತೀಯ ಶಾಂತಿ ಪಡೆ ಹಾಗೂ ತಮಿಳು ಉಗ್ರಗಾಮಿ ಸಂಘಟನೆ ಎಲ್ ಟಿ ಟಿ ಇ ಮಧ್ಯೆ ಕದನ ನಿರಂತರವಾಗಿ ನಡೆದಿದೆ. ಈ ಎಲ್ಲ ಸ್ಥಿತಿಯನ್ನು ನಿಭಾಯಿಸಲು ಲಂಕಾ ಪ್ರಧಾನಿ ಪ್ರೇಮದಾಸ ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿಯನ್ನೂ ಹೇರಿಯಾಗಿದೆ.

ಭಾರತೀಯ ಶಾಂತಿಪಡೆ ಶ್ರೀಲಂಕಾದಿಂದ ವಾಪಸಾಗುವ ಪ್ರಶ್ನೆ ಈಗ ಮತ್ತೆ ತೊಡಕಿಗೆ ಸಿಲುಕಿದೆ. ಶ್ರೀಲಂಕಾದಲ್ಲಿ ನೆಲೆಸಿರುವ ತಮಿಳರ ಹಿತಾಸಕ್ತಿಗಳನ್ನು ರಕ್ಷಿಸುವ ಕೆಲಸಕ್ಕಾಗಿ ಶ್ರೀಲಂಕಾದ ಹಿಂದಿನ ಸರಕಾರದಿಂದ 'ಬಲವಂತದ ಆಹ್ವಾನ' ಪಡೆದು ಅಲ್ಲಿಗೆ ತೆರಳಿದ್ದ ಭಾರತೀಯ ಶಾಂತಿ ಪಡೆ ಹಿಂತೆರಳಬೇಕೆಂದು ಶ್ರೀಲಂಕಾ ಪ್ರಧಾನಿ ಪ್ರೇಮದಾಸ ಪದೇ ಪದೇ ಒತ್ತಾಯಿಸಿದ್ದಾರೆ. ಶಾಂತಿ ಪಡೆ ವಾಪಸಿಗೆ ನಿರ್ದಿಷ್ಟ ದಿನಾಂಕ ಘೋಷಿಸಿದರ ಗಡುವನ್ನೂ ಅವರು ವಿಧಿಸಿದ್ದಾರೆ. ಜುಲೈ 29 ರೊಳಗೆ ಶಾಂತಿ ಪಡೆ ಶ್ರೀಲಂಕಾದಿಂದ ತೆರಳದಿದ್ದಲ್ಲಿ ಅವುಗಳನ್ನು ಬ್ಯಾರಕ್ಕಿನಲ್ಲೇ ತಡೆಯುವುದಾಗಿಯೂ ಈಗ ಪ್ರೇಮದಾಸ ಹೇಳಿಕೆ ಕೊಟ್ಟಿದ್ದಾರೆ.

ಪ್ರೇಮದಾಸರ ಈ ಹೇಳಿಕೆ ಅವರ ಅಪಕ್ವ [illegible]ದ್ಧಿತನವನ್ನಷ್ಟೆ ಪ್ರತಿಬಿಂಬಿಸುತ್ತದೆ ಎನ್ನದೆ [illegible]ಯಿಲ್ಲ. ಈ ಮಾತನ್ನು ಹೇಳುವಾಗ ಶ್ರೀಲಂಕಾ ಒಂದು ಸ್ವತಂತ್ರ ರಾಷ್ಟ್ರ ಹಾಗೂ ಪ್ರೇಮದಾಸ ಆ ರಾಷ್ಟ್ರದ ಪ್ರಧಾನಿ ಎಂಬ ಸತ್ಯವನ್ನು ಒಪ್ಪಿಕೊಂಡೇ ಹೇಳುತ್ತಿದ್ದೇವೆ. ಎರಡು ದಿನಗಳ ಹಿಂದೆ ಭಾರತದ ಶಾಂತಿ ಪಡೆ ವಾಪಸಾಗದಿರುವ ಬಗ್ಗೆ ವಿಶ್ವಸಂಸ್ಥೆಗೆ ದೂರು ನೀಡುವುದಾಗಿ ಹೇಳಿದ ಪ್ರೇಮದಾಸ ಅವರು ಈಗ ಶಾಂತಿಸೇನೆ ವಿರುದ್ಧ ಪ್ರತಿರೋಧದ ಮಾತನ್ನಾಡುತ್ತಿರುವುದು ಅವರ ನಿರ್ಧಾರಗಳ ಅಸ್ಪಷ್ಟತೆಯನ್ನು ಸ್ಪಷ್ಟ ತೋರುತ್ತದೆ.

ಭಾರತೀಯ ಉಪಖಂಡದಲ್ಲಿ ಶಕ್ತರಾಷ್ಟ್ರವೆನಿಸಿರುವ ಭಾರತದ ಜತೆ ಸೌಹಾರ್ದ ಸಂಬಂಧ ಸ್ಥಾಪಿಸಿಕೊಳ್ಳಬೇಕಾದ ಶ್ರೀಲಂಕಾದಂತಹ ಪುಟ್ಟ ದ್ವೀಪ ರಾಷ್ಟ್ರದ ಅನಿವಾರ್ಯತೆಯನ್ನು ಪ್ರೇಮದಾಸ ಮೊದಲು ಒಪ್ಪಿಕೊಳ್ಳಬೇಕಿದೆ. ಆರಂಭದಲ್ಲಿ ಎಲ್ ಟಿ ಟಿ ಇ ಯನ್ನು ಎದುರಿಸಲು ಭಾರತದ ನೆರವು ಯಾಚಿಸಿದ ಶ್ರೀಲಂಕಾ ಈಗ ಎಲ್ ಟಿ ಟಿ ಇ ಯನ್ನು ನೇರ ವಿಶ್ವಾಸಕ್ಕೆ ತೆಗೆದುಕೊಂಡಿರುವುದು ಭಾರತಕ್ಕೂ ಇರಿಸು ಮುರಿಸುಂಟು ಮಾಡಿದೆ. ಎಲ್ ಟಿ ಟಿ ಇ ಯನ್ನು ಸಂಧಾನಕ್ಕೆ ಮಣಿಸುವ 'ಹಿರಿಯಣ್ಣನ ಪಾತ್ರ' ವಹಿಸಿ ಶ್ರೀಲಂಕಾದ ದಟ್ಟಕಾಡುಗಳಿಗೆ ಶಾಂತಿ ಪಡೆ ಕಳುಹಿಸಿದ್ದ ಭಾರತ ಈಗ ಏಕಾಏಕಿ ಎಲ್ ಟಿ ಟಿ ಇ ಹಾಗೂ ಶ್ರೀಲಂಕಾ ಸರಕಾರ ಮಿತ್ರರಾದಂತಹ ಸ್ಥಿತಿಯನ್ನು ಎದುರಿಸಲು ಸಿದ್ಧವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ. ಈ ಹಿನ್ನೆಲೆಯಲ್ಲಿಯೇ ರಾಜೀವ್ ಗಾಂಧಿಯವರು ಕೂಡಾ ಶ್ರೀಲಂಕಾ ಸರಕಾರ ವಿಶ್ವಸಂಸ್ಥೆಗೆ ದೂರು ನೀಡಿದರೆ ಆ ಬಗ್ಗೆ ಸೂಕ್ತ ಮಾಹಿತಿ ಸಿಕ್ಕಿದ ಮೇಲೆ ಪ್ರತಿಕ್ರಿಯಿಸಬಹುದು ಎಂಬ ಗಡಸು ಧೋರಣೆ ತಾಳಿದ್ದಾರೆ.

ಪ್ರೇಮದಾಸ ಅವರು ಶ್ರೀಲಂಕಾವನ್ನು ಒಂದೇ ರಾಷ್ಟ್ರವಾಹಿನಿಯ ಹಿನ್ನೆಲೆಯಲ್ಲಿ ಒಂದುಗೂಡಿಸುವ ನಿಟ್ಟಿನಲ್ಲಿ ಬಹಳಷ್ಟು ಶ್ರಮಪಡಬೇಕಾದ ಶ್ರೀಲಂಕಾದಲ್ಲಿ ಇವತ್ತು ಇದೆ. ಈ ಹಂತದಲ್ಲಿ ಸಿಟ್ಟಿನ ಅಥವಾ ಉದ್ವೇಗದ ಯಾವುದೇ ಹೇಳಿಕೆಗಳು ಫಲಕಾರಿಯಾಗಲಾರವು. ಒಂದೆಡೆ ಎಲ್ ಟಿ ಟಿ ಇ, ಇನ್ನೊಂದೆಡೆ ಜೆವಿಪಿ ಇವೆರಡನ್ನೂ ಮಾತುಕತೆಗೆ ಎಳೆಯಲಾಗದ ಅಸಹಾಯಕತೆ ಇರುವಾಗಲೇ ಭಾರತದ ಜತೆ ಕೂಡಾ ಸಂಘರ್ಷಕ್ಕಿಳಿದು ಸಮಸ್ಯೆಯನ್ನು ಇನ್ನಷ್ಟು ಗೋಜಲಾಗಿಸುವುದು ಉತ್ತಮ ಮುತ್ಸದ್ದಿಯೊಬ್ಬನ ಲಕ್ಷಣವಲ್ಲ. ಅದರ ಬದಲಾಗಿ ಭಾರತವನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಭಾರತದ ಶಾಂತಿ ಪಡೆಯ ನೆರವನ್ನು ಬಳಸುವ ಕೆಲಸಕ್ಕೆ ಅವರು ಕೈಹಾಕಬಹುದಿತ್ತು.

ಹಿಂಸಾಕೃತ್ಯಗಳು ದಿನನಿತ್ಯದ ಆಗುಹೋಗುಗಳಾಗಿರುವ ಶ್ರೀಲಂಕಾದಲ್ಲಿ ಜನಜೀವನ ಎಂದಿನ ಸ್ಥಿತಿಗೆ ಮರಳಿ ಸೌಹಾರ್ದತೆ ನೆಲೆಸಬೇಕಾದಲ್ಲಿ ಈಗ ಆವಶ್ಯಕವಾಗಿರುವುದು ಇನ್ನಷ್ಟು ಶಸ್ತ್ರಾಸ್ತ್ರಗಳಲ್ಲ ಎಂಬುದನ್ನು ಭಾರತ ಹಾಗೂ ಶ್ರೀಲಂಕಾ ಸರಕಾರ ಎರಡೂ ಮನಗಾಣಬೇಕಿದೆ. ತಮಿಳರಿಗೆ ಪೂರ್ಣ ರೂಪದ ಸ್ವಾಯತ್ತೆ ನೀಡುವ ಕೆಲಸವನ್ನು ಚುನಾವಣೆ ಮೂಲಕ ನಿರ್ವಹಿಸಿದ ಪ್ರೇಮದಾಸರಿಗೆ ಭಾರತದ ಶಾಂತಿಸೇನೆಯನ್ನು ಹರ್ಷದೊಂದಿಗೆ ವಾಪಸು ಕಳುಹಿಸುವುದು ಹಾಗೂ ಶ್ರೀಲಂಕಾಗೆ ಮೊದಲು ಕಾಲಿಡುವಾಗ ಪಡೆದ ಸಂಭ್ರಮದ ಸ್ವಾಗತವನ್ನೇ ಮರಳಿ ಬರುವಾಗಲೂ ಭಾರತದ ಶಾಂತಿಪಡೆ ಪಡೆಯುವಂತಾಗಲು ಪ್ರೇಮದಾಸ ಮತ್ತು ರಾಜೀವ್ ಹೆಚ್ಚು ಶ್ರಮಪಡಬೇಕಾಗಿಲ್ಲ. ಈಗ ಬೇಕಾಗಿರುವುದು ವೃಥಾ ಪ್ರತಿಷ್ಠೆಯನ್ನು ತೊರೆಯುವ ಮನೋಭಾವ.

ರಾಜಕೀಯ ಒಳಸೆಳೆತಗಳ ಪರಿಪಕ್ವ ಅನುಭವವಿದ್ದೆಡೆ ಅನಗತ್ಯ ಸಂಘರ್ಷಗಳಿಗೆ ಎಡೆ ಇರುವುದಿಲ್ಲ. ಪ್ರೇಮದಾಸ ಅವರು ಸಾಕಷ್ಟು ತಾಳ್ಮೆ ಹಾಗೂ ವ್ಯವಧಾನದಿಂದ ವ್ಯವಹರಿಸಬೇಕಾದ ಕಾಲಘಟ್ಟವಿದು. ಇಲ್ಲಿ ಎಡವಿದರೆ ಮತ್ತೆ ಎದ್ದೇಳಲು ಅವಕಾಶ ಸಿಗದಂತಹ ಸ್ಥಿತಿ ಬರಬಹುದು.

ಈ ಸಂದರ್ಭದಲ್ಲಿ ಮಳೆಗಾಳಿಯಿಂದಾಗಿ ಹಾನಿಗೊಂಡ ಸೀತಾರಾಮ ಬಂಗೇರ, ದಾಮೋದರ ಆಚಾರಿ ಮತ್ತು ಸುಂದರಿ ಶೆಟ್ಟಿ ಅವರ ಮನೆಗಳಿಗೆ ಭೇಟಿ ನೀಡಿದರು.

ಹಕ್ಕು ಪತ್ರ, ಕುಡಿಯುವ ನೀರು, ಹುಡ್ಕೋ ಮನೆಗಳ ಸೌಲಭ್ಯವನ್ನು ಒದಗಿಸಿ ಕೊಡಬೇಕೆಂದು ನಿವಾಸಿಗಳು ಸಾಲ್ಯಾನ್ ಅವರನ್ನು ಕೇಳಿಕೊಂಡರು. ಈ ಕುರಿತು ಕಂದಾಯ ಇಲಾಖೆ ಅಲ್ಲದೆ ಸ್ಥಳೀಯ ಮಂ. ಪ. ಮತ್ತು ಜಿ. ಪ. ಸಂಪರ್ಕಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಾಲ್ಯಾನ್ ಭರವಸೆ ನೀಡಿದರು. ಮನೆ ಹಾನಿಯಾದವರಿಗೆ ಸರಕಾರದಿಂದ ಪರಿಹಾರ ಧನವನ್ನು ಒದಗಿಸುವುದಾಗಿ ಅವರು ತಿಳಿಸಿದರು.

ಸಾಲ್ಯಾನ್ ಅವರ ಭೇಟಿಯ ಜತೆಗೆ ಮುದರಂಗಡಿ ಮಂಡಲ ಅಧ್ಯಕ್ಷ ಡಾ। ಬಾಲಕೃಷ್ಣ ರಾವ್, ಸೀತಾರಾಮ ಬಂಗೇರ ಮೊದಲಾದವರಿದ್ದರು.

ಕನ್ನಡ ಜಿಲ್ಲೆಯಲ್ಲಿ ಗೇರು ಅಭಿವೃದ್ಧಿಗಾಗಿ ಕೆನರಾ ಬ್ಯಾಂಕ್ ಶಾಖೆಗಳಿಂದ 1989ರ ಮಾರ್ಚ್ ಅಂತ್ಯಕ್ಕೆ 35 ಲಕ್ಷ ರೂಪಾಯಿ ಆರ್ಥಿಕ ನೆರವು ಒದಗಿಸಲಾಗಿದೆ ಎಂದು ಕೆನರಾ ಬ್ಯಾಂಕಿನ ಮಂಗಳೂರು ವೃತ್ತ ಕಚೇರಿಯ ಡೆಪ್ಯುಟಿ ಜನರಲ್ ಮೆನೇಜರ್ ಯು. ಗಣೇಶ್ ರಾವ್ ತಿಳಿಸಿದ್ದಾರೆ.

ವಿಶ್ವ ಬ್ಯಾಂಕ್ ನೆರವಿನ ಗೇರು ಅಭಿವೃದ್ಧಿ ಯೋಜನೆಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 1300 ಎಕರೆ ಜಮೀನಿನಲ್ಲಿ ಗೇರು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದ್ದಾರೆ.

ಕರ್ನಾಟಕ ಕರಾವಳಿಯಲ್ಲಿ ಖಾಲಿ ಇರುವ ನಿರುಪಯುಕ್ತ ಭೂಮಿಯನ್ನು ಗೇರು ಕೃಷಿಗೆ ಬಳಸಿಕೊಳ್ಳಲು ಅವಕಾಶಗಳಿವೆ.

ಕೆನರಾ ಬ್ಯಾಂಕ್ ಗೇರು ಅಭಿವೃದ್ಧಿಗಾಗಿ ವಿಶೇಷ ಯೋಜನೆ ರೂಪಿಸಿದ್ದು, ಭೂಮಿಯಲ್ಲಿ ಗೇರು ಕೃಷಿ ಕೈಗೊಳ್ಳುವಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಈ ಉದ್ದೇಶಕ್ಕಾಗಿ ದ.ಕ., ಉತ್ತರ ಕನ್ನಡ ಜಿಲ್ಲೆಯ ರೈತರಿಗೆ 21.6 ಲಕ್ಷ ರೂಪಾಯಿ ಸಾಲ ಒದಗಿಸಲಾಗುವುದು ಎಂದಿದ್ದಾರೆ.

ದೇಶದಲ್ಲಿ ಒಂದು ಗೇರು ಮರ ಸರಾಸರಿ 1.7 ಕಿಲೋ ಗೇರು ಬೀಜ ಇಳುವರಿ ಕೊಡುತ್ತದೆ. ಆದರೆ ಉತ್ತಮ ಕಸಿ ಗೇರು ಸಸಿ ಅಳವಡಿಸಿದರೆ ಸುಮಾರು 8–10 ಕಿಲೋ ಬೀಜ ಲಭ್ಯವಾಗುವುದು ಎಂದು ವಿವರಿಸಿದ್ದಾರೆ.

ಕೆನರಾ ಬ್ಯಾಂಕಿನ ಯೋಜನೆಯನ್ವಯ ಒಂದು ಎಕ್ರೆ ಭೂಮಿಯಲ್ಲಿ ಗೇರು ಬೆಳೆಸಲು 4 ವರ್ಷಗಳಲ್ಲಿ 3200 ರೂಪಾಯಿ ವೆಚ್ಚವಾಗಲಿದೆ ಎಂದಿದ್ದಾರೆ.

ಜಿಲ್ಲಾಧಿಕಾರಿಗಳವರ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ

ಭೂ ಸ್ವಾಧೀನ ಕಾಯ್ದೆ ಪ್ರಕರಣ ಕಲಂ 4(1)ರನ್ವಯ

ಅಧಿಸೂಚನೆ

ನಂಬರ: ಭೂಸ್ವಾಧೀನ/ಜಿಎನ್-4/89-90 **ದಿನಾಂಕ:15ನೇ ಏಪ್ರಿಲ್,1989**

ಈ ಮುಂದಿನ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಹಾಸನ ಟೌನಿನ ದಕ್ಷಿಣ ದಿಕ್ಕಿಗೆ ರಾಷ್ಟ್ರೀಯ ಹೆದ್ದಾರಿ ನಂಬರ 48ಕ್ಕೆ ಬೈಪಾಸ್ ರಸ್ತೆ ನಿರ್ಮಿಸುವ ಕುರಿತು ಬೇಕಾಗಬಹುದೆಂದು ಕರ್ನಾಟಕ ಸರಕಾರದವರಿಗೆ ಕಂಡು ಬಂದಿದೆ.

1961ನೇ ಸಾಲಿನ ಕರ್ನಾಟಕ ಅಧಿನಿಯಮ 17ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನಲ್ಲಿ ಭೂ ಸ್ವಾಧೀನ ಅಧಿನಿಯಮ (1894ನೇ ಸಾಲಿನ) ಭೂ ಸ್ವಾಧೀನ ಅಧಿನಿಯಮ 4(2)ನೇ ಪ್ರಕರಣದಿಂದ ವಿಹಿತವಾದ ಅಧಿಕಾರವನ್ನು ಉಪಯೋಗಿಸಲು ವಿಶೇಷ ಭೂ ಸ್ವಾಧೀನ ಅಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಧಾರವಾಡ ಇವರಿಗೆ ಮತ್ತು ಇವರ ಸಿಬ್ಬಂದಿ ಕೆಲಸದವರಿಗೆ ಈ ಮೂಲಕ ಪ್ರಾಧಿಕಾರ ನೀಡಿರುವರು.

ಸದರೀ ಜಮೀನುಗಳಲ್ಲಿ ಆಸಕ್ತಿಯುಳ್ಳ ಯಾವನೊಬ್ಬ ವ್ಯಕ್ತಿಯು ಈ ಬಗ್ಗೆ ಆಕ್ಷೇಪಣೆಗಳನ್ನು ಮಾಡುವವರಿದ್ದರೆ ಅಂತಹ ಆಕ್ಷೇಪಣೆಗಳನ್ನು ಈ ಅಧಿಸೂಚನೆಯು ಪ್ರಸಿದ್ಧಿಯಾದ 30 ದಿವಸದೊಳಗಾಗಿ 1961ನೇ ಸಾಲಿನ ಕರ್ನಾಟಕ ಅಧಿನಿಯಮ 17ರಲ್ಲಿ ತಿದ್ದುಪಡಿಯಾದ 1894ನೇ ಸಾಲಿನ ಭೂ ಸಂಗ್ರಹಣ ಅಧಿನಿಯಮ 3(ಕ) ಕಲಂದ ಮೇರೆಗೆ ಜಿಲ್ಲಾಧಿಕಾರಿಯವರ ಪ್ರಕಾಶನ ಕಾರ್ಯಗಳನ್ನು ನಿರ್ವಹಿಸಲು ಕರ್ನಾಟಕ ಸರಕಾರವು ನೇಮಕ ಮಾಡಿದ ವಿಶೇಷ ಭೂ ಸ್ವಾಧೀನ ಅಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಧಾರವಾಡ ಇವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು.

ಸದರೀ ಜಮೀನುಗಳ ಅಧಿಕೃತ ಸ್ವಾಧೀನತೆಗೆ ನಿಯೋಜಿಸಿದ ಯಾವೊಬ್ಬ ಯೋಜನದಾರ ಅಥವಾ ಬೇರೆ ವ್ಯಕ್ತಿಗೆ ಅಡಚಣೆಗಳನ್ನುಂಟು ಮಾಡುವುದಾಗಲೀ, ಅತಿಕ್ರಮಿಸುವುದಾಗಲೀ ಮಾಡಬಾರದೆಂದು ಸದರೀ ಜಮೀನಿನಲ್ಲಿ ಆಸಕ್ತಿಯುಳ್ಳವರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರೀ ಜಮೀನಿನ ವಿಲೇವಾರಿಗಾಗಿ ಮಾರಾಟ, ಗುತ್ತಿಗೆ, ಅಡಮಾನ ಹಸ್ತಾಂತರ, [illegible] ಅಥವಾ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವುದೊಂದು ವೆಚ್ಚ ಯಾ ಅಭಿವೃದ್ಧಿಗಳನ್ನು ಈ ಅಧಿಸೂಚನೆ [illegible] ಪ್ರಕಟವಾದ ನಂತರ ಜಿಲ್ಲಾಧಿಕಾರಿ, ಹಾಸನ ಇವರ ಮಂಜೂರಾತಿಯನ್ನು ಪಡೆಯದೇ ಇದ್ದ ಪಕ್ಷದಲ್ಲಿ ಅಂತಿಮವಾಗಿ ಅಧಿ[illegible] ಸಂಗ್ರಹಣೆ ಸದರೀ ಜಮೀನಿನ ಅಂತಹ ಭಾಗಗಳಿಗೆ ಪರಿಹಾರವನ್ನು ನಿರ್ಧರಿಸುವ ಅಧಿಕಾರಿಯಿಂದ ಸದರೀ ಅಧಿನಿಯಮದ 24 ನೇ ಪ್ರಕರಣ 7ನೇ ಖಂಡದ ಮೇರೆಗೆ ಉಪೇಕ್ಷಿಸಲಾಗುವುದು

[illegible] ಜಮೀನುಗಳ ಒಂದು ನಕ್ಷೆಯನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಪೂನಾ ಬೆಂಗಳೂರು ರಸ್ತೆ, ಲಕ್ಷ್ಮೀ ಟಾಕೀಸ್ ಎದುರಿಗೆ, ಧಾರವಾಡ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗೆ ಇಡಲಾಗಿದೆ

ಅನುಸೂಚಿ

ಜಿಲ್ಲೆ: ಹಾಸನ ತಾಲೂಕು: ಹಾಸನ ಹೋಬಳಿ: ಕಸಬಾ ಗ್ರಾಮ: ಚಿಕ್ಕಮಂಡನಹಳ್ಳಿ

[illegible]ದಾರ ಹಾಗೂ ಅನುಭವದಾರರ ಹೆಸರು	ಸರ್ವೆ ನಂ	ತರಹ	ಬೇಕಾದ ಜಮೀನಿನ ವಿಸ್ತೀರ್ಣ ಎ--ಗುಂ
1	2	3	4
[illegible]	[illegible]	[illegible]	0-01
ಜಯ ಪದ್ಮಾವತಮ್ಮ ಕೋಂ. ಲಲಿತಕುಮಾರ	17	ತರಿ	0-01
ಜಯ ಪದ್ಮಾವತಮ್ಮ ಕೊಂ. ಲಲಿತಕುಮಾರ	18	ತರಿ	0-01
ಜಯ ಪದ್ಮಾವತಮ್ಮ ಕೊಂ. ಲಲಿತಕುಮಾರ	19	ತರಿ	0-03
	20:1	ಖುಷ್ಕಿ	

ಮುಂಗಾರು
ಶನಿವಾರ, ಜೂನ್ 3, 1989

ಶಾಂತಿಪಡೆ ವಾಪಸಾಗಲಿ

ಜುಲೈ ಅಂತ್ಯದ ಒಳಗೆ ಶ್ರೀಲಂಕಾದಲ್ಲಿರುವ ಭಾರತೀಯ ಶಾಂತಿಪಾಲನಾ ಪಡೆಯ ಕಟ್ಟಕಡೆಯ ಸೈನಿಕನನ್ನೂ ಹಿಂದೆ ಕಳುಹಿಸಲಾಗುವುದು ಎಂದು ಶ್ರೀಲಂಕಾದ ರಾಷ್ಟ್ರಾಧ್ಯಕ್ಷ ರಣಸಿಂಘೆ ಪ್ರೇಮದಾಸ ಅವರು ಘೋಷಿಸಿದ್ದಾರೆಂದು ಸುದ್ದಿ ಬಂದಿದೆ. ಇದು ಶ್ರೀಲಂಕಾ ಸರಕಾರದ ಸಮರ್ಪಕವಾದ ನಿಲುವು. ಸರಿ. ಆದರೆ ಭಾರತ ಕೂಡಾ ಈ ದಿಕ್ಕಿನಲ್ಲಿ ಸರಿಯಾದ ಹೆಜ್ಜೆಗಳನ್ನಿಡಬೇಕಾದ ಅಗತ್ಯ ಬಹಳಷ್ಟಿದೆ. ಎರಡು ವರುಷಗಳ ಹಿಂದೆ ಶ್ರೀಲಂಕಾದಲ್ಲಿ ಆಂತರಿಕ ಕಲಹ ತೀವ್ರವಾಗಿದ್ದ ಸಂದರ್ಭದಲ್ಲಿ ಭಾರತ ಸರಕಾರ ಮಾನವೀಯ ನೆಲೆಯಲ್ಲಿ ಮಧ್ಯ ಪ್ರವೇಶಿಸಿ ಪರಿಸ್ಥಿತಿಯನ್ನು ತಹಬಂದಿಗೆ ತರುವಲ್ಲಿ ಪ್ರಯತ್ನಗಳನ್ನು ನಡೆಸಿತು. ಆದರೆ ಆಗಿನಿಂದ ಈಗಿನವರೆಗೆ ಆ ದ್ವೀಪದಲ್ಲಿ ಸಾಕಷ್ಟು ರಾಜಕೀಯ ಏಳುಬೀಳುಗಳಾಗಿವೆ. ಪ್ರಸ್ತುತ ಪ್ರಮುಖ ಶ್ರೀಲಂಕಾ ತಮಿಳು ಉಗ್ರಗಾಮಿ ಸಂಘಟನೆಯಾಗಿರುವ ಎಲ್.ಟಿ.ಟಿ.ಇ. [illegible] ಶ್ರೀಲಂಕಾ ಸರಕಾರದೊಡನೆ ಶಾಂತಿಯುತ ಮಾತುಕತೆಗೆ [illegible]ಗಿದೆ. ಈಗ ಅಲ್ಲಿ [illegible] ಶಾಂತಿಪಡೆ ಮತ್ತು ಎಲ್.ಟಿ.ಟಿ.ಇ. [illegible]. ಇದು ಭಾರತ ಸರಕಾರಕ್ಕೆ ಅನಗತ್ಯ ವಿಚಾರವಾಗಿದೆ. ಆದ್ದರಿಂದ ಇನ್ನು ಭಾರತದ ಶಾಂತಿಪಡೆ ಅಲ್ಲಿರುವುದು ಸರಿಯಲ್ಲ.

ಭಾರತೀಯ ಶಾಂತಿಪಡೆ ಹಿಂತಿರುಗಲು ಇದು ಸಕಾಲವೆಂದು ಪ್ರೇಮದಾಸ ಅವರೆ ಸ್ವತಃ ಹೇಳಿದ್ದಾರೆ. ಈ ನಂತರವೂ ಭಾರತದ ಸೇನೆ ಶಾಂತಿಪಾಲನೆಯ ನೆಪದಲ್ಲಿ ಅಲ್ಲಿರುವುದು ಸಮಂಜಸವಲ್ಲ. ಆ ರೀತಿ ಇರುವುದೇ ಆದರೆ ಅದು ತನ್ನ ಸಾಮ್ರಾಜ್ಯಶಾಹಿ ಧೋರಣೆಯನ್ನು ಪ್ರದರ್ಶಿಸಿದಂತಾಗುತ್ತದೆ.

ಎರಡು ವರುಷಗಳ ಹಿಂದೆ ಶ್ರೀಲಂಕಾದಲ್ಲಿ ಭುಗಿಲೆದ್ದಿದ್ದ ಜನಾಂಗೀಯ ಘರ್ಷಣೆಯನ್ನು ತಹಬಂದಿಗೆ ತರುವ ನಿಟ್ಟಿನಲ್ಲಿ 1987ರ ಜುಲೈ 29ರಂದು ಭಾರತದ ಪ್ರಧಾನಿ ರಾಜೀವ್‌ಗಾಂಧಿ ಮತ್ತು ಶ್ರೀಲಂಕಾದ ಆಗಿನ ಅಧ್ಯಕ್ಷ ಜಯವರ್ಧನೆಯವರು ಶಾಂತಿ ಒಪ್ಪಂದ ಒಂದಕ್ಕೆ ಸಹಿಹಾಕಿದರು. ಆದರೆ ಈ ಒಪ್ಪಂದದ ಅನುಷ್ಠಾನಗೊಳ್ಳುವಲ್ಲಿಯೇ ವಿಫಲಗೊಂಡು ಭಾರತದ ಶಾಂತಿಪಡೆ ನೇರವಾಗಿ ಎಲ್. ಟಿ. ಟಿ. ಇ ಯೊಡನೆ ಸಮರಕ್ಕೆ ಇಳಿಯಬೇಕಾಯಿತು. ಈ ಸಮರ ಕಳೆದ ಎರಡು ವರುಷಗಳಿಂದ ನಿರಂತರವಾಗಿ ನಡೆಯುತ್ತಾ ಬಂದಿದೆ. ಇದರಿಂದಾಗಿ ಭಾರತದ ಸೇನೆ ಸಾಕಷ್ಟು ಸಾವು ನೋವುಗಳನ್ನು ಅನುಭವಿಸಬೇಕಾಯಿತು.

ಶ್ರೀಲಂಕಾದ ಉತ್ತರ ಮತ್ತು ಪೂರ್ವ ಪ್ರಾಂತ್ಯಗಳಲ್ಲಿ ನೆಲೆಗೊಳಿಸಲಾಗಿರುವ ಶಾಂತಿಪಡೆಗಳನ್ನು ಹಿಂದಕ್ಕೆ ಕರೆಸಿಕೊಂಡು ಶ್ರೀಲಂಕಾ ಸರಕಾರಕ್ಕೆ ಉಪಕಾರ ಮಾಡಬೇಕೆಂದು ತಾವು [illegible] ಭಾರತದ ಪ್ರಧಾನಿಯವರನ್ನು ಮನವಿ ಮಾಡಿಕೊಳ್ಳುವುದಾಗಿ ಶ್ರೀಲಂಕಾದ ಅಧ್ಯಕ್ಷರು ತಿಳಿಸಿದ್ದಾರೆ. ಇನ್ನು ಭಾರತ ಸರಕಾರ ತಡಮಾಡುವುದು ಬೇಡ. ತಕ್ಷಣ ಶಾಂತಿಪಡೆಯನ್ನು ವಾಪಾಸು ಕರೆಸಿಕೊಳ್ಳಲಿ.

ಭಾರತದ ಶಾಂತಿಪಡೆ ಈಗಾಗಲೆ ಶ್ರೀಲಂಕಾ ತಮಿಳರ ಪ್ರಮುಖ ಸಂಘಟನೆಯಾಗಿರುವ ಎಲ್. ಟಿ. ಟಿ. ಇ ಯೊಡನೆ ನೇರವಾದ ಸಮರವನ್ನು ಸಾರಿಯಾಗಿದೆ. ಈ ನಿಟ್ಟಿನಲ್ಲಿ ಅನಗತ್ಯವಾಗಿ ಭಾರತ ಸೇನೆ ಅಪಾರ ಸಾವು ನೋವುಗಳನ್ನು ಅನುಭವಿಸಿದೆ. ಇದು ಸರಿಯಾದ ರಾಜಕೀಯ ನಿಲುವು ಅಲ್ಲ [illegible].

[illegible] ಎಲ್. ಟಿ. ಟಿ. ಇ [illegible] ಮಾತುಕತೆ ನಡೆಸುತ್ತಿವೆ. ಈ ಮಾತುಕತೆಗೆ [illegible] ಮುಂದುವರಿಸುವುದಲ್ಲ. ಇದು ಭಾರತಕ್ಕೆ [illegible] ತರುವ ವಿಚಾರವಲ್ಲ. ಅಫಘಾನಿಸ್ತಾನದಲ್ಲಿ ಅನ್ಯರ ಹಸ್ತಕ್ಷೇಪದ ವಿರುದ್ಧ ಮಾತನಾಡುತ್ತಿರುವ ಭಾರತ ಸರಕಾರ ಅದನ್ನು ಮೀರುವ ನೈತಿಕತೆಯನ್ನು ಉಳಿಸಿಕೊಳ್ಳಬೇಕಾದರೆ ಶ್ರೀಲಂಕಾದಲ್ಲಿರುವ ತನ್ನ ಸೇನೆಯನ್ನು ವಾಪಾಸು ಕರೆಸಿಕೊಳ್ಳಬೇಕಿದೆ.

ಶ್ರೀಲಂಕಾ ಸರಕಾರದೊಡನೆ ಎಲ್. ಟಿ. ಟಿ. ಇ. [illegible] ಭಾರತ ಸರಕಾರ [illegible] ಅಗತ್ಯ [illegible].

ರ ವೇಳೆ ನಾಲ್ಕು ಮಂದಿ ದುಷ್ಕರ್ಮಿ
ು ವಿದ್ಯಾರ್ಥಿಗಳಿಂದ ಹಲ್ಲೆ ನಡೆಸಿದ
ಟನೆ ವರದಿಯಾಗಿದೆ.

ಕಳೆದ ಏಪ್ರಿಲ್ 6ರಂದು ಆರ್.ಸಿ.
ಲೇಜಿನಲ್ಲಿ ಸಾಮೂಹಿಕ ಕಾಪಿ ಮಾಡು
ದ್ದುದನ್ನು ಡಾ|| ಗುರುಮೂರ್ತಿ
ು ಸಿಬ್ಬಂದಿಯೊಂದಿಗೆ ಪತ್ತೆ ಹಚ್ಚಿದ
ರಣ ಆ ದಿನದ ಬಿ.ಟಿಪಿ. ಮತ್ತು ಪಿ.
ಲ್. ಪರೀಕ್ಷೆಗಳನ್ನು ಏಪ್ರಿಲ್ 26
ದು ಪುನಃ ನಡೆಸಲಾಗಿತ್ತು. ಆ ದಿನ
ಡ ವಿದ್ಯಾರ್ಥಿಗಳು ಕಾಪಿ ಮಾಡುತ್ತಿ
ದನ್ನು ಪತ್ತೆ ಹಚ್ಚಿದ ಗುಪ್ತದಳದ
ರು ವಿದ್ಯಾರ್ಥಿಗಳನ್ನು ಹಿಡಿದಿದ್ದರು.

ಇದನ್ನು ವಿದ್ಯಾರ್ಥಿ ಮುಖಂಡರು
ತ್ತು ಕೆಲವು ವಿದ್ಯಾರ್ಥಿಗಳು ಪ್ರತಿಭಟ
ದ್ದರು. ಡಾ|| ಗುರುಮೂರ್ತಿ ಮತ್ತು
ವರ ಸಹೋದ್ಯೋಗಿಗಳು ಅಂದು
ಲೀಸರ ನೆರವು ಪಡೆದು ಹೊರಬಂದಿದ್ದ
ಲಾಗಿದೆ.

ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್
ದ್ದೌಲ್ಯಮಾಪನ) ಅವರಿಗೆ ಮಂಗಳವಾರ
ತ್ರಿ ಫೋನ್ ಮಾಡಲೆಂದು ಡಾ||
ುರುಮೂರ್ತಿ ಸೌತ್ ಎಂಡ್ ಸರ್ಕಲ್‌ಗೆ
ಹೋಗುತ್ತಿದ್ದಾಗ ನಾಲ್ಕು ಮಂದಿ
ದ್ಯಾರ್ಥಿಗಳು ತೀವ್ರವಾಗಿ ಹಲ್ಲೆ ನಡೆಸಿ
ದರು. ಗುರುಮೂರ್ತಿ ದುಷ್ಕರ್ಮಿ
ದ್ಯಾರ್ಥಿಗಳಲ್ಲಿ ಇಬ್ಬರನ್ನು ಧೈರ್ಯದಿಂದ
ಹಿಡಿದು ಕೂಗಿದಾಗ ಎಲ್ಲರೂ ಪರಾರಿ

ಪೊತದ್ದುವುದನ್ನು ದಾಖಲಿಸಿಕೊಂಡಿ
ದ್ದಾರೆ. ತಮ್ಮ ಮೇಲೆ ಹಲ್ಲೆ ಮಾಡಿರುವ
ವಿದ್ಯಾರ್ಥಿಗಳು ಬೆಂಗಳೂರಿನ ಆರ್.ಸಿ.
ಕಾಲೇಜಿನ ವಿದ್ಯಾರ್ಥಿಗಳು ಎಂದು ಗುರು
ಮೂರ್ತಿ ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಬೆಂಗಳೂರು ವಿ.ವಿ.ಯ ಪರೀಕ್ಷೆಗಳ
ಗುಪ್ತದಳದ ಮುಖ್ಯಸ್ಥರಾಗಿ ಕಳೆದ
ಏಪ್ರಿಲ್ ಮೇ ತಿಂಗಳಲ್ಲಿ ಡಾ| ಗುರು
ಮೂರ್ತಿ ದುಡಿದಿದ್ದರು.

ಕಾರ್ಯದರ್ಶಿ ಡಾ| ಡಿ.ಎಂ. ನಂಜುಂಡಪ್ಪ
ಕರ್ನಾಟಕ ಸರಕಾರಿ ಕಾಲೇಜು ಅಧ್ಯಾಪ
ಕರ ಸಂಘದವರು ತೀವ್ರವಾಗಿ ಖಂಡಿಸಿ
ದ್ದಾರೆ.

ಗುರುಮೂರ್ತಿ ಅವರಿಗೆ ತುರ್ತು ಚಿಕಿ
ತ್ಸೆಗಾಗಿ ವಿಶ್ವವಿದ್ಯಾಲಯ 5 ಸಾವಿರ
ರೂ ಗಳನ್ನು ನೀಡಿದೆ. ಗುರುಮೂರ್ತಿ
ಮತ್ತು ಅವರ ಕುಟುಂಬಕ್ಕೆ ಸೂಕ್ತ
ಪೊಲೀಸ್ ರಕ್ಷಣೆ ನೀಡಬೇಕೆಂದು ಡಾ||
ನಂಜುಂಡಪ್ಪ ವಿನಂತಿಸಿದ್ದಾರೆ.

ಹಳ್ಳಿಗಳಲ್ಲಿ ಉದ್ಯೋಗ ಸೃಷ್ಟಿಸಲು ಕರೆ

ಪಕ್ಷಿಕೆರೆ, ಜೂ. 2 – ಇಂದು ಉದ್ಯೋಗಗಳನ್ನು ಹಳ್ಳಿ ಹಳ್ಳಿಗಳಲ್ಲಿ ಸೃಷ್ಟಿಸಬೇಕಾಗಿದೆ. ವೇತನ ಉದ್ಯೋಗದಿಂದ ಯುವಕರನ್ನು ಸ್ವಉದ್ಯೋಗದ ಕಡೆಗೆ ಆಕರ್ಷಿಸಬೇಕಾಗಿದೆ ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ರಾಜ್ಯ ಸಚಿವ ಜನಾರ್ದನ ಪೂಜಾರಿ ಅವರು ಹೇಳಿದರು.

ಇತ್ತೀಚೆಗೆ ಇಲ್ಲಿನ ರ.ಸೆಪ್‌ನಲ್ಲಿ ಇದು ವರೆಗೆ ತರಬೇತಿ ಪಡೆದವರ ಸಂಘಟನೆಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಹಣವನ್ನು, ಅಧಿಕಾರವನ್ನು ಹಳ್ಳಿಗಳಿಗೆ ಕೊಡಬೇಕು ಎಂಬ ಕಿರ್ಮನದಿಂದ ರೋಜ್‌ಗಾರ್ ಯೋಜನೆ ಮತ್ತು ಪಂಚಾಯತ್ ರಾಜ್ ಮಸೂದೆಗಳನ್ನು ಮಂಡಿಸಲಾಗಿದೆ. ಎಲ್ಲಾ ಕಾರ್ಯಕ್ರಮಗಳನ್ನು ಸರಕಾರಕ್ಕೆ ಅನುಷ್ಠಾನಕ್ಕೆ ತರಲು ಆಗುವುದಿಲ್ಲ. ಮತ್ತು ಜನರು ಎಲ್ಲದಕ್ಕೂ ಸರಕಾರವನ್ನೆ ಅವಲಂಬಿಸದೆ ತಮ್ಮ ಕೈಲಾದುದನ್ನು ಮಾಡಬೇಕು ಎಂದು ಅವರು ತಿಳಿಸಿದರು.

ಸರಕಾರದ ಕಾರ್ಯಕ್ರಮಗಳ ಯಶಸ್ಸಿಗೆ ಕಾರಣರಾದ ವ್ಯಕ್ತಿಗಳನ್ನು ಅಥವಾ ಸಂಸ್ಥೆಗಳನ್ನು ಸ್ಮರಿಸುವುದಕ್ಕಿಂತ ಸರಕಾರವನ್ನೆ ಸ್ಮರಿಸಬೇಕು ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ದ.ಕ. ಜಿಲ್ಲಾ ಪರಿಷತ್ ಅಧ್ಯಕ್ಷ ಸಂಕಪ್ಪ ರೈ ಅವರು ವಹಿಸಿದ್ದರು. ಸಂಸ್ಥೆಯ ಮುಂದಿನ ಯೋಜನೆಗಳಿಗೆ ಸಂಬಂಧಪಟ್ಟಂತೆ ನಿರ್ದೇಶಕ ಆರ್ಥರ್ ಪಿರೇರಾ ಅವರು ಸಚಿವರಿಗೆ ಮನವಿಯೊಂದನ್ನು ಅರ್ಪಿಸಿದರು.

ದ. ಕ. ಜಿಲ್ಲಾ ಕೃಷಿ ಮತ್ತು ಪಶು ಸಂಗೋಪನಾ ಸಮಿತಿ ಅಧ್ಯಕ್ಷ ಫೆಲಿಕ್ಸ್ ಕಾಡೋಜಾ ಅವರು ಮಾತನಾಡಿದರು. ಕೆವ್ರಾಲ್ ಮಂಡಲ ಪ್ರಧಾನ ಬಾಬಾ

...ಯೋಜನೆ:

...ಕ್ಕೆ ಸಾಲ ನೀಡಿಕೆ

ಪರಿಹಾರೋಪಾಯ ಕಂಡು ಹಿಡಿಯುವ 'ಸಂಜೀವಿನಿಯಾಗಬೇಕು ಎಂದು ಹೇಳಿದರು.

ನಿವೃತ್ತ ಸಹಕಾರ ಶಿಕ್ಷಣಾಧಿಕಾರಿ ಎಚ್. ಎಸ್. ಕೃಷ್ಣ ಸ್ವಾಮಿ ಅವರು ಮಾತನಾಡಿ ರಾಜ್ಯ ಸಹಕಾರಿ ಮಹಾಮಂಡಲ ಮಾಡುವ ಕಾರ್ಯಕ್ರಮಗಳು ಎಲ್ಲಾ ಕ್ಷೇತ್ರಕ್ಕೂ ಮುಟ್ಟುತ್ತಿವೆ. ಸರಕಾರದ ಉದ್ದೇಶ ಅಭಿವೃದ್ಧಿ ಕಾರ್ಯಗಳು ಸಹಕಾರದ ಮೂಲಕ ನಡೆಯಬೇಕೆಂಬುದೆ ಆಗಿದೆ. ಉತ್ತಮವಾದ ನಾಯಕರಿಲ್ಲದೆ ಸಹಕಾರ ಚಳವಳಿ ಕೆಟ್ಟ ಹಾದಿ ಹಿಡಿಯುತ್ತಿದೆ. ಸಹಕಾರ ಕ್ಷೇತ್ರದಲ್ಲಿ ಉತ್ತಮ ಜ್ಞಾನ ಬರಬೇಕಾದರೆ ಸಹಕಾರಿ ಕಾನೂನು ತಿಳಿದಿರಬೇಕು. ಸಹಕಾರಿಗಳು ಇಂತಹ ವಿಚಾರಗೋಷ್ಠಿಯಲ್ಲಿ ಭಾಗವಹಿಸಬೇಕೆಂದರು.

ಸಹಕಾರ ಸಂಘಗಳ ಉಪನಿಬಂಧಕ ಕೆ.ಎಂ. ನಾಗರಾಜುರವರು ಜಿಲ್ಲಾ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಬಗ್ಗೆ ವಿವರಿಸುತ್ತಾ ಅವುಗಳ ಸಾಧನೆ ವಿಫಲತೆಯ ಬಗ್ಗೆ ಮಾಹಿತಿ ನೀಡಿ ಪ್ರಾಥಮಿಕ ...ಗಳ ಸೇವಣೆಯನು ಸ್ವೀಕರಿಸಿ ಕೈಗೊಳ್ಳಲಾಯಿತು.

ಸಭೆಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಮಹಾಮಂಡಲದ ಸಹಕಾರ ಶಿಕ್ಷಣಾಧಿಕಾರಿ ಕೆ. ಆರ್. ರಂಗಯ್ಯಂಗಾರ್. ಸಕಲೇಶಪುರ ಉಪವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಶರೀಫ್ ಎಲಿ, ಜಿಲ್ಲೆಯ ಎಲ್ಲಾ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಅಧ್ಯಕ್ಷರುಗಳು, ಕಾರ್ಯದರ್ಶಿಗಳು ಭಾಗವಹಿಸಿ ವಿಚಾರ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು. ವೀರಭದ್ರಯ್ಯ ಸ್ವಾಗತಿಸಿದರು. ಯೂನಿಯನ್ನಿನ ಅಧ್ಯಕ್ಷ ಎಚ್. ಎಸ್. ಕೃಷ್ಣಮೂರ್ತಿ ವಂದಿಸಿದರು.

ವಿದ್ಯಾರ್ಥಿಯ ಶವ ಪತ್ತೆ

ಚಿತ್ರದುರ್ಗ, ಜೂ. 2 – ಇಲ್ಲಿನ ಕೋಟೆ ಒಳಗಿನ ಹೊಂಡವೊಂದರಲ್ಲಿ 18ರ ಹರೆಯದ ಗುರುಮೂರ್ತಿ ಎಂಬ ವಿದ್ಯಾರ್ಥಿಯ ಮೃತ ದೇಹ ಪತ್ತೆಯಾಗಿದೆ.

ಮುಂಗಾರು

ಭಾನುವಾರ, ಮೇ 28, 1989

ಅಮೆರಿಕಾದ ಫ್ಯಾಸಿಸ್ಟ್ ಕ್ರಮ

ಜಗತ್ತಿನ ಶಕ್ತ ರಾಷ್ಟ್ರಗಳ ಮುಂಚೂಣಿಯಲ್ಲಿರುವ ಅಮೆರಿಕಾ 'ಬಂಡವಾಳದ ಅಹಂ' ನಿಂದ ಇತರ ರಾಷ್ಟ್ರಗಳತ್ತ ಕೆಂಗಣ್ಣ ನೋಟ ಹರಿಸತೊಡಗಿದೆ. ಭಾರತ, ಜಪಾನ್ ಹಾಗೂ ಬ್ರೆಜಿಲ್‌ಗೆ ಅಮೆರಿಕಾ ಬಹಿರಂಗ ಎಚ್ಚರಿಕೆ ನೀಡಿದೆ.

ಅಮೆರಿಕಾದ ಎಚ್ಚರಿಕೆಗೆ ಕಾರಣ ಅತ್ಯಂತ ಕ್ಷುಲ್ಲಕವಾದದ್ದು. ಭಾರತ, ಜಪಾನ್ ಹಾಗೂ ಬ್ರೆಜಿಲ್ ದೇಶಗಳು ತಮ್ಮ ದೇಶೀಯ ಹಾಗೂ ಅಂತರ್‍ರಾಷ್ಟ್ರೀಯ ವ್ಯಾಪಾರ ನೀತಿಗಳನ್ನು ಅಮೆರಿಕಾಗೆ ತೃಪ್ತಿಯಾಗುವ ರೀತಿಯಲ್ಲಿ ರೂಪಿಸಿಲ್ಲ ಎಂಬುದು ಕಾರಣ. ಅಮೆರಿಕಾದ ತೃಪ್ತಿಗನುಸಾರವಾಗಿ ತಮ್ಮ ದೇಶೀಯ ಹಾಗೂ ಅಂತರ್‍ರಾಷ್ಟ್ರೀಯ ವ್ಯಾಪಾರ ನೀತಿಗಳನ್ನು ರೂಪಿಸಿಕೊಳ್ಳಲು ಈ ದೇಶಗಳಿಗೆ 12 ರಿಂದ 18 ತಿಂಗಳ ಗಡುವನ್ನೂ ಅಮೇರಿಕಾ ಘೋಷಿಸಿದೆ.

ಅಮೆರಿಕಾಗೆ ಅತೃಪ್ತಿ ಹುಟ್ಟಿಸಿರುವ ಅಂಶಗಳೇನು ಎಂಬುದು ಇಲ್ಲಿ ಕುತೂಹಲಕರ. ಭಾರತ ಹಾಗೂ ಮೇಲಿನ ಇತರ ರಾಷ್ಟ್ರಗಳು ವಿದೇಶಿ ಬಂಡವಾಳ ಹೂಡಿಕೆಯನ್ನು ಕೆಲವು ರಂಗಗಳಲ್ಲಿ ನಿಷೇಧಿಸಿರುವುದು, ಸೇವಾ ಸೌಲಭ್ಯ ಕ್ಷೇತ್ರದಲ್ಲಿ ಅದರಲ್ಲೂ ಮುಖ್ಯವಾಗಿ ವಿಮಾ ಮಾರುಕಟ್ಟೆಯಲ್ಲಿ ವಿದೇಶಿ ವಿಮಾ ಕಂಪೆನಿಗಳಿಗೆ ಅವಕಾಶ ನೀಡದಿರುವುದು ಅಮೆರಿಕಾಗೆ ಅತೃಪ್ತಿ ಹುಟ್ಟಿಸಿರುವ ಅಂಶಗಳು. ಈ ಅತೃಪ್ತಿಯ ನಿವಾರಣೆಗಾಗಿ ಅಮೆರಿಕಾ ಈಗ ಬೆದರಿಕೆಯ ಮಾರ್ಗ ಹಿಡಿದಿದೆ.

ಭಾರತ, ಬ್ರೆಜಿಲ್ ಹಾಗೂ ಜಪಾನ್ ಸರ್ವತಂತ್ರ ಸ್ವತಂತ್ರ ದೇಶಗಳು ತಮ್ಮ ವ್ಯಾಪಾರ ನೀತಿಗಳನ್ನು, ಅದೂ ದೇಶೀಯವೇ ಇರಲಿ ಅಂತರ್‍ರಾಷ್ಟ್ರೀಯವೇ ಇರಲಿ ಸ್ವತಂತ್ರವಾಗಿ ರೂಪಿಸುವ ಸ್ವಾತಂತ್ರ್ಯ ಉಳ್ಳ ದೇಶಗಳು. ಅದರಲ್ಲೂ ಜಾಗತಿಕ ಭೂಪಟದಲ್ಲಿ ಉಳಿದೆರಡು ಶಕ್ತಿ ಬಣಗಳ ಜತೆಗೆ ತಮ್ಮನ್ನು ಹೆಚ್ಚಾಗಿ ಗುರುತಿಸಿಕೊಳ್ಳದೆ ಸ್ವಂತ ಸಾಮರ್ಥ್ಯದ ಮೇಲೆಯೇ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳ ಹೊರಟು ಬಹುತೇಕ ಯಶಸ್ವಿಯಾದ ರಾಷ್ಟ್ರಗಳು. ತೃತೀಯ ಜಗತ್ತಿನ ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಎದೆಯುಬ್ಬಿಸಿ ನಿಲ್ಲಬಹುದಾದಂತಹ ಸ್ವ-ಸಾಮರ್ಥ್ಯದ ಶಕ್ತಿ ಪರೀಕ್ಷೆ ನಡೆಸಿರುವಂತಹ ರಾಷ್ಟ್ರಗಳು. ಈ ದೇಶಗಳ ಜನರ ಇಚ್ಛಾಶಕ್ತಿ ಹಾಗೂ ಸಂಪನ್ಮೂಲ ಸಮೃದ್ಧತೆ ಗಮನಾರ್ಹವಾದದ್ದು.

ಇಂತಹ ದೇಶಗಳ ವಿರುದ್ಧವೇ ಇವತ್ತು ಅಮೆರಿಕಾ ಸೆಡ್ಡು ಹೊಡೆಯ ಹೊರಟಿರುವುದು ನೋಡಿದರೆ ಅಮೆರಿಕಾದ ರಾಜಕೀಯ ಆರೋಗ್ಯದ ಬಗ್ಗೆ ಜಗತ್ತಿನ ಜನರಲ್ಲಿ ಸಂಶಯ ಮೂಡಿಸುತ್ತಿದೆ. ಎರಡು ಮಹಾಯುದ್ಧಗಳ ದುರಂತಗಳನ್ನು ಅನುಭವಿಸಿದ ಬಳಿಕ ಜಗತ್ತಿನ ಮೂಲೆಮೂಲೆಯ ರಾಷ್ಟ್ರಗಳೂ ಆರೋಗ್ಯಪೂರ್ಣ ರಾಜಕೀಯ ಪರಿಸರ ರೂಪಿಸಲು ಸಮಾನತೆ, ಸ್ವತಂತ್ರ ಹಾಗೂ ಅಭಿವೃದ್ಧಿಯ ಕನಸುಗಳನ್ನು ಒಪ್ಪಿ ಅಪ್ಪಿಕೊಂಡ ಬಳಿಕ ಈಗ ಮತ್ತೆ ಇತಿಹಾಸವನ್ನು ಪುನರಾವೃತ್ತಿಗೊಳಿಸಲು ಅಮೆರಿಕಾ ಹೊರಟಿದೆಯೊ ಎನ್ನುವ ಸಂಶಯ ಕಾಡುತ್ತದೆ.

ಇತರ ಸ್ವತಂತ್ರ ರಾಷ್ಟ್ರಗಳು ತಾನು ಹೇಳಿದಂತೆ ಕೇಳಬೇಕು, ತನಗೆ ಅನುಕೂಲವಾಗುವಂತೆ ವ್ಯಾಪಾರ ನೀತಿಯನ್ನು ರೂಪಿಸಬೇಕೆಂದು ಅಮೆರಿಕಾ ಬಯಸುತ್ತಿರುವುದರ ಹಿಂದೆ ನಿಜಕ್ಕೂ ಸಾಮ್ರಾಜ್ಯಶಾಹಿ ಫ್ಯಾಸಿಸ್ಟ್ ಮನೋಧರ್ಮ ಕೆಲಸ ಮಾಡುತ್ತಿದೆ. ಬಂಡವಾಳದ ಕೊಬ್ಬು ಬೆಳೆಸಿಕೊಂಡಿರುವ ಅಮೆರಿಕಾ ಇವತ್ತು ತನ್ನಲ್ಲಿರಬಹುದಾದ ಶಸ್ತ್ರಾಸ್ತ್ರಶಕ್ತಿಯ ಬಲದಿಂದ ತೋಳೇರಿಸುವ ಕೆಲಸಕ್ಕೆ ಕೈಹಾಕಿದ್ದಿರಬಹುದು. ಪ್ರಜಾಸತ್ತಾತ್ಮಕ ಮನೋಭಾವವುಳ್ಳ ಯಾವ ದೇಶವೂ ಇಂತಹ ಫ್ಯಾಸಿಸ್ಟ್ ಕೆಲಸಕ್ಕೆ ಬೆಂಬಲ ನೀಡುವುದಿಲ್ಲ.

ಯಂತ್ರ ವಿಜ್ಞಾನದ ಮಹಾ ಸಾಧನೆಯ ತುತ್ತತುದಿಗೇರಿರುವ ಮುಂದುವರಿದ ರಾಷ್ಟ್ರಗಳು ಮತ್ತೆ ಶಿಲಾಯುಗದ ಅನಾಗರಿಕ ಪಾಶವೀ ಜಗತ್ತಿಗೆ ಹಿಂತೆರಳುತ್ತಿರುವುದರ ಮುನ್ಸೂಚನೆ ಅಮೆರಿಕಾದ ಈ ಎಚ್ಚರಿಕೆ. ತೋಳ್ಬಲವುಳ್ಳವನು ಮಾತ್ರ ಬದುಕುವ ಹಕ್ಕು ಹೊಂದಿದ್ದ ನಾಗರಿಕೆಯ ಪೂರ್ವ ಯುಗದ ಕಲ್ಪನೆಯ ವಾಸನೆ ಅಮೆರಿಕಾದ ಈ ಎಚ್ಚರಿಕೆಯ ಮಾತುಗಳಲ್ಲಿ ಮೂಗಿಗೆ ನಾರುತ್ತಿದೆ.

ಅಮೆರಿಕಾ ತನಗೆ ಅತೃಪ್ತಿಯೆನಿಸುವ ಇತರ ದೇಶಗಳ ವ್ಯಾಪಾರ ನೀತಿಯ ಬಗ್ಗೆ ರೂಪಿಸಿರುವ "ಸೂಪರ್ 301" ಹಾಗೂ "ಸ್ಪೆಶಲ್ 301" ಪಟ್ಟಿಗಳ ಕಲ್ಪನೆ ನಿಜಕ್ಕೂ ಹಾಸ್ಯಾಸ್ಪದ. ಸಮರಾಸ್ತ್ರಗಳ ಮೇಲೆ ಪವಡಿಸಿ ಜಗತ್ತನ್ನೇ ಆಳುವ ಹುಚ್ಚು ಕಲ್ಪನೆಯ ಕಡಿವಾಣ ರಹಿತ ಕುದುರೆಯನ್ನೇರಿರುವ ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಶ್ ಹೀಗೆ ಎಡವುವುದಕ್ಕೆ ಮುನ್ನ ಎಚ್ಚೆತ್ತುಕೊಳ್ಳಬೇಕಿದೆ. ಪ್ರತೀಕಾರ ಬೆದರಿಕೆಯ ಹಿನ್ನೆಲೆಯಲ್ಲಿ ಕೆಲಸ ಮಾಡುತ್ತಿರುವ ಫ್ಯಾಸಿಸ್ಟ್ ಮನೋಭಾವ ತೊರೆದು ಸ್ನೇಹ ಹಾಗೂ ಬಾಂಧವ್ಯದ ನೀತಿ ನೆಲೆಯ ಮೇಲೆ ಸಂಬಂಧ ವೃದ್ಧಿಸಿಕೊಳ್ಳಬೇಕಿದೆ.



...ಭೂನ್ಯಾಯ ...ಮಂಡಳಿಗಳ ...ಬರ್ಕಾಸ್ತು ?

ಉಡುಪಿ, ಮೇ 27- ಉಡುಪಿಯೂ ...ಸಿದಂತೆ ರಾಜ್ಯದ ಎಲ್ಲಾ ಭೂನ್ಯಾಯ ...ಮಂಡಳಿಗಳನ್ನು ಬರ್ಕಾಸ್ತುಗೊಳಿಸಿ, ...ಮಾಕರಣ ಸದಸ್ಯರನ್ನು ಸ್ಥಾನ ಚ್ಯುತಿ ...ಗೊಳಿಸಲಾಗಿದೆಯೆಂದು ತಿಳಿದು ಬಂದಿದೆ.

ಉಡುಪಿ ಭೂನ್ಯಾಯ ಮಂಡಳಿಯಲ್ಲಿ ...ಗ 340 ಪ್ರಕರಣಗಳು ಬಾಕಿ ಇವೆ ...ನ್ನಲಾಗಿದೆ. ಈ ಮಂಡಳಿಯ ಅಧ್ಯಕ್ಷ ...ರಾಗಿದ್ದ ಅಸಿಸ್ಟೆಂಟ್ ಕಮಿಷನರ್‌ರವ ...ಗೂ ಹಾಸನಕ್ಕೆ ವರ್ಗವಾಗಿದೆ.

'ಸಹಕಾರಿ ಸಂಸ್ಥೆಗಳ ಸೇವೆ ಪಡೆಯಿರಿ'

(ಮುಂಗಾರು ವರದಿ)

ಕುಂಬಳೆ, ಮೇ 27– ಸಹಕಾರಿ ಸಂಘಗಳಿಂದ ಜನರು ಹೆಚ್ಚಿನ ಪ್ರಯೋಜನ ಪಡೆಯಬೇಕೆಂದು ಕೇರಳ ಸಹಕಾರಿ ಇಲಾಖಾ ಸಚಿವ ಟಿ. ಕೆ. ರಾಮಕೃಷ್ಣನ್ ಇಂದಿಲ್ಲಿ ಹೇಳಿದರು.

ಕಾಸರಗೋಡು ಜಿಲ್ಲಾ ಸಹಕಾರಿ ಬ್ಯಾಂಕು ಕಾಸರಗೋಡಿನಲ್ಲಿ ಸ್ಥಾಪಿಸಿದ ನಂತರ 5 ಶಾಖೆಗಳನ್ನು ತೆರೆಯಲು ತೀರ್ಮಾನಿಸಿದುದರಲ್ಲಿ ಒಂದನ್ನು ಮೇ 26 ರಂದು ಕುಂಬಳೆಯಲ್ಲಿ ಉದ್ಘಾಟಿಸುತ್ತಾ ಅವರು ಮೇಲಿನಂತೆ ಹೇಳಿದರು.

ಶಾಸಕ ಚೆರ್ಕಳಂ ಅಬ್ದುಲ್ಲಾ ಅವರು ಸಭಾಧ್ಯಕ್ಷತೆ ವಹಿಸಿದ್ದರು.

ಮಾಜಿಮಂತ್ರಿ ಡಾ। ಎ. ಸುಬ್ಬರಾವ್, ಕುಂಬಳೆ ಪಂಚಾಯತ್ ಅಧ್ಯಕ್ಷ ಕೆ. ಪಿ. ಅಬ್ದುಲ್ ರಹಿಮಾನ್, ಸಹಕಾರೀ ಸಂಘಗಳ ಜತೆ ರಿಜಿಸ್ಟ್ರಾರ್ ಶಂಸುದ್ದೀನ್, ಎ. ಎಂ. ಮೊಗ್ರಾಲ್, ಬಿ. ಸರ್ವೋತ್ತಮ ಪೈ, ಬಿ. ವಿಶ್ವನಾಥ ಆಳ್ವ, ರಾಮಯ್ಯ ಶೆಟ್ಟಿ, ಕೆ. ವಿ. ಇರ್ನೇರಾಯ ಅವರು ಶುಭಾಶಂಸನಾ ಭಾಷಣ ಮಾಡಿದರು.

ಆರಂಭದಲ್ಲಿ ಜಿಲ್ಲಾ ಸಹಕಾರಿಬ್ಯಾಂಕಿನ ಅಧ್ಯಕ್ಷ ಎಂ. ರಾಮಣ್ಣ ರೈ ಸ್ವಾಗತಿಸಿದರು. ಕೊನೆಗೆ ಜನರಲ್ ಮ್ಯಾನೇಜರ್ ಬಿ. ರಾಮದಾಸ್ ವಂದಿಸಿದರು.

ಮನವಿ ಸಮರ್ಪಣೆ

ಈ ಸಮಾರಂಭದಲ್ಲಿ ಕುಂಬಳೆ ಬೀಚ್ ರಸ್ತೆಯನ್ನು ದುರಸ್ತಿ ಮಾಡಬೇಕು, ರಸ್ತೆಗೆ ಟಾರ್ ಹಾಕಬೇಕು ಎಂಬೀ ಕೋರಿಕೆಗಳನ್ನೊಳಗೊಂಡ ಮನವಿಪತ್ರವೊಂದನ್ನು ಮಂತ್ರಿಯವರು ಸ್ವೀಕರಿಸಿದರು.

...ಉರುಲ್ ಇಸ್ಲಾಂ ಯತೀಂಖಾನಾ (ಅನಾಥಾಲಯ)ದ 21ನೇ ವಾರ್ಷಿಕೋತ್ಸವ ...ಅಧ್ಯಕ್ಷ ಪಾಣಕ್ಕಾಡ್ ಸಯ್ಯದ್ ಮುಹಮ್ಮದಲಿ ಅವರು ಮೇ 25ರಂದು ಉದ್ಘಾ...

ಕ್ರೀಡಾಸಕ್ತಿ ಬೆಳೆಸಲು ನಗದು ಪ್ರಶಸ್ತಿ

(ಮುಂಗಾರು ವರದಿ)

ಬೆಂಗಳೂರು, ಮೇ 27– ವಿಶ್ವವಿದ್ಯಾನಿಲಯಗಳಲ್ಲಿ ಕ್ರೀಡಾ ಚಟುವಟಿಕೆಯನ್ನು ಉತ್ತೇಜನ ಗೊಳಿಸಲು ಭಾರತ ಸರಕಾರದ ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆಯು ಬೆಂಗಳೂರು ವಿಶ್ವವಿದ್ಯಾನಿಲಯದ ಹಾಕಿ ತಂಡಕ್ಕೆ 30,000ರೂ. ನಗದು ಪ್ರಶಸ್ತಿಯನ್ನು ನೀಡಲಿದೆ.

ಬರುವ ತಿಂಗಳು ಜೂನ್ ತಿಂಗಳಲ್ಲಿ ದಿಲ್ಲಿಯಲ್ಲಿ ಜರಗುವ ಸಮಾರಂಭವೊಂದರಲ್ಲಿ ಕೇಂದ್ರ ಯುವಜನ ಸೇವೆ ಹಾಗೂ ಕ್ರೀಡಾ ಸಚಿವೆ ಡಾ॥ ಮಾರ್ಗರೇಟ್ ಆಳ್ವ ಅವರು, ಈ ಪ್ರಶಸ್ತಿಯ ಹಣವನ್ನು ವಿಶ್ವವಿದ್ಯಾನಿಲಯದ ಕ್ರೀಡಾ ಚಟುವಟಿಕೆಗಳಿಗೆ ಬಳಸಿಕೊಳ್ಳಲಾಗುವುದೆಂದು ವಿಶ್ವವಿದ್ಯಾನಿಲಯದ ಪ್ರಕಟಣೆಯೊಂದು ತಿಳಿಸಿದೆ.

ಮುಂಗಾರು

ಶನಿವಾರ, ಮೇ 27, 1989

ಸರಕಾರದ ಧೋರಣೆ ಬದಲಾಗಲಿ

ಮುಂದಿನ ಐದು ವರ್ಷಗಳ ಅವಧಿಯ ಕೃಷಿ ಅಭಿವೃದ್ಧಿ ತಂತ್ರದ ಅಂಗವಾಗಿ ಆರ್ಥಿಕ ಮತ್ತು ಹಣಕಾಸಿನ ಸಮಗ್ರ ನೀತಿ ರೂಪಿತವಾಗಬೇಕೆಂದು ಯೋಜನಾ ಆಯೋಗದ ಎಂಟನೆ ಪಂಚವಾರ್ಷಿಕ ಯೋಜನೆಯ ಕರಡು ಟಿಪ್ಪಣಿ ಸೂಚಿಸಿದೆ.

ಈ ಸಮಗ್ರ ನೀತಿ ರೂಪಿಸುವಾಗ ಉಪಕರಣಗಳು ಮತ್ತು ಹೂಡಿಕೆ ಸಾಮಗ್ರಿಗಳ ಮೇಲಿನ ತೆರಿಗೆಗಳ ಸರಳೀಕರಣ ಮಾಡಬೇಕು ಹಾಗೂ ಸಾಲ ವ್ಯವಸ್ಥೆಯ ಪುನರ್ರೂಪೀಕರಣ ಮತ್ತು ಪರಿಣಾಮಕಾರಿ ವಿತರಣಾ ವ್ಯವಸ್ಥೆ ನಡೆಯಬೇಕೆಂದೂ ಟಿಪ್ಪಣಿಯಲ್ಲಿ ಹೇಳಲಾಗಿದೆ.

ಕೃಷಿಯ ಅಭಿವೃದ್ಧಿಗೆ ಯೋಜನಾ ಆಯೋಗ ಸೂಚಿಸಿರುವ ಈ ಎಲ್ಲ ಟಿಪ್ಪಣಿಗಳಲ್ಲೂ ವಿಶೇಷ ಹೊಸತೂ ಕಾಣಿಸುತ್ತಿಲ್ಲ. ಸಾಮಾನ್ಯವಾಗಿ [illegible] ಸೂಚಿಸಿದ ಸಲಹೆಗಳ [illegible] ಮಾತ್ರ [illegible] ಈ ಟಿಪ್ಪಣಿಗಳು ಕೃಷಿಯ ಬಗೆಗಿನ ಸರಕಾರದ [illegible] ಧೋರಣೆಯನ್ನು ಪ್ರತಿಬಿಂಬಿಸುತ್ತವೆ.

ದೇಶದ 75 ಶೇಕಡಾಕ್ಕೂ ಹೆಚ್ಚು ಜನರು ಅವಲಂಬಿಸಿರುವ ಕೃಷಿ ರಂಗದ ಬಗ್ಗೆ ಆರೋಗ್ಯಪೂರ್ಣ ಧೋರಣೆಯೊಂದನ್ನು ತಳೆಯುವ ಧೈರ್ಯವನ್ನು ಸರಕಾರವಿನ್ನೂ ಮಾಡಿಲ್ಲ. ನೀರಿನ ಸೌಲಭ್ಯವಿಲ್ಲದ ಬಹುತೇಕ ರೈತರು ಅನಿಶ್ಚಿತ ಮಳೆಯನ್ನವಲಂಬಿಸಿ ಪ್ರಕೃತಿಯ ಜತೆ ಜೂಜಾಡುವ ಕಾರ್ಯದಲ್ಲಿ ತಮ್ಮ ಬೆನ್ನುಮೂಳೆ ಬಗ್ಗಿಸಿಕೊಂಡಿದ್ದಾರೆ. ಅದೇ ವೇಳೆ ಕಾಡಿನಲ್ಲಿ ಯಾರ ಪ್ರಯತ್ನವೂ ಇಲ್ಲದೆ ಯಥೇಚ್ಛವಾಗಿ ಬೆಳೆದ ಮರಗಳನ್ನು ಕಡಿದು ಸಾಗಿಸುವ ಉದ್ಯಮಿಗಳು ಸರಕಾರದ ಸಕಲ ಸೌಲಭ್ಯಗಳಿಗೆ ಪಾತ್ರರಾಗಿ ರೈತರೆಡೆಗೆ ಸಹಾನುಭೂತಿಯ ಕಣ್ಣೂ ಹರಿಸುತ್ತಿಲ್ಲ.

ಸರಕಾರ ಅರಣ್ಯೋದ್ಯಮಿಗಳ ಬಗ್ಗೆ, ಕೈಗಾರಿಕಾ ಧಣಿಗಳ ಬಗ್ಗೆ ತಳೆಯುತ್ತಿರುವಂತಹ ಸಹಾನುಭೂತಿಪರ ನಿಲುವನ್ನು ರೈತರೆಡೆಗೆ ತಳೆಯಲು ಮನಮಾಡುತ್ತಿಲ್ಲ. ಶ್ರಮವಿಲ್ಲದೆ ಲಾಭ ಗಳಿಸುವ ಅರಣ್ಯೋದ್ಯಮಿಗಳು, ಕೈಗಾರಿಕಾ ಧಣಿಗಳು ತಮ್ಮ ಉತ್ಪಾದನೆಗೆ ತಾವೇ ಬೆಲೆ ಕಟ್ಟುವ ಸ್ವಾತಂತ್ರ್ಯ ಹೊಂದಿದ್ದರೆ, ರೈತರಿಂದ ಆ ಸ್ವಾತಂತ್ರ್ಯವನ್ನು ಕೂಡಾ ಕಸಿದುಕೊಳ್ಳಲಾಗಿದೆ.

ರೈತರ ಕೃಷಿಯನ್ನು ಉತ್ತೇಜಿಸಲು ಸರಕಾರದ [illegible] ಸಾಲ ಪದ್ಧತಿ [illegible]. ಆದರೆ ಈ ಕ್ರಮ ಕೂಡಾ [illegible] ತಮ್ಮ ಉದ್ದೇಶಗಳಿಗೆ ಬಳಸಿಕೊಳ್ಳ[illegible] ದುರುಪಯೋಗವಾಗುತ್ತಿದೆ. ಯೋಜನಾ ಆಯೋಗ [illegible] ಪಂಚವಾರ್ಷಿಕ ಯೋಜನೆಗಾಗಿ [illegible] ಟಿಪ್ಪಣಿಯಲ್ಲಿ ಸಾಲದ ಸರಳೀಕರಣವಾಗಬೇಕೆಂದು ಹೇಳಿದೆ. ಈ ಹಿಂದಿನ ಯೋಜನಾ ಟಿಪ್ಪಣಿಗಳಲ್ಲೂ ಇದೇ ಅಂಶವನ್ನು [illegible]ಕ್ಷಿಸಲಾಗಿತ್ತು.

ಎಂಟನೇ ಯೋಜನೆಯಲ್ಲೂ ರೈತರ ಬಗೆಗೆ ಪ್ರಧಾನವಾಗಿ ಗಮನಹರಿಸಲಾಗುವುದೆಂದೂ ಟಿಪ್ಪಣಿ ಸ್ಪಷ್ಟಪಡಿಸಿದೆ. ಈ ಹಿಂದಿನ ಯೋಜನೆಗಳಲ್ಲೂ ರೈತರು ಪ್ರಧಾನಗಮನವಾಗಿದ್ದರು. ನಿಜಕ್ಕೂ ಸರಕಾರಕ್ಕೆ ರೈತರ ಬಗ್ಗೆ ಪ್ರಾಮಾಣಿಕ ಕಳಕಳಿಯಿದ್ದಿದ್ದರೆ ಅಥವಾ ಆ ಪ್ರಾಮಾಣಿಕ ಕಳಕಳಿ ಅರ್ಥಪೂರ್ಣವಾಗಿ ಜಾರಿಗೆ ಬಂದಿದ್ದರೆ ಪ್ರತಿಸಲದ ಯೋಜನೆಗಳಲ್ಲೂ, ರೈತರ ಬಗ್ಗೆ ಹೀಗೆ ಮೊಸಳೆ ಕಣ್ಣೀರು ಸುರಿಸಬೇಕಾದ ಅಗತ್ಯ ಬೀಳುತ್ತಿತ್ತೆ ಎನ್ನುವುದು ಚಿಂತನಾರ್ಹ ವಿಷಯ.

ಕೃಷಿರಂಗದಲ್ಲಿ ಪ್ರವಹಿಸಲಾದ ಸಾಲದ ಮೊತ್ತ ಗಣನೀಯವಿದ್ದರೂ ಅದರ ಸರಿಯಾದ ಬಳಕೆ ಆಗಿಲ್ಲ ಎನ್ನುವುದು ವಾಸ್ತವ. ರೈತನ ಅವಶ್ಯಕತೆಗಳಿಗೆ ನಿಗದಿತ [illegible]ಕ್ಕೆ ಸಾಲ ಸೌಲಭ್ಯ ಅಗತ್ಯ. ಆದರೆ ಅಧಿಕಾರ ಶಾಹಿಯ ವ್ಯವಸ್ಥೆಯಿಂದಾಗಿ ಸಾಲ ಸೌಲಭ್ಯ ರೈತನ ಕೈ ತಲುಪುವಾಗ ಕಾಲ ಮಿಂಚಿರುತ್ತದೆ. ಕೃಷಿಯ ಮೂಲಕ ಹೆಚ್ಚುವರಿ ಉದ್ಯೋಗ ನಿರ್ಮಿಸುವ ಕೆಲಸದಲ್ಲೂ ಸರಕಾರ ವಿಫಲವಾಗಿದೆ. ಬೇರಾವುದೇ ಉದ್ಯೋಗ ಸಾಧ್ಯವಿಲ್ಲದ ಹಾಗೂ ಸಿಗದ ವ್ಯಕ್ತಿ ಮಾತ್ರ ಕೃಷಿಯತ್ತ ಗಮನಹರಿಸುವಂತಹ ವ್ಯವಸ್ಥೆ ನಮ್ಮ ಹೊಸ ಪೀಳಿಗೆಯ ಮುಂದೆ ಇದೆ.

ಈ ಹಿನ್ನೆಲೆಯಲ್ಲಿ ಸರಕಾರ ಸಮರೋಪಾಯದ ಕ್ರಮಗಳನ್ನು ಕೈಗೊಳ್ಳಬೇಕಿದೆ. ಆದ್ಯತೆಯ ನೆಲೆಯಲ್ಲಿ ಕೃಷಿ ರಂಗಕ್ಕೆ ಸಂಪನ್ಮೂಲಗಳನ್ನು ಒದಗಿಸಿ, ಕೃಷ್ಯುತ್ಪನ್ನಗಳಿಗೆ ಸೂಕ್ತ ಬೆಲೆ ರೂಪಿಸುವ ಕೆಲಸಕ್ಕೆ ಕೈ ಹಾಕಬೇಕಿದೆ. ಕೃಷಿ ಆರ್ಥಿಕತೆಯನ್ನು ಬರನಿರೋಧಕವನ್ನಾಗಿಸಲು ಸಕಾಲದಲ್ಲಿ ಸಂಪನ್ಮೂಲ ಒದಗಿಸಬೇಕಿದೆ.

ಯೋಜನಾ ಆಯೋಗ ಎಂಟನೇ ಯೋಜನೆಗೆ ರೂಪಿಸಿದ ಟಿಪ್ಪಣಿಯಲ್ಲಿ ಒಂದು ಮಹತ್ವದ ಅಂಶವೂ ಇದೆ. ಬ್ಯಾಂಕುಗಳ ಆದ್ಯತಾ ರಂಗದ ಸಾಲ ಮಹಿಳೆಯರಿಗೂ ದೊರಕುವಂತಾಗಬೇಕು. ಸೂಕ್ತವೆನಿಸಿದಲ್ಲಿ ಮಹಿಳೆಯರಿಗೇ ಮೀಸಲಾಗುವ ಸಾಲ ಸಹಕಾರಿ ಸಂಘಗಳನ್ನೂ ರೂಪಿಸಬೇಕೆಂಬುದು ಆ ಸಲಹೆ.

ಆದರೆ ಎಲ್ಲಕ್ಕೆ ಮುನ್ನ ಸರಕಾರ ಕೃಷಿ ರಂಗದ ಬಗ್ಗೆ ತಳೆದಿರುವ ತೇಪೆ ಹಚ್ಚುವ ಧೋರಣೆಯನ್ನು ಕೈಬಿಟ್ಟು ರೈತರ ಬಗ್ಗೆ ನೈಜ ಕಳಕಳಿ ಹೊಂದಬೇಕು. ರೈತರು ಕೇವಲ ರಾಜಕೀಯ ಆಯುಧವಾಗಿ ಬಳಕೆಯಾಗುವುದು ನಿಲ್ಲಬೇಕು. ರೈತರು ಕೂಡಾ ತಮ್ಮ ಹಿತಾಸಕ್ತಿಗಳ ರಕ್ಷಣೆಗೆ ಪಕ್ಷಭೇದ ಮರೆತು ಒಗ್ಗಟ್ಟಾದ ಹೋರಾಟವೊಂದನ್ನು ರೂಪಿಸಿಕೊಳ್ಳಬೇಕಾಗಿದೆ.

ಹೆಂಡ ನಿಷೇಧಿಸಲು ರಾಜ್ಯಪಾಲರಿಗೆ ಆಗ್ರಹ

ಚರಂತಿಪೇಟೆ ಯುವಕ ಸಂಘದ ದಶಮಾನೋತ್ಸವ

ಮೂಲ್ಕಿ, ಮೇ 26-ಚರಂತಿಪೇಟೆ ಯುವಕ ವೃಂದ ಮೂಲ್ಕಿ ಇವರ ದಶಮಾನೋತ್ಸವ ಸಮಾರಂಭವು ಡಾ|| ಬಾಬು ಶೆಟ್ಟಿ ಅವರ ಅಧ್ಯಕ್ಷತೆ ಇತ್ತೀಚೆಗೆ ನಡೆಯಿತು.

ಕೆ. ಸೋಮಪ್ಪ ಸುವರ್ಣ, ಡಾ|| ಸೀತಾರಾಮ ಶೆಟ್ಟಿ, ಡಾ|| ರಾಜಶೇಖರ ಬೆಂಗಳೂರು, ಚಂದ್ರರಾಯ ಆಚಾರ್ಯ ಅವರು ಮಾತನಾಡಿ. ಯುವಕ ಸಂಘಟನೆಯು ಸದುಪಯೋಗ ಆಗಬೇಕೆಂದರು.

ಸೂಚನಾ ಫಲಕ ಉದ್ಘಾಟನೆ

ಕಡಬ, ಮೇ 26- ಕಡಬ ಜೂನಿಯರ್ ಚೇಂಬರ್ ಮತ್ತು ಕಡಬ ಆರಕ್ಷಕ ಠಾಣೆ ಇವರ ಜಂಟಿ ಆಶ್ರಯದಲ್ಲಿ ಊರ ದಾನಿಗಳ ಸಹಕಾರದೊಂದಿಗೆ ವ್ಯವಸ್ಥೆಗೊಳಿಸಿದ ರಸ್ತೆ ಸೂಚನಾ ಫಲಕಗಳನ್ನು ಜಿ. ಪ. ಸದಸ್ಯ ಸೈಯದ್ ಮೀರಾ ಸಾಹೇಬ್ ಇತ್ತೀಚೆಗೆ ಉದ್ಘಾಟಿಸಿದರು. ಮುಖ್ಯ ಅತಿಥಿಯಾಗಿ ಸ್ಥಳೀಯ ಉದ್ಯಮಿ ಪಿ. ಪಿ. ಫಿಲಿಪ್ ಆಗಮಿಸಿದ್ದರು.

ಕಡಬ ಜೂನಿಯರ್ ಚೇಂಬರ್‌ನ ಅಧ್ಯಕ್ಷ ಕೆ. ರಾಧಾಕೃಷ್ಣ ಆಚಾರ್ಯರು ಸ್ವಾಗತಿಸಿದರು. ನಿಕಟಪೂರ್ವ ಅಧ್ಯಕ್ಷ ಜನಾರ್ದನ ಗೌಡರು ವಂದಿಸಿದರು.

ಸೂಚನಾ ಫಲಕಗಳನ್ನು ಮೆಸರ್ಸ್ ಗಣೇಶ ಇಂಡಸ್ಟ್ರೀಸ್, ಲಿಯೊನಾರ್ಡ್ ಟೈಲರ್ಸ್, ಅರುಣಾ ಟೈಲರ್ಸ್, ಕಾಮತ್ ಜನರಲ್ ಸ್ಟೋರ್ಸ್, ದುರ್ಗಾ ಮೆಕ್ಯಾನಿಕಲ್ ವರ್ಕ್ಸ್, ಶುಕ್ರಿಯಾ ಕ್ಲೋತ್ ಸ್ಟೋರ್ಸ್, ದಾಸ್‌ಪ್ರಸಾದ್ ರೆಸ್ಟೋರೆಂಟ್, ಸುಬ್ರಹ್ಮಣ್ಯೇಶ್ವರ ಇಲೆಕ್ಟ್ರಿಕಲ್ಸ್, ಪ್ರಶಾಂತ ಪೈಂಟ್ಸ್ ಮತ್ತು ಕುವ್ವತ್ತುಲ್ ಇಸ್ಲಾಂ ಕಮಿಟಿ ಇವರು ದಾನವಾಗಿ ನೀಡಿದ್ದರು.

ಹಾಸನ, ಮೇ 26-ಹೆಂಡ ಮಾರಾಟ ಗುತ್ತಿಗೆಯ ಹರಾಜನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಶಾಖೆಯು ಜಿಲ್ಲಾಧಿಕಾರಿಯವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದೆ.

ಜಿಲ್ಲೆಯಾದ್ಯಂತ ಈಚಲು ಮರಗಳ ಸಂಖ್ಯೆಯು ಕಡಿಮೆಯಾಗಿದ್ದು, ಇದ್ದ ಮರಗಳನ್ನು ಭೂಮಾಲೀಕರು ಕಡಿದು ಹಾಕಿರುವುದರಿಂದ ಅದರ ಬದಲಿಗೆ ಕ್ಲೋರೋಹೈಡ್ರೇಟನ್ನು ನೀರಿಗೆ ಬೆರಸಿ ಹಂಚುತ್ತಿದ್ದಾರೆ. ಇಂತಹ ಹೆಂಡವನ್ನು ಕುಡಿದು ಸಾವಿಗೀಡಾದ ಅನೇಕ ಪ್ರಕರಣಗಳಿವೆ. ಆದ್ದರಿಂದ ಹೆಂಡವನ್ನು ನಿಷೇಧಿಸುವುದು ಅನಿವಾರ್ಯವೆಂದು ದ. ಸಂ. ಸ. ವಿವರಿಸಿದೆ.

ನೆರೆ ಜಿಲ್ಲೆಗಳಾದ ಮೈಸೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಈಗಾಗಲೇ ಹೆಂಡ ನಿಷೇಧಿಸಲಾಗಿದ್ದು, ಜಿಲ್ಲೆಯ ಗಡಿಪ್ರದೇಶಗಳಲ್ಲಿ ಕಡಿಮೆ ಬೆಲೆಗೆ ಮಾರಾಟ ಮಾಡಲು ಸಿಕ್ಕಿದಂತಾಗಿದೆ ಎಂದು ಮನವಿಯಲ್ಲಿ ಆಪಾದಿಸಲಾಗಿದೆ.

ಹೆಂಡಕ್ಕೆ ಶರಣಾಗಿ ಹಾಳಾಗುವ ದಲಿತ ಕುಟುಂಬಗಳನ್ನೂ ಅವರ ಬದುಕನ್ನೂ ಹಾಳು ಮಾಡುವ ಈ ಮಾರಾಟವನ್ನು ಕೂಡಲೇ ನಿಷೇಧಿಸಿ ಎಂದು ದ. ಸಂ. ಸ. ರಾಜ್ಯಪಾಲರನ್ನು ಆಗ್ರಹಪಡಿಸಿದೆ.

ಚೆರ್ವತ್ತೂರಿನಲ್ಲಿ ಎ.ಐ.ಎಸ್.ಎಫ್ ಜಿಲ್ಲಾ ಶಿಬಿರ

ಮಂಜೇಶ್ವರ, ಮೇ 26- ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನಿನ ಕಾಸರಗೋಡು ಜಿಲ್ಲಾಮಟ್ಟದ ನೇತೃತ್ವ ಶಿಬಿರ ಮೇ 28, 29, 30ರಂದು ಚೆರ್ವತ್ತೂರಿನ ತುರ್ತಿ ಜಿ.ಎಲ್.ಪಿ. ಶಾಲೆಯಲ್ಲಿ ಜರುಗಲಿದೆ.

ಶಿಬಿರದಲ್ಲಿ ವಿಜಯರಾಘವನ್ ಎ.ಐ.ಎಸ್. ಎಫ್. ರಾಜ್ಯ ಸಮಿತಿ ಕಾರ್ಯದರ್ಶಿ ಸೋನಿ ಬಿ. ತಂಗಮ್, ಅಧ್ಯಕ್ಷ ಎ. ಕೆ. ಮೋಹನನ್, ಡಿಪಾರ್ಟ್‌ಮೆಂಟ್ ಸ್ಕೂಲ್ ಟೀಚರ್ಸ್ ಯೂನಿಯನಿನ ನಾರಾಯಣ ಪೈಯ ವಿವಿಧ ವಿಷಯಗಳಲ್ಲಿ ಉಪನ್ಯಾಸ ನೀಡಲಿದ್ದಾರೆ.

ಮೇ 23ರಂದು ಮಂಜೇಶ್ವರ ಸಿಪಿಐ ಕಚೇರಿಯಲ್ಲಿ ಚಂದ್ರನಾಯ್ಕ್‌ರ ಅಧ್ಯಕ್ಷತೆಯಲ್ಲಿ ಸೇರಿದ ಎ. ಐ. ಎಸ್. ಎಫ್. ಮಂಡಲ ಕನ್‌ವೆನ್‌ಷನ್ ಶಿಬಿರ ಯಶಸ್ವಿಗೊಳಿಸಲು ನಿರ್ಧರಿಸಿದೆ.

ಎ. ಐ. ಎಸ್. ಎಫ್ ಮಂಡಲ ಸಮಿತಿಗೆ ಬಿ. ಎಂ ರವೀಂದ್ರ, ಸಂಚಾಲಕರಾಗಿರುವ, ಲ್ಯಾನ್ಸಿ ಡಿ'ಸೋಜ, ಭಕ್ತರಾಜ್ ಸಹ ಸಂಚಾಲಕರಾಗಿರುವ 18 ಸದಸ್ಯರನ್ನೊಳಗೊಂಡ ಸಮಿತಿಯನ್ನು ಚುನಾಯಿಸಲಾಯಿತು.

ಬಿತ್ತನೆ ಆಲೂಗಡ್ಡೆ ಬೆಲೆ ಇಳಿಕೆಗೆ ಆಗ್ರಹ

ಹಾಸನ, ಮೇ 26- ಜಿಲ್ಲೆಯಲ್ಲಿ ಸಕಾಲದಲ್ಲಿ ಮಳೆಬೀಳದೆ ಆಲೂಗಡ್ಡೆ ಬಿತ್ತನೆಗೆ ಬಹಳ ತೊಂದರೆಯಾಗಿದೆ ನೊಂದ ರೈತರಿಗಾಗಿಯಾದರೂ ಗಗನಕ್ಕೇರಿರುವ ಆಲೂಗಡ್ಡೆ ಬೆಲೆಯನ್ನು ಇಳಿಸಿ ಅನುಕೂಲ ಮಾಡಿಕೊಡಬೇಕೆಂದು ತಾಲೂಕು ರೈತ ಸಂಘದ ಅಧ್ಯಕ್ಷ ಡಿ.ಕೆ.ನಿಂಗೇಗೌಡ ವಿನಂತಿಸಿದ್ದಾರೆ.

ಮುಂಗಾರು

ಗುರುವಾರ, ಮೇ 25, 1989

ಅಸಮಾಧಾನದ ಸ್ಫೋಟ

ಚೀನಾದಲ್ಲಿ ರಾಜಕೀಯ ಗೊಂದಲ ಸ್ಫೋಟ ಗೊಂಡಿದೆ. ಜನತೆಯ ಅಸಮಾಧಾನ ಬಯಲುಗೊಂಡಿದೆ. ಪ್ರಸಕ್ತ ಚೀನಾ ಆಡಳಿತ ವ್ಯವಸ್ಥೆಯ ವಿರುದ್ಧ ಆ ದೇಶಾದ್ಯಂತ ಎಲ್ಲೆಡೆಯೂ ಭಾರಿ ಪ್ರತಿಭಟನೆ ಮೂಡಿಬಂದಿದೆ. ಪ್ರಸ್ತುತ ನಡೆದಿರುವ ಭಾರಿ ಚಳವಳಿಯಲ್ಲಿ ವಿದ್ಯಾರ್ಥಿಗಳೇ ಮುಂಚೂಣಿಯಲ್ಲಿದ್ದಾರೆ. ಇವರನ್ನು ತಹಬಂದಿಗೆ ತರುವ ನಿಟ್ಟಿನಲ್ಲಿ ಸರಕಾರದ ಆದೇಶವನ್ನು ಸೇನಾ ನಾಯಕರುಗಳೂ ಕೂಡ ತಿರಸ್ಕರಿಸಿದ್ದಾರೆ. ಇದರಿಂದಾಗಿ ಈ ಚಳವಳಿ ಹೊಸ ರೂಪು ಪಡೆದುಕೊಂಡಿದೆ. ಇದರಿಂದಾಗಿ ಈ ಚಳವಳಿ ಅತ್ಯಂತ ಬಲಿಷ್ಠವಾಗಿ ವ್ಯಾಪಕವಾಗಿ ಹಬ್ಬುತ್ತಿದೆ. ಸೇನಾಧಿಕಾರವನ್ನು ಕೊನೆಗೊಳಿಸಿ ಜನತಂತ್ರ ಮಾದರಿ ಸರಕಾರ ಬೇಕೆಂಬ ಒತ್ತಾಯ ಜನಸಮೂಹದಿಂದ ವ್ಯಾಪಕವಾಗಿ ಕೇಳಿಬರುತ್ತಿದೆ. ಚೀನಾದ ಇತ್ತೀಚೆಗಿನ ರಾಜಕೀಯ ಆಗುಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಇದೊಂದು ಮಹತ್ವದ ಘಟನೆಯಾಗಿ ಎದ್ದು ಕಾಣುತ್ತಿದೆ.

'ನಮಗೆ ಜನತಂತ್ರ ಬೇಕು, ಟ್ಯಾಂಕ್ ಅಲ್ಲ' ಎಂಬ ಘೋಷಣೆ ಈಗ ಚೀನಾದಲ್ಲಿ ಸರ್ವೇಸಾಮಾನ್ಯವಾಗಿ ಬಿಟ್ಟಿದೆ. ಇದೊಂದು ಆರೋಗ್ಯಪೂರ್ಣ ರಾಜಕೀಯ ಬೆಳವಣಿಗೆಯಾಗಿದೆ. ಯಾವುದೇ ಸರಕಾರ ಜನಸಮೂಹದ ಭಾವನೆಗಳ ಮೇಲೆ ತಮ್ಮ ಬಂದೂಕಿನ ಬಲದಿಂದ ಹಿಡಿತ ಸಾಧಿಸಹೊರಡುವುದೇ ಆದರೆ ಅದಕ್ಕಿಂತ ದೊಡ್ಡ ಅಮಾನುಷತೆ ಬೇರೊಂದಿಲ್ಲ. ಇತ್ತೀಚೆಗೆ ಚೀನಾ ಸರಕಾರ ಈ ಅಮಾನುಷತೆಯನ್ನು ಪ್ರದರ್ಶಿಸಿದೆ ಅದರ ಪರಿಣಾಮವನ್ನು ಈಗ ಆ ಸರಕಾರವೇ ಎದುರಿಸುತ್ತಿದೆ. ಸರಕಾರ ತಮ್ಮ ಬಂದೂಕಿನ ಬಲದಿಂದ ಬಲಿಷ್ಠ ಸೇನೆಯ ಬಲದಿಂದ ಜನರ ಸ್ವಾಭಿಮಾನದ ಧ್ವನಿಯನ್ನು ಅಡಗಿಸಬಹುದೆಂದು ಯೋಚಿಸಿದುದರ ಮತ್ತು ಆ ದಿಕ್ಕಿನಲ್ಲಿ ಕಾರ್ಯೋನ್ಮುಖವಾದುದರ ತಕ್ಷಣದ ಪರಿಣಾಮ ಇದು. ಒಂದು ಜನಶಕ್ತಿ ಸ್ವಾಭಿಮಾನ ಪ್ರತೀಕದಿಂದ ಒಗ್ಗೂಡಿ ಎದ್ದು ನಿಂತರೆ ಎಂತಹ ಸರಕಾರವನ್ನೇ ನಡುಗಿಸಬಹುದೆಂಬುದಕ್ಕೆ ಪ್ರಸ್ತುತ ಚೀನಾ ಘಟನೆಗಳೇ ಸ್ಪಷ್ಟ ಉದಾಹರಣೆಯಾಗಿದೆ.

ಪ್ರಸ್ತುತ ಬೀಜಿಂಗ್ ನಗರವಂತೂ ಹೊತ್ತಿ ಉರಿಯುತ್ತಿದೆ. ಸೇನಾಡಳಿತದ ನಿಯಮಗಳನ್ನು ತಿರಸ್ಕರಿಸಿರುವ ಜನರು ನಗರದ ಹೊರ ವಲಯದಲ್ಲೇ ಶಸ್ತ್ರ ಸಜ್ಜಿತ ಸೇನಾ ಪಡೆಗಳಿಗೆ ಬೀಜಿಂಗ್‌ನ ಪ್ರವೇಶಕ್ಕೆ ತಡೆಯನ್ನು ಒಡ್ಡಿದ್ದಾರೆ. ಈ ಸೇನಾ ಪಡೆಗಳೂ ಕೂಡಾ ಜನರ ಪ್ರತಿಭಟನೆಯನ್ನು ಮುರಿಯಲು ಪ್ರಯತ್ನಿಸಿಲ್ಲ. ಸದ್ಯದಲ್ಲಿ ಚೀನಾದಲ್ಲಿ ಉಂಟಾಗಿರುವ ರಾಜಕೀಯ ಗೊಂದಲಗಳ, ಅರಾಜಕತೆಯ ಲಾಭ ಪಡೆದುಕೊಳ್ಳುವ ನಿಟ್ಟಿನಲ್ಲಿ ಸೇನಾ ನಾಯಕರುಗಳು ಪ್ರಯತ್ನಿಸಬಹುದಿತ್ತು. ಆದರೆ ಹಾಗಾಗಿಲ್ಲ. ಇದೊಂದು ಒಳ್ಳೆಯ ಬೆಳವಣಿಗೆ. ಆದರೆ ಸದ್ಯದಲ್ಲಿ ನಡೆದಿರುವ ಈ ಚಳವಳಿ ಒಂದು ಹಂತವನ್ನು ಕಂಡುಕೊಳ್ಳಲೇಬೇಕಾಗಿದೆ. ಇಲ್ಲದಿದ್ದರೆ ಈ ಚಳವಳಿ ಹೀಗೆಯೇ ಮುಂದುವರಿದರೆ ಸೇನಾ ನಾಯಕರು ತಮ್ಮ ಕೈಗೆ ಅಧಿಕಾರವನ್ನು ತೆಗೆದುಕೊಳ್ಳುವ ಸಾಧ್ಯತೆಗಳಿವೆ. ಈ ಕಾರಣದಿಂದಾಗಿ ಸರಕಾರ ಮತ್ತು ವಿದ್ಯಾರ್ಥಿಗಳು ಈ ಸೂಕ್ಷ್ಮವನ್ನು ಅರಿತುಕೊಂಡು ಬೇಗನೆ ಒಂದು ತೀರ್ಮಾನಕ್ಕೆ ಬರಬೇಕಾದ ಅಗತ್ಯವಿದೆ.

ಇದೇ ಚಳವಳಿಯ ಸಂದರ್ಭದಲ್ಲಿ ಪ್ರತಿಭಟನಾಕಾರರು ಬೀಜಿಂಗ್ ನಗರದ ಪ್ರಮುಖ ಚೌಕ ಒಂದರಲ್ಲಿದ್ದ ಮಾವೋತ್ಸೆ ತುಂಗ್ ಅವರ ಭಾವಚಿತ್ರವನ್ನು ಹಾಳುಗೆಡಹಿದ್ದಾರೆಂಬ ಸುದ್ದಿ ಬಂದಿದೆ. ಇದು ಮಾತ್ರ ತೀರಾ ಖೇದಕರ ಸಂಗತಿಯಾಗಿದೆ. ಸುಮಾರು ನಾಲ್ಕು ದಶಕಗಳ ಕಾಲ ಚೀನಾದಲ್ಲಿ ಹೋರಾಟ ಸಂಘಟಿಸಿ ಆ ನಂತರ ಅತ್ಯುತ್ತಮವಾದ ಜನಪರ ಸರಕಾರ ಸ್ಥಾಪಿಸಿ ಇಡಿ ಚೀನಾವನ್ನೇ ಜಾಗತಿಕ ಮಟ್ಟದಲ್ಲಿ ಒಂದು ಬಲಿಷ್ಠ ರಾಷ್ಟ್ರವನ್ನಾಗಿ ಕಟ್ಟಿದ ಮಹಾ ಪುರುಷ ಮಾವೋತ್ಸೆ ತುಂಗ್ ಅವರ ಬಗ್ಗೆ ಜನಸಮೂಹ ಗೌರವ ತೋರಿಸಬೇಕಾದ ಅಗತ್ಯ ಬಹಳಷ್ಟಿದೆ. ಮಾವೊ ಚಿಂತನೆ ಮತ್ತು ಅವರ ನವ ಪ್ರಜಾಪ್ರಭುತ್ವವಾದಿ ಸಿದ್ಧಾಂತಗಳೆಲ್ಲಾ ಈ ಜನಾಂಗಕ್ಕೆ ಆದರ್ಶವಾಗಬೇಕಿದೆ. ಆದರೆ ಪ್ರದರ್ಶನಕಾರರು ಈ ನಿಟ್ಟಿನಲ್ಲಿ ದಿಕ್ಕು ತಪ್ಪಿದ್ದಾರೆನಿಸುತ್ತೆ. ಇಲ್ಲಿ ಚಳವಳಿಗಾರರು ಅರಿವು ಮೂಡಿಸಿಕೊಳ್ಳಬೇಕಾದ ಅನಿವಾರ್ಯತೆ ಬಹಳಷ್ಟಿದೆ.

ಆದ್ದರಿಂದ ಚೀನಾದ ಪ್ರಧಾನಿ ಲೀ ಪೆಂಗ್ ನೇತೃತ್ವದ ಸರಕಾರ ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಸಮರ್ಪಕವಾದ ಧೋರಣೆ ತಳೆದು ಪ್ರತಿಭಟನಾಕಾರರ ಬೇಡಿಕೆಗಳಿಗೆ ಸ್ಪಂದಿಸಬೇಕಾದ ಅಗತ್ಯವಿದೆ. ಇಲ್ಲದಿದ್ದರೆ ಈ ರಾಜಕೀಯ ಗೊಂದಲ ತೀರಾ ಅರಾಜಕತೆಗೆ ಪೂರಕವಾಗಿ ದೇಶಾದ್ಯಂತ ಅನಗತ್ಯವಾಗಿ ಅಶಾಂತಿ ಮೂಡಲು ಸಾಧ್ಯವಾಗುತ್ತದೆ. ಅದಕ್ಕೆ ಸರಕಾರ ಅವಕಾಶ ಕೊಡದಿರಲಿ.

...ಜಾಗ್ರತೆ ಅಗತ್ಯ'

...ಂ ಸಪ್ತಾಹದಲ್ಲಿ ಸೂಚನಾ ಫಲಕಗ...ನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

...ಸಪ್ತಾಹದ ಅಂಗವಾಗಿ ಸುಳ್ಯ ಪೊಲೀ...ಸ್ ಉಪನಿರೀಕ್ಷಕ ಟಿ. ಸಂಜೀವನ್ನಾಯ್ಕ್‌ರ ...ನೇತೃತ್ವದಲ್ಲಿ 22 ಸೂಚನಾ ಫಲಕಗಳು, ...ಯುಕ್ತ ಸ್ಥಳಗಳಲ್ಲಿ ರಸ್ತೆ ದಿಬ್ಬಗಳನ್ನು ...ಸ್ಥಾಪಿಸುವುದರೊಂದಿಗೆ ಚಾಲಕ...ರಿಗೆ ಮತ್ತು ಸಾರ್ವಜನಿಕರಿಗೆ ರಸ್ತೆ ಅಪ...ಘಾತ ತಡೆ, ರಸ್ತೆ ನಿಯಮಾವಳಿಗಳ ಬಗ್ಗೆ ...ಮಾಹಿತಿ ನೀಡಲಾಯಿತು.

...ಸಮಾರಂಭದಲ್ಲಿ ಸುಳ್ಯ ರೋಟರಿ ...ಅಧ್ಯಕ್ಷ ರೊ। ಗಿರೀಶ್ ಭಾರದ್ವಾಜ್...ರಿಂದ 'ಪ್ರಥಮ ಚಿಕಿತ್ಸೆ' ಬಗ್ಗೆ ಮತ್ತು ...ಪೊಲೀಸ್ ಉಪನಿರೀಕ್ಷಕ ಟಿ. ಸಂಜೀವ...ನ್ನಾಯ್ಕ್‌ರಿಂದ 'ರಸ್ತೆ ಅಪಘಾತ ತಡೆ' ಬಗ್ಗೆ ...ವಿವರಣಾತ್ಮಕ ಉಪನ್ಯಾಸ ನಡೆಯಿತು.

...ಸುಳ್ಯ ಮಂಡಲ ಪ್ರಧಾನ ಎಂ. ...ಬಾಲಕೃಷ್ಣ ಮಾತನಾಡಿ ರಸ್ತೆ ಅಪಘಾತಗ...ಳನ್ನು ತಡೆಯುವಲ್ಲಿ ಸಾರ್ವಜನಿಕರು ...ಚಾಲಕರೊಂದಿಗೆ ಸಹಕರಿಸಬೇಕೆಂದು ಆಶಿ...ಸಿದರು. ಅಧ್ಯಕ್ಷತೆಯನ್ನು ವಹಿಸಿದ ...ಸುಳ್ಯ ತಹಸೀಲ್ದಾರ್ ಕೆ. ಶ್ರೀರಾಮಯ್ಯ ...ಚಾಲಕರ ವಹಿಸಬೇಕಾದ ಕರ್ತವ್ಯಗಳನ್ನು ...ಮನವರಿಕೆ ಮಾಡಿದರು.

...ಆರಂಭದಲ್ಲಿ ಸುಳ್ಯ ಪಯಸ್ವಿನಿ ...ಜೂನಿಯರ್ ಚೇಂಬರ್ ಅಧ್ಯಕ್ಷ ಜಿ. ಕೆ. ...ಸದಾನಂದ ಸ್ವಾಗತಿಸಿದರೆ ಕೊನೆಯಲ್ಲಿ ...ಲಯನ್ಸ್ ಕ್ಲಬ್ ಅಧ್ಯಕ್ಷ ಜನಾರ್ದನ ...ಭಟ್ ವಂದಿಸಿದರು. ಯು. ಸುಬ್ರಾಯ ...ಗೌಡ ಕಾರ್ಯಕ್ರಮ ನಿರ್ವಹಿಸಿದರು.

...ದಿಂದ ಮೇ 29ರಂದು ಇಲ್ಲಿಗೆ ಸಮೀಪದ 'ಗದಗ' ನಗರದಲ್ಲಿ 2ನೇ ರಾಜ್ಯಮಟ್ಟದ ಲಂಬಾಣಿ ಸಮ್ಮೇಳನ ನಡೆಯಲಿದೆ.

ರಾಜ್ಯದಲ್ಲಿ ಸುಮಾರು 16ಲಕ್ಷ ಜನ ಸಂಖ್ಯೆ ಇರುವ ಲಂಬಾಣಿ ಜನಾಂಗವನ್ನು ರಾಜಕೀಯ ಪಕ್ಷಗಳು ತಮ್ಮ ಸ್ವಾರ್ಥ ಸಾಧನೆಗಾಗಿ ತೀವ್ರವಾಗಿ ಶೋಷಿಸುತ್ತಿರು ವುದರ ವಿರುದ್ಧ ಬಂಡೇಳುವ ಒಂದು ಚಾರಿತ್ರಿಕ ಸಮ್ಮೇಳನ ಇದಾಗಲಿದೆ ಎಂದು ರಾಜ್ಯ ಲಂಬಾಣಿ ಸಂಘದ ಅಧ್ಯಕ್ಷ ಕೃಷ್ಣ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಮ್ಮೇಳನದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ವೀರೇಂದ್ರಪಾಟೀಲ್, ಕೇಂದ್ರ ಸಚಿವರುಗಳಾದ, ರಾಜೇಂದ್ರ ಕುಮಾರ ಬಾಜಪೈ. ರಾಜೇಶ್ ಪೈಲಟ್, ಮೊಹಿಸಿನ್ ಕಿದ್ವಾಯಿ, ಜನಾರ್ಧನ ಪೂಜಾರಿ, ಎ. ಐ. ಸಿ. ಸಿ. (ಐ) ಪ್ರಧಾನ ಕಾರ್ಯ ದರ್ಶಿಗಳಾದ ಎಂ. ಬಿ. ಸಿಂಗ್, ಆಸ್ಕರ್ ಫೆರ್ನಾಂಡೀಸ್, ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ರಾಮ್‌ನರೇಶ್ ಯಾದವ್, ಕರ್ನಾಟಕ ರಾಜ್ಯದ ಮುಖಂಡರುಗಳಾದ ಕೆ. ಎಚ್. ಪಾಟೀಲ್, ಡಿ. ಕೆ. ನಾಯ್ಕರ್, ಕೆ. ಎಸ್. ನಾಗರತ್ನಮ್ಮ ಹಾಗೂ ಅನೇಕ ಸಂಸದ್ ಸದಸ್ಯರು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

ಲಂಬಾಣಿಗರ ಬೇಡಿಕೆಗಳು

1. ಕರ್ನಾಟಕದಲ್ಲಿರುವ ಎಲ್ಲಾ ಲಂಬಾಣಿ ತಾಂಡೆಗಳನ್ನು ಕಂದಾಯ ಹಳ್ಳಿಗಳನ್ನಾಗಿ ಪರಿವರ್ತಿಸಿ ಎಲ್ಲಾ ಸೌಲಭ್ಯ ಒದಗಿಸಬೇಕು.

2. ರಾಜ್ಯದಲ್ಲಿ ಲಂಬಾಣಿಗಳು ತಲೆಯ ಮೇಲೆ ಸೌದೆ ಹೊತ್ತು ಅದನ್ನು ಮಾರಿ ಜೀವನ ಸಾಗಿಸುತ್ತಿದ್ದರು. ಅದೇ ಅವರ ವೃತ್ತಿಯಾಗಿತ್ತು ಈಗ ಸರಕಾರ ಇದನ್ನು ನಿಷೇಧಿಸಿರುವುದರಿಂದ ಇವರು ಬೀದಿಪಾಲಾಗಿದ್ದು, ಮಾನಮರ್ಯಾದೆಯಿಂದ ಬದುಕಲು ಅಸಾಧ್ಯವಾಗಿದೆ. ಇವರಿಗೆ ಖಾಯಂ ಉದ್ಯೋಗ ಕೊಡಬೇಕು ಯಾ ತಲೆಯ ಮೇಲೆ ಸೌದೆ ಹೊತ್ತು ಜೀವನ ಸಾಗಿಸಲು ಅವಕಾಶಕೊಡಬೇಕು.

...

5. ಲಂಬಾಣಿಗರ ಸಮಸ್ಯೆ ಅರಿಯಲು ಮತ್ತು ಪರಿಹಾರ ಕಂಡುಕೊಳ್ಳಲು ಒಂದು ಆಯೋಗ ನೇಮಿಬೇಕು.

6. ಲಂಬಾಣಿ ಮಹಿಳೆಯರಿಂದ ಬಟ್ಟೆ ತಯಾರಿಸಿ ಬೇರೆ ದೇಶಗಳಿಗೆ ರಫ್ತು ಮಾಡಲು ಅವರಿಗೆ ಕಚ್ಚಾವಸ್ತು ಹಾಗೂ ಧನಸಹಾಯ ಮಾಡುವ ಮೂಲಕ ಸ್ವಉದ್ಯೋಗ ಕಲ್ಪಿಸಿಕೊಡಬೇಕು.

ಚೆನ್ನರಾಯಪಟ್ಟಣ ಬಳಿ ಲಾರಿ–ಬಸ್ ಡಿಕ್ಕಿ: 2 ಬಲಿ

ಹಾಸನ, ಮೇ 24- ಚೆನ್ನರಾಯ ಪಟ್ಟಣಕ್ಕೆ ಸಮೀಪದ ಶೆಟ್ಟಿಹಳ್ಳಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಬಸ್ಸೊಂದು ನಿನ್ನೆ ಲಾರಿಯೊಂದಕ್ಕೆ ಡಿಕ್ಕಿ ಹೊಡೆದು ಇಬ್ಬರು ಸ್ಥಳದಲ್ಲಿಯೇ ಮೃತರಾದ ಘಟನೆ ವರದಿಯಾಗಿದೆ.

ಈ ಘಟನೆಯಲ್ಲಿ ಇತರ 20 ಮಂದಿಗೆ ಗಾಯಗಳಾಗಿವೆ. ಲಾರಿ ಧರ್ಮಸ್ಥಳದಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿತ್ತು. ಲಾರಿ ಡ್ರೈವರ್ ಮಂಜುನಾಥ ಮತ್ತು ಶ್ರವಣಬೆಳಗೊಳದ ಶಿವಣ್ಣ ಸ್ಥಳದಲ್ಲೇ ಸಾವನ್ನಪ್ಪಿದರು.

ಬಸ್ ಚಾಲಕ ಮುನಿರಾಜುವನ್ನು ಬಂಧಿಸಲಾಗಿದೆ

ಕಾಲೇಜಿಗೆ ಅನುಮತಿ

ಬಜಪೆ, ಮೇ 24- ಬಜಪೆ, ಸುಂಕದ ಕಟ್ಟೆಯಲ್ಲಿ ಈ ಶೈಕ್ಷಣಿಕ ವರ್ಷದಿಂದಲೇ ನಿರಂಜನ ಸ್ವಾಮಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸಲು ಮಂಗಳೂರು ವಿಶ್ವ ವಿದ್ಯಾನಿಲಯದ ಅನುಮತಿ ದೊರೆತಿದೆ.

ಈ ವರ್ಷ ಬಿ.ಎ. ಮತ್ತು ಬಿ.ಕಾಂ. ತರಗತಿಗಳು ಪ್ರಾರಂಭವಾಗಲಿದ್ದು ಆಸಕ್ತ ವಿದ್ಯಾರ್ಥಿಗಳು ಪ್ರಿನ್ಸಿಪಾಲರನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ನಮ್ಮ ನೆಚ್ಚಿನ ಪ್ರಧಾನಿ

ಸ್ವಾಗತ

ಸುಸ್ವಾಗತ

ಮುಂಗಾರು

ಬುಧವಾರ, ಮೇ 24, 1989

ಮಹತ್ವದ ಮೈಲುಗಲ್ಲು

ಭಾರತದ ಮೊಟ್ಟಮೊದಲ ಮಧ್ಯಂತರ್‌ಗಾಮಿ ಕ್ಷಿಪಣಿ 'ಅಗ್ನಿ'ಯನ್ನು ಯಶಸ್ವಿಯಾಗಿ ಉಡಾಯಿಸಲಾಗಿದೆ. ಈ ಮೂಲಕ ಇಂತಹ ಅಪೂರ್ವ ಕ್ಷಿಪಣಿಯನ್ನು ಹೊಂದಿದ ಜಗತ್ತಿನ ಐದನೇ ಪ್ರಮುಖ ದೇಶ ಭಾರತವಾಗಿದೆ. ಇದು ಭಾರತದ ವೈಜ್ಞಾನಿಕ ತಂತ್ರಜ್ಞಾನ ಕ್ಷೇತ್ರದಲ್ಲೊಂದು ಮೈಲಿಗಲ್ಲು.

2,500 ಕಿ. ಮೀ. ದೂರ ಹಾರುವ ಸಾಮರ್ಥ್ಯದ 'ಅಗ್ನಿ'ಯ ಪರೀಕ್ಷಾರ್ಥ ಪ್ರಯೋಗದೊಂದಿಗೆ ಭಾರತ ಜಗತ್ತಿನಲ್ಲಿ ಬ್ಯಾಲಿಸ್ಟಿಕ್ ಕ್ಷಿಪಣಿ ಸಾಮರ್ಥ್ಯ ಹೊಂದಿರುವ ರಾಷ್ಟ್ರಗಳಾದ ಅಮೆರಿಕ, ರಶ್ಯಾ, ಫ್ರಾನ್ಸ್ ಮತ್ತು ಚೀನಾ ದೇಶಗಳ ಸಾಲಿನಲ್ಲಿ ಸೇರಿದಂತಾಗಿದೆ. ಇದರಿಂದ ಭಾರತದ ಪ್ರತಿಷ್ಠೆ ಹೆಚ್ಚಾಗಿದೆ.

ಇದರಿಂದಾಗಿ ಸಮರ್ಥವಾದ ದೂರವ್ಯಾಪ್ತಿಯ ಅಣ್ವಸ್ತ್ರೇತರ ಅಸ್ತ್ರಗಳನ್ನು ನಿರ್ಮಿಸುವ ಸಾಮರ್ಥ್ಯ ಈಗ ಭಾರತಕ್ಕೆ ಒದಗಿದೆ ಎನ್ನುವುದು ಈಗ ಸ್ಪಷ್ಟವಾಗಿದೆ.

'ಅಗ್ನಿ' ಕ್ಷಿಪಣಿಯಶಸ್ವಿಯಾಗಿ ಉಡಾವಣೆಗೊಳ್ಳುವುದರ ಮೂಲಕ 1984ರಲ್ಲಿ ಆರಂಭವಾದ ಭಾರತದ ಸಮಗ್ರ ಕ್ಷಿಪಣಿ ಅಭಿವೃದ್ಧಿ ಕಾರ್ಯಕ್ರಮ ಈಗ ಮಹತ್ವದ ಘಟ್ಟವನ್ನು ತಲುಪಿದಂತಾಗಿದೆ.

ಈ ಕ್ಷಿಪಣಿ ಉಡಾವಣೆಯಿಂದ ಭಾರತ-ಅಮೆರಿಕ ಸಂಬಂಧ ಹದಗೆಡಬಹುದೆಂಬ ಅಮೆರಿಕಾದ ಬೆದರಿಕೆಯನ್ನು ಕಡೆಗಣಿಸಿ 75 ಟನ್ ತೂಕದ ಸ್ವದೇಶಿ ನಿರ್ಮಿತ ಕ್ಷಿಪಣಿಯನ್ನು ಹಾರಿಸಲಾಗಿದೆ. ಇದರಿಂದ ಈ ಮೂಲಕ ದೇಶದ ರಕ್ಷಣಾ ಅವಶ್ಯಕತೆಗಳ ನಿರ್ವಹಣೆಯಲ್ಲಿ ಹೊಸ ಅಧ್ಯಾಯ ಒಂದು ಆರಂಭವಾದಂತಾಗಿದೆ.

ಪ್ರಸ್ತುತ ಭಾರತ ಈ ರೀತಿ ಕ್ಷಿಪಣಿಯನ್ನು ಉಡಾವಣೆಗೊಳಿಸಿರುವುದರ ಬಗ್ಗೆ ಅಮೆರಿಕಾ ತನ್ನ ಅಸಮಾಧಾನ ವ್ಯಕ್ತಪಡಿಸುವುದು ಸಹಜ. ಇದರಿಂದಾಗಿ ಜಗತ್ತಿನಲ್ಲಿ ಇಂತಹ ಪ್ರಯೋಗಗಳ ಮೂಲಕ ತನ್ನ ಸರಿಗಟ್ಟಿ ನಿಲ್ಲುವ ಯಾವುದೇ ಮೂರನೇ ಜಗತ್ತಿನ ರಾಷ್ಟ್ರವನ್ನೂ ಅಮೆರಿಕಾ ಸಹನೆಯಿಂದ ನೋಡಲು ಸಾಧ್ಯವಿಲ್ಲ. ಇದು ಆ ದೇಶದ ಸಾಮ್ರಾಜ್ಯಶಾಹಿ ಧೋರಣೆಯ ದ್ಯೋತಕ.

ಈ ಕ್ಷಿಪಣಿಯ ಉಡಾವಣೆಯ ನಿಟ್ಟಿನಲ್ಲಿ ಭಾರತ ಬಹಳಷ್ಟು ಪ್ರಯಾಸ ಪಟ್ಟಿದೆ. ಎಪ್ರಿಲ್ 20 ಮತ್ತು ಮೇ 1 ಈ ಎರಡೂ ಬಾರಿಯೂ ಕೆಲವು ತಾಂತ್ರಿಕ ದೋಷಗಳಿಂದಾಗಿ ಅಗ್ನಿಯ ಉಡಾವಣೆಯನ್ನು ಮುಂದೂಡಲಾಗಿತ್ತು. ಆದರೆ ಈ ಬಾರಿ ಯಶಸ್ವಿಯಾಗಿ ಈ ಕ್ಷಿಪಣಿಯನ್ನು ಉಡಾವಣೆಗೊಳಿಸಲಾಗಿದೆ.

ಈ ಕ್ಷಿಪಣಿಯ ತಂತ್ರಜ್ಞಾನ, ವಿನ್ಯಾಸ ಸಲಕರಣೆಗಳೆಲ್ಲವೂ ಕೂಡಾ ಸಂಪೂರ್ಣವಾಗಿ ಸ್ವದೇಶಿ ತಯಾರಿಕೆಯದೆಂಬುದು ಭಾರತಕ್ಕೆ ಹೆಮ್ಮೆ ತರುವ ವಿಷಯವಾಗಿದೆ. ಅಂತೆಯೇ ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸಿದ ಹೆಮ್ಮೆಯೂ ಭಾರತಕ್ಕೆ ಉಂಟಾಗಿದೆ.

ಇದರಿಂದಾಗಿ ಭಾರತ ಪ್ರಸ್ತುತ ತನ್ನ ನೆರೆಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಕೆಲವು ಅಹಿತಕರ ಸಾಮ್ರಾಜ್ಯಶಾಹಿ ಕುತಂತ್ರಗಳ ವಿರುದ್ಧ ಆತ್ಮ ವಿಶ್ವಾಸದಿಂದ ಪ್ರತಿಭಟಿಸುವ ಸಾಮರ್ಥ್ಯವನ್ನು ಬೆಳೆಸಿಕೊಂಡಂತಾಗಿದೆ.

ಬಹುತೇಕ ಪಾಶ್ಚಿಮಾತ್ಯ ದೇಶಗಳು ಅಮೆರಿಕಾದ ಅನುಮತಿಯಿಲ್ಲದೆ ಇಂತಹದ್ದೇ ಕ್ಷಿಪಣಿಗಳನ್ನು ಅಭಿವೃದ್ಧಿ ಪಡಿಸಿರುವಾಗ ಈ ವಿಚಾರದಲ್ಲಿ ಭಾರತವನ್ನು ಮಾತ್ರ ಟೀಕಿಸುವುದು ಸರಿಯಲ್ಲ ಎಂದು ಭಾರತ ಬಹಳ ಹಿಂದೆಯೇ ಅಮೆರಿಕಾಕ್ಕೆ ಸ್ಪಷ್ಟಪಡಿಸಿದೆ. ಕೆಲವು ದೇಶಗಳು ಇತರ ದೇಶಗಳಿಗೆ ಕ್ಷಿಪಣಿಗಳನ್ನು ಮಾರಾಟ ಮಾಡಿದ ಪ್ರಕರಣಗಳೂ ಇವೆ. ಇಂತಹದರಲ್ಲಿ ಭಾರತ, ತನ್ನದೇ ಆದ ತಂತ್ರಜ್ಞಾನದ ನೆಲೆಯಲ್ಲಿ 'ಅಗ್ನಿ' ಕ್ಷಿಪಣಿಯನ್ನು ಉಡಾವಣೆಗೊಳಿಸಿರುವುದು ಒಂದು ಮಹತ್ವದ ಸಾಧನೆಯಾಗಿದೆ. ಈ ನಿಟ್ಟಿನಲ್ಲಿ ಅಮೆರಿಕಾವೇ ಸೇರಿದಂತೆ ಯಾವುದೇ ದೇಶವೇ ಆಗಲಿ ಇದನ್ನು ಟೀಕಿಸುವ ಯಾವುದೇ ನೈತಿಕ ಹಕ್ಕನ್ನು ಉಳಿಸಿಕೊಂಡಿಲ್ಲ. ದೇಶದ ರಕ್ಷಣಾ ದೃಷ್ಟಿಯಿಂದ ಅಣ್ವಸ್ತ್ರೇತರ ಶಸ್ತ್ರಾಸ್ತ್ರಗಳನ್ನು ಬಳಸುವಲ್ಲಿ ಈ ಕ್ಷಿಪಣಿಯ ಪ್ರಯೋಗ ಸರಕಾರದ ಒಂದು ಸ್ವಾಗತಾರ್ಹ ಹೆಜ್ಜೆಯೇ ಆಗಿದೆ.

...ಪ್ಪನ ಗಿರಣಿಯನ್ನು ಮಾಜಿ ಸಚಿವ ...ಟ್ಟಿ, ಹೆಬ್ರಿ ಗೋಪಾಲ ಭಂಡಾರಿ; ...ಮುಂತಾದವರನ್ನು ಚಿತ್ರದಲ್ಲಿ ಕಾಣ...

ಚಿತ್ರ: ಪದ್ಮಶ್ರೀ ನಾರಾವಿ.

ಬೀಳ್ಕೊಡುಗೆ

(ಮಂಗಳೂರು ವರದಿ)

...ಪ್ಪಿನಂಗಡಿ, ಮೇ 23– ಸಹಕಾರಿ ಚಳ...ವಳಿಯ ಹಿರಿಯ ನಾಯಕರಾದ ...ದ್ಯೆಂದೂರು ರಾಮಮೋಹನ ರಾವ್ ...ವರನ್ನು ಇತ್ತೀಚೆಗೆ ಪುತ್ತೂರಿನಲ್ಲಿ ...ಳ್ಕೊಡಲಾಯಿತು.

...ವಿದಾಯ ಕೂಟ ಸಮಾರಂಭದ ಅಧ್ಯ...ಕ್ಷತೆಯನ್ನು ರಾಜ್ಯ ಕೃಷಿ ಮತ್ತು ...ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ನಿರ್ದೇಶ...ಕರಾದ ಕೆಮ್ಮಾರ ಬಾಲಕೃಷ್ಣ ಗೌಡರು ...ವಹಿಸಿದ್ದರು.

ದ.ಕ. ಕೃಷಿಕರ ಸಹಕಾರಿ ಮಾರಾಟ ...ಸಂಘದ ಅಧ್ಯಕ್ಷ ಕೆ. ಆರ್. ಲಕ್ಷ್ಮಣ, ...ಪುತ್ತೂರು ಸಹಕಾರಿ ರಂಗದ ಬಿ. ಗಣಪತಿ ...ಶೆಟ್ಟಿ, ಶಿವರಾಮ ಕಜೆ ಅವರು ದ್ಯೆಂದೂರು ...ರಾಮಮೋಹನ ರಾಯರ ಸಾಧನೆಗಳನ್ನು ...ನೆನೆದು ಮಾತನಾಡಿದರು. ರಾಮ...ಮೋಹನ ರಾಯರು, ಊರವರು ನೀಡಿದ ...ವಿದಾಯ ಕೂಟಕ್ಕೆ ಕೃತಜ್ಞತೆ ಸಲ್ಲಿಸಿದರು.

...ತಾಲೂಕು ಸಹಕಾರಿ ಯೂನಿಯನ್ ...ಅಧ್ಯಕ್ಷ ಕಜೆ ಈಶ್ವರ ಭಟ್ ಸ್ವಾಗತಿಸಿ, ...ವಂದಿಸಿದರು.

...ಗೆ ಕೃಷಿ ...ವಿತರಣೆ

...ಕರಣ, ಕೃಷಿ ಸಾಮಗ್ರಿ ಮತ್ತು ಕೃಷಿ ಉಪಕರಣ ಒಟ್ಟು 11190-90ರೂ. ಮೌಲ್ಯದ ಕೃಷಿ ಸಾಮಗ್ರಿಯನ್ನೂ ಹಂಚ...ಲಾಯಿತು.

ಮುಖ್ಯ ಅತಿಥಿಗಳಾಗಿ, ಮಾಜಿ ಶಾಸಕ ...ಬಿ. ಎ. ಉಮರಬ್ಬ, ಬಿ. ರಮಾನಾಥ ರೈ ...ಜಿ. ಪ. ಸದಸ್ಯ ರಾಮಯ್ಯ ನಾಯ್ಕ ...ಅವರು ಆಗಮಿಸಿ ಕೃಷಿ ಉಪಕರಣಗಳನ್ನು ...ಸದುಪಯೋಗಪಡಿಸಿಕೊಳ್ಳುವಂತೆ ರೈತ...ರಿಗೆ ಕರೆನೀಡಿದರು.

...ಮಾಡಬೇಕಾದೀತೆಂದು ಶಿವಮೊಗ್ಗ ಜಿಲ್ಲೆಯ ರೈತರು ಎಚ್ಚರಿಕೆ ನೀಡಿದ್ದಾರೆ.

ಮ್ಯಾಸ್ಸೀ ಫರ್ಗುಸನ್ ಟ್ರಾಕ್ಟರ್ ಮಾರಾಟ ಮಾಡುವ ಶಿವಮೊಗ್ಗ ನಗರದ ವೆಬ್ಸ್ ಕಂಪೆನಿ ಒಂದೇ ವಾರದಲ್ಲಿ ಟ್ರಾಕ್ಟರ್ ಡೆಲಿವರಿ ಕೊಡುವುದಾಗಿ ಹೇಳಿ ಪೂರ್ಣ ಹಣವನ್ನು ಡಿ.ಡಿ. ಮುಖಾಂತರ ಪಡೆದು ನಾಲ್ಕು ತಿಂಗಳಾದರೂ ಟ್ರಾಕ್ಟರ್ ಕೊಡದೆ ಸತಾಯಿಸುತ್ತಿದ್ದಾರೆಂದು ರೈತರಾದ ಎನ್. ವಾಸುದೇವಪ್ಪ, ಜಯಣ್ಣ.. ಸಾವಿರ ರೂ. ಬೆಲೆ ಹೆಚ್ಚಾಗಿದೆ. ಹೆಚ್ಚಿನ ಬೆಲೆಯ ಹಣವನ್ನು ಪಾವತಿ ಮಾಡದೆ ಟ್ರಾಕ್ಟರ್ ಕೊಡುವುದಿಲ್ಲವೆಂದೂ ಹೇಳಲಾಗುತ್ತಿದೆ ಎಂಬು ಅವರು ತಿಳಿಸಿದ್ದಾರೆ.

ಕಂಪೆನಿಯ ಕೊಟೇಷನ್ ಪ್ರಕಾರ ಮೊದಲಿನ ಬೆಲೆಗೆ ಟ್ರಾಕ್ಟರ್ ಕೊಡಬೇಕು ಮತ್ತು ಬ್ಯಾಂಕಿನ ಬಡ್ಡಿಯನ್ನು ಕಟ್ಟಿಕೊಡಬೇಕು. ಇಲ್ಲದಿದ್ದರೆ ರೈತರು ಚಳವಳಿ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ನಿರುದ್ಯೋಗಿ ದೈಹಿಕ ಶಿಕ್ಷಕರ ಚಳವಳಿ

(ಮಂಗಳೂರು ವರದಿ)

ಶಿವಮೊಗ್ಗ, ಮೇ 23 – ಪ್ರತಿ ಹಿರಿಯ ಪ್ರಾಥಮಿಕಶಾಲೆಗೆ ಒಬ್ಬ ದೈಹಿಕ ಶಿಕ್ಷಕನನ್ನು ನೇಮಕ ಮಾಡಬೇಕೆಂದು ಒತ್ತಾಯಿಸಿ ಶಿವಮೊಗ್ಗ ಜಿಲ್ಲಾ ನಿರುದ್ಯೋಗಿ ದೈಹಿಕ ಶಿಕ್ಷಕರು ಇತ್ತೀಚೆಗೆ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರಿಗೆ ಮನವಿಪತ್ರ ಸಲ್ಲಿಸಿದರು.

ನಿರುದ್ಯೋಗಿ ದೈಹಿಕ ಶಿಕ್ಷಕರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲು ಮೇ 26ರಂದು ರಾಜ್ಯ ಮಟ್ಟದಲ್ಲಿ ಚಳವಳಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಶಿವಮೊಗ್ಗ ಜಿಲ್ಲಾ ನಿರುದ್ಯೋಗಿ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ಎ. ವಜೀರ್ ಅಹಮ್ಮದ್ ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಧಾರ್ಮಿಕ ಸಭೆ

ಮೂಲ್ಕಿ, ಮೇ 23– ಕುಂದಾಪುರ ತಾಲೂಕಿನ ವಡ್ಡರ್ಸೆಯ ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ದೇವತಾ ಪುನರ್ ಪ್ರತಿಷ್ಠಾ ಮತ್ತು ಅಷ್ಟ ಬಂಧ ಬ್ರಹ್ಮಕಲಶಾಭಿಷೇಕ ಸಮಾರಂಭದ ಅಂಗವಾಗಿ ಇತ್ತೀಚೆಗೆ ಧಾರ್ಮಿಕ ಸಭೆ ಜರಗಿತು.

ಉದ್ಯಮಿ ಹರಿಕೃಷ್ಣ ಪುನರೂರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾಭೂಷಣ ತೀರ್ಥ ಸ್ವಾಮೀಜಿ ಅವರು ಅನುಗ್ರಹ ಭಾಷಣ ಮಾಡಿದರು.

ಜೀವನದಾಸ ಶೆಟ್ಟಿ, ಹರ್ಷವರ್ಧನ ಶೆಟ್ಟಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಡಾ। ಎಂ. ಆರ್.ಹೆಗ್ಡೆ ಅವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ರಘುರಾಮ ಶೆಟ್ಟಿ ಸ್ವಾಗತಿಸಿದರು.

ಪ್ರವೇಶ ಪರೀಕ್ಷೆ

ನವೋದಯ ಶಾಲೆಯ ಪ್ರವೇಶ ಪರೀಕ್ಷೆಗಳು ಮೇ 28ರಂದು ಭಾನುವಾರ ಶಿವಮೊಗ್ಗ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲಿ ನಡೆಯಲಿದೆ.

ಪರೀಕ್ಷೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ತಮ್ಮ ಪ್ರವೇಶ ಪತ್ರಗಳನ್ನು ಸಹಾಯಕ ಶಿಕ್ಷಣಾಧಿಕಾರಿಗಳು ಅಥವಾ ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಪರೀಕ್ಷೆಗೆ ಹಾಜರಾಗುವಂತೆ ಗಾಜನೂರಿನ ನವೋದಯ ವಿದ್ಯಾಲಯದ ಮುಖ್ಯಸ್ಥರು ತಿಳಿಸಿದ್ದಾರೆ.

ಎನ್. ಎಸ್. ಎಸ್. ಅಂತರ್ಕಾಲೇಜು ಆಯ್ಕೆ ಶಿಬಿರ ಆರಂಭ

ಮಂಗಳೂರು, ಮೇ 23– ಮಂಗಳೂರು ವಿಶ್ವವಿದ್ಯಾನಿಲಯ ರಾಷ್ಟ್ರೀಯ ಸೇವಾ ಯೋಜನೆಯ ಅಂತರ ಕಾಲೇಜು ಆಯ್ಕೆ ಶಿಬಿರವು ಇತ್ತೀಚೆಗೆ ಹೆಬ್ರಿಯಲ್ಲಿ ಆರಂಭವಾಯಿತು.

ಫಲಿಮಾರು ಮಠದ ವಿದ್ಯಾಧೀಶ ತೀರ್ಥ ಸ್ವಾಮೀಜಿ ಅವರು ಈ ಶಿಬಿರವನ್ನು ಉದ್ಘಾಟಿಸಿದರು. ಹೆಬ್ರಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಿನ್ಸಿಪಾಲ್ ಎಂ. ಎಸ್. ಪ್ರಭು ಅಧ್ಯಕ್ಷತೆ ವಹಿಸಿದ್ದರು.

ಪೇಜಾವರ ಮಠಾಧೀಶ ವಿಶ್ವೇಶ ತೀರ್ಥ ಸ್ವಾಮೀಜಿ, ಮಾಜಿ ಶಾಸಕ ವೀರಪ್ಪ ಮೊಯ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಎನ್. ಎಸ್. ಎಸ್. ಶಿಬಿರಾರ್ಥಿ...

ಮುಂಗಾರು

ಶನಿವಾರ, ಮೇ 20, 1989

ಮಾನವತೆಯ ನಿಲುವು ಬೇಕಿದೆ

ಭಾರತ–ನೇಪಾಳ ಗಡಿಯಲ್ಲಿ ವಿದೇಶಿಯರು ಆಕ್ರಮ ಪ್ರವೇಶ ಮಾಡುತ್ತಿರುವುದನ್ನು ತಡೆಯಲು ಕ್ರಮ ಕೈಗೊಳ್ಳಬೇಕೆಂದು ಬಿಹಾರದ ಮುಖ್ಯಮಂತ್ರಿಯವರಿಗೆ ಸೂಚಿಸಿರುವುದಾಗಿ ಪ್ರಧಾನಿ ರಾಜೀವ್ ಗಾಂಧಿಯವರು ಹೇಳಿದ್ದಾರೆಂದು ಸುದ್ದಿ ಬಂದಿದೆ. ಆ ರೀತಿ ಒಂದು ದೇಶದ ಗಡಿಯೊಳಗೆ ಯಾವುದೇ ದೇಶದ ನಾಗರಿಕರು ಆಕ್ರಮ ಪ್ರವೇಶ ಮಾಡುವುದೆಂದರೆ ಅದು ಅಪರಾಧವೇ ಆಗುತ್ತದೆ. ನಿಜ. ಆದರೆ ಪ್ರಸ್ತುತ ನೇಪಾಳ ಮತ್ತು ಭಾರತದ ರಾಜತಾಂತ್ರಿಕ ಸಂಬಂಧವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಭಾರತ ಸರಕಾರವೇ ತನ್ನ ನಿಲುವಿನಲ್ಲಿ ಎಡವುತ್ತಿದೆಯೇನೋ ಎಂಬ ಸಂಶಯ ಮೂಡುತ್ತಿದೆ.

ಬಹಳ ಹಿಂದಿನಿಂದಲೂ ಭಾರತ ಮತ್ತು ನೆರೆಯ ಪುಟ್ಟದೇಶ ನೇಪಾಳದ ನಡುವಣ ಸಂಬಂಧ ಮಧುರವಾಗಿಯೇ ಬೆಳೆದುಕೊಂಡು ಬಂದಿದೆ. ಸಾಂಸ್ಕೃತಿಕವಾಗಿ ಭಾರತದೊಡನೆ ಸಾಕಷ್ಟು ಸಾಮರಸ್ಯವನ್ನು ಹೊಂದಿರುವ ಈ ದೇಶ ಆರ್ಥಿಕವಾಗಿ ಕೂಡಾ ಭಾರತದ ಮೇಲೆ ಅವಲಂಬಿತವಾಗಿಯೇ ಬೆಳೆದುಕೊಂಡು ಬಂದಿದೆ. ಆದರೆ ಇತ್ತೀಚೆಗಿನ ಕೆಲವು ಅಹಿತಕರ ರಾಜಕೀಯ ಬೆಳವಣಿಗೆಗಳು ಈ ದೇಶಗಳ ನಡುವಣ ರಾಜಕೀಯ ಸಂಬಂಧಕ್ಕೆ ಹುಳಿ ಹಿಂಡುವಂತದ್ದಾಗಿದೆ.

ಭಾರತ ಉತ್ತರ ತುದಿಯಲ್ಲಿ 1,47,141 ಚದರ ಕಿ. ಮೀ. ವಿಸ್ತೀರ್ಣವಿರುವ ಈ ಪುಟ್ಟ ರಾಷ್ಟ್ರ ಏಷ್ಯಾಖಂಡದಲ್ಲೇ ಒಂದು ಆಯಕಟ್ಟಿನ ಪ್ರದೇಶ. ಈ ದೇಶದ ಮೇಲೆ ಹಿಡಿತ ಸಾಧಿಸಲು ಬಹಳಷ್ಟು ಪ್ರಬಲ ರಾಷ್ಟ್ರಗಳೆಲ್ಲ ಪೈಪೋಟಿ ನಡೆಸುತ್ತಿವೆ. ಈ ಹಿನ್ನೆಲೆಯಲ್ಲಿಯೇ ಇತ್ತೀಚೆಗೆ ನೇಪಾಳ ಮತ್ತು ಚೀನಾ ನಡುವಣ ಸಂಬಂಧ ಮಧುರಗೊಳ್ಳತೊಡಗಿತು. ನೇಪಾಳ ಚೀನಾದಿಂದ 500 ಟ್ರಕ್‌ಗಳಷ್ಟು ಶಸ್ತ್ರಾಸ್ತ್ರಗಳನ್ನು ತರಿಸಿತು. ಇದು ಸಹಜವಾಗಿಯೇ ಭಾರತ ಸರಕಾರದೊಡನಿರುವ ಒಪ್ಪಂದವನ್ನು ಮುರಿಯುವಂತದ್ದೇ ಆಗಿದೆ. ಇದರ ವಿರುದ್ಧ ಭಾರತ ಕೂಡಾ ಎಚ್ಚರಿಕೆ ನೀಡಿತು. ಅದಕ್ಕೂ ನೇಪಾಳ ಸರಕಾರ ಕಿವಿ ಕೊಡಲಿಲ್ಲ.

ಇದಕ್ಕೆ ಪ್ರತಿಕ್ರಿಯೆ ಎಂಬಂತೆ ಭಾರತ ಸರಕಾರ ನೇಪಾಳದೊಡನೆ ಆರ್ಥಿಕ ಸಂಬಂಧಗಳನ್ನು ಹಂತ ಹಂತವಾಗಿ ಕಡಿದುಕೊಳ್ಳತೊಡಗಿತು. ಈ ಎರಡು ಸರಕಾರಗಳ ನಡುವಣ ಸಂಬಂಧ ಹೀಗೆ ಬಿರುಕು ಬಿಡತೊಡಗಿದಂತೆ ತೀವ್ರವಾಗಿ ಬಳಲುತ್ತಿರುವವರು ಮಾತ್ರ ಸಾಮಾನ್ಯ ಜನರಾಗಿದ್ದಾರೆ.

ಪ್ರಸ್ತುತ ನೇಪಾಳ ತೀವ್ರವಾದ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಪೆಟ್ರೋಲ್, ಸೀಮೆಎಣ್ಣೆ, ಔಷಧಿಗಳೇ ಅಲ್ಲದೆ ಅಕ್ಕಿಗೆ ಕೂಡಾ ಅಲ್ಲಿ ಭೀಕರ ಕ್ಷಾಮ ಉಂಟಾಗಿದೆ. ಜನಸಾಮಾನ್ಯರು ಹಸಿವಿನಿಂದ ಬೇರೆ ಏರಿಕೆಗಳಿಂದ ಬಹಳಷ್ಟು ಬಳಲಿದ್ದಾರೆ. ಈ ರೀತಿ ತೀವ್ರ ಆರ್ಥಿಕ ಸಂಕಷ್ಟಕ್ಕೆ ತುತ್ತಾಗಿರುವ ಮಂದಿ ಸಹಜವಾಗಿಯೇ ಅಲ್ಲಿರುವ ಭಾರತೀಯರ ಮೇಲೆ ಸಿಟ್ಟುಗೊಂಡಿದ್ದಾರೆ. ಅವರ ಮೇಲೆ ಹಲ್ಲೆ ನಡೆಸುವ ಹಂತಕ್ಕೂ ಹೋಗಿದ್ದಾರೆ.

ಇದರಿಂದ ಅಲ್ಲಿರುವ ಸಹಸ್ರಾರು ಭಾರತೀಯರು ತಂಡೋಪತಂಡವಾಗಿ ಭಾರತದತ್ತ ಧಾವಿಸಿ ಬರತೊಡಗಿದ್ದಾರೆ. ಇದರಿಂದ ಆ ದೇಶದ ವ್ಯಾಪಾರ ವಾಣಿಜ್ಯ ಕ್ಷೇತ್ರಕ್ಕೆ ಭಾರಿ ಹೊಡೆತ ಬಿದ್ದಂತಾಗಿದೆ. ಈ ಎಲ್ಲಾ ಸಂಕಷ್ಟಗಳಿಂದ ಚಿಂದಿಯಾಗಿರುವ ನೇಪಾಳದ ಮಂದಿ ಕೂಡಾ ಉತ್ತಮ ಬದುಕನ್ನು ಅರಸಿ ಭಾರತದ ಗಡಿಯೊಳಗೆ ನುಗ್ಗಿ ಬರುವ ಸಾಧ್ಯತೆಗಳನ್ನೂ ಅಲ್ಲಗಳೆಯುವಂತಿಲ್ಲ.

ಆದ್ದರಿಂದ ಅತಿಕ್ರಮ ಪ್ರವೇಶವನ್ನು ತಡೆಯುವ ಉದ್ದೇಶದಿಂದ ಬಿಹಾರ ಮತ್ತಿತರ ರಾಜ್ಯಗಳ ಗಡಿಯುದ್ದಕ್ಕೂ ಸೇನೆಯನ್ನು ಜಮಾವಣೆಗೊಳಿಸುವುದು ಅರ್ಥಹೀನವೆನಿಸುತ್ತೆ. ಇದು ಮೂಲತಃ ಒಂದು ರಾಜತಾಂತ್ರಿಕ ಸಂಬಂಧದ ಸಮಸ್ಯೆ. ಈ ಸಮಸ್ಯೆಯ ಮೂಲವನ್ನು ಅರಿತು ಅಲ್ಲಿಯೇ ಇದಕ್ಕೆ ಪರಿಹಾರ ಹುಡುಕಬೇಕಾದುದು ಸರಕಾರದ ಕೆಲಸವಾಗಿದೆ. ಆ ದಿಕ್ಕಿನಲ್ಲಿ ಕೇಂದ್ರ ಸರಕಾರ ಹೆಜ್ಜೆ ಇಡಬೇಕಾಗಿದೆ.

ನೇಪಾಳ ಮೂರನೇ ಜಗತ್ತಿನ ಒಂದು ಪುಟ್ಟ ರಾಷ್ಟ್ರ. ಇದರ ಅಸಹಾಯಕತೆಯನ್ನು ಮನಗಂಡು ಆ ದೇಶದ ಆಂತರಿಕ ವ್ಯವಹಾರಗಳಲ್ಲಿ ಯಾವುದೇ ದೇಶ ಹಸ್ತಕ್ಷೇಪ ನಡೆಸುವುದು ಅಪರಾಧವಾಗುತ್ತದೆ. ಅಂತಹ ಅಪರಾಧವನ್ನು ಭಾರತ ಕೂಡಾ ಮಾಡಿದೆ. ಆ ದೇಶದ ವಿದೇಶಿ ವಾಣಿಜ್ಯ ವಹಿವಾಟುಗಳು ತನ್ನ ಮೂಗಿನ ನೇರದ ಅಭಿಪ್ರಾಯಗಳಿಗೂ ಭಿನ್ನವಾಗಿ ನಡೆದುದರ ಬಗ್ಗೆ ಭಾರತ ತೀವ್ರ ಅಸಮಾಧಾನ ವ್ಯಕ್ತಪಡಿಸುವುದು ಕೂಡಾ ತಪ್ಪಾಗುತ್ತದೆ.

ಅಂತೆಯೇ ಚೀನಾ ಕೂಡಾ ನೇಪಾಳಕ್ಕೆ ಇಷ್ಟು ಭಾರಿ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ಪೂರೈಸಿದ್ದು ಕೂಡಾ ಜಾಗತಿಕ ಶಾಂತಿಯ ನೆಲೆಯಲ್ಲಿ ಆಲೋಚಿಸಿದಾಗ ಭಾರಿ ಅಪರಾಧವೇ ಆಗುತ್ತದೆ.

ಒಟ್ಟಾರೆ, ಎರಡು ಪ್ರಬಲ ರಾಷ್ಟ್ರಗಳ ಸಾಮ್ರಾಜ್ಯಶಾಹಿ ಧೋರಣೆಯ ತಿಕ್ಕಾಟದ ಕಣವಾಗಿ ಮಾರ್ಪಾಟುಗೊಂಡಿರುವ ನೇಪಾಳದಲ್ಲಿ ಅಲ್ಲಿನ ಸಾಮಾನ್ಯ ಜನರ ಬದುಕು ಅಸ್ತವ್ಯಸ್ತಗೊಂಡಿದೆ. ಆದ್ದರಿಂದ ಇನ್ನಾದರೂ ಮಾನವೀಯ ನೆಲೆಯಲ್ಲಿ ಈ ಸಂಬಂಧ ಸುಧಾರಿಸುವ ದಿಕ್ಕಿನಲ್ಲಿ ಹೆಜ್ಜೆ ಇಡಬೇಕಾದ ಅನಿವಾರ್ಯತೆ ಇದೆ.

ಇತ್ತೀಚೆಗೆ ಮಂಜೇಶ್ವರಕ್ಕೆ ಆಗಮಿಸಿದ್ದ ಕೇರಳದ ಕೃಷಿ ಸಚಿವ ವಿ. ವಿ. ರಾಘವನ್ ಅವರನ್ನು ಮಂಜೇಶ್ವರ ರೈಲ್ವೆ ನಿಲ್ದಾಣದಲ್ಲಿ ಹಾರ್ದಿಕವಾಗಿ ಸ್ವಾಗತಿಸಲಾಯಿತು. ಚಿತ್ರದಲ್ಲಿ ಶಾಸಕ ಚೆರ್ಕಳಂ ಅಬ್ದುಲ್ಲ, ಮಂಜೇಶ್ವರ ಪಂಚಾಯತ್ ಅಧ್ಯಕ್ಷ ಸಿ. ಅಹ್ಮದ್ ಕುಂಞ ಅವರನ್ನು ಕಾಣಬಹುದು

ಬಳ್ಳಾರಿ: ಪೊಲೀಸ್ ಕಾಯ್ದೆ ಉಲ್ಲಂಘನೆ

3000 ಪ್ರಕರಣ ದಾಖಲು

ಬಳ್ಳಾರಿ, ಮೇ 19– ಎಪ್ರಿಲ್ ತಿಂಗಳಲ್ಲಿ ಜಿಲ್ಲೆಯಾದ್ಯಂತ ಪೊಲೀಸರು ಕರ್ನಾಟಕ ಪೊಲೀಸ್ ಕಾಯ್ದೆ ಉಲ್ಲಂಘನೆ ಅಡಿ 3274 ಪ್ರಕರಣಗಳನ್ನು ದಾಖಲುಮಾಡಿಕೊಂಡು ಸ್ಥಳದಲ್ಲೇ 12,656 ರೂ ದಂಡ ವಸೂಲು ಮಾಡಿರುವುದಾಗಿ ಜಿಲ್ಲಾ ಪೊಲೀಸ್ ಮುಖ್ಯಾಧಿಕಾರಿ ಕೆ. ಸಿ. ರಾಮಮೂರ್ತಿ ಇತ್ತೀಚೆಗೆ ಇಲ್ಲಿ ತಿಳಿಸಿದ್ದಾರೆ.

ಚಲನ ಚಿತ್ರ ಮಂದಿರಗಳಲ್ಲಿ ಧೂಮಪಾನ ಮಾಡಿದ್ದಕ್ಕಾಗಿ 335 ಜನರನ್ನು ಬಂಧಿಸಿ ಅವರಿಂದ 1249 ರೂ. ದಂಡ ವಸೂಲಿ ಮಾಡಲಾಗಿದೆ.

ಜಿಲ್ಲೆಯ ಎಲ್ಲಾ ತಾಲೂಕುಗಳ ಸರ್ಕಲ್ ಇನ್‌ಸ್ಪೆಕ್ಟರ್‌ಗಳು 744 ವಿವಿಧ ಮೋಟಾರ್ ಕಾಯ್ದೆ ಉಲ್ಲಂಘನೆ ಪ್ರಕರಣ ದಾಖಲು ಮಾಡಿಕೊಂಡಿದ್ದು 67.958 ರೂ. ದಂಡ ವಸೂಲಿ ಮಾಡಿದ್ದಾರೆ.

ಜಿಲ್ಲಾದ್ಯಂತ ಪೊಲೀಸರು ಮಟ್ಕಾ ಮತ್ತು ಜೂಜಾಟ ಕೇಂದ್ರಗಳ ಮೇಲೆ ದಾಳಿ ಮಾಡಿ 37 ಪ್ರಕರಣಗಳನ್ನು ದಾಖಲು ಮಾಡಿಕೊಂಡಿದ್ದು 174 ಜನರನ್ನು ಬಂಧಿಸಿ 6701 ರೂ. ಪಣದ ಹಣವನ್ನು ಜಪ್ತಿ ಮಾಡಿದ್ದಾರೆ.

ಸಾಮಾಜಿಕ ಆಸ್ತಿ ಸಂರಕ್ಷಣೆ ಮಾಡಿ ಜಿಲ್ಲಾದ್ಯಂತ ಪೊಲೀಸರು ಬಿಗಿ ಪಹರೆ ಮಾಡಿದ್ದು ಮುಂಜಾಗರೂಕತಾ ಕ್ರಮವಾಗಿ 36 ಮಂದಿ . ಸಮಾಜಘಾತುಕ ವ್ಯಕ್ತಿಗಳನ್ನು ಬಂಧಿಸಲಾಗಿದೆ ಎಂದು ರಾಮಮೂರ್ತಿ ತಿಳಿಸಿದ್ದಾರೆ.

ರಿಕ್ಷಾ–ಲಾರಿ ಡಿಕ್ಕಿ

ಮಂಗಳೂರು, ಮೇ 19– ಇಲ್ಲಿಗೆ ಸಮೀಪದ ಬೈಕಂಪಾಡಿಯಲ್ಲಿ ರಾತ್ರಿ ರಿಕ್ಷಾವೊಂದು ಲಾರಿಯೊಂದಕ್ಕೆ ಡಿಕ್ಕಿ ಹೊಡೆದು ರಿಕ್ಷಾದಲ್ಲಿದ್ದ ಮೂವರು ಗಾಯಗೊಂಡಿದ್ದಾರೆ.

ಪಣಂಬೂರಿನಿಂದ ಬೈಕಂಪಾಡಿ ಕಡೆಗೆ ಹೋಗುತ್ತಿದ್ದ ರಿಕ್ಷಾ. ಬೈಕಂಪಾಡಿ ಕಲ್ಲಿನ ಯಾರ್ಡ್‌ನಿಂದ ಬರುತ್ತಿದ್ದ ಲಾರಿಯ ಹಿಂಬದಿಗೆ ಡಿಕ್ಕಿ ಹೊಡೆದು ಈ ಘಟನೆ ಸಂಭವಿಸಿತೆಂದು ಪೊಲೀಸರು ತಿಳಿಸಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಜಿಲ್ಲಾಧಿಕಾರಿಗಳಿಗೆ ಕಬ್ಬು ಬೆಳೆಗಾರರ ಮನವಿ

ಬ್ರಹ್ಮಾವರ, ಮೇ 19– ರೈತ ಸಂಘದ ಮೇಲಿನ ಅವಧಿ ಮೀರಿದ ಬಡ್ಡಿಯನ್ನು ಸಕ್ಕರೆ ಕಾರ್ಖಾನೆಯೇ ತುಂಬಬೇಕು ಮತ್ತು ಈ ವರ್ಷದ ಕಬ್ಬು ಬೆಳೆಗೆ ಸಹಕಾರಿ ಸಂಘಗಳ ಮೂಲಕ ರೈತರಿಗೆ ಕೂಡಲೇ ಸಾಲ ಸಿಗುವಂತೆ ಮಾಡಬೇಕು ಎಂಬಿತ್ಯಾದಿ ಆರು ಮುಖ್ಯ ಬೇಡಿಕೆಗಳನ್ನೊಳಗೊಂಡ ಮನವಿಯೊಂದನ್ನು ದಕ್ಷಿಣ ಕನ್ನಡ ಸಹಕಾರಿ ಸಕ್ಕರೆ ಕಾರ್ಖಾನೆಯ ...

20 ಎಕರೆ ಅಕ್ರಮ ಭೂಮಿ ತೆರವು

ಕುದ್ರುಗುಂಡಿ, ಮೇ 19– ಇಲ್ಲಿಗೆ ಸಮೀಪದ ತಲಮಕ್ಕಿ ಗ್ರಾಮದ ಸ. ನಂ. 53ರಲ್ಲಿ 20 ಎಕರೆಯಷ್ಟು ಸರಕಾರಿ ಭೂಮಿಗೆ ಅಕ್ರಮವಾಗಿ ಕಲ್ಲುಕಂಬದ ಬೇಲಿ ಹಾಕಿ ಮರಗಿಡಗಳನ್ನು ಕಡಿದು ಕಾಫಿ ತೋಟ ಮಾಡಲು ಇಲ್ಲಿನ ಹಿರಿಯಣ್ಣ ಗೌಡ ಎಂಬವರು ನಡೆಸಿದ್ದ ಪ್ರಯತ್ನವನ್ನು ಅರಣ್ಯ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ವಿಫಲಗೊಳಿಸಿದ್ದಾರೆ.

ತಹಸೀಲ್ದಾರ್ ಶ್ರೀನಿವಾಸ್ ಮತ್ತು ವಲಯ ಅರಣ್ಯಾಧಿಕಾರಿ ಎಸ್. ಶ್ರೀನಿವಾಸರಾವ್ ಜಂಟಿಯಾಗಿ ಕ್ರಮಕೈಗೊಂಡು 400 ಕಲ್ಲು ಕಂಬಗಳನ್ನು ವಶಪಡಿಸಿಕೊಂಡು ಹಿರಿಯಣ್ಣ ಅವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ತನಿಖೆ ಮುಂದುವರಿದಿದೆ.

ಸರಕಾರಿ ಭೂಮಿಯನ್ನು ಅಕ್ರಮವಾಗಿ ದಖಲಿಸಿಕೊಂಡವರ ವಿರುದ್ಧ ಇದೇ ರೀತಿ ಜಂಟಿ ಕಾರ್ಯಾಚರಣೆಗಳನ್ನು ಮುಂದುವರಿಸಲಾಗುವುದೆಂದು ಪ್ರಕಟಣೆಯೊಂದು ತಿಳಿಸಿದೆ.

ಮೊಹಿಯುದ್ದೀನ್ ಹಳೆ ಜುಮ್ಮಾ ಮಸೀದಿಗೆ ಆಯ್ಕೆ

ಪಡಿತರ ಬಿಡುಗಡೆ

ಮಂಗಳೂರು, ಮೇ 19– ಮಂಗಳೂರು ತಾಲೂಕಿನ ಗ್ರಾಮಾಂತರ ಪ್ರದೇಶದ ಪಡಿತರ ಕಾರ್ಡುದಾರರಿಗೆ ಮೇ ತಿಂಗಳ ಆಹಾರ ಸಾಮಗ್ರಿಗಳನ್ನು ಬಿಡುಗಡೆ ಮಾಡಲಾಗಿದೆ.

ಅಕ್ಕಿ ಹಸಿರು ಕಾರ್ಡಿಗೆ 10 ಕೆ. ಜಿ. ಕೇಸರಿ ಕಾರ್ಡಿಗೆ 5 ಕೆ. ಜಿ., ಸಕ್ಕರೆ ಕಾರ್ಡೊಂದಕ್ಕೆ 2 ಕೆ. ಜಿ. ಗೋಧಿ 1ರಿಂದ 2 ಕೆ. ಜಿ., ತಾಳೆ ಎಣ್ಣೆ 650 ಗ್ರಾಂ ಮತ್ತು ಸೀಮೆ ಎಣ್ಣೆ 5 ಲೀಟರ್ ನಂತೆ ಬಿಡುಗಡೆ ಮಾಡಲಾಗಿದೆ ಎಂದು ಕ್ಷೇತ್ರಾಭಿವೃದ್ಧಿ ಅಧಿಕಾರಿಯವರು ತಿಳಿಸಿದ್ದಾರೆ.

ಕಣಿಯೂರು ಮಂಡಲದಲ್ಲಿ ಹಂಚು ವಿತರಣೆ

ಬೆಳ್ತಂಗಡಿ, ಮೇ 19–ತಾಲೂಕಿನ ಕಣಿಯೂರು ಮಂಡಲದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಶ್ರೇಯೋಭಿವೃದ್ಧಿಗಾಗಿ ಕಾದಿರಿಸಿದ ಶೇ. 20ರ ನಿಧಿಯಿಂದ ಕಣಿಯೂರು ಮಂಡಲಕ್ಕೆ ಒಳಪಟ್ಟಿರುವ ಕಣಿಯೂರು ಬಂದಾರು ಮತ್ತು ಮೊಗ್ರು ಗ್ರಾಮಗಳಿಂದ ಆಯ್ಕೆ ಮಾಡಿರುವ 15 ಜನ ಫಲಾನುಭವಿಗಳಿಗೆ ತಲಾ 520 ಹಂಚುಗಳಂತೆ ಒಟ್ಟು 12,000 ರೂ. ಬೆಲೆ ಬಾಳುವ ಹಂಚು ವಿತರಣಾ ಕಾರ್ಯಕ್ರಮವು ಇತ್ತೀಚೆಗೆ ಮಂಡಲ ಪಂಚಾಯತ್ ಕಚೇರಿಯಲ್ಲಿ ಜರಗಿತು.

ಸಭಾಧ್ಯಕ್ಷತೆ ವಹಿಸಿದ್ದ ಮಂಡಲ ಪ್ರಧಾನ ಎಂ. ಚಂದಪ್ಪ ಪೂಜಾರಿಯವರು ಹಂಚು ವಿತರಿಸಿ ಮಾತನಾಡುತ್ತಾ ಕಡು ಬಡತನದಲ್ಲಿರುವ ಜನತೆಯ ಶ್ರೇಯೋಭಿವೃದ್ಧಿಗಾಗಿ ಪಂಚಾಯತ್ ಆದ್ಯ ಗಮನ ಹರಿಸುವುದಾಗಿ ತಿಳಿಸಿದರು. ಹಾಗೂ ಆರ್ಥಿಕ ಮಟ್ಟವನ್ನು ಉತ್ತಮಪಡಿಸಿಕೊಳ್ಳಬೇಕೆಂದೂ ಅವರು ಕರೆಯಿತ್ತರು.

ತಮ್ಮ ಮಂಡಲದಲ್ಲಿ ಹಂಚು ವಿತರಣೆಯ ಬಗ್ಗೆ ಸಮಾರಂಭ ... ಕೈಗೊಂಡಿದ್ದಾಗಿಯೂ ಹಾಗೂ 1989-90 ನೇ ಸಾಲಿನ ಬಜೆಟ್‌ನಲ್ಲಿ ಜನಸಾಮಾನ್ಯರ ಕಲ್ಯಾಣಕ್ಕಾಗಿ ... ಹಣವನ್ನು ವಿನಿಯೋಗಿಸಲಾಗಿದೆಯೆಂದು ಚಂದಪ್ಪ ...

ಮುಂಗಾರು

ಭಾನುವಾರ, ಮೇ 7, 1989

ಆರೋಗ್ಯಪೂರ್ಣ ರಾಜಕೀಯ ಬೆಳವಣಿಗೆ

ಶ್ರೀಲಂಕಾದಲ್ಲಿ ಜನಾಂಗೀಯ ಬಿಕ್ಕಟ್ಟಿನ ಇತ್ಯರ್ಥಕ್ಕೆ ಸಂಬಂಧಿಸಿದಂತೆ ತಮಿಳು ಉಗ್ರಗಾಮಿಗಳು ಮತ್ತು ಶ್ರೀಲಂಕಾ ಸರಕಾರದ ನಡುವೆ ನಡೆಯುತ್ತಿರುವ ಮಾತುಕತೆಗಳು ಪ್ರಗತಿಯ ಹಾದಿಯಲ್ಲಿದೆ ಎಂಬ ಸುದ್ದಿ ಬಂದಿದೆ. ಕಳೆದ ಕೆಲವು ವರುಷಗಳಿಂದ ಅಶಾಂತಿಯ ಮಡುವಲ್ಲಿ ತೊಳಲಾಡುತ್ತಿರುವ ಶ್ರೀಲಂಕಾ ಜನಸಮೂಹ ಈ ಮಾತುಕತೆ ಸಫಲಗೊಂಡರೆ ಮಾತ್ರ ನೆಮ್ಮದಿಯಿಂದ ಉಸಿರಾಡಬಹುದು. ಈ ಮಾತುಕತೆ ಪ್ರಗತಿಯ ಹಾದಿಯಲ್ಲಿರುವುದು ಒಂದು ಆರೋಗ್ಯ ಪೂರ್ಣ ಬೆಳವಣಿಗೆಯಾಗಿದೆ.

ಶ್ರೀಲಂಕಾ ತಮಿಳರು ಮತ್ತು ಸಿಂಹಳೀಯರ ನಡುವೆ ಬಿರುಕು ಬಿಟ್ಟ ಸಂಬಂಧಗಳು ನಂತರ ಸರಕಾರದ್ದೇ ಕೆಲವು ಕ್ಷುಲ್ಲಕ ರಾಜಕಾರಣಗಳ ಪರಿಣಾಮವಾಗಿ ಉಲ್ಬಣಗೊಂಡು ಹಿಂಸಾ ರೂಪಕ್ಕೆ ತಿರುಗಿ ಸಹಸ್ರಾರು ಮಂದಿಯ ಸಾವು ನೋವುಗಳಿಗೆ ಕಾರಣವಾಗಿದೆ. ಇಂದಿಗೂ ನಿತ್ಯವೂ ಶ್ರೀಲಂಕಾದ ಉತ್ತರ ಪ್ರಾಂತ್ಯ ಘರ್ಷಣೆ ಗಲಭೆಗಳ ಆಗರವೆನಿಸಿ ಬಿಟ್ಟಿದೆ.

ರಾಜಕೀಯ ಸಲಹೆಗಾರ ಆ್ಯಂಟನ್ ಬಾಲಸಿಂಗಂ ನೇತೃತ್ವದ ಎಲ್. ಟಿ. ಟಿ. ಇ ತಂಡ ಮತ್ತು ಅಧ್ಯಕ್ಷರ ಕಾರ್ಯದರ್ಶಿ ವಿಜೆದಾಸ್ ನೇತೃತ್ವದ ಶ್ರೀಲಂಕಾ ಸರಕಾರದ ಏಳು ಸದಸ್ಯರ ತಂಡಗಳು ತಮ್ಮ ಸಭೆಯಲ್ಲಿ ಮುಂದಿನ ಮಾತುಕತೆಗಳ ಕ್ಷೇತ್ರಗಳನ್ನು ಗುರುತಿಸಿದರು ಎಂದೂ ವರದಿಯಾಗಿದೆ.

ಹಿಂಸೆಯನ್ನು ಹಿಂಸೆಯಿಂದಲೇ ಮಟ್ಟ ಹಾಕುತ್ತೇವೆಂದು ಹೊರಟ ಶ್ರೀಲಂಕಾ ಸರಕಾರ ಕೊನೆಗೆ ಹಾಸು ಸೋತು ಕೈಚೆಲ್ಲಿ ಕುಳಿತು ಭಾರತ ಸರಕಾರದ ನೆರವು ಬಯಸಿತು. ಭಾರತದ ಶಾಂತಿಪಡೆ ಅಲ್ಲಿಗೆ ತೆರಳಿ ಎಲ್. ಟಿ. ಟಿ. ಇ ಉಗ್ರಗಾಮಿಗಳ ವಿರುದ್ಧ ನೇರ ಸಮರ ಸಾರಿತು. ಕಳೆದ ಒಂದೂವರೆ ವರುಷಗಳಿಂದ ನಡೆದ ಈ ನೇರ ಸಮರದಲ್ಲಿ ಇಂದಿಗೂ ಭಾರತದ ಭಾರಿ ಪ್ರಮಾಣದಲ್ಲಿರುವ ಶಾಂತಿ ಪಡೆಗೆ ಉಗ್ರಗಾಮಿಗಳನ್ನು ಮಣಿಸಲು ಸಾಧ್ಯವಾಗಿಲ್ಲ.

ಆದ್ದರಿಂದ ಈ ಸಮರ ಮುಂದುವರೆಯುತ್ತಲೇ ನಡೆದಿದೆ. ಉಭಯ ಬಣಗಳಲ್ಲೂ ಸಾಕಷ್ಟು ಸಾವು ನೋವುಗಳಾಗಿವೆ. ಇದನ್ನು ತಡೆಗಟ್ಟಲು ಸೇನೆಯ ಬಳಕೆಯಿಂದ ಅಸಾಧ್ಯ ಎಂಬುದು ಈಗ ಸ್ಪಷ್ಟವಾಗಿ ಬಿಟ್ಟಿದೆ. ಈ ಸಮಸ್ಯೆಯ ನಿವಾರಣೆಗೆ ಸಮರ್ಪಕವಾದ ರಾಜಕೀಯ ಪರಿಹಾರ ಒಂದೇ ಮುಖ್ಯ ಮಾರ್ಗ.

ಈ ದಿಕ್ಕಿನಲ್ಲಿ ಶ್ರೀಲಂಕಾ ಸರಕಾರ ಈಗ ಹೆಜ್ಜೆ ಇಟ್ಟಿರುವುದೊಂದು ಸ್ವಾಗತಾರ್ಹ ಅಂಶವಾಗಿದೆ. ನಿರಂತರವಾಗಿ ತಮ್ಮ ಹಠಮಾರಿತನವನ್ನೇ ಮುಂದುವರಿಸಿಕೊಂಡು ಬಂದಿದ್ದ ಎಲ್. ಟಿ. ಟಿ. ಇ. ಉಗ್ರಗಾಮಿಗಳೂ ಕೂಡಾ ಈ ಸಲ ಶಾಂತಿಯುತ ಮಾತುಕತೆಗೆ ಒಪ್ಪಿ ಅದರಲ್ಲಿ ಭಾಗಿಯಾಗಿರುವುದೊಂದು ಶುಭ ಸೂಚನೆಯಾಗಿದೆ.

ಇದು ಸುಸಮಯ. ಈ ಮಾತುಕತೆಗಳನ್ನು ವ್ಯರ್ಥವಾಗಿಸಲು ಅವಕಾಶ ನೀಡಬಾರದು. ಉಗ್ರಗಾಮಿಗಳೂ ಕೂಡ ಒಂದು ಹಂತದಲ್ಲಿ ತಮ್ಮ ತೀರಾ ಹಠಮಾರಿತನದ ನೀತಿಗಳನ್ನು ಬದಿಗೊತ್ತಿ ಮುಂದುವರಿಯ ಬೇಕಾಗಬಹುದು. ತಮ್ಮ ಕೆಲವು ಪ್ರಮುಖ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಲ್ಲಿ ಅವರು ಶ್ರೀಲಂಕಾ ಸರಕಾರವನ್ನು ಈ ತೆರನಾದ ಮಾತುಕತೆಗಳ ಮೂಲಕ ಒಲಿಸಿಕೊಳ್ಳುವ ಅಗತ್ಯ ಬಹಳಷ್ಟಿದೆ.

ಶ್ರೀಲಂಕಾ ಸರಕಾರ ಕೂಡಾ ಹಿಂದೆ ಬಹಳಷ್ಟು ತಪ್ಪುಗಳನ್ನು ಮಾಡಿದೆ. ಶ್ರೀಲಂಕಾ ತಮಿಳರನ್ನು ಮಲತಾಯಿ ಧೋರಣೆಯಿಂದಲೇ ಕಾಣುತ್ತಾ ಬಂದಿದೆ. ಇದರ ವಿರುದ್ಧ ಆರಂಭದಲ್ಲಿ ಶಾಂತಿಯುತ ಪ್ರತಿಭಟನೆ ವ್ಯಕ್ತಪಡಿಸಿದಾಗ ತಿರಸ್ಕಾರ ಭಾವದಿಂದ ಕಂಡ ಅಲ್ಲಿನ ಸರಕಾರ ಈ ಜನಾಂಗೀಯ ವೈಷಮ್ಯ ಉಗ್ರರೂಪ ತಳೆಯುವುದಕ್ಕೆ ಪ್ರಮುಖ ಕಾರಣವಾಗಿತ್ತು.

ಈಗ ಪರಿಸ್ಥಿತಿ ಸಾಕಷ್ಟು ಬದಲಾಗಿದೆ. ತಮಿಳರ ಪ್ರಬಲತೆಯ ಬಗ್ಗೆ ಶ್ರೀಲಂಕಾ ಸರಕಾರಕ್ಕೆ ಪೂರ್ಣ ಕಲ್ಪನೆ ಇದೆ. ಆದ್ದರಿಂದಲೇ ಅದು ಶಾಂತಿಯುತ ಮಾತುಕತೆಗೆ ಬದ್ಧವಾಗಿದೆ.

ಪ್ರಸ್ತುತ ತಮಿಳರೇ ಬಹುಸಂಖ್ಯಾತರಾಗಿರುವ ಶ್ರೀಲಂಕಾದ ಉತ್ತರ ಪ್ರಾಂತ್ಯಕ್ಕೆ ಸ್ವಾಯತ್ತೆ ನೀಡಿ ಅಲ್ಲಿನ ಸಂಸ್ಕೃತಿ ಭಾಷೆಗಳನ್ನು ಗೌರವಿಸುವ ಧೋರಣೆಯನ್ನು ಶ್ರೀಲಂಕಾ ಸರಕಾರ ಒಪ್ಪಿಕೊಳ್ಳಲಿ.

ಪ್ರಜಾಪ್ರಭುತ್ವದ ಚೌಕಟ್ಟಿನ ಒಳಗೆ ಈ ಉತ್ತರ ಪ್ರಾಂತದಲ್ಲಿ ತಮಿಳರಿಂದಲೇ ಚುನಾಯಿಸಲ್ಪಟ್ಟ ಸರಕಾರ ಆಡಳಿತದ ಗದ್ದುಗೆ ಏರಲಿ. ಇದರ ಆಂತರಿಕ ವ್ಯವಹಾರಗಳ ಒಳಗೆ ಹಸ್ತಕ್ಷೇಪ ನಡೆಸುವಂತಹ ಕ್ಷುಲ್ಲಕ ರಾಜಕಾರಣಗಳಿಂದ ಶ್ರೀಲಂಕಾ ಸರಕಾರ ಕೂಡಾ ದೂರವಿರಲಿ.

ಈ ಮೂಲಭೂತ ಅಂಶಗಳಿಗೆ ಶ್ರೀಲಂಕಾ ಸರಕಾರ ಮತ್ತು ತಮಿಳು ಉಗ್ರಗಾಮಿಗಳು ಬದ್ಧರಾಗಿ ಮಾತುಕತೆಯನ್ನು ಯಶಸ್ವಿಗೊಳಿಸಲಿ. ಇದರಿಂದ ಕಳೆದ ಕೆಲವು ವರುಷಗಳಿಂದ ನಡೆದಿರುವ ಭೀಕರ ನರಮೇಧ, ಹಿಂಸಾಚಾರಗಳಿಗೆ ಇತಿಶ್ರೀ ಹಾಡಿದಂತಾಗುವುದರಲ್ಲಿ ಎರಡು ಮಾತಿಲ್ಲ. ಇದು ಆಗಲೇಬೇಕಾದ ಕಾರ್ಯ. ಇದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಶ್ರೀಲಂಕಾದಂತಹ ದೇಶಕ್ಕೆ ಶೋಭೆ ತರುವಂತಹ ವಿಚಾರ ಕೂಡಾ ಆಗಿದೆ. ಈ ದಿಕ್ಕಿನಲ್ಲಿ ಎಲ್. ಟಿ. ಟಿ. ಇ. ಮತ್ತು ಶ್ರೀಲಂಕಾ ಸರಕಾರದ ನಡುವಣ ಮಾತುಕತೆಗಳು ಸರಿದಿಕ್ಕಿನಲ್ಲಿ ಸಾಗುವಂತಾಗಲಿ.

ಮಾಲ್ಪೆಯಲ್ಲಿ ಇಫ್ತಾರ್ ಕೂಟ

ಮಾಲ್ಪೆ, ಮೇ 6- ಸ್ಟೂಡೆಂಟ್ಸ್ ಇಸ್ಲಾಮಿಕ್ ಆರ್ಗನೈಸೇಷನ್ ಆಫ್ ಇಂಡಿಯಾ (ಎಸ್.ಐ.ಓ) ದ ಸ್ಥಳೀಯ ಶಾಖೆಯ ವತಿಯಿಂದ ಇತ್ತೀಚೆಗೆ ಇಲ್ಲಿಗೆ ಸಮೀಪದ ಕೊಡವೂರಿನ ಜಿಡ್ಡಾ ಮಸೀದಿಯಲ್ಲಿ ಇಫ್ತಾರ್ ಕೂಟವನ್ನು ಏರ್ಪಡಿಸಲಾಗಿತ್ತು.

ಪ್ರಾರಂಭಿಕ ಭಾಷಣ ಮಾಡಿದ ಮಾಲ್ಪೆಯ ಅಬ್ದುಲ್ ಅಲೀಮ್ ಕಾಸ್ಮೀಯವರು ಯುವಕರಿಗೆ ಕರ್ತವ್ಯ ಅರಿತು ಸಕ್ರಿಯರಾಗಲು ಕರೆ ನೀಡಿದರು.

ಮುಖ್ಯ ಅತಿಥಿಯಾಗಿದ್ದ ಎಸ್.ಐ.ಓ. ಜಿಲ್ಲಾ ಸಂಚಾಲಕ ಬಿ.ಎಸ್. ಶರ್ಫುದ್ದೀನ್ ಅವರು ನಿಸ್ವಾರ್ಥ ಮತ್ತು ಪ್ರಾಮಾಣಿಕ ಪ್ರಯತ್ನಗಳಿಂದ ಮಾತ್ರ ಯಾವುದೇ ಸಾಧನೆಯನ್ನು ಮಾಡಲು ಸಾಧ್ಯವಿದೆ. ಆದ್ದರಿಂದ ಯುವಕರು ಸದ್ಮೌಲ್ಯಗಳ ಉತ್ಥಾನಕ್ಕೆ ಈ ಎರಡು ಗುಣಗಳನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು.

ಸಭೆಯಲ್ಲಿ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿ ಯುವಕರು ಭಾಗವಹಿಸಿದರು.

ಸಿರ್ಸಿಯಲ್ಲಿ ಸಮನ್ವಯ ಸಪ್ತಾಹ ಪ್ರಾರಂಭೋತ್ಸವ

ಸಿರ್ಸಿ, ಮೇ 6- ಒಂದು ವರ್ಷ ಪರ್ಯಂತ ನಿರಂತರವಾಗಿ ಸಾಂಸ್ಕೃತಿಕ ಸಪ್ತಾಹಗಳನ್ನು ಶ್ರೀದೇವಿಯ ಸನ್ನಿಧಿಯಲ್ಲಿ ನಡೆಸಿ ರಾಜ್ಯದ ವಿವಿಧೆಡೆಗಳಿಂದ 1501 ಹಿರಿಕಿರಿಯ ಕಲಾವಿದರನ್ನು ಕರೆಸಿ ಅವರ ಪ್ರತಿಭಾ ಪ್ರದರ್ಶನಕ್ಕೆ ಶ್ರೀದೇವಿಯ ಸನ್ನಿಧಿಯಲ್ಲಿ ಅವಕಾಶ ನೀಡಿರುವುದು. ಒಂದು ಧರ್ಮ ಸಂಸ್ಥೆಯ ಇತಿಹಾಸದಲ್ಲಿಯೇ ದಾಖಲಾಗುವ ಸಂಗತಿ ಎಂದು ಪದ್ಮವಿಭೂಷಣ ಡಾ॥ ಗಂಗೂಬಾಯಿ ಹಾನಗಲ್ ನುಡಿದರು.

ಅವರು ಇತ್ತೀಚೆಗೆ ಸ್ಥಳೀಯ ಮಾರಿಕಾಂಬ ಆವರಣದಲ್ಲಿ ಮಾರಿಕಾಂಬಾ ಪ್ರತಿಷ್ಠಾಪನಾ ತ್ರಿಶತಮಾನೋತ್ಸವದ ಅಂಗವಾಗಿ ಜರುಗುತ್ತಿರುವ ಸಾಂಸ್ಕೃತಿಕ ಸಪ್ತಾಹಗಳಲ್ಲಿ ಕೊನೆಯದಾದ 'ಸಮನ್ವಯ ಸಪ್ತಾಹ'ವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಮಾರಂಭದ ಅಧ್ಯಕ್ಷತೆಯನ್ನು ದೇವಳದ ಅಧ್ಯಕ್ಷ ರವಿಶಂಕರ ಇಸಳೂರ ವಹಿಸಿದ್ದರು. ಮಾರಿಕಾಂಬಾ ಪ್ರತಿಷ್ಠಾಪನಾ ತ್ರಿಶತಮಾನೋತ್ಸವದ ಸಾಂಸ್ಕೃತಿಕ ಸಮಿತಿಯ

ಚಾಲಕರಾದ ನಾರಾಯಣ ಕೇಂಳಕರ ಸ್ವಾಗತಿಸಿದರು. ತ್ರಿಶತಮಾನೋತ್ಸವದ ಸಂಯೋಜಕರಾದ ರಾಮಕೃಷ್ಣ ಬೀಳೇಕರ್ ಪ್ರಾಸ್ತಾವಿಕ ಭಾಷಣ ಮಾಡಿದರು.

ಸಭಾ ಕಲಾಪದ ಆರಂಭದಲ್ಲಿ ಜಿ. ಎನ್. ವಿಜಾಪೂರೆ ಅವರ ನೇತೃತ್ವದಲ್ಲಿ ಗಾನಪೂಜೆ ನೆರವೇರಿಸಿದರು. ಸಿರ್ಸಿಯ ನಾಟ್ಯಾಂಜಲಿ ಕಲಾಶಾಲೆಯ ನಾಟ್ಯಾಂಗನೆ ಕು॥ ಪ್ರೀತಿ ಕಾಮತ್ ರಂಗಪೂಜೆ ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಮಹಾಬಲೇಶ್ವರ ಶಿರಸಿಕರ ವಂದಿಸಿದರು. ಜಗದೀಶನ್, ಟಿ. ಎಂ. ಸುಬ್ಬರಾಯ ಕಾರ್ಯಕ್ರಮ ನಿರ್ದೇಶಿಸಿದರು.

ಕೆ.ಇ.ಬಿ. ನೌಕರರ ಪ್ರತಿಭಟನೆ

ಮಂಗಳೂರು, ಮೇ 6 — ಕಳೆದ ಜುಲೈ (1988) ತಿಂಗಳಿಂದ ಕೆ.ಇ.ಬಿ. ನೌಕರರಿಗೆ ನ್ಯಾಯಬದ್ಧವಾಗಿ ಬರಬೇಕಾಗಿದ್ದ ತುಟ್ಟಿಭತ್ಯೆ ಬಾಕಿಯ ಕಂತನ್ನು ನಗದಿಯಾಗಿ ಕೊಡಬೇಕೆಂದು ಒತ್ತಾಯಿಸಿ ಮೇ 2 ರಂದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಮಂಗಳೂರು ಕಚೇರಿ ಎದುರು ಕೆ. ಇ. ಬಿ. ನೌಕರರು ಪ್ರದರ್ಶನ ನಡೆಸಿದರು.

ಮಂಡಳಿಯ ಆಜ್ಞೆಯಂತೆ ಮಾರ್ಚ್ 25ರ ಒಳಗೆ ಎನ್. ಎಸ್. ಸಿ. 6ನೇ ಉಳಿತಾಯ ಪತ್ರದಲ್ಲಿ ತುಟ್ಟಿಭತ್ಯೆಯ ಬಾಕಿ ಹಣವನ್ನು ಉಪಯೋಗಿಸಬೇಕಾಗಿದ್ದು, ಮಂಡಳಿಯ ವಿಳಂಬ ನೀತಿಯಿಂದಾಗಿ ಇದು ಸಾಧ್ಯವಾಗದೆ, ನೌಕರರ ತುಟ್ಟಿಭತ್ಯೆಯ ಮೊತ್ತವನ್ನು ಪಾವತಿಸದೆ ತಡೆಹಿಡಿದಿರುವುದನ್ನು ಪ್ರತಿಭಟಿಸಿ. ಇತರ ಕೈಗಾರಿಕೆಗಳಾದ ಮೈಸೂರು ಪವರ್ ಕಾರ್ಪೊರೇಶನ್ ಕರ್ನಾಟಕ ರಾಜ್ಯರಸ್ತೆ ಸಾರಿಗೆ ಸಂಸ್ಥೆ ನೌಕರರಿಗೆ ಕೊಟ್ಟಂತೆ ತುಟ್ಟಿಭತ್ಯೆ ಬಾಕಿ ಹಣವನ್ನು ನಗದಿಯಾಗಿ ಕೊಡಬೇಕೆಂದು ನೌಕರರು ಮಂಡಳಿಯನ್ನು ಒತ್ತಾಯಿಸಿದ್ದಾರೆ.

ಈ ಬಗ್ಗೆ ನೌಕರರ ಸಂಘವು ಮೇ 3 ರಿಂದ ಧರಣಿ ಮುಷ್ಕರಕ್ಕಾಗಿ ಕರೆ ಕೊಟ್ಟಿದ್ದು, ಮಂಡಳಿಯ ಆಶ್ವಾಸನೆ ಮೇರೆಗೆ ಅದನ್ನು ತಾತ್ಕಾಲಿಕ ಮುಂದೂಡಲಾಗಿದೆ ಎಂದು ಕಾರ್ಯದರ್ಶಿ ಅಬ್ದುಲ್ಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

...ಲಿಕರ ಕಿರುಕುಳ ವಿರುದ್ಧ ...ಟ: ಸಿಐಟಿಯು ಎಚ್ಚರಿಕೆ

ಬದಲಾವಣೆ ಆಗುತ್ತಿದೆ ಎಂದು ಸಿ ಐ ಟಿ ಯು ರಾಜ್ಯ ಸಮಿತಿ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದರು. ರಾಜ್ಯದ ಜನತಾದಳ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತ ಹೇರಿರುವುದನ್ನು ಖಂಡಿಸಿದ ಅವರು ಜನ ವಿರೋಧಿ ಕಾಂಗ್ರೆಸ್ (ಐ)ಗೆ ಮುಂದಿನ ಚುನಾವಣೆಗಳಲ್ಲಿ ಕಾರ್ಮಿಕ ವರ್ಗ ಸೂಕ್ತ ಪಾಠ ಕಲಿಸಬೇಕೆಂದು ಕರೆ ನೀಡಿದರು.

ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವ ವಿದ್ಯಾರ್ಥಿ ಯುವಜನರೂ ಕಾರ್ಮಿಕ ವರ್ಗದೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ಹೋರಾಟದಲ್ಲಿ ಪಾಲ್ಗೊಳ್ಳಲು ಮುಂದಾಗುತ್ತಿದೆ ಎಂದು ಡಿ. ವೈ. ಎಫ್. ಐ. ರಾಜ್ಯ ಸಮಿತಿ ಸಹಕಾರ್ಯದರ್ಶಿ ಆರ್.

ತಾಲೂಕು ಸಮಿತಿ ಕಾರ್ಯದರ್ಶಿ ಯು. ದಾಸ ಭಂಡಾರಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಸಭೆಗೆ ಮುನ್ನ ತಾಲೂಕಿನ ವಿವಿಧ ಭಾಗಗಳಿಂದ ಬಂದ ಕಾರ್ಮಿಕರು, ರೈತ ಕೃಷಿ ಕಾರ್ಮಿಕರ ಭಾರೀ ಮೆರವಣಿಗೆ ನಡೆಯಿತು. ರಿಕ್ಷಾಗಳೂ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಎಸ್ ಎಫ್ ಐ, ಡಿ ವೈ ಎಫ್ ಐ, ಮಹಿಳಾ ಸಂಘಟನೆ ಕಾರ್ಯಕರ್ತರು ಮೆರವಣಿಗೆಗೆ ಪುಷ್ಪ ವೃಷ್ಟಿ ಮಾಡಿ ಸೌಹಾರ್ದತೆ ಸೂಚಿಸಿದರು.

ವೆಂಕಟೇಶ ಕೋಣಿ ಸ್ವಾಗತಿಸಿದರು. ಕೆ. ವಿಶ್ವನಾಥ ಧನ್ಯವಾದ ಅರ್ಪಿಸಿದರು.

ಸಭೆಯ ಕೊನೆಯಲ್ಲಿ 'ಕುಂದಾಪುರ

ಜಿಲ್ಲೆಗೆ 23000

ಮುಂಗಾರು

ಶನಿವಾರ, ಮೇ 6, 1989

ಇದು ನ್ಯಾಯ ನಿಷ್ಠುರತೆಯಲ್ಲ

ಕರ್ನಾಟಕದ ರಾಜಕೀಯದ ಇತ್ತೀಚಿಗಿನ ಬೆಳವಣಿಗೆಗಳಲ್ಲಿ ಬೊಮ್ಮಾಯಿ ನೇತೃತ್ವದ ಸರಕಾರ ಉರುಳಿದ್ದು ಮಹತ್ವದ್ದಾಗಿದೆ. ಇದಕ್ಕೆ ಸಂಬಂಧಿಸಿದಂತೆ ಜನತಾದಳದ ಕರ್ನಾಟಕ ಘಟಕದ ಮಹಾಕಾರ್ಯದರ್ಶಿ ಜೀವರಾಜ ಆಳ್ವ ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದಾರೆಂದು ಸುದ್ದಿ ಬಂದಿದೆ. ಇದಕ್ಕೆ ಕಾರಣ ಮಾತ್ರ ಪ್ರಸ್ತುತ ಕ್ಷುಲ್ಲಕ ರಾಜಕಾರಣದ ಮೇಲೆ ಬೆಳಕು ಚೆಲ್ಲುವಂತದ್ದಾಗಿದೆ.

ಎಸ್. ಆರ್. ಬೊಮ್ಮಾಯಿ ಅವರ ಸರಕಾರ ಉರುಳಲು ಕಾರಣವಾದ ಕರ್ನಾಟಕದಲ್ಲಿನ ಇತ್ತೀಚಿಗಿನ ಬಿಕ್ಕಟನ್ನು ಶಮನಗೊಳಿಸುವ ಸಂಬಂಧವಾಗಿ ಆಳ್ವ ಅವರು ನಿರ್ವಹಿಸಿದ ಪಾತ್ರದ ಬಗ್ಗೆ ಜನತಾದಳದ ಕೇಂದ್ರೀಯ ನಾಯಕತ್ವ ಅಸಮಾಧಾನಗೊಂಡಿದ್ದು, ಈ ಕಾರಣದಿಂದ ಆಳ್ವ ಅವರು ತಕ್ಷಣ ರಾಜೀನಾಮೆ ನೀಡಬೇಕೆಂದು ವಿ. ವಿ. ಸಿಂಗ್ ಕೇಳಿಕೊಂಡಿದ್ದರೆನ್ನಲಾಗಿದೆ.

ಪ್ರಸ್ತುತ ಜನತಾದಳದ ರಾಷ್ಟ್ರೀಯ ಮಟ್ಟದ ರಾಜಕಾರಣ ಹಾಗೂ ಆ ಪ್ರವಾಹದಲ್ಲಿ ಕರ್ನಾಟಕ ರಾಜ್ಯ ಘಟಕದ ಪಾತ್ರಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆ ನಡೆಸಿದಾಗ ಸದ್ಯಕ್ಕೆ ವಿ. ಪಿ. ಸಿಂಗ್ ಅವರು ತೆಗೆದುಕೊಂಡ ನಿಲುವು ನ್ಯಾಯ ನಿಷ್ಠುರತೆಯಿಂದ ಕೂಡಿರುವಂತದ್ದಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಗುಂಡೂರಾವ್ ನೇತೃತ್ವದ ಸರಕಾರದ ಅಟ್ಟಹಾಸ ಅಬ್ಬರಗಳಿಗೆ ಪರ್ಯಾಯವಾಗಿ ರೂಪುಗೊಂಡ ಜನತಾ ಪಕ್ಷದೊಳಗೆ ಮೇಲಿನಿಂದ ಏರಿ ಬಂದ ರಾಮಕೃಷ್ಣ ಹೆಗಡೆಯವರು ಎಲ್ಲರನ್ನೂ ಬದಿಗೊತ್ತಿ ತಮ್ಮ ತಂತ್ರಗಾರಿಕೆಗಳಿಂದ ಮುಖ್ಯಮಂತ್ರಿ ಗದ್ದುಗೆಯನ್ನು ಆಕ್ರಮಿಸಿ ಕುಳಿತುಕೊಂಡರು. ನಂತರ ತಮ್ಮ ಅಧಿಕಾರದ ಅವಧಿಯ ಉದ್ದಕ್ಕೂ ಕುಟಿಲ ತಂತ್ರಗಾರಿಕೆಗಳಿಗೇ ಹೆಚ್ಚು ಒತ್ತು ನೀಡುತ್ತಾ ನಾನಾ ತೆರನಾದ ಭ್ರಷ್ಟಾಚಾರಗಳನ್ನು ನಡೆಸಿಯೂ ಮೌಲ್ಯಾಧಾರಿತ ರಾಜಕಾರಣದ ಸೋಗು ಹಾಕಿ ಜನಸಮೂಹವನ್ನು ವಂಚಿಸುತ್ತಾ ಅಧಿಕಾರದಲ್ಲಿ ಮುಂದುವರಿಯುತ್ತಾ ಬಂದರೆನ್ನುವುದು ಈಗ ಜಗಜ್ಜಾಹೀರಾಗಿದೆ.

ಇತ್ತೀಚಿಗಿನ ವರುಷಗಳಲ್ಲಿ ಹೆಗಡೆಯವರ ಈ ಸೋಗಲಾಡಿ ರಾಜಕಾರಣ ಬಯಲುಗೊಳ್ಳುತ್ತಾ ಬಂದಿತು. ಜನರಿಂದಲೂ, ಮಾಧ್ಯಮಗಳಿಂದಲೂ ಕೊನೆಗೆ ಪಕ್ಷದೊಳಗಿನ ಶಾಸಕರಿಂದಲೂ ಈ ಕುರಿತು ಅಸಹನೆ ವ್ಯಕ್ತವಾಗುತ್ತಾ ಬಂದಂತೆ ಕೊನೆಗೆ ಹೆಗಡೆ ಮುಖ್ಯಮಂತ್ರಿ ಗಾದಿ ತ್ಯಜಿಸುವುದು ತೀರಾ ಅನಿವಾರ್ಯವಾಯ್ತು. ನಂತರ ಬೊಮ್ಮಾಯಿಯವರು ಮುಖ್ಯಮಂತ್ರಿಯವರಾಗಿ ಮುಂದುವರಿದರು.

ಆ ನಂತರದ ದಿನಗಳಲ್ಲಿ ರಾಷ್ಟ್ರೀಯ ರಾಜಕಾರಣದಲ್ಲಿ ತಮ್ಮ ಹೆಜ್ಜೆಗಳನ್ನು ಗುರುತಿಸಿಕೊಳ್ಳ ತೊಡಗಿದ ಹೆಗಡೆಯವರು ತಮ್ಮ ಗಮನವನ್ನು ಅತ್ತ ಸರಿಸುತ್ತಾ ಇತ್ತ ರಾಜ್ಯದ ರಾಜಕಾರಣದಲ್ಲೂ ತಮ್ಮ ಪ್ರಭಾವ ಬೀರತೊಡಗಿದರು. ಇದಕ್ಕೆ ರಾಜ್ಯದ ರಾಜಕಾರಣದ ಪ್ರಭಾವಿ ರಾಜಕಾರಣಿ ಜೀವರಾಜ ಆಳ್ವರನ್ನು ದಾಳವನ್ನಾಗಿ ಬಳಸಿಕೊಳ್ಳುತ್ತಾ ನಡೆದರು.

ಜೀವರಾಜ ಆಳ್ವ ಅವರು ವಿದ್ಯಾರ್ಥಿ ಚಳವಳಿಗಳ ಮೂಲಕ ರಾಜಕಾರಣದಲ್ಲಿ ನೆಲೆಯೂರಿ ಹಂತಹಂತವಾಗಿ ಬೆಳೆಯುತ್ತಾ ಮೇಲೇರುತ್ತಾ ಬಂದವರು. ಇವರ ಸಂಘಟನಾ ಚಾತುರ್ಯ, ನಿಷ್ಠೆ, ಮುತ್ಸದ್ದಿತನಗಳನ್ನೆಲ್ಲಾ ಸೂಕ್ಷ್ಮವಾಗಿ ಗ್ರಹಿಸಿದ ತಂತ್ರಗಾರ ಹೆಗಡೆಯವರು ಆಳ್ವರನ್ನು ತಮ್ಮೆಡೆಗೆ ಸೆಳೆದುಕೊಳ್ಳುವಲ್ಲಿ ಸಫಲರಾದರು.

ನಂತರ ಉದ್ದಕ್ಕೂ ರಾಜ್ಯದ ರಾಜಕಾರಣದಲ್ಲಿ ಆಳ್ವರನ್ನೇ ಮುಂದಿಟ್ಟುಕೊಂಡು ನಾನಾ ತೆರನಾದ ಕ್ಷುಲ್ಲಕ ರಾಜಕಾರಣಗಳನ್ನು ನಡೆಸುತ್ತಾ ಬಂದರು. ಅಪಾರ ಜನ ಬೆಂಬಲವಿರುವ ದೇವೇಗೌಡರನ್ನು ರಾಜಕೀಯವಾಗಿ ತೇಜೋವಧೆಗೊಳಿಸಲು ಕೂಡಾ ಹೆಗಡೆಯವರು ಆಳ್ವರನ್ನೇ ಮುಂದೆ ಬಿಟ್ಟಿದ್ದರು.

ರಾಜ್ಯದಲ್ಲಿ ತಮ್ಮ ಅಧಿಕಾರ ತಪ್ಪಿದ ಮೇಲೆಯೂ ಇಲ್ಲಿ ತಮ್ಮ ಪ್ರಭಾವ ಉಳಿಸಿಕೊಳ್ಳಲು ಮತ್ತೆ ಆಳ್ವ ಅವರನ್ನೇ ದಾಳವಾಗಿ ಬಳಸಿಕೊಳ್ಳುತ್ತಿದ್ದರು. ಈ ಸಂದಿಗ್ಧದಲ್ಲಿ ಹೆಗಡೆಯವರ ಕೆಲವು ಆಶಯಗಳನ್ನು ಬೊಮ್ಮಾಯಿ ನೇತೃತ್ವದ ಸರಕಾರ ತಳ್ಳಿಹಾಕಿದ್ದೇ ಹೆಗಡೆಯವರು ಕ್ರುದ್ಧರಾಗಲು ಕಾರಣವಾಯಿತು.

ನಂತರ ಕೆಲವು ಶಾಸಕರನ್ನು ಬಳಸಿಕೊಂಡು ಬೊಮ್ಮಾಯಿಯವರ ಮೇಲೆ ಪ್ರಭಾವ ಬೀರಲೆತ್ನಿಸಿದ್ದೂ ಸುಳ್ಳೇನಲ್ಲ. ಈ ಗೊಂದಲಗಳ ನಡುವೆ ಪಕ್ಷದೊಳಗಿನ ಕಿತ್ತಾಟ, ಭ್ರಷ್ಟಾಚಾರಗಳ ಸುಳಿವುಗಳೆಲ್ಲಾ ಬೀದಿಗೆ ಬಂದಿತು. ಇದೇ ಸಂದಿಗ್ಧತೆಯಲ್ಲಿ ಇಲ್ಲಿ ರಾಷ್ಟ್ರಪತಿ ಆಡಳಿತವನ್ನು ಘೋಷಿಸಲಾಯಿತು.

ಪರಿಸ್ಥಿತಿ ಹೀಗಿರುವಾಗ ಜನತಾದಳದ ಕೇಂದ್ರ ಘಟಕ ಕೇವಲ ಜೀವರಾಜ ಆಳ್ವರನ್ನು ಮಾತ್ರ ಬಲಿಪಶುವನ್ನಾಗಿಸಿರುವುದು ಮಾತ್ರ ತೀರಾ ಪಕ್ಷಪಾತ ಧೋರಣೆಯದ್ದಾಗಿದೆ ಎಂದರೆ ಅತಿಶಯೋಕ್ತಿ ಎನಿಸದು.

ಆದ್ದರಿಂದ ಈ ಗೊಂದಲಗಳಿಗೆ ಸಂಬಂಧಿಸಿದಂತೆ ರಾಮಕೃಷ್ಣ ಹೆಗಡೆಯವರ ಮೇಲೆಯೂ ಸಮರ್ಪಕವಾದ ಶಿಸ್ತಿನ ಕ್ರಮ ಕೈಗೊಂಡರೆ ಅದು ಜನತಾದಳದ ಬೆಳವಣಿಗೆಯ ದೃಷ್ಟಿಯಿಂದ ಒಂದು ಆರೋಗ್ಯಪೂರ್ಣ ಹೆಜ್ಜೆಯಾಗುತ್ತದೆ.

ಇಲ್ಲದಿದ್ದರೆ ಇದು ಕೇವಲ ಪಕ್ಷಪಾತದ ಧೋರಣೆಯಾಗಿ ಇಡಿ ಈ ಗೊಂದಲಗಳಿಗೆ ಮೂಲ ಕಾರಣವಾದ ಅಪರಾಧಿಯನ್ನು ತಮ್ಮ ಕಿಸೆಯೊಳಗೆ ಅಡಗಿಸಿಟ್ಟುಕೊಂಡು ಇನ್ನಾರನ್ನೋ ಬಲಿಪಶುವನ್ನಾಗಿಸಿದ ಅನ್ಯಾಯವನ್ನು ಎಸಗಿದಂತಾಗುತ್ತದೆ. ಈ ನಿಟ್ಟಿನಲ್ಲಿ ಜನತಾದಳದ ಕೇಂದ್ರ ಘಟಕ ಮತ್ತು ವಿ. ಪಿ. ಸಿಂಗ್ ಅವರು ಮತ್ತೊಮ್ಮೆ ಆತ್ಮ ವಿಮರ್ಶೆ ನಡೆಸಿ ಕಾರ್ಯೋನ್ಮುಖರಾಗುವುದು ಒಂದು ಉತ್ತಮ ನಡವಳಿಕೆಯಾಗುತ್ತದೆ.

ಮಂಡಲ ಪಂಚಾಯತ್‌ಗಳಿಗೆ ಅಡಳಿತಾಧಿಕಾರಿಗಳನ್ನು ನೇಮಿಸಬೇಕೆಂಬ ವಿಧಾನ ಪರಿಷತ್ ಸದಸ್ಯ ಟಿ. ಎನ್. ನರಸಿಂಹ ಮೂರ್ತಿ ಅವರ ಹೇಳಿಕೆಗೂ ಸಭೆ ಪ್ರಬಲವಾಗಿ ಪ್ರತಿಭಟನೆ ವ್ಯಕ್ತಪಡಿಸಿದೆ.

ಜಿಲ್ಲಾ ಪರಿಷತ್ತಿನ ಮಾಸಿಕ ಸಭೆ ಜರಗುವ ಪ್ರತಿ ತಿಂಗಳ ತಾರೀಕು 27ನ್ನು ಹೊರತುಪಡಿಸಿ ಮಂಡಲ ಪಂಚಾಯತಿನ ಸಭೆ ನಡೆಸುವುದೇ ಮುಂತಾದವುಗಳು ಜಿಲ್ಲಾ ಪರಿಷತ್ ಮಂಡಲ ಪಂಚಾಯತ್‌ಗಳ ಮೇಲೆ ಸ್ಪಷ್ಟ ಹಸ್ತಕ್ಷೇಪ ನಡೆಸುವಂತೆ ಕಂಡು ಬರುತ್ತಿದೆಯಾಗಿಯೂ ಸಭೆ ಆಕ್ಷೇಪಿಸಿದೆ.

ಕೃಷಿಉದ್ದೇಶಕ್ಕಾಗಿ ಸರಕಾರಿ ಸಂಸ್ಥೆಗಳಿಂದ ಸಾಲ ಪಡೆದ ರೈತರಿಗೆ ನಬಾರ್ಡ್ ನೀತಿಯಿಂದಾಗಿ ಬಡ್ಡಿ ರಿಯಾಯಿತಿಯೂ ಇಲ್ಲದೆ, ಬಡ್ಡಿದರದಲ್ಲಿ ಗಣನೀಯ ಹೆಚ್ಚಳವಾದ ವಿಚಾರ ಸಂಕಿರಣದಲ್ಲಿಯೂ ಪ್ರಧಾನ-ಉಪಪ್ರಧಾನರಿಗೆ ಪ್ರಾತಿನಿಧ್ಯವನ್ನು ನೀಡದಿರುವ ಬಗ್ಗೆ ಸಭೆ ಅಸಮಾಧಾನ ವ್ಯಕ್ತಪಡಿಸಿದೆ.

ಬಿ. ಸದಾನಂದ ಪೂಂಜ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೊನೆಯಲ್ಲಿ ಇತ್ತೀಚೆಗೆ ನಿಧನರಾದ ವಿಧಾನ ಪರಿಷತ್ ಸದಸ್ಯ ಕೆ. ಸೂರ್ಯ ನಾರಾಯಣ ಅಡಿಗ ಅವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು.



501 ಬಡ ಮಕ್ಕಳಿಗೆ ಬಟ್ಟೆ ವಿತರಣೆ

ಮಂಗಳೂರು, ಮೇ 5-ನಗರದ ಮುಸ್ಲಿಂ ಲೀಗ್ ಕಾರ್ಯಾಲಯದಲ್ಲಿ ರಮ್ಜಾನ್ ತಿಂಗಳಲ್ಲಿ ವರ್ಷಂಪ್ರತಿ ಬಡ ಮಕ್ಕಳಿಗೆ ವಸ್ತ್ರ ವಿತರಿಸುವಂತೆ ಈ ವರ್ಷವೂ501 ಬಡಮಕ್ಕಳಿಗೆ ಸಾಮೂಹಿಕ ಬಟ್ಟೆ ವಿತರಣೆಯ ಸಮಾರಂಭ ಇತ್ತೀಚೆಗೆ ದ.ಕ. ಜಿಲ್ಲಾ ಲೀಗ್ ಅಧ್ಯಕ್ಷ ಜಾಕಿ.ಎಂ. ಬಾವು ಕುಂಞ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಸಮಾರಂಭವನ್ನು ಉದ್ಘಾಟಿಸಿದ ರಾಜ್ಯಲೀಗ್ ಅಧ್ಯಕ್ಷ ಸಿ. ಅಬ್ದುಲ್ ಹಮೀದ್ ಸಾಹೇಬರು ವಸ್ತ್ರಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಈ ಕಾರ್ಯಕ್ರಮ ಯಶಸ್ವಿಯಾಗಿ ಮುಂದುವರಿಯುತ್ತಾ ಹೋಗಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಗಳಾಗಿ ಕಾರ್ಯದರ್ಶಿ ಜಾ|ಎ.ಎಸ್.ಇ. ಕರೀಂ, ಯೂತ್‌ಲೀಗ್ ಅಧ್ಯಕ್ಷ ಅಬ್ದುಲ್ ರಹ್ಮಾನ್, ನಗರ ಲೀಗ್ ಅಧ್ಯಕ್ಷ ಜಾ|ಎಚ್. ಉಮರ್ ಮೊದಲಾದವರು ಭಾಗವಹಿಸಿದ್ದರು.

ಯೂತ್‌ಲೀಗ್ ಪ್ರಧಾನ ಕಾರ್ಯದರ್ಶಿ ಜಾ| ಮಹಮದ್ ಇಸ್ಮಾಯಿಲ್ ಎಚ್. ಸ್ವಾಗತಿಸಿದರು. ಉಮರ್ ಮೌಲವಿ ಖುರಾನ್ ಪಠಿಸಿದರು. ನಗರ ಯೂತ್ ಲೀಗ್ ಅಧ್ಯಕ್ಷ ಮಹಮದ್ ಸಾಲಿ ವಂದಿಸಿದರು.

'ಆಡಂಬರದ ಬೆನ್ನತ್ತಬೇಡಿ'

ಪುತ್ತೂರು, ಮೇ 5- ಪ್ರಸ್ತುತ ಸಮಾಜದಲ್ಲಿ ಮನುಷ್ಯ ಆಡಂಬರದ ಬೆನ್ನು ಹತ್ತಿ ಪ್ರಗತಿಯನ್ನು ಸರಿಯಾದ ದಿಕ್ಕಿನಲ್ಲಿ ಕೊಂಡು ಹೋಗದೆ ತಪ್ಪು ದಾರಿಯಲ್ಲಿ ಕೊಂಡೊಯ್ಯುತ್ತಿದ್ದಾನೆ ಎಂದು ಮಂಗಳೂರು ಗೋಕರ್ಣನಾಥೇಶ್ವರ ಕಾಲೇಜಿನ ಉಪನ್ಯಾಸಕ ಉಮ್ಮಪ್ಪ ಪಿ. ಹೇಳಿದರು.

ಇತ್ತೀಚೆಗೆ ವಳಾಲಿನಲ್ಲಿ ಶ್ರೀನಿಧಿ ಯುವಕ ಮಂಡಲ, ಆಶಾನಿಧಿ ಯುವತಿ ಮಂಡಲ ಮತ್ತು ಆಶಾ ಜ್ಯೋತಿ ಮಹಿಳಾಮಂಡಲಗಳು ಜಂಟಿಯಾಗಿ ಸಂಘಟಿಸಿದ್ದ 'ಪ್ರತಿಭಾ ವಿಕಾಸ'ದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತಿದ್ದ ಅವರು ಇದಕ್ಕೆ ಕಾರಣ ನಾವು ಶಿಸ್ತನ್ನು ಪಾಲಿಸದಿರುವುದು. ಅಭಿವೃದ್ಧಿಗೆ ಶಿಸ್ತು ತುಂಬಾ ಮುಖ್ಯ ಎಂದು ಹೇಳಿದರು. ಯುವ ಸಂಘಟನೆಗಳು ಗ್ರಾಮೀಣ ಪ್ರತಿಭೆಗಳನ್ನು ಗುರುತಿಸುವ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಇನ್ನೋರ್ವ ಅತಿಥಿಯಾಗಿದ್ದ ಪುತ್ತೂರು ತಾಲೂಕು ಮಹಿಳಾ ಒಕ್ಕೂಟದ ಕಾರ್ಯದರ್ಶಿ ಕಲಾವತಿ ಅವರು ಹಳ್ಳಿಯ ಪ್ರತಿಭೆಗಳನ್ನು ಗುರುತಿಸಲು ಪ್ರತಿಭಾ ವಿಕಾಸದಂತಹ ಕಾರ್ಯಕ್ರಮ ಹಮ್ಮಿಕೊಳ್ಳುವುದು ತೀರಾ ಅಗತ್ಯ ಎಂದರು.

ವೇದಿಕೆಯಲ್ಲಿ ಯುವಕ ಮಂಡಲದ ಅಧ್ಯಕ್ಷ ಸಿದ್ದಪ್ಪ ನಾಯ್ಕ್ ಮಹಿಳಾ ಮಂಡಲದ ಅಧ್ಯಕ್ಷೆ ಸುನಂದಾದೇವಿ, ಯುವತಿ ಮಂಡಲದ ಅಧ್ಯಕ್ಷೆ ಸುವರ್ಣಲತಾ ಮತ್ತು ಗ್ರಾಮಸೇವಕಿ ಲಲಿತಮ್ಮ ಉಪಸ್ಥಿತರಿದ್ದರು.

ಹಾಸ್ಟೆಲ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಪುತ್ತೂರು, ಮೇ 5- ಪುತ್ತೂರು ತಾಲೂಕಿನ ಕೆಳಗಿನ 8 ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳ ಸೇರ್ಪಡೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸರಕಾರಿ ವಿದ್ಯಾರ್ಥಿನಿ ನಿಲಯ ಹಾರಾಡಿ, ಸರಕಾರಿ ವಿದ್ಯಾರ್ಥಿ ನಿಲಯ ಕೊಂಬೆಟ್ಟು, ಸರಕಾರಿ ವಿದ್ಯಾರ್ಥಿನಿಲಯ ಕಡಬ, ಗಿರಿಜನ ವಿದ್ಯಾರ್ಥಿನಿಲಯ ಪಾಲತಡ್ಕ, ಗಿರಿಜನ ಆಶ್ರಮ ಶಾಲೆ ಬಲ್ನಾಡು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯ ದೇರುಮಲೆ, ಹಿಂದುಳಿದ ವರ್ಗಗಳ ವಿದ್ಯಾರ್ಥಿನಿ [illegible] ಉಪ್ಪಿನಂಗಡಿ, ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯ ನೆಟ್ಟಣಿಗೆ ಮುಡ್ನೂರು.

ಅರ್ಜಿಯನ್ನು ಮೇ 20ರೊಳಗೆ ಸಂಬಂಧಪಟ್ಟ ಸಂಸ್ಥೆಯ ಮುಖ್ಯಸ್ಥರಿಗೆ ಅಥವಾ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಸಲ್ಲಿಸಲು ಕೋರಲಾಗಿದೆ.

ಮುಂಗಾರು

ಭಾನುವಾರ, ಏಪ್ರಿಲ್ 30, 1989

ಸ್ವಾಗತಾರ್ಹ ಯೋಜನೆ

ದೇಶದಲ್ಲಿರುವ 4.4 ಕೋಟಿ ಕಡು ಬಡ ಸಂಸಾರಗಳ ಪೈಕಿ ಪ್ರತಿ ಕುಟುಂಬದ ಕನಿಷ್ಠ ಒಬ್ಬರಿಗೆ ಉದ್ಯೋಗ ಕಲ್ಪಿಸುವ 'ಜವಾಹರ್ ರೋಜ್‌ಗಾರ್ ಯೋಜನೆ'ಯ ಪ್ರಾರಂಭವನ್ನು ಪ್ರಧಾನಿ ರಾಜೀವ್ ಗಾಂಧಿಯವರು ಘೋಷಿಸಿದ್ದಾರೆ. ವಾಸ್ತವದಲ್ಲಿ ಇದೊಂದು ಉತ್ತಮವಾದ ಯೋಜನೆಯೇ ಆಗಿದೆ. ಆದರೆ ಇದಕ್ಕೆ ನಿಗದಿಗೊಳಿಸಲಾಗಿರುವ ಹಣವನ್ನು ಸಮರ್ಪಕವಾಗಿ ಪೂರೈಸಿದ್ದೇ ಆದರೆ ಇದು ಬಡಕುಟುಂಬಗಳಿಗೆ ಆರ್ಥಿಕ ಆಸರೆ ನೀಡುವ ಒಂದು ಉತ್ತಮ ಯೋಜನೆಯಾಗಿ ರೂಪುಗೊಳ್ಳಬಹುದು.

ಈ ಮಹತ್ವಾಕಾಂಕ್ಷೆಯ ಯೋಜನೆಗೆ ಒಟ್ಟು 2100 ಕೋಟಿ ರೂ. ಗಳನ್ನು ಒದಗಿಸಲಾಗುವುದೆಂದೂ ಅವರು ಹೇಳಿದ್ದಾರೆ. ಭಾರಿ ಪ್ರಮಾಣದಲ್ಲಿ ಬಡತನದ ರೇಖೆಗಿಂತ ಕೆಳಗೆ ಬದುಕು ಸಾಗಿಸುತ್ತಿರುವ ಮಂದಿಗೆ ಉದ್ಯೋಗದ ಆಸರೆ ನೀಡಲು ಈ ಮೊತ್ತ ಕೂಡಾ ತೀರಾ ಕನಿಷ್ಠ ಪ್ರಮಾಣದ್ದು ಎಂದರೆ ಅತಿಶಯೋಕ್ತಿ ಎನಿಸದು.

ಈ ಹಣವನ್ನು ಗ್ರಾಮ ಪಂಚಾಯತ್‌ಗಳ ಮೂಲಕ ಸಮರ್ಪಕವಾಗಿ ವಿನಿಯೋಗಿಸಲಾಗುವುದೆಂದು ಸರಕಾರ ಹೇಳಿದೆ. ಅಧಿಕಾರ ವಿಕೇಂದ್ರೀಕರಣ ಮತ್ತು ಯೋಜನೆಗಳು ಹಳ್ಳಿಗೆ ನೇರವಾಗಿ ತಲುಪುವ ನಿಟ್ಟಿನಲ್ಲಿ ಈ ಆಲೋಚನೆ ಕೂಡಾ ಸಮಂಜಸವಾದುದೇ ಆಗಿದೆ. 3000 ದಿಂದ 4000 ದ ವರೆಗಿನ ಜನಸಂಖ್ಯೆ ಇರುವ ಗ್ರಾಮ ಪಂಚಾಯತ್‌ಗಳಿಗೆ 80,000 ದಿಂದ ಒಂದು ಲಕ್ಷ ರೂ.ಗಳ ತನಕ ನೆರವು ನೀಡಲಾಗುವ ಯೋಜನೆ ಸರಕಾರದ್ದಾಗಿದೆ. ಆದರೆ ಇಷ್ಟೊಂದು ಭಾರಿಸಂಖ್ಯೆಯ ಬಡಜನತೆಗೆ ಉದ್ಯೋಗಾವಕಾಶ ಒದಗಿಸುವುದು ನಿರುದ್ಯೋಗ ಸಮಸ್ಯೆಯನ್ನು ಅದೆಷ್ಟು ವೇಗವಾಗಿ ಬಗೆಹರಿಸುವಲ್ಲಿ ಸಹಾಯಕವಾಗಬಹುದೆನ್ನುವ ಪ್ರಶ್ನೆಯೂ ಇಲ್ಲಿ ಏಳುತ್ತದೆ. ಈ ಬಗ್ಗೆ ಕೇಂದ್ರ ಸರಕಾರ ಚಿಂತನೆ ನಡೆಸಿ ಕಾರ್ಯೋನ್ಮುಖವಾಗಬೇಕಾದ ಅಗತ್ಯವಿದೆ.

ಈ ಯೋಜನೆಯ ಪ್ರಕಾರ ಗ್ರಾಮೀಣ ಬಡ ಕುಟುಂಬದ ಓರ್ವ ಪುರುಷ ಅಥವಾ ಮಹಿಳಾ ಸದಸ್ಯಗೆ ಅವರ ವಾಸಸ್ಥಳಕ್ಕೆ ಸಮೀಪ ವರುಷಕ್ಕೆ ಕನಿಷ್ಠ 50ರಿಂದ 100 ದಿನಗಳ ಕೆಲಸ ಒದಗಿಸುವುದು ಈ ಯೋಜನೆಯ ಉದ್ದೇಶವಾಗಿದೆ. ಆದರೆ ವರುಷದಲ್ಲಿ ಕೇವಲ 50ರಿಂದ 100 ದಿನಗಳ ಕೆಲಸ ಒದಗಿಸುವ ಮೂಲಕ ನಿರುದ್ಯೋಗ ಸಮಸ್ಯೆ ಬಗೆಹರಿದಂತಾಗುವುದೇ ಎಂಬ ಬಗ್ಗೆ ಕೂಡಾ ಯೋಚಿಸಬೇಕಾಗಿದೆ.

ಇದರ ಬದಲು ಗ್ರಾಮೀಣ ಮಂದಿಗೆ ಆಯಾ ಪ್ರದೇಶಗಳಲ್ಲಿ ಪ್ರಚಲಿತದಲ್ಲಿರುವ ಗೃಹ ಕೈಗಾರಿಕೆಗಳಿಗೆ ಒತ್ತು ನೀಡುವಂತಹ ಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸಿ ಅಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸಿದ್ದೇ ಆದರೆ ಅದೊಂದು ಉತ್ತಮ ಯೋಜನೆಯಾಗುತ್ತಿತ್ತೆನ್ನುವುದರಲ್ಲಿ ಎರಡು ಮಾತಿಲ್ಲ.

ಈ ಯೋಜನೆಯ ಅಡಿಯಲ್ಲಿ ಶೇಕಡಾ 30 ರಷ್ಟು ಉದ್ಯೋಗಾವಕಾಶಗಳನ್ನು ಮಹಿಳೆಯರಿಗೇ ಮೀಸಲಿಡುವ ಬಗ್ಗೆಯೂ ಪ್ರಸ್ತಾಪವಿದೆ. ಆದರೆ ಕೇವಲ 50 ಅಥವಾ 100ದಿನಗಳ ಕೆಲಸ ಒದಗಿಸುವ ಮೂಲಕ ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಒದಗಿಸುವುದೇ ಆಗಲಿ ಗ್ರಾಮೀಣ ಪ್ರದೇಶಗಳ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವಂತದ್ದೇ ಆಗಲಿ ಸಾಧ್ಯವಿಲ್ಲದ ಮಾತೆನ್ನುವುದು ಕೂಡಾ ಸ್ಪಷ್ಟ.

ಈಗಾಗಲೆ ಅಸ್ತಿತ್ವದಲ್ಲಿರುವ ಎಲ್ಲಾ ಗ್ರಾಮೀಣ ಉದ್ಯೋಗ ಕಾರ್ಯಕ್ರಮಗಳು ಈಗ ಪ್ರಕಟಿಸಿದ ಜವಾಹರ ಉದ್ಯೋಗ ಯೋಜನೆಯಲ್ಲಿ ವಿಲೀನಗೊಳ್ಳಲಿದೆ ಎಂದೂ ಪ್ರಧಾನಿಯವರು ತಿಳಿಸಿದ್ದಾರೆ. ಇದರಿಂದ ಜವಾಹರ ಉದ್ಯೋಗ ಯೋಜನೆಯ ಕಾರ್ಯವ್ಯಾಪ್ತಿ ವ್ಯಾಪಕಗೊಳ್ಳುವ ಸಾಧ್ಯತೆಗಳಿವೆ.

ಒಟ್ಟಾರೆ, 2,100 ಕೋಟಿ ರೂ.ಗಳ ವೆಚ್ಚದ ಈ ಉದ್ಯೋಗ ಯೋಜನೆ ಒಂದು ಹಂತದಲ್ಲಿ ಬಡವರ ಬದುಕಿಗೆ ಪೂರಕವಾದಂತದ್ದೇ ಆಗಿದೆಯಾದರೂ ಅದರ ಅನುಷ್ಠಾನದಲ್ಲಿ ಹಣಕಾಸಿನ ಪೂರೈಕೆ ಸಮರ್ಪಕವಾಗಿದ್ದರೆ ಇದೊಂದು ಉತ್ತಮ ಯೋಜನೆಯಾಗಿ ರೂಪುಗೊಳ್ಳುವ ಸಾಧ್ಯತೆಗಳಿಲ್ಲದಿಲ್ಲ.

...ತ್ತಿದೆ. ಜನರು ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದರು.

ಒಂದು ಕಡೆ ಕಾಂಗ್ರೆಸ್ ಆಡಳಿತವಿರುವ ರಾಜ್ಯಗಳಲ್ಲಿ ಆಡಳಿತ ಪಕ್ಷಗಳ ಒಳಜಗಳಗಳು ದಿನೇ ದಿನೇ ಹೆಚ್ಚಾಗುತ್ತಿದೆ. ಮತ್ತೊಂದು ಕಡೆ ಬಹಳಷ್ಟು ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಅಧಿಕಾರ ನಡೆಸುತ್ತಾ ಬಲವಾಗುತ್ತಿರುವುದು ಪ್ರಧಾನಿ ರಾಜೀವಗಾಂಧಿ ಅವರಿಗೆ ನಡುಕ ಉಂಟು ಮಾಡಿದೆ. ವಿರೋಧ ಪಕ್ಷಗಳ ಶಕ್ತಿಯನ್ನು ಕುಂದಿಸಲು ಅವು ಕೆಲವರನ್ನು ಏಜಂಟರನ್ನಾಗಿ ನೇಮಿಸಿಕೊಂಡಿದ್ದಾರೆ. ತೀರಾ ಇತ್ತೀಚೆಗೆ ರಾಜ್ಯದಲ್ಲಿ ಜನತಾದಳ ಸರಕಾರವನ್ನು ವಜಾ ಮಾಡಲು ಜನತಾ ಪಕ್ಷವನ್ನು ಹೇಗೆ ಬಳಸಿಕೊಳ್ಳಲಾಯಿತು ಎಂಬುದೇ ಇದಕ್ಕೆ ನಿದರ್ಶನ ಎಂದು ಪಟೇಲ್ ಹೇಳಿದರು.

ಬೊಮ್ಮಾಯಿ ಅವರಿಗೆ ತಮ್ಮ ಸರಕಾರಕ್ಕಿರುವ ಬಹುಮತದ ಬೆಂಬಲವನ್ನು ಪ್ರದರ್ಶಿಸಲೂ ಕೂಡಾ ಅವಕಾಶ ನೀಡದೆ ಸರಕಾರವನ್ನು ವಜಾ ಮಾಡುವಂತೆ ಶಿಫಾರಸು ಮಾಡಿದ ರಾಜ್ಯಪಾಲರ ಕ್ರಮ...

...ಸುವ ಕಾರ್ಯ ಕಾಂಗ್ರೆಸ್ ಸಂಸ್ಕೃತಿಯಿಂದ ಬಂದದ್ದೆಂದು ಅವರು ಛೇಡಿಸಿದರು.

ಸಭೆಯನ್ನು ಉದ್ದೇಶಿಸಿ ಕಮ್ಯುನಿಸ್ಟ್ ಪಕ್ಷಗಳ ಮುಖಂಡರಾದ ಎಸ್. ಬಿ. ಶಿವಶಂಕರ ಜಿ.ಎಸ್. ನಾಗರಾಜ್ ತಿರುಕಪ್ಪ ಮಾತನಾಡಿದರು. ಜಿಲ್ಲಾ ಜನತಾ ದಳದ ಅಧ್ಯಕ್ಷ ಜಿ. ಮಾದಪ್ಪ ಅಧ್ಯಕ್ಷತೆ ವಹಿಸಿದ್ದರು. ಜನತಾದಳ ಶಾಸಕ ಕೊಣಂದೂರು ಲಿಂಗಪ್ಪ ಸ್ವಾಗತಿಸಿದರು. ವಿ.ವಿ. ಹಾಲಪ್ಪ ವಂದಿಸಿದರು.

ನಿವೃತ್ತ ಅಧ್ಯಾಪಕರಿಗೆ ಗೌರವ

'ಶಿಕ್ಷಕರ ಕಷ್ಟಗಳನ್ನು ಕಡೆಗಣಿಸದಿರಿ'

(ಮುಂಗಾರು ವರದಿ)

ಅಂಕೋಲಾ, ಎ. 29- ಸೇವೆಯಲ್ಲಿ ತತ್ಪರರಾದ ಅಧ್ಯಾಪಕರ ವೈಯಕ್ತಿಕ ನೋವು-ನಷ್ಟಗಳ ಬಗ್ಗೆ ಅನುಕಂಪದ ಮಾತನ್ನಷ್ಟೇ ಆಡಿದರೆ ಸಾಲದು. ಸಮಾಜದ ಸತ್ಪ್ರಜೆಗಳನ್ನು ರೂಪಿಸುತ್ತಿರುವವರ ಅವಶ್ಯಕತೆಗಳ ಬಗ್ಗೆ ಔದಾರ್ಯದ ಭಾವವನ್ನೂ ಸರಕಾರ ಹೊಂದಬೇಕಾದುದು ಅದರ ಕರ್ತವ್ಯವಾಗಿದೆ ಎಂದು ಅಂಕೋಲಾ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಹಿತರಕ್ಷಕ ಸಂಘದ ಅಧ್ಯಕ್ಷ ಓನಮ ಗಣಪತಿ ಶೆಟ್ಟಿಯವರು ಆಗ್ರಹ ಪಡಿಸಿದರು.

ತಮ್ಮ ಸಂಘದ ಸದಸ್ಯರಾಗಿದ್ದು, ಕಳೆದೆರಡು ವರ್ಷಗಳಲ್ಲಿ ನಿವೃತ್ತಿ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಸತ್ಕರಿಸುವ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು. ದಾನಿಗಳೂ ಸಾರ್ವಜನಿಕ ಕಾರ್ಯಕರ್ತರೂ ಆದ ಗಣಪು ಡಿ. ನಾಯ್ಕ ಅವರು ಒಟ್ಟಿಗೆ 9ಜನ ಶಿಕ್ಷಕರನ್ನು ಸನ್ಮಾನಿಸಿದರು.

ಸಮಾರಂಭದ ಅತಿಥಿಗಳಾಗಿ ಆಗಮಿಸಿದ ತಾಲೂಕು ಸಹಾಯಕ ಶಿಕ್ಷಣಾಧಿಕಾರಿ ವಿ. ಎ. ಅಣವೇಕರ, ಪಿ. ಎಮ್. ಪ್ರೌಢ ಶಾಲೆಯ ಮುಖ್ಯಾಧ್ಯಾಪಕ ಎನ್. ಬಿ. ಕಾಮತ್, ವಿಷಯ ತಪಾಸಣಾಧಿಕಾರಿ ಜಿ. ವಿ. ಕವರಿ ಹಾಗೂ ಕೆ. ಕೆ. ಶೇಖ ಶಿಕ್ಷಕರ ಸ್ಥಿತಿ-ಗತಿಯ ಕುರಿತು ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಮಾತನಾಡಿದರು.

ಆರಂಭದಲ್ಲಿ ಸಂಘದ ಉಪಾಧ್ಯಕ್ಷ ನಾಗೇಶ ವಿ. ಕಾಳೆ ಎಲ್ಲರನ್ನೂ ಸ್ವಾಗತಿಸಿ ಕಾರ್ಯಕ್ರಮದ ಉದ್ದೇಶವನ್ನು ವಿವರಿಸಿದರು. ಕಾರ್ಯದರ್ಶಿ ಬಿ. ವಿ. ನಾಯ್ಕ ಹಾಗೂ ಕಾರ್ಯ ಸಮಿತಿ ಸದಸ್ಯ ಹಮಜಾ ಕಾರ್ಯಕ್ರಮ ನಿರ್ವಹಿಸಿದರು.

ನಾರಾಯಣ ಲೆ. ನಾಯ್ಕ, ಯಶವಂತ ಎನ್. ನಾಯಕ, ಬಾಬು ಆಂಕ್ಲೇಕರ, ಬಾಳು ಪುಂಡ್ಲಿಕ ಬಾಳೆಗುಳಿ, ಸರ್ವೋತ್ತಮ ವಿ. ರಾಯ್ಕರ, ಶೇಖ ಇಬ್ರಾಹಿಂ ಶೇಖ ಅಬ್ದುಲ್ಲಾ, ಕೃಷ್ಣ ಗೋವಿಂದ ನಾಯ್ಕ, ಗೋವಿಂದರಾಯ ಆರ್. ನಾಯಕ ಹಾಗೂ ನಾಗಮ್ಮ ವಿ. ನಾಯಕ ಅವರು ಸನ್ಮಾನಿತರಾದ ಒಳಪಟ್ಟ ಶಿಕ್ಷಕರಾಗಿದ್ದಾರೆ.

ಸಂಘದ ವಾರ್ಷಿಕ ಮಹಾ ಸಭೆಯೂ ಅದೇ ದಿನ ನಡೆದು ಹೊಸ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಿತು. ಸಂಘದ ಕೋಶಾಧ್ಯಕ್ಷರಾದ ಚೆನ್ನಪ್ಪ ನಾಯ್ಕ ಅವರು ಜಮಾ ಖರ್ಚಿನ ವರದಿ ಮಂಡಿಸಿದರು. ಕೊನೆಯಲ್ಲಿ ಶ್ರೀನಿವಾಸ ಗಾಂವಕಾರ ವಂದಿಸಿದರು.

ಹಲ್ಲೆ ಖಂಡಿಸಿ ದ.ಸಂ.ಸ. ಧರಣಿ

ಬೆಳಗಾವಿ, ಎ. 29-ಗುಲ್ಬರ್ಗಾ ಜಿಲ್ಲೆಯ ಸಹಾಯಕ ಕಮಿಷನರ್ ಶಿವರಾಮು ಎಂಬವರ ಮೇಲೆ ಸವರ್ಣೀಯರೊಬ್ಬರು ಹಲ್ಲೆ ಮಾಡಿದ್ದನ್ನು ಪ್ರತಿಭಟಿಸಿ ದಲಿತ ಸಂಘರ್ಷ ಸಮಿತಿಯ ಸುಮಾರು 25 ಕಾರ್ಯಕರ್ತರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಒಂದು ದಿನದ ಧರಣಿ ನಡೆಸಿದರು.

ಜಿಲ್ಲಾಧಿಕಾರಿಯವರಿಗೆ ಮನವಿಯೊಂದನ್ನು ಸಲ್ಲಿಸಿದ ಕಾರ್ಯಕರ್ತರು ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಪಾಣೆಮಂಗಳೂರು ಸೇತುವೆವಾಹನಸಂಚಾರ ನಿಷೇಧಾಜ್ಞೆ ರದ್ದು

ಮಂಗಳೂರು, ಎ. 29-ಪಾಣೆಮಂಗಳೂರು ನೇತ್ರಾವತಿ ಸೇತುವೆ ಮೇಲಿನ ವಾಹನ ಸಂಚಾರ ನಿಷೇಧಾಜ್ಞೆಯನ್ನು ರಾಷ್ಟ್ರೀಯ ಹೆದ್ದಾರಿ ಮಂಗಳೂರು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಅವರ ಸಲಹೆ ಮೇರೆಗೆ ಜಿಲ್ಲಾಧಿಕಾರಿಗ[illegible] ರದ್ದುಗೊಳಿಸಿದ್ದಾರೆ.

ವಿಜಯನಗರಎಕ್ಸ್‌ಪ್ರೆಸ್[illegible] ವಾಸ್ಕೋವರೆಗೆ ವಿಸ್ತರಣೆ

ಬಳ್ಳಾರಿ, ಎ. 29-ಗುಂತಕಲ್-ಹುಬ್ಬಳ್ಳಿ ನಡುವೆ ಸಂಚರಿಸುವ ವಿಜಯನಗರ ಎಕ್ಸ್‌ಪ್ರೆಸ್ ರೈಲನ್ನು ವಾಸ್ಕೋವರೆಗೆ ವಿಸ್ತರಿಸಲಾಗಿದೆ ಎಂದು ತಿಳಿದು ಬಂದಿದೆ.

ಮುಂಗಾರು
ಗುರುವಾರ, ಏಪ್ರಿಲ್ 27, 1989

ಉತ್ತರಿಸಬೇಕಾದ ಪ್ರಶ್ನೆ

ಜಪಾನಿನ ಪ್ರಧಾನಿ ರಾಜೀನಾಮೆ ನೀಡಿದ್ದಾರೆ. ಒಂದೂವರೆ ವರ್ಷಗಳಿಂದ ಜಪಾನಿನ ಪ್ರಧಾನಿಯಾಗಿದ್ದ ನೊಬೊರು ತಾಕೆಶಿಟಾ ತಮ್ಮ ಅಧಿಕಾರಾವಧಿಯನ್ನು ಪೂರೈಸಲು ಇನ್ನೂ ಆರು ತಿಂಗಳುಗಳು ಬಾಕಿ ಉಳಿದಿದ್ದವು. ಆದರೆ ಆ ಅವಧಿ ಪೂರ್ಣಗೊಳ್ಳುವ ಮುನ್ನವೇ 'ರಿಕ್ರೂಟ್ ಕಂಪೆನಿಯ ಸಂಭಾವನೆ ಹಗರಣ'ದ ನೈತಿಕ ಹೊಣೆಯನ್ನು ಹೊತ್ತುಕೊಂಡು ತಾವು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡುವ [illegible] ಹೇಳಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಜಪಾನಿನ ರಾಜಕೀಯ ರಂಗದಲ್ಲಿ ಕೋಲಾಹಲ ಎಬ್ಬಿಸಿದ 'ರಿಕ್ರೂಟ್' ಕಂಪೆನಿ ಹಗರಣ'ದಲ್ಲಿ ಪ್ರಧಾನಿ ಹಾಗೂ ಅವರ ಆಪ್ತೇಷ್ಟರು 13 ಲಕ್ಷ ಡಾಲರ್‌ನಷ್ಟು ಹಣವನ್ನು ಅಕ್ರಮ ಸಂಭಾವನೆಯಾಗಿ ರಿಕ್ರೂಟ್ ಕಂಪೆನಿಯಿಂದ ಪಡೆದಿದ್ದಾರೆಂದು ಆಪಾದಿಸಲಾಗಿದೆ.

ಪ್ರಧಾನಿ ತಾಕೆಶಿಟಾ ರಾಜೀನಾಮೆ ನೀಡಿದ ಬೆನ್ನಲ್ಲೆ ಅವರ ಮಾಜಿ ಕಾರ್ಯದರ್ಶಿ ಇಹೆ ಆಕಿ ಅವರು ಆತ್ಮಹತ್ಯೆ ಮಾಡಿಕೊಂಡ ವರದಿಗಳು ಬಂದಿವೆ. ಆಕಿ ಅವರು ರಿಕ್ರೂಟ್ ಕಂಪೆನಿ ಹಗರಣದಲ್ಲಿ ಒಳಗೊಂಡಿದ್ದಾಗಿ ವರದಿಗಳು ತಿಳಿಸಿವೆ. ಅವರು ಪ್ರಧಾನಿ ಅವರಿಗೆ ಹಣಕಾಸು ಸಲಹೆಗಾರರಾಗಿದ್ದರು.

"ರಿಕ್ರೂಟ್ ಕಂಪೆನಿ ಹಗರಣದಿಂದ ನನ್ನ ಮೇಲಿನ ಜನರ ವಿಶ್ವಾಸಾರ್ಹತೆ ಕುಸಿದಿರುವುದು ಗಮನಕ್ಕೆ ಬಂದಿದೆ. ರಾಜಕೀಯ ವ್ಯವಸ್ಥೆಯ ಮೇಲಿನ ಜನರ ನಂಬಿಕೆ ಕುಸಿಯದಂತೆ ನೋಡಿಕೊಳ್ಳುವ ನೈತಿಕ ಹೊಣೆಗಾರಿಕೆಯೊಂದಿಗೆ ನಾನು ರಾಜೀನಾಮೆ ನೀಡುತ್ತಿದ್ದೇನೆ" ಎಂದು ತಾಕೆಶಿಟಾ ತಿಳಿಸಿದ್ದಾರೆ.

ಜಪಾನಿನ ಈ ಬೆಳವಣಿಗೆಯಲ್ಲಿ ಎರಡು ವಿಭಿನ್ನ ಮುಖಗಳು ಪ್ರಜಾಪ್ರಭುತ್ವ ಪ್ರೇಮಿಗಳ ಗಮನ ಸೆಳೆಯುತ್ತವೆ. ಜಾಗತಿಕ ರಾಜಕೀಯ ರಂಗದಲ್ಲಿ ರಿಕ್ರೂಟ್ ಕಂಪೆನಿಯಂತಹ ಕೆಲವು ಬಹುರಾಷ್ಟ್ರೀಯ ಕಂಪೆನಿಗಳು ಹಾಗೂ ಅವುಗಳ ಸಾಮ್ರಾಜ್ಯಶಾಹಿ ಮನೋಭಾವ ವಹಿಸುತ್ತಿರುವ ಕೊಳಕು ಪಾತ್ರ ಒಂದು ಮುಖವಾದರೆ, ಇಂತಹ ಹಗರಣಗಳು ಬಹಿರಂಗಗೊಳ್ಳುವವರೆಗೂ ಸುಮ್ಮನಿದ್ದು ಅನಂತರ ನೈತಿಕ ಹೊಣೆಗಾರಿಕೆಯ ಬಗ್ಗೆ ಮಾತನಾಡುವ ಜನನಾಯಕರದ್ದು ಇನ್ನೊಂದು ಮುಖ.

ಕಳೆದ ಒಂದು ವರ್ಷದಿಂದೀಚೆಗೆ ಜಪಾನಿನಲ್ಲಿ ರಾಜಕೀಯ ಭ್ರಷ್ಟಾಚಾರದ ವಿರುದ್ಧ ಅತ್ಯಂತ ಬಲಿಷ್ಠವಾದ ಜನಾಭಿಪ್ರಾಯ ಮೂಡಿಬಂದಿದೆ. ರಿಕ್ರೂಟ್ ಹಗರಣಕ್ಕೆ ಸಂಬಂಧಿಸಿ ಈ ಹಿಂದೆಯೇ ತಾಕೆಶಿಟಾ ಅವರ ಸಂಪುಟದ ಮೂವರು ಸಚಿವರು ರಾಜೀನಾಮೆ ನೀಡಿದ್ದರು. 12ಕ್ಕೂ ಹೆಚ್ಚು ಮಂದಿಯನ್ನು ಲಂಚದ ಆರೋಪದ ಮೇಲೆ ಬಂಧಿಸಲಾಗಿತ್ತು. ಆದರೆ ಕೊನೆಗೂ ಪ್ರಧಾನಿ ಅವರೇ ಮುಖ್ಯ ಹೊಣೆಯನ್ನು ಹೊತ್ತು ರಾಜೀನಾಮೆ ನೀಡಬೇಕಾಯಿತು.

ಸಾರ್ವಜನಿಕ ಜೀವನದಲ್ಲಿ ರಾಜಕಾರಣಿಗಳ ಪಾತ್ರದ ಬಗ್ಗೆ ಜಪಾನಿನ ಈ ಹಗರಣ ನಿಜಕ್ಕೂ ಒಳ್ಳೆಯ ಪಾಠವೊಂದನ್ನು ನಮ್ಮ ಮುಂದಿಟ್ಟಿದೆ. ಜಗತ್ತಿನಾದ್ಯಂತ [illegible] ರಾಜಕೀಯವೆಂಬುದು ಲಂಚ ಹಾಗೂ ಭ್ರಷ್ಟತೆಯ ಪಂಚಾಂಗದ ಮೇಲೆ ಸೌಧ ಕಟ್ಟುತ್ತಿರುವ ಈ ದಿನಗಳಲ್ಲಿ ಜಪಾನಿನ ಜನರು ತಮ್ಮ ಜನನಾಯಕರು ರಾಜೀನಾಮೆ ನೀಡುವಂತೆ ಒತ್ತಾಯ ತಂದು ಪ್ರಜಾಪ್ರಭುತ್ವದ ಮಾನ ಉಳಿಸುವಲ್ಲಿ ಅತ್ಯಂತ ಸ್ತುತ್ಯಾರ್ಹ ಕೆಲಸ ಮಾಡಿದ್ದಾರೆ.

ಬಹುರಾಷ್ಟ್ರೀಯ ಕಂಪೆನಿಗಳ ಹಣದ [illegible] ಮೇಲೆ ಅಂತರರಾಷ್ಟ್ರೀಯ ರಾಜಕೀಯ ಸಂಬಂಧಗಳು ಹೆಪ್ಪುಗಟ್ಟುತ್ತಿರುವ ಕರಾಳ ಕುಕೃತ್ಯಗಳ ಬಗ್ಗೆಯೂ ಈ ಹಗರಣ ಗಮನ ಸೆಳೆದಿದೆ. ಅಮೆರಿಕದ ಬಹುರಾಷ್ಟ್ರೀಯ ಕಂಪೆನಿ ಭಾರತದಂತಹ ದೇಶದಲ್ಲಿ ವಿಷಾನಿಲ ದುರಂತಕ್ಕೆ ಕಾರಣವಾಗಿ ಕಾನೂನಿನಿಂದ ನುಣುಚಿಕೊಳ್ಳುವುದು, ಸ್ವೀಡನ್ನಿನ ಬಂದೂಕು ಕಂಪೆನಿಯೊಂದು ಭಾರತದಂತಹ ತೃತೀಯ ಜಗತ್ತಿನ ದೇಶಗಳ ಆಳುವವರನ್ನು ಕಮಿಶನ್ ಕೊಟ್ಟು 'ಖರೀದಿಸುವುದು'– ಸಾಮಾನ್ಯವೆಂಬಂತೆ ಪರಿಗಣಿತವಾಗುತ್ತಿರುವ ಈ ದಿನಗಳಲ್ಲಿ ಜಪಾನಿನಲ್ಲಾದಂತೆ ಸಾರ್ವಜನಿಕ ಅಭಿಪ್ರಾಯ ಎಲ್ಲೆಡೆಗಳಲ್ಲೂ ರೂಪುಗೊಳ್ಳಬೇಕಾದ ಅನಿವಾರ್ಯತೆ ಇದೆ. ಬಹುರಾಷ್ಟ್ರೀಯ ಕಂಪೆನಿಗಳ ಹಿಂದಿನ ಬಂಡವಾಳಶಾಹಿ ಹಿತಾಸಕ್ತಿಗಳು ತೃತೀಯ ಜಗತ್ತಿನ ದೇಶಗಳ ಜನರ ದೈನಂದಿನ ಬಾಳ್ವೆಯ ಮೇಲೆ ಸವಾರಿ ಮಾಡಿ ಬೀರುವ ವಿಷಜಾಲವನ್ನು ಭೇದಿಸಲು ಇರುವ ಪ್ರಭಾವಶಾಲಿ ಮಾರ್ಗ ಜನರ ಒತ್ತಡ ಎಂಬುದು ಈ ಪ್ರಕರಣದಲ್ಲಿ ಸಾಬೀತಾಗಿದೆ. ಈ ಹಿಂದೆ 1970ರಲ್ಲಿ ಅಮೆರಿಕದ ಲಾಕ್‌ಹೀಡ್ ಕಾರ್ಪೊರೇಶನ್‌ನಿಂದ ಸುಮಾರು 5 ಕೋಟಿ ರೂಪಾಯಿಯಷ್ಟು ಅಕ್ರಮ ಸಂಭಾವನೆ ಸ್ವೀಕರಿಸಿದ್ದ ಆರೋಪದ ಮೇಲೆ ಆಗಿನ ಪ್ರಧಾನಿ ಕಾಕುಯಿ ತನಾಕಾ ರಾಜೀನಾಮೆ ನೀಡಿದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಭಾರತದ ರಾಜಕಾರಣಿಗಳು ಜಪಾನಿನ ಈ ಬೆಳವಣಿಗೆಯಿಂದ ಕಲಿಯಬೇಕಾದ ಪಾಠ ಬಹಳಷ್ಟಿದೆ. ಭಾರತದಲ್ಲಿ ಆಳುವವರ ಮೇಲೆ ಈಗಾಗಲೇ ಬೊಫೋರ್ಸ್, ಫೇರ್‌ಫಾಕ್ಸ್, ಎನ್‌ಜಿಇಎಫ್, ಬಾಟ್ಲಿಂಗ್, ಲ್ಯಾಂಪ್, ಲಾಟರಿ ಮುಂತಾದ ನೂರಾರು ಹಗರಣಗಳ ಆರೋಪಗಳಿವೆ. ಆದರೆ ಈ ಯಾವುದೇ ಹಗರಣದಲ್ಲೂ ಮೇಲ್ನೋಟಕ್ಕೆ ಸ್ಪಷ್ಟವೆನ್ನಬಹುದಾದ ಭ್ರಷ್ಟಾಚಾರದ ಪುರಾವೆಗಳಿದ್ದರೂ ಯಾವುದೇ ರಾಜಕಾರಣಿ ರಾಜೀನಾಮೆ ನೀಡಿದ ಉದಾಹರಣೆಗಳಿಲ್ಲ. ರಾಜೀನಾಮೆ ಬಿಡಿ; ಕನಿಷ್ಠ ನೈತಿಕ ಹೊಣೆಗಾರಿಕೆಯಿಂದ ದೇಶದ ಮುಂದೆ ತಪ್ಪೊಪ್ಪಿಕೊಂಡಂತಹ ನಿದರ್ಶನಗಳೂ ಇಲ್ಲ. ಬಹುಶಃ ಲಾಲ್‌ಬಹದ್ದೂರ್ ಶಾಸ್ತ್ರಿಯವರು ರೈಲ್ವೆ ಸಚಿವರಾಗಿದ್ದಾಗ ಅಪಘಾತವೊಂದರ ಹಿನ್ನೆಲೆಯಲ್ಲಿ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದ ಪ್ರಮುಖ ಉದಾಹರಣೆಯೊಂದನ್ನು ಹೊರತುಪಡಿಸಿದರೆ, ನಮ್ಮ ರಾಜಕಾರಣಿಗಳೆಲ್ಲ ಮುಖ ಮುಚ್ಚಿಕೊಳ್ಳಬೇಕಾದಂತಹ ಪರಿಸ್ಥಿತಿ ಇದೆ. ಇತ್ತೀಚಿನ ಮೂರು ದಶಕಗಳಲ್ಲಂತೂ ಯಾವುದೇ ಹಗರಣಗಳು ನಮ್ಮ ರಾಜಕಾರಣಿಗಳ ದಪ್ಪ ಚರ್ಮವನ್ನು ಚುಚ್ಚಿದ್ದೇ ಇಲ್ಲ. ಸಾರ್ವಜನಿಕರ ಹಣವನ್ನು ಮಾನ ಹರಾಜಿಗಿಟ್ಟು ಮೂಗಿನವರೆಗೆ ತಿಂದು ಕೂಡಾ ಮೌಲ್ಯದ ಬಗ್ಗೆ ಮಾತನಾಡುವ ಆತ್ಮವಂಚನೆಯ ಪರಂಪರೆ ನಮ್ಮಲ್ಲೀಗ ಸಾಮಾನ್ಯ ಸಂಗತಿ ಎನ್ನಿಸಿದೆ.

ಸಾರ್ವಜನಿಕ ಜೀವನದಲ್ಲಿರಬೇಕಾದ ವ್ಯಕ್ತಿಯು ರೂಪಿಸಿಕೊಳ್ಳಬೇಕಾದ ಚಾರಿತ್ರ್ಯ ಶುದ್ಧಿಯ ಬಗ್ಗೆ ನಮ್ಮ ಅಧಿಕಾರಸ್ಥರು ಎಂದು ಎಚ್ಚರಗೊಂಡಾರು? ಅಥವಾ ಜಪಾನಿನ ಜನರಂತೆ, ಸಾರ್ವಜನಿಕ ಜೀವನಕ್ಕೆ ಅಂಟಿದ ಈ ಭ್ರಷ್ಟ ರಾಜಕಾರಣಿಗಳ ಬಂದಳಿಕೆಯನ್ನು ಕಿತ್ತೊಗೆಯಲು ನಮ್ಮ ಜನ ಎಂದು ಮನ ಮಾಡಿಯಾರು? ಭಾರತ ಈಗ ಮುಳುಗಿರುವ ಕೊಚ್ಚೆಯಿಂದೆದ್ದು ನೈಜ ಪ್ರಗತಿಯ ಹಾದಿ ಹಿಡಿಯಬೇಕಾದಲ್ಲಿ ಜನ ತಕ್ಷಣ ಉತ್ತರಿಸಬೇಕಾದ ಯಕ್ಷಪ್ರಶ್ನೆಗಳಿವು.



ಚರ್ಮರೋಗ ಚಿಕಿತ್ಸಾ ಉಪಕೇಂದ್ರ ಉದ್ಘಾಟನೆ

ಹಳೆಯಂಗಡಿ, ಏ. 26–ಇಲ್ಲಿಗೆ ಸಮೀಪದ ಕಲ್ಲಾಪುವಿನ ಶ್ರೀ ವೀರಭದ್ರ ಮಹಮ್ಮಾಯಿ ದೇವಸ್ಥಾನದಲ್ಲಿ ಚರ್ಮರೋಗ ಚಿಕಿತ್ಸಾ ಉಪಕೇಂದ್ರವೊಂದನ್ನು ಮಂಗಳೂರಿನ ದ. ಕ. ಜಿಲ್ಲಾ ಹಿಂದ್ ಕುಷ್ಠ ನಿವಾರಣಾ ಸಂಘದ ಗೌರವ ಕಾರ್ಯದರ್ಶಿ ಡಾ| ಜೆ. ಎನ್. ಶೆಟ್ಟಿ ಇತ್ತೀಚೆಗೆ ಉದ್ಘಾಟಿಸಿದರು.

ಇದೇ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ಉಚಿತ ವೈದ್ಯಕೀಯ ಮತ್ತು ದಂತ ಚಿಕಿತ್ಸಾ ತಪಾಸಣಾ ಶಿಬಿರವನ್ನು ಕೆನರಾ ಬ್ಯಾಂಕಿನ ವಿಭಾಗೀಯ ಅಧಿಕಾರಿ ಎಂ. ಎಂ. ಭಂಡಾರಿ ಉದ್ಘಾಟಿಸಿದರು.

ಮಂಗಳೂರಿನ ಎಸ್. ಎಲ್. ಶೇಟ್ ಡೈಮಂಡ್ ಹೌಸ್‌ನ ಮಾಲೀಕ ಎಂ. ರಘುನಾಥ ಶೇಟ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಸುರತ್ಕಲ್‌ನ ಪ್ರಾಥಮಿಕ ಆರೋಗ್ಯ ಕೇಂದ್ರ, ದ. ಕ. ಜಿಲ್ಲಾ ಹಿಂದ್ ಕುಷ್ಠ ನಿವಾರಣಾ ಸಂಘ, ಎ. ಬಿ. ಶೆಟ್ಟಿ ದಂತ ಮಹಾವಿದ್ಯಾಲಯ, ದಂತ ವೈದ್ಯಕೀಯ ಸಂಘದ ದ. ಕ. ಜಿಲ್ಲಾ ಶಾಖೆ, ಜಿಲ್ಲಾ ಕ್ಷಯರೋಗ ನಿಯಂತ್ರಣಾ ಕೇಂದ್ರ, ಮತ್ತು ಕೆನರಾ ಬ್ಯಾಂಕ್ ವೃತ್ತ ಕಚೇರಿ ಮಂಗಳೂರು ಇವರ ಜಂಟಿ ಸಹಕಾರ ಪಡೆದು ಕಲ್ಲಾಪು ಶ್ರೀ ವೀರಭದ್ರ ಮಹಮ್ಮಾಯಿ ವಾಚನಾಲಯ ಮತ್ತು ಯುವಕ ಮಂಡಲ ಹಾಗೂ ಶ್ರೀ ಮಹಮ್ಮಾಯಿ ದೇವಸ್ಥಾನ ಪುನರ್ನವೀಕರಣ ಸಮಿತಿ ಜಂಟಿ ಆಶ್ರಯದಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಧರ್ಮದರ್ಶಿ ಹರಿಕೃಷ್ಣ ಪುನರೂರು, ಪ್ರಭಾರ ಮತ್ತು ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿ ಡಾ| ಎ. ಪಿ. ಮೂರ್ತಿ ದ. ಕ. ಜಿಲ್ಲಾ ಪದ್ಮಶಾಲಿ ಮಹಾಸಭಾದ ಅಧ್ಯಕ್ಷ ಎಸ್. ಶ್ರೀನಿವಾಸ ಶೆಟ್ಟಿಗಾರ್, ಹಳೆಯಂಗಡಿ ಮಂಡಲ ಪಂಚಾಯತ್ ಪ್ರಧಾನ ಪಿ. ಸಂಜೀವ ಯಾ. ದೇವಾಡಿಗ, ದ. ಕ. ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್‌ನ ನಿರ್ದೇಶಕ ಎಚ್. ನಾರಾಯಣ ಸನಿಲ್ ಮುಂಬಯಿಯ ಫೈಜರ್ ಸಂಸ್ಥೆಯ ನಿವೃತ್ತ ಅಧಿಕಾರಿ ಎಚ್. ವಿಠಲ ಹಾಗೂ ಎಚ್. ಸುಬ್ರಾಯ ಭಟ್ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಸುರತ್ಕಲ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ| ಲಲಿತಾ ಜಯರಾಮ್ ಮತ್ತು ವೆಂಕಟ್ರಮಣ ಗಟ್ಟಿ ಅವರನ್ನು ಫಲಪುಷ್ಪವಿತ್ತು ಪುರಸ್ಕರಿಸಲಾಯಿತು. ಅಲ್ಲದೆ ಶಿಬಿರದಲ್ಲಿ ಭಾಗವಹಿಸಿದ ತಜ್ಞ ವೈದ್ಯಾಧಿಕಾರಿಗಳನ್ನು ಕೂಡಾ ಹೂಹಾರ ಹಾಕಿ ಗೌರವಿಸಲಾಯಿತು.

ಶಿಬಿರದಲ್ಲಿ ಸುಮಾರು 500 ಕ್ಕೂ ಹೆಚ್ಚು ಫಲಾನುಭವಿಗಳು ಪ್ರಯೋಜನ ಪಡೆದರು.

ಅಧ್ಯಾಪಕ ಕೇಶವ ಶೆಟ್ಟಿಗಾರ್ ಸ್ವಾಗತಿಸಿದರು, ಸತೀಶ್ ಪೈ ಕಾರ್ಯಕ್ರಮ ನಿರ್ವಹಿಸಿದರು. ಅಧ್ಯಾಪಕ ದೊಂಬ ಶೆಟ್ಟಿಗಾರ್ ವಂದಿಸಿದರು.

ಚಕ್ರಪಾಣಿ ದೇವಳದ ಚಂಡಿಕಾಯಾಗ

ಮಂಗಳೂರು, ಏ. 26- ಅತ್ತಾವರದ ಶ್ರೀಕ್ಷೇತ್ರ ಚಕ್ರಪಾಣಿ ದೇವಸ್ಥಾನದಲ್ಲಿ ಏ. 28ರಂದು ಚಂಡಿಕಾ ಯಾಗದ ಪೂರ್ಣಾಹುತಿ ನಡೆಯಲಿದೆ.

ಶ್ರೀ ಶಾರದಾ ಪೀಠಾಧೀಶ್ವರ ಶಂಕರಾಚಾರ್ಯ, ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮೀಜಿ ಅವರು ಕ್ಷೇತ್ರಕ್ಕೆ ಆಗಮಿಸುವರೆಂದು ಚಕ್ರಪಾಣಿ ಸೇವಾಸಮಿತಿ ತಿಳಿಸಿದೆ.

ಏ. 27ರಂದು ಬೆಳಿಗ್ಗೆ 101 ತೆಂಗಿನ ಕಾಯಿಗಳ ಗಣಹೋಮ ಏ. 28ರಂದು 1001 ಕಲಶದ ಸತ್ಯನಾರಾಯಣ ಪೂಜೆ ಸಹ ಚಕ್ರಪಾಣಿ ದೇವಸ್ಥಾನದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ

ರಾಜ್ಯ ಕ್ರೈಸ್ತರ ಹೋರಾಟ ಸಮಿತಿ ಅಸ್ತಿತ್ವಕ್ಕೆ

ಶಿವಮೊಗ್ಗ, ಏ. 26– ರಾಜ್ಯದಲ್ಲಿನ ಕ್ರೈಸ್ತರ ಏಳಿಗೆಗಾಗಿ ಹೋರಾಡುವ ಉದ್ದೇಶವುಳ್ಳ ರಾಜ್ಯ ಕ್ರೈಸ್ತರ ಹೋರಾಟ ಸಮಿತಿ ಅಸ್ತಿತ್ವಕ್ಕೆ ಬಂದಿದೆ.

ಸಮಿತಿಯ ಪದಾಧಿಕಾರಿಗಳಾಗಿ ಡಿ'ಸೋಜ ಆಲ್ಬರ್ಟ್ (ಅಧ್ಯಕ್ಷ), ಆರ್. ಎ. ಅನಂತರಾಜ (ಉಪಾಧ್ಯಕ್ಷ), ಶ್ರೀಮತಿ ವಿಜಯಮೆಸ್ಲಿ (ಕಾರ್ಯದರ್ಶಿ), ಎ. ಸಂಪತ್ ಕುಮಾರ್ (ಸಹಕಾರ್ಯದರ್ಶಿ) ಶ್ರೀಮತಿ ಜೆ.ಡಿ.ಭಾಷ್ಯಂ (ಖಜಾಂಚಿ), ಜಿ. ಜಾನ್‌ವೆಸ್ಲೀ, ಡಿ. ಚಂದ್ರಶೇಖರ, ಸಾಮುವೇಲ್ ದೇವಪುತ್ರ, ಶಾಂತವೀರಪ್ಪ (ನಿರ್ದೇಶಕರು). ಯೋಗಾನರಸಿಂಹಾಚಾರ್ (ಸಲಹೆಗಾರರು) ಅವರು ಆಯ್ಕೆಯಾಗಿದ್ದಾರೆ.

ಆಸಕ್ತರು ಹೆಚ್ಚಿನ ವಿವರಗಳಿಗಾಗಿ ಅಧ್ಯಕ್ಷರು, ರಾಜ್ಯ ಕ್ರೈಸ್ತರ ಹೋರಾಟ ಸಮಿತಿ, ಜೆ.ಡಬ್ಲ್ಯು. ಇಂಜಿನಿಯರಿಂಗ್ ವರ್ಕ್, ಮಾಡರ್ನ್ ಚಿತ್ರಮಂದಿರ ಹಿಂಭಾಗ, ಶಿವಮೊಗ್ಗ – ಈ ವಿಳಾಸಕ್ಕೆ ಸಂಪರ್ಕಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವಾರ್ಷಿಕ ಮಹಾಸಭೆ

ಕೃಷ್ಣಾಪುರ, ಏ. 26–ಗೌಸಿಯಾ ಮೊಹಿಯುದ್ದೀನ್ ಜುಮ್ಮಾ ಮಸೀದಿ ಮತ್ತು ಅಲ್ ಮದರಸತುಲ್ ಅಝೀಝಿಯಾ 8 ನೇ ಬ್ಲಾಕ್ ಕೃಷ್ಣಾಪುರ ಚೊಕ್ಕಬೆಟ್ಟು ಇದರ ವಾರ್ಷಿಕ ಮಹಾಸಭೆಯು ಖತೀಬರಾದ ಜಾ. ಎ. ಇಬ್ರಾಹಿಂ ಮುಸ್ಲಿಯಾರ್ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆಯಿತು.

ಪದಾಧಿಕಾರಿಗಳಾಗಿ ಅಕ್ತರ್ ರೆಝಾ (ಅಧ್ಯಕ್ಷ) ಸೀದಿಯಬ್ಬ (ಉಪಾಧ್ಯಕ್ಷ), ಹಸನ್‌ಬಾವ (ಕಾರ್ಯದರ್ಶಿ), ಅಬ್ದುಲ್ ರಹೀಂ (ಜೊತೆ ಕಾರ್ಯದರ್ಶಿ), ಬಿ. ಅಬ್ದುಲ್ ಖಾದರ್ (ಖಜಾಂಚಿ), ಟಿ ಮ್ಮದ್ ಹಾಜಿ (ಲೆಕ್ಕಪರಿಶೋಧಕ) ಹಾಗೂ 10 ಮಂದಿ ಕಾರ್ಯಕಾರಿ ಸಮಿತಿ ಸದಸ್ಯರು ಆಯ್ಕೆಯಾದರೆಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ವುದೇ
ಳ ನಡುವೆ
ಬ್ರಾಂಡ್'

'ಮಿಲ್ಕ್ ಕ್ಯಾನ್' ಗುರುತಿನ ಪಶು ಆಹಾರವನ್ನು ತಿನ್ನುವ ಹಸುಗಳು, ಕರುಗಳು, ಎಮ್ಮೆಗಳು, ಮೇಕೆಗಳು ಮತ್ತು ದನಗಳು, ಪೂರ್ಣ ಆರೋಗ್ಯವನ್ನು ಹೊಂದಿದ್ದು ಅಧಿಕ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿರುತ್ತವೆ. ಪೌಷ್ಟಿಕಾಂಶಭರಿತ 'ಮಿಲ್ಕ್‌ಕ್ಯಾನ್' ಪಶು ಆಹಾರಗಳ ಶ್ರೇಣಿಯು ಸರಿಯಾಗಿ ಮಿಶ್ರಣ ಮಾಡಲ್ಪಟ್ಟ ಪ್ರೋಟೀನ್, ವಿಟಮಿನ್‌ಗಳು, ಲವಣಾಂಶಗಳು ಮತ್ತು ಶಕ್ತಿವರ್ಧಕಗಳಿಂದ ಸಮೃದ್ಧವಾಗಿರುತ್ತವೆ.

ಮುಂಗಾರು

ಮಂಗಳವಾರ, ಏಪ್ರಿಲ್ 25, 1989

ಮಾತುಕತೆಗಿದು ಸೂಕ್ತ ಕಾಲ

ಶ್ರೀಲಂಕಾದಲ್ಲಿ ಉಗ್ರಗಾಮಿಗಳ ಸಮಸ್ಯೆಗಳ ಪರಿಹಾರಕ್ಕೆ ನೈಜ ಕಳಕಳಿಯನ್ನು ತೋರುತ್ತಿರುವ ಅಲ್ಲಿನ ಅಧ್ಯಕ್ಷ ಪ್ರೇಮದಾಸ ರಣಸಿಂಘೆ ಅವರು ಇನ್ನಷ್ಟು ಪರಿಹಾರ ಪ್ರಸ್ತಾಪಗಳನ್ನು ಮುಂದಿಟ್ಟಿದ್ದಾರೆ.

ಆರಂಭದಲ್ಲಿ ತಮಿಳು ಉಗ್ರಗಾಮಿ ಸಂಘಟನೆಯಾದ ಎಲ್‌ಟಿಟಿಇಯನ್ನು ಮಾತುಕತೆಗೆಳೆಯಲು ಏಕಪಕ್ಷೀಯ ಸಮರ ವಿರಾಮವನ್ನು ಲಂಕಾ ಸರಕಾರದ ಪರವಾಗಿ ಪ್ರೇಮದಾಸ ಘೋಷಿಸಿದ್ದರು. ಮೊದಲೆರಡು ದಿನಗಳ ಕಾಲ ಈ ಪ್ರಸ್ತಾಪಕ್ಕೆ ಸೊಪ್ಪು ಹಾಕದ ಎಲ್‌ಟಿಟಿಇ ಕೊನೆಗೆ ಮಾತುಕತೆಗೆ ಬರಲು ಒಲವು ತೋರಿದ್ದು ಮಾತುಕತೆಗಾಗಿ ತಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡಿತು.

ಈಗ ಪ್ರೇಮದಾಸ ಅವರು, ಹಿಂಸಾಕೃತ್ಯಗಳಲ್ಲಿ ತೊಡಗಿರುವ [illegible] ಸಿಂಹಳೀಯ ಉಗ್ರಗಾಮಿ [illegible] ಸೆರೆಯುಂಟಾ[illegible] ಕೊಳ್ಳ[illegible] ಸಾಧ್ಯವಾಗಿದ್ದರೆ [illegible] ಯನ್ನು [illegible] ಅನುಸರಿಸಲು ಸ್ವತಃ [illegible] ಅರಣ್ಯಗಳಿಗೆ ಹೋಗಲೂ ತಾನು ಸಿದ್ಧನಿದ್ದೇನೆಂದು ಪ್ರೇಮದಾಸ ಘೋಷಿಸಿದ್ದಾರೆ.

ಸಿಂಹಳೀಯರು, ತಮಿಳರು ಹಾಗೂ ಮುಸ್ಲಿಮರ ನಡುವಣ ಜನಾಂಗೀಯ ಕಲಹದ ನರಕಾಗ್ನಿಯಲ್ಲಿ ಬೇಯುತ್ತಿರುವ ಶ್ರೀಲಂಕೆಗೆ ಈಗ ತುರ್ತಾಗಿ ಬೇಕಾಗಿರುವುದು [illegible] ಹಿತ, ಸೌಹಾರ್ದದ ಬಾಳ್ವೆ. ಈ ಅಂಶವನ್ನು ಚೆನ್ನಾಗಿ ಮನದಟ್ಟು ಮಾಡಿಕೊಂಡಿರುವ ಪ್ರೇಮದಾಸ ಅವರು ಅದನ್ನು ಸಾಧಿಸಲು ಬೇಕಾದ ರಾಜಕೀಯ ಜಾಣ್ಮೆಯನ್ನೂ ಪ್ರದರ್ಶಿಸಬೇಕಾಗಿದೆ. ತಮಿಳು ಹಾಗೂ ಸಿಂಹಳೀಯ ಉಗ್ರಗಾಮಿಗಳನ್ನು ಎಲ್ಲಿ ಬೇಕಾದರೂ ಭೇಟಿಯಾಗಲು ತಾವು ಸಿದ್ಧವೆಂದು ಹೇಳುವ ಮೂಲಕ ಅವರು ಮಾತುಕತೆಗೆ ಬೇಕಾದ ವಿಶ್ವಾಸದ ವೇದಿಕೆಗೆ ಮೊದಲ ಮೆಟ್ಟಿಲನ್ನು ಕಟ್ಟಿದ್ದಾರೆ.

"ಕಣ್ಣು ಕಟ್ಟಿಕೊಂಡು ಅಲ್ಲಿಗೆ ಹೋಗಲೂ ನಾನು ಸಿದ್ಧ. ರಾಷ್ಟ್ರದಲ್ಲಿ ಶಾಂತಿ ನೆಲೆಸುವಂತಾಗಲು ಯಾವುದೇ ಅಪಾಯ ಎದುರಿಸಲು ಹಾಗೂ ಯಾವುದೇ ತ್ಯಾಗ ಮಾಡಲೂ ಸಿದ್ಧ" ಎಂದು ಪ್ರೇಮದಾಸ ಹೇಳಿರುವ ಮಾತುಗಳಲ್ಲಿ ಭಾವೋದ್ವೇಗ ಅಡಗಿದ್ದಿರಬಹುದಾದರೂ ಅದರ ಹಿಂದಿನ ಕಾಳಜಿಯನ್ನು ನಮಗೆ ಅಲ್ಲಗಳೆಯಲಾಗುವುದಿಲ್ಲ. ಹಿಂಸೆಯ ವಾತಾವರಣದಿಂದ [illegible] ಮಾತುಕತೆಯ ಹೊಸ ಮಜಲಿನತ್ತ, [illegible] ಇಂತಹ [illegible] [illegible] ತಮಿಳು [illegible] ತಮ್ಮ [illegible] ಎಲ್‌ಟಿಟಿಇ ಈಗ ಈ ಅವಕಾಶವನ್ನು ತಮಿಳರ ಹಿತ ಕಾಪಾಡುವ ರಾಜಕೀಯ ಚಿತ್ರ ಬಿಡಿಸಿಕೊಳ್ಳಲು ಬಳಸಿಕೊಳ್ಳಬೇಕಿದೆ. ಹಲವಾರು ವರ್ಷಗಳಿಂದೀಚೆಗೆ ಸಮರಾಂಗಣದಲ್ಲಿ ಸಾಧಿಸಿಕೊಳ್ಳಲು ಸಾಧ್ಯವಾಗದ ರಾಜಕೀಯ ಲಾಭಗಳನ್ನು ಎಲ್ ಟಿ ಟಿ ಇ ಈಗ ಸಾಧಿಸಿಕೊಳ್ಳುವ ಸಾಧ್ಯತೆಗಳನ್ನು ಕಂಡುಕೊಳ್ಳಬೇಕಿದೆ.

ಶ್ರೀಲಂಕಾದ ಆಳುವ ಪಕ್ಷ ಇದಕ್ಕೆ ಬೇಕಾದ ಪೂರಕ ವಾತಾವರಣವನ್ನು ಈಗಾಗಲೇ ಸಿದ್ಧಪಡಿಸಿದೆ. ಶ್ರೀಲಂಕಾದಲ್ಲಿನ 3.2 ಲಕ್ಷದಷ್ಟು ಭಾರತ ಮೂಲದ ತಮಿಳರಿಗೆ ಮತದಾನ ಹಕ್ಕು ನೀಡುವ ಯೋಜನೆಯೊಂದನ್ನೂ ಶ್ರೀಲಂಕಾ ಸರಕಾರ ರೂಪಿಸಿದೆ. ಈ ಹಕ್ಕು ಜಾರಿಗೊಳಿಸಲು ಸಂವಿಧಾನಕ್ಕೆ ಮಾಡಬೇಕಾದ ವಿಶೇಷ ತಿದ್ದುಪಡಿ ಬಗ್ಗೆ ಈ ವಾರ ಸಂಸತ್ತು ಚರ್ಚೆ ನಡೆಸಲಿದೆಯೆಂದೂ ಲಂಕಾದ ಗ್ರಾಮೀಣ ಉದ್ಯಮ ಅಭಿವೃದ್ಧಿ ಸಚಿವ ಎಸ್. ತೊಂಡಮಾನ್ ಹೇಳಿದ್ದಾರೆ.

ಪ್ರೇಮದಾಸ ಅವರ ಈ ಹೊಸ ರಾಜಕೀಯ [illegible] ಹಿನ್ನೆಲೆಯಲ್ಲಿ ಭಾರತವನ್ನು ದೂರೀಕರಿಸುವ ಯತ್ನವೂ ಅಡಗಿದೆಯೆಂದು ಕೆಲವು ರಾಜಕೀಯ ವೀಕ್ಷಕರು ಅಭಿಪ್ರಾಯ ಪಡುತ್ತಾರೆ. ಎಲ್‌ಟಿಟಿಇಯನ್ನು ನೇರವಾಗಿ ವಿಶ್ವಾಸಕ್ಕೆ ತೆಗೆದುಕೊಳ್ಳುವ ಮೂಲಕ, ಈ ಹಿಂದೆ ಶ್ರೀಲಂಕಾ–ಭಾರತ ಒಪ್ಪಂದದ ಮೂಲಕ ತಮಿಳರು ಹಾಗೂ ಲಂಕಾ ಸರ್ಕಾರದ ಮಧ್ಯೆ ಮಧ್ಯವರ್ತಿ ಪಾತ್ರ ವಹಿಸಿದ್ದ ಭಾರತವನ್ನು ಈಗ [illegible]ವನ್ನಾಗಿಸುವ ಹುನ್ನಾರ ಇದೆಂದೂ ಸ್ವತಃ ಕೆಲವು ತಮಿಳು ಉಗ್ರಗಾಮಿ ಗುಂಪುಗಳೇ ಆರೋಪಿಸಿವೆ. ಆದರೆ ಭಾರತ-ಶ್ರೀಲಂಕಾ ಒಪ್ಪಂದ ನಿರೀಕ್ಷಿತ ಪರಿಣಾಮ ಬೀರದ ಹಿನ್ನೆಲೆಯಲ್ಲಿ ಪ್ರೇಮದಾಸ ಅವರು ಈಗ ಕೈಗೊಂಡಿರುವ ಕ್ರಮ ರಾಜಕೀಯ ಮುತ್ಸದ್ದಿತನದ್ದು ಎನ್ನುವ ಅಭಿಪ್ರಾಯವೂ ಇದೆ. ಭಾರತ-ಶ್ರೀಲಂಕಾ ಒಪ್ಪಂದವನ್ನು ಮೈತ್ರಿ ಒಪ್ಪಂದವನ್ನಾಗಿ ಮಾರ್ಪಡಿಸುವ ಆಲೋಚನೆಯೂ ಪ್ರೇಮದಾಸರಿಗೆ ಇದೆ. ಈ ಸಂಬಂಧ ಕರಡು ಒಪ್ಪಂದವೊಂದನ್ನು ಭಾರತಕ್ಕೆ ಕಳುಹಿಸಲಾಗಿದೆಯೆಂದೂ ಅವರು ಹೇಳಿದ್ದಾರೆ.

ವ್ಯಥಾ ಪ್ರಾಣಹಾನಿಯನ್ನು ಆಹ್ವಾನಿಸಿ ಏನನ್ನೂ ಸಾಧಿಸಲಾಗದಿರುವ ಹಂತಕ್ಕೆ ತಲುಪಿರುವ ತಮಿಳು ಉಗ್ರಗಾಮಿಗಳು ಶ್ರೀಲಂಕಾದಲ್ಲಿ ರಾಜಕೀಯ ವ್ಯವಸ್ಥೆಯನ್ನು ಪುನರ್ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುವ ಈ ಅವಕಾಶವನ್ನು ಹೇಗೆ ಬಳಸಿಕೊಳ್ಳುವರೆಂಬುದರ ಮೇಲೆ ಶ್ರೀಲಂಕಾದ ಭವಿಷ್ಯ ಕೂಡಾ ನಿಂತಿದೆ. ಅಂಥ ಯುದ್ಧವನ್ನು ಕೈಬಿಟ್ಟು ಸೌಹಾರ್ದತೆಯ ಮಾತುಕತೆಯತ್ತ ಎಲ್‌ಟಿಟಿಇ ಮನಸ್ಸು ಮಾಡದಿದ್ದಲ್ಲಿ ವಿಪರೀತ ಬೆಲೆ ತೆರಬೇಕಾದ ಪರಿಸ್ಥಿತಿ ಬಂದೀತು.

ಸ್ಥಳೀಯ ಜೂನಿಯರ್ ಚೇಂಬರ್ ಹಾಗೂ 'ರೂಪರಂಗ'ದ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ಸನ್ಮಾನಿಸಿದಾಗ ಅದಕ್ಕೆ ಉತ್ತರಿಸುತ್ತಿದ್ದ ಅವರು, "ನನಗೆ ಈ ರಂಗಭೂಮಿಯು ಅಜಾತ ಶತ್ರುವಾಗಿ ಕೊನೆ ಉಸಿರಿನ ತನಕ ಇರಬೇಕೆಂಬ ಆಸೆ ಇದೆ. ಇಲ್ಲಿಯವರೆಗೆ ಹೊಟ್ಟೆಪಾಡಿಗೆ ನಾಟಕ ಆಡಿದೆ. ಇನ್ನು ಸಮಾಜ ಸೇವೆಗಾಗಿ ನಾಟಕ ಆಡುತ್ತೇನೆ" ಎಂದರು.

"ಮಾಸ್ಟರ್ ಹಿರಣ್ಣಯ್ಯನವರ ಪಾತ್ರಗಳು ಹಿಂದಿನ ತೀಕ್ಷ್ಣತೆಯನ್ನು ಕಳೆದುಕೊಂಡಿವೆ" ಎಂಬ ಮಾತು ನಿಜವಾದದ್ದು ಎಂದು ಒಪ್ಪಿಕೊಂಡ ಹಿರಣ್ಣಯ್ಯ, "ಹಿಂದೆ ನನ್ನಲ್ಲೊಂದು 'ಭೂತ' ಕುಳಿತು ಮಾತನಾಡುತ್ತಿತ್ತು. ಅದು 'ಆಲ್ಕೋಹಾಲ್ ಭೂತ' 85ರ ನಂತರ ಈ ಭೂತವನ್ನು

ತಹಸೀಲ್ದಾರ ತಿಮ್ಮಯ್ಯ, ಜೂನಿಯರ್ ಚೇಂಬರಿನ ಅಧ್ಯಕ್ಷ ಯು. ಎಸ್. ಶೆಣೈ ಹಾಗೂ ಗೆಳೆಯರ ಬಳಗ ಮಂಗಳೂರು ಇದರ ಅಧ್ಯಕ್ಷ ಬಾಬುಶೆಟ್ಟಿ, ಹಿರಣ್ಣಯ್ಯರವರಿಗೆ ಶುಭ ಹಾರೈಸಿದರು.

ಜೇಸಿ ಕಾರ್ಯದರ್ಶಿ ರವಿಕಿರಣ ಮುರ್ಡೇಶ್ವರ ವಂದಿಸಿದರು.

ಪುಕೇರ ಕಂದ ಹಾಗೂ ಬಾಬು ಎಂಬವರ ವಿರುದ್ಧ ಪೊಲೀಸರು ಮೊಕದ್ದಮೆ ದಾಖಲು ಮಾಡಿಕೊಂಡಿದ್ದಾರೆ.

ಶ್ರೀಗಂಧವು ಸುಮಾರು 27 ಸಾವಿರ ರೂ. ಮೌಲ್ಯದ್ದೆನ್ನಲಾಗಿದ್ದು, ಆರೋಪಿಗಳು ತಲೆತಪ್ಪಿಸಿಕೊಂಡಿರುವರೆಂದು ಹೇಳಲಾಗಿದೆ.

ಹೊಟೇಲ್ ಕಾರ್ಮಿಕನ ಹಲ್ಲೆ: ಪ್ರತಿಭಟನೆ

(ಮಂಗಳೂರು ವರದಿ)

ತೀರ್ಥಹಳ್ಳಿ, ಎ. 24 – ಸಣ್ಣ ಕಾರಣಕ್ಕಾಗಿ ಹೊಟೇಲ್ ಕಾರ್ಮಿಕರೊಬ್ಬರನ್ನು ಅದರ ಮಾಲೀಕರು ಥಳಿಸಿದಾಗ, ಈ ದೌರ್ಜನ್ಯವನ್ನು ವಿರೋಧಿಸಿ ಕಾರ್ಮಿಕರು ಹೊಟೇಲ್ ಮುಂದುಗಡೆ ಧರಣಿ ನಡೆಸಿದ ಘಟನೆ ಇತ್ತೀಚೆಗೆ ಇಲ್ಲಿ ನಡೆಸಿದರು.

ದೌರ್ಜನ್ಯವನ್ನು ಖಂಡಿಸಿ ಹೊಟೇಲ್ ಕಾರ್ಮಿಕರು ತಮ್ಮ ಕೆಲಸವನ್ನು ಸ್ಥಗಿತಗೊಳಿಸಿದ್ದರು.

ಊರ ಪ್ರಮುಖರ ಮಧ್ಯಸ್ಥಿಕೆಯಿಂದ ಹಲ್ಲೆಗೊಳಗಾದ ಕಾರ್ಮಿಕನಿಗೆ ಪರಿಹಾರ ನೀಡುವ ಮೂಲಕ ಪರಿಸ್ಥಿತಿ ಶಾಂತಸ್ಥಿತಿಯನ್ನು ತಾಳಿತು.

ಸ್ಥಳೀಯ ಕೆಲ ಹೋಟೇಲ್‌ಗಳಲ್ಲಿ ಅಮಾನುಷವಾಗಿ ಕಾರ್ಮಿಕನ್ನು ನಡೆಸಿಕೊಳ್ಳುತ್ತಿರುವುದಕ್ಕೆ ಈ ಘಟನೆ ಎಚ್ಚರಿಸಿದಂತಾಗಿದೆ.

Storex
WATER TANKS
Storexcellence!

ADVEL/S/498

GUJARAT RAJ PLAST PVT. LTD.
242, 1st Floor, New Cloth Market, Ahmedabad-380002 INDIA
Phones : 362287, 342615 Gram . WATER TANK Telex - 121-6807 APL IN

ಮಾರಾಟಗಾರರು: ಬೆಂಗಳೂರು (ಕರ್ನಾಟಕ): ಪ್ರೀಮಿಯರ್ ಎಂಟರ್‌ಪ್ರೈಸಸ್, ಫೋನ್: 605329; ಮೈಸೂರು (ಕರ್ನಾಟಕ): ಮೈಸೂರು ಹಾರ್ಡ್‌ವೇರ್ಸ್, ಫೋನ್: 27601; ಹುಬ್ಬಳ್ಳಿ (ಕರ್ನಾಟಕ): ಮೆ॥ ರಾವ್ ಮತ್ತು ಕಂಪೆನಿ, ಫೋನ್: 63939 (ಕಚೇರಿ), 72302 (ಮನೆ)

ಉಳಿದಕಡೆ ಮಾರಾಟಗಾರರ ನೇಮಕಾತಿಯ ವಿವರಗಳ ಬಗ್ಗೆ ಬರೆಯಿರಿ.

...ತ್ ಉಪಕರಣಗಳು
...ದರೆ ಉತ್ತಮ ಗುಣಮಟ್ಟ
...ಒಂದು ಶಾಪವೇ
...ತಾಸಕ್ತಿ ಮತ್ತು
...ಕೊಂಡು ಸರ್ಕಾರವು
...ತ್ ಒಲೆಗಳು, ಮಿಕ್ಸರ್‌ಗಳು,
..., ಟೋಸ್ಟರ್‌ಗಳು,
...ದ 40 ಉಪಕರಣಗಳನ್ನು
...ಣಗಳ (ಗುಣಮಟ್ಟ
...ತ್ರಿಗೆ ಒಳಪಡಿಸಿದೆ. ಈ
...ಗೆ, ಇಮರ್ಷನ್ ವಾಟರ್
...ಟರ್‌ಗಳು, ವಿದ್ಯುತ್
...ಳು ಮತ್ತು ಸಾಕೆಟ್‌ಗಳು —
...ಸ್‌ಐ ಗುರ್ತು ಇರತಕ್ಕದ್ದು
...ಳಿದ 33 ಉಪಕರಣಗಳಿಗೆ
...ಶನಾಲಯದಿಂದ

ಉತ್ಪಾದಕರ—ವಿತರಕರ—ಮಾರಾಟಗಾರರ ಗಮನಕ್ಕೆ:

ನೀವು ತಯಾರಿಸುವ ಗೃಹಬಳಕೆ ವಿದ್ಯುತ್ ಉಪಕರಣಕ್ಕೆ ಐಎಸ್‌ಐ ಗುರ್ತು ಅಥವಾ ಉತ್ಪಾದಕರ ಪ್ರಮಾಣ ಪತ್ರ (ಯಾವುದು ಅನ್ವಯವಾಗುವುದೋ ಅದು) ಪಡೆದುಕೊಳ್ಳಿ. ನಿಮ್ಮ ತಯಾರಿಕೆಯ ಪರೀಕ್ಷಣಾ ಖರ್ಚನ್ನು ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯವು ಭರ್ತಿ ಮಾಡುವುದು. ನೆನಪಿರಲಿ! ಈ ಆದೇಶವನ್ನು ಪಾಲಿಸದಿದ್ದಲ್ಲಿ ನೀವು ಶಿಕ್ಷೆಗೆ ಅರ್ಹರಾಗುವಿರಿ. ವಿತರಕರು ಮತ್ತು ಮಾರಾಟಗಾರರು ತಾವು ವ್ಯಾಪಾರ ಮಾಡುವ ವಿದ್ಯುತ್ ಉಪಕರಣವು ಅವಶ್ಯಕ ಐಎಸ್‌ಐ ಗುರ್ತು ಅಥವಾ ಉತ್ಪಾದಕರ ಪ್ರಮಾಣ ಪತ್ರವನ್ನು ಹೊಂದಿದೆ ಎಂಬುದನ್ನು ಖಚಿತ ಮಾಡಿಕೊಳ್ಳತಕ್ಕದ್ದು.



ಖರೀದಿದಾರರ ಗಮನಕ್ಕೆ:

ನಿಮ್ಮ ಮನೆಗೆ ವಿದ್ಯುತ್ ಉಪಕರಣ ಕೊಳ್ಳುವಾಗ ಐಎಸ್‌ಐ ಗುರ್ತು ಅಥವಾ ಉತ್ಪಾದಕರ ಪ್ರಮಾಣ ಪತ್ರ ಇರುವ ಉಪಕರಣಗಳನ್ನೇ ಕೊಳ್ಳಿರಿ. ಕಳಪೆ ಗುಣಮಟ್ಟದವುಗಳನ್ನು ಎಂದೂ ಕೊಳ್ಳಬೇಡಿ. ಅವು ನಿಮ್ಮ ಕುಟುಂಬದ ಜೀವಕ್ಕೆ ಅಪಾಯ ತರಬಹುದು. ಈ ಆದೇಶವನ್ನು ಪಾಲಿಸದಿರುವುದು ನಿಮ್ಮ ಗಮನಕ್ಕೆ ಬಂದಲ್ಲಿ ಕೆಳಕಾಣಿಸಿದ ಅಧಿಕಾರಿಗಳಿಗೆ ತಿಳಿಸಿರಿ. ನಿಮ್ಮ ಹಿತಾಸಕ್ತಿಯನ್ನು ಕಾಪಾಡಲು ಅವರಿಗೆ ಸಹಾಯ ಮಾಡಿ.

ಇವರನ್ನು ಸಂಪರ್ಕಿಸಿ:

- ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯದ ಉಪವಿಭಾಗಗಳ ಸಹಾಯಕ ನಿರ್ದೇಶಕರುಗಳು.
- ನಿಮ್ಮ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪ್ರಧಾನ ನಿರ್ವಾಹಕರುಗಳು.
- ಸಂಯುಕ್ತ ನಿರ್ದೇಶಕರು, (ಸಣ್ಣ ಪ್ರಮಾಣದ ಕೈಗಾರಿಕೆಗಳು), ನಂ. 14/3ಎ, ನೃಪತುಂಗ ರಸ್ತೆ, ಬೆಂಗಳೂರು-2.
- ನಿರ್ದೇಶಕರು, ಭಾರತದ ಗುಣಮಟ್ಟಗಳ ವಿಭಾಗ, ಪೀಣ್ಯ ಕೈಗಾರಿಕಾ ವಲಯ 1ನೇ ಹಂತ,

ಮುಂಗಾರು

ಬುಧವಾರ, ಏಪ್ರಿಲ್ 19, 1989

ಅನಿವಾರ್ಯವಾದ ಮುಷ್ಕರ

ದೇಶದ ಹನ್ನೊಂದು ಪ್ರಮುಖ ಬಂದರುಗಳ ಕಾರ್ಮಿಕರು ಇದೀಗ ಮುಷ್ಕರದ ಹಾದಿಹಿಡಿದಿದ್ದಾರೆ. ಮುಂಬಯಿ, ಕಲ್ಕತ್ತ, ನವಮಂಗಳೂರು, ವಿಶಾಖಪಟ್ಟಣ ಮತ್ತು ಗೋವಾಗಳಲ್ಲಿ ಸರಕು ಹೇರುವ ಮತ್ತು ಇಳಿಸುವ ಕಾರ್ಯ ಸಂಪೂರ್ಣ ಸ್ಥಗಿತಗೊಂಡಿದ್ದು ಉಳಿದ ಬಂದರುಗಳ ನಿತ್ಯದ ಕೆಲಸ ಕೂಡಾ ಅಸ್ತವ್ಯಸ್ತಗೊಂಡಿದೆ.

ಕಲ್ಕತ್ತ ಮತ್ತು ಪಣಜಿಗಳಲ್ಲಿ ಈಗಾಗಲೇ ಮುಷ್ಕರ ಹಿಂಸೆಯತ್ತ ತಿರುಗಿದ್ದು ಉಳಿದೆಡೆಗಳಲ್ಲಿಯೂ ಬಿಗು ಪರಿಸ್ಥಿತಿಯಿದೆ. ತುರ್ತು ಕೆಲಸಗಳನ್ನು ನೆರವೇರಿಸಲು ಈಗಾಗಲೇ ಸರಕಾರ ಪ್ರಮುಖ ಬಂದರುಗಳಲ್ಲಿ ಸೇನೆ ಮತ್ತು ನೌಕಾಪಡೆಯ ನೆರವು ಪಡೆದಿದೆ.

ಬಂದರು ಕಾರ್ಮಿಕರ ಈ ಮುಷ್ಕರ ಅನಿರೀಕ್ಷಿತವಾದುದೇನಲ್ಲ. ಈ ತಿಂಗಳ ದಿನಾಂಕ ಏಳರಿಂದಲೇ ಸರಕಾರ, ಬಂದರು ಕಾರ್ಮಿಕರ ಜತೆ ಮಾತುಕತೆ ಪ್ರಾರಂಭಿಸಿದ್ದರೂ ಈವರೆಗೆ ಸಹಮತದ ಒಪ್ಪಂದಕ್ಕೆ ಬರಲು ಸಾಧ್ಯವಾಗದ ಕಾರಣದಿಂದಲೇ ಮುಷ್ಕರ ಪ್ರಾರಂಭವಾಗಿದೆ.

ಮಾತುಕತೆ ವೇಳೆ ವೇತನ ತಾರತಮ್ಯ ನೀತಿ ವಿರುದ್ಧದ ತಮ್ಮ ಬೇಡಿಕೆಯನ್ನು ಸರಕಾರ ತಿರಸ್ಕರಿಸಿರುವ ಕಾರಣದಿಂದಲೇ ಮುಷ್ಕರ ಅನಿವಾರ್ಯವಾಯಿತೆಂದು ಮುಷ್ಕರದ ನೇತೃತ್ವ ವಹಿಸಿರುವ ಅಖಿಲ ಭಾರತ ಬಂದರು ಮತ್ತು ಹಡಗುಕಟ್ಟೆ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರು ತಿಳಿಸಿದ್ದಾರೆ.

ಶೇಕಡ 28ರಷ್ಟು ವೇತನ ಏರಿಕೆಯ ಕಾರ್ಮಿಕರ ಬೇಡಿಕೆ 'ಅಸಮರ್ಥನೀಯ' ಎಂದು ತಳ್ಳಿ ಹಾಕಿರುವ ಸರಕಾರ ಶೇಕಡ 15ರಷ್ಟು ವೇತನ ಹೆಚ್ಚಿಸಲು ಸಿದ್ಧ ಎಂದು ಹೇಳಿಕೊಂಡಿದೆ. ಈ ಹಿಂದೆ ಕಾರ್ಮಿಕರು ಶೇಕಡ 66 ರಷ್ಟು ವೇತನ ಏರಿಕೆಯ ಬೇಡಿಕೆಯನ್ನು ಮುಂದಿಟ್ಟಾಗ ಸರಕಾರ ಕೇವಲ ಶೇಕಡ 5.1 ರಷ್ಟು ಮಾತ್ರ ವೇತನ ಹೆಚ್ಚಿಸುವುದಾಗಿ ಪಟ್ಟು ಹಿಡಿದಿತ್ತು. ಬಂದರು ಕಾರ್ಮಿಕರು ಮುಷ್ಕರದ ಹಾದಿ ಹಿಡಿದಿರುವುದು ಇದೇನೂ ಮೊದಲಬಾರಿಯಲ್ಲ. 1984ರಲ್ಲಿಯೂ ವೇತನ ತಾರತಮ್ಯದ ವಿರುದ್ಧ ಕಾರ್ಮಿಕರು 26 ದಿನಗಳ ಮುಷ್ಕರ ನಡೆಸಿದ್ದರು. ಆದರಿಂದ ಸುಮಾರು 26 ಲಕ್ಷ ಮಾನವದಿನಗಳ ನಷ್ಟ ಉಂಟಾಗಿತ್ತು.

1984ರ ಮುಷ್ಕರದ ನಂತರ ಬಂದರು ಕಾರ್ಮಿಕರು ಮತ್ತು ಸರಕಾರದ ನಡುವೆ ನಾಲ್ಕು ವರ್ಷಗಳ ಅವಧಿಯ ಒಪ್ಪಂದವೇರ್ಪಟ್ಟಿತ್ತು. ಅದರ ಪ್ರಕಾರ ಎಲ್ಲಾ ವರ್ಗದ ಕಾರ್ಮಿಕರಿಗೆ ಸುಮಾರು 91 ರೂಪಾಯಿಯಷ್ಟು ಮಾಸಿಕ ವೇತನದಲ್ಲಿ ಹೆಚ್ಚಳ ಉಂಟಾಗಿತ್ತು.

ನಾಲ್ಕು ವರ್ಷಗಳ ಈ ಒಪ್ಪಂದದ ಅವಧಿ 1987ರ ಡಿಸೆಂಬರ್‌ಗೆ ಪೂರ್ಣಗೊಂಡಿದ್ದರೂ ಆ ನಂತರ ಒಪ್ಪಂದದ ನವೀಕರಣದ ಬಗ್ಗೆ ಇಲ್ಲವೇ ಪುನರ್ ಮಾತುಕತೆ ಬಗ್ಗೆ ಸರಕಾರ ಆಸಕ್ತಿ ವಹಿಸದೇ ನಿರ್ಲಕ್ಷ್ಯ ತಾಳಿರುವುದೇ ಬಂದರು ಕಾರ್ಮಿಕರನ್ನು ಅನಿವಾರ್ಯವಾಗಿ ಮುಷ್ಕರದ ಹಾದಿಗೆ ತಳ್ಳಿದೆ.

ಹಡಗುಕಟ್ಟೆ ಮತ್ತು ಬಂದರು ಕಾರ್ಮಿಕರಿಗೆ ಈಗಾಗಲೇ ವೇತನ ರೂಪದಲ್ಲಿ 410 ಕೋಟಿ ರೂಪಾಯಿ ನೀಡಲಾಗುತ್ತಿದ್ದು, ಈಗ ಮತ್ತೆ 60ಕೋಟಿ ರೂಪಾಯಿಯಷ್ಟು ಹೆಚ್ಚುವರಿ ವೇತನ ನೀಡಲು ಸಿದ್ಧವೆಂದು ಹೇಳುತ್ತಿರುವ ಸರಕಾರ ಕಾರ್ಮಿಕರ ಬೇಡಿಕೆಯನ್ನು ಪೂರ್ಣವಾಗಿ ಒಪ್ಪಿಕೊಳ್ಳಲು ತಯಾರಿಲ್ಲ.

ಬಂದರುಗಳಿರುವ ನಗರ ಪ್ರದೇಶಗಳ ಸಾರ್ವಜನಿಕ ಉದ್ದಿಮೆಗಳಲ್ಲಿರುವ ವೇತನ ಶ್ರೇಣಿಗನುಗುಣವಾಗಿ ತಮಗೆ ವೇತನ ಸಿಗುತ್ತಿಲ್ಲ. ಈ ತಾರತಮ್ಯ ನಿವಾರಿಸಬೇಕೆಂಬುದೇ ಬಂದರು ಕಾರ್ಮಿಕರ ಪ್ರಮುಖ ಬೇಡಿಕೆ. ಈಗ ನೀಡುತ್ತಿರುವ ವೇತನ ಸಾರ್ವಜನಿಕ ಉದ್ದಿಮೆಗಳ ಬ್ಯೂರೋ ಸೂಚಿಸಿದ ಮಾರ್ಗದರ್ಶಿ ಸೂತ್ರಗಳಿಗೆ ಅನುಗುಣವಾಗಿಯೇ ಇದೆ ಎಂದು ಸರಕಾರ ಹೇಳಿಕೊಳ್ಳುತ್ತಿದೆ.

ಆದರೆ ಸರಕಾರ ಉಲ್ಲೇಖಿಸುತ್ತಿರುವ ಮಾರ್ಗದರ್ಶಿ ಸೂತ್ರ ಕೇವಲ ಕನಿಷ್ಟ ವೇತನಕ್ಕೆ ಮಾತ್ರ ಸಂಬಂಧಿಸಿದ್ದರಿಂದ ಅದನ್ನು ಆಧಾರವಾಗಿಟ್ಟುಕೊಳ್ಳುವುದು ನ್ಯಾಯವಲ್ಲ ಎಂದು ಕಾರ್ಮಿಕರ ವಾದ.

ಸಂಧಾನದ ಮೂಲಕ ಸುಲಭದಲ್ಲಿ ಇತ್ಯರ್ಥಗೊಳಿಸಬಹುದಾದ ವಿವಾದವನ್ನು ಸರಕಾರ ಘನತೆಯ ಪ್ರಶ್ನೆಯಾಗಿ ಸ್ವೀಕರಿಸಿ ಅನಗತ್ಯ ಜಿಗುಟುತನ ತೋರಿಸುತ್ತಿದೆಯೆಂದೇ ನಮಗನಿಸುತ್ತದೆ.

ಕಾರ್ಮಿಕರ ಜತೆ ಮಾಡಿಕೊಂಡ ಒಪ್ಪಂದದ ಅವಧಿ ಮುಗಿದು ಒಂದೂವರೆ ವರ್ಷ ಕಳೆದರೂ ಸರಕಾರ ತೆಪ್ಪಗೆ ಕೂತ ಬಗ್ಗೆ ಯಾವ ಸಮರ್ಥನೆಯೂ ಇಲ್ಲ. ಮುಷ್ಕರದ ಮೂಲಕವೇ ಕಾರ್ಮಿಕರು ತಮ್ಮ ಹಿತಾಸಕ್ತಿಯ ಬಗ್ಗೆ ಮಾತನಾಡಬೇಕಾದ ಪರಂಪರೆಯನ್ನು ಹುಟ್ಟುಹಾಕುತ್ತಿರುವುದು ತೀರಾ ಅನಾರೋಗ್ಯಕರ ಬೆಳವಣಿಗೆ.

ಈ ಸಂದರ್ಭದಲ್ಲಿ ನಮ್ಮ ದೇಶದ ಬಂದರುಗಳ ಸ್ಥಿತಿ–ಗತಿ ಬಗ್ಗೆ ಕುರುಡಾಗಿರುವುದು ಸಾಧ್ಯವಾಗಲಾರದು. ಪಾಶ್ಚಾತ್ಯ ರಾಷ್ಟ್ರಗಳಿಗೆ ಹೋಲಿಸಿದರೆ ಕಾರ್ಮಿಕರನ್ನೇ ಬಹುವಾಗಿ ಅವಲಂಬಿಸಿರುವ ನಮ್ಮ ಬಂದರುಗಳು ಅದಕ್ಷತೆಗೆ ಮತ್ತೊಂದು ಹೆಸರಾಗಿವೆ. ಈ ಸ್ಥಿತಿಯಲ್ಲಿ ವೇತನ ಏರಿಕೆಯ ಕಾರ್ಮಿಕರ ಬೇಡಿಕೆಯ ಈಡೇರಿಕೆ ಕೂಡಾ ಅಂತಿಮವಾಗಿ ಅವರಿಗೆ ಒಳಿತುಂಟು ಮಾಡಲಾರದು.

ವೇತನ ಒಪ್ಪಂದವನ್ನು ನವೀಕರಣಗೊಳಿಸದೆ ನೆನೆಗುದಿಗೆ ತಳ್ಳಿದ ಸರಕಾರವೇ ಈ ಮುಷ್ಕರಕ್ಕೆ ಪೂರ್ಣ ಹೊಣೆಯಾಗಿರುವುದರಿಂದ, ಸರಕಾರವೇ ಕಾರ್ಮಿಕರ ಜತೆ ತಕ್ಷಣ ಮಾತುಕತೆ ನಡೆಸಿ ಸಹಮತದ ಒಪ್ಪಂದಕ್ಕೆ ಅವರ ಮನವೊಲಿಸಬೇಕಾಗಿದೆ.

ಮಂಜೇಶ್ವರ ಬ್ಲಾಕ್: 67 ಬಾವಿ ದುರಸ್ತಿಗೆ ನಿರ್ಧಾರ

ಮಂಜೇಶ್ವರ, ಎ. 18– ಮಂಜೇಶ್ವರ ಬ್ಲಾಕಿನಲ್ಲಿ ಈಗಾಗಲೇ ಅನುಭವಕ್ಕೆ ಬಂದಿರುವ ತೀವ್ರ ತರವಾದ ಕುಡಿಯುವ ನೀರಿನ ಅಭಾವದ ನಿವಾರಣೆಗೆ ಸೂಕ್ತಕ್ರಮ ಕೈಗೊಳ್ಳಲು ಬ್ಲಾಕ್ ವಿಕಸನ ಸಮಿತಿ ನಿರ್ಧರಿಸಿದೆ.

ಪ್ರಸ್ತುತ ವರುಷದ ಬರಪರಿಹಾರ ಯೋಜನೆಯಿಂದ ಬ್ಲಾಕಿನಲ್ಲಿ ಒಟ್ಟು 67 ಹಳೆಯ ಬಾವಿಗಳ ದುರಸ್ತಿ ಮಾಡಲು ಹಾಗೂ ಹೆಚ್ಚುವರಿ ಹಣ ಸಹಾಯ ದೊರಕಿದಲ್ಲಿ ಮತ್ತೂ 38 ಹಳೆಯ ಬಾವಿಗಳ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳುವ ಬಗ್ಗೆ ಇತ್ತೀಚೆಗೆ ನಡೆದ ಮಂಜೇಶ್ವರ ಬ್ಲಾಕ್ ವಿಕಸನ ಸಮಿತಿ ಸಭೆಯಲ್ಲಿ ಚರ್ಚಿಸಿ ನಿರ್ಣಯವೊಂದನ್ನು ಕೈಗೊಂಡು ಅದನ್ನು ಬರಪರಿಹಾರ ಸಮಿತಿಯ ಅಂಗೀಕಾರಕ್ಕಾಗಿ ಕಳುಹಿಸಿಕೊಡಲು ತೀರ್ಮಾನಿಸಲಾಯಿತು.

ಈಗ ನಾದುರಸ್ತಿಯಲ್ಲಿದ್ದು ನಿರುಪಯೋಗವಾಗಿರುವ ಮಂಜೇಶ್ವರ ಪಂಚಾಯತಿನ ನಾಲ್ಕು, ಮೀಂಜದ ಒಂದು, ವರ್ಕಾಡಿಯ ನಾಲ್ಕು, ಮಂಗಲ್ಪಾಡಿಯ ಮೂರು, ಪೈವಳಿಕೆಯ ಒಂದು, ಕುಂಬಳೆಯ ಎರಡು, ಎಣ್ಮಕಜೆಯ ಐದು, ಬದಿಯಡ್ಕದ ಎರಡು ಹಾಗೂ ಬೆಳ್ಳೂರು ಪಂಚಾಯತಿನ ಎರಡು (ಒಟ್ಟು 28) ಕೊಳವೆ ಬಾವಿಗಳ ದುರಸ್ತಿ ಬಗ್ಗೆ ಠರಾವೊಂದನ್ನು ಅಂಗೀಕರಿಸಿ ಇವುಗಳ ದುರಸ್ತಿ ಕಾರ್ಯ ಎಪ್ರಿಲ್ ತಿಂಗಳಲ್ಲಿಯೇ ಪೂರ್ತಿಗೊಳಿಸಬೇಕೆಂದು ಜಿಲ್ಲಾ ಬರ ಪರಿಹಾರ ಸಮಿತಿಯನ್ನು ಒತ್ತಾಯಿಸಲಾಯಿತು.

ಪೈವಳಿಕೆ ಪಂಚಾಯತಿನ ಶಾಂತಿನಗರ, ಮಂಗಲ್ಪಾಡಿ ಪಂಚಾಯತಿನ ಬಂದ್ಯೋಡ್ ಜಂಕ್ಷನ್‌ನಲ್ಲಿ ಕೊಳವೆ ಬಾವಿ ಹಾಗೂ ಬ್ಲಾಕಿನ ವಿವಿಧ ಪ್ರದೇಶಗಳಲ್ಲಿ 37 ಬಾವಿಗಳನ್ನು ಹೊಸತಾಗಿ ತೋಡಿಸುವಂತೆ ಸಭೆ ಜಿಲ್ಲಾ ಬರಪರಿಹಾರ ಸಮಿತಿಯನ್ನು ಕೇಳಿಕೊಂಡಿತು.

ದಲಿತ ಮಹಿಳಾ ಒಕ್ಕೂಟದ ಸಭೆ

ಮಂಗಳೂರು, ಎ. 18– ಕರ್ನಾಟಕ ದಲಿತ ಮಹಿಳಾ ಒಕ್ಕೂಟ, ಮಂಗಳೂರು ನಗರ ಶಾಖೆಯ ರಚನಾ ಸಭೆಯು ದಲಿತ ಸಂಘರ್ಷಸಮಿತಿ ಮಂಗಳೂರು ತಾಲೂಕು ಶಾಖೆಯ ಸಂಚಾಲಕ ಎಸ್. ಕಮಲಾಕ್ಷ ಅವರ ನೇತೃತ್ವದಲ್ಲಿ ಇತ್ತೀಚೆಗೆ ನಡೆಯಿತು.

[illegible] ಯಾವ ರೀತಿ [illegible]ದ್ದಾಳೆ. ಸಮಾಜ ಪರಿವರ್ತನೆಯಲ್ಲಿ ಮಹಿಳೆಯ ಪಾತ್ರ ಏನು ಎಂಬುದರ ಬಗ್ಗೆ ಎಸ್. ಕಮಲಾಕ್ಷ ವಿವರಣೆ ನೀಡಿದರು.

ಜಿಲ್ಲಾ ಸಂಚಾಲಕ ಡಿ. ಬಿ. ಸಾಲ್ಯಾನ್ ತಮ್ಮ ಭಾಷಣದಲ್ಲಿ ಧರ್ಮ ದೇವರುಗಳ ನೆಪದಲ್ಲಿ ಮಹಿಳೆಯನ್ನು ಬೆತ್ತಲೆಗೊಳಿಸಿ ಯಾವ ರೀತಿ ಶೋಷಿಸುತ್ತಿದ್ದಾರೆ ಎಂಬ ಬಗ್ಗೆ ಹಾಗೂ ಸಂಘಟನೆಯ ಅಗತ್ಯತೆಯನ್ನು ವಿವರಿಸಿದರು.

ಜಿಲ್ಲಾ ದಲಿತ ನೌಕರರ ಒಕ್ಕೂಟದ ಸಂಚಾಲಕ ಎಲ್. ಪುಟ್ಟಸ್ವಾಮಿ, ಒಕ್ಕೂಟದ ಸಂಘಟನಾ ಸಂಚಾಲಕ ಕೆ. ಗಣೇಶ್ ಕುಮಾರ್, ನಿರ್ವಾಹಕ ಸಮಿತಿ ಸದಸ್ಯ ಜೋಗೇಂದ್ರ ಕಲಿವೀರ್ ಹಾಗೂ ದ.ಸಂ.ಸ ಸಂಘಟನಾ ಸಂಚಾಲಕ ರೋಹಿತಾಕ್ಷ ಕೆ. ಇವರು ಸಂಘಟನೆಯ ಅನಿವಾರ್ಯತೆ ಕುರಿತು ಮಾತನಾಡಿದರು.

ದಲಿತ ಮಹಿಳಾ ಒಕ್ಕೂಟದ ಪದಾಧಿಕಾರಿಗಳಾಗಿ ಈ ಕೆಳಗಿನವರು ಆಯ್ಕೆಯಾದರು.

ಜೆ. ಚಿತ್ರಲೇಖಾ (ಸಂಚಾಲಕಿ), ಜೆ. ಎನ್. ಪುಷ್ಪಾವತಿ (ಸಂಘಟನಾ ಸಂಚಾಲಕಿ), ಡಿ. ಲಲಿತ (ಕೋಶಾಧಿಕಾರಿ) ಚಂದ್ರಾಕ್ಷಿ ಎಂ., ಶೀಲಾವತಿ ಬಿ. (ನಿರ್ವಾಹಕ ಸಮಿತಿ ಸದಸ್ಯರು).

ದೌರ್ಜನ್ಯ: ಖಂಡನೆ

ವೀರಾಜಪೇಟೆ, ಎ. 18–ಕೊಡಗು ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ [illegible]ಸರ ದುರ್ವರ್ತನೆ ಮತ್ತು [illegible] ಹೆಚ್ಚುತ್ತಿರುವುದನ್ನು ಭಾರತ [illegible] ನಿಸ್ಟ್ ಪಕ್ಷ ತೀವ್ರವಾಗಿ ಖಂಡಿಸಿದೆ.

ಉಚಿತ ಕ್ರೀಡಾ ತರಬೇತಿ ಶಿಬಿರದ ಉದ್ಘಾಟನೆ

ಮೂಲ್ಕಿ, ಎ. 17– ಶಾಂಭವಿ ಜೇಸಿಸ್, ಮತ್ತು ಲಿಮಿನಾ ಸಸ್ಪೆನ್ಷನ್ ಫ್ರೇಡರ್ಸ್ ಲಿ. ನವ ಮಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಇತ್ತೀಚೆಗೆ ನಡೆದ ಉಚಿತ ಕ್ರೀಡಾ ತರಬೇತಿ ಶಿಬಿರವನ್ನು ಖ್ಯಾತ ಓಟಗಾರ್ತಿ ವಂದನಾರಾವ್ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿದ್ದ ಜೇಸೀ ಸಂಸ್ಥೆಯ ರಾಷ್ಟ್ರೀಯ ತರಬೇತುದಾರ ರಾಮದಾಸ್ ಆರ್ಯ ಅವರು ಮಾತನಾಡಿ, ಇಂತಹ ಕ್ರೀಡಾ ತರಬೇತಿಯು ಜೇಸೀ ಚಳುವಳಿಯಲ್ಲಿಯೇ ಪ್ರಥಮವಾಗಿ ನಡೆಯುತ್ತಿದೆ. ಮೂಲ್ಕಿ ಶಾಂಭವಿ ಜೇಸಿಸ್ ಮಾನಸಿಕ ವಿಕಸನಕ್ಕೆ ಪ್ರಾಮುಖ್ಯತೆ ಕೊಡುವುದರೊಂದಿಗೆ ಸುಪ್ತ ಕ್ರೀಡಾ ಪ್ರತಿಭೆಗಳು ಅರಳಿ ಬೆಳೆಯುವಂತೆ ಪ್ರಯತ್ನಿಸುತ್ತಿರುವುದು ಶ್ಲಾಘನೀಯ ಎಂದರು.

ಕ್ರೀಡಾ ತರಬೇತುದಾರರಾದ ಕರುಣಾಕರ ಶೆಟ್ಟಿ ಮತ್ತು ಮೋಹನದಾಸ ಶೆಟ್ಟಿ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪರ್ಮರಾಜ್ ಶೆಟ್ಟಿ ಅವರು ಶಿಬಿರದ ನಿರ್ದೇಶಕರಾಗಿದ್ದು, ಜಿ.ವಿಜಯಕುಮಾರ್ ಸಂಯೋಜಕರಾಗಿದ್ದರು.

ಜಿ. ಅಜೀಜ್ ಇವರು [illegible] ಅಧ್ಯಕ್ಷ [illegible] ರಾವ್ [illegible]ದರು. ಕಾರ್ಯದರ್ಶಿ ಜಿ.ವಾಸು ಪೂಜಾರಿ ಕೃತಜ್ಞತೆ ಸಲ್ಲಿಸಿದರು.

ವಂದನಾ ರಾವ್ ಅವರನ್ನು ಅರ್ಜುನ ಪ್ರಶಸ್ತಿ ಪಡೆದುದಕ್ಕಾಗಿ ಜೇಸೀ ಸಂಸ್ಥೆ ಮತ್ತು ಲಿಮಿನಾ ಸಂಸ್ಥೆಯ ಪರವಾಗಿ ಜಿ. ರಾಮದಾಸ ಆರ್ಯ ಅವರು ನೆನಪಿನ ಕಾಣಿಕೆಯನ್ನಿತ್ತು ಸನ್ಮಾನಿಸಿದರು.

ಇದೇ ಸಂದರ್ಭದಲ್ಲಿ ಇತ್ತೀಚೆಗೆ ದೆ[illegible] ಅಪಘಾತದಲ್ಲಿ ನಿಧನರಾದ ಮ[illegible] ರಿಕ್ಷಾ ಡ್ರೈವರ್‌ರಾಗಿದ್ದ ದಿ. ಜೆ[illegible] ಇವರ ಕುಟುಂಬದವರಿಗೆ ಧನ ಸಹಾ[illegible]ವನ್ನು ವಿತರಿಸಲಾಯಿತು.

ಶ್ರೇಷ್ಠ ಓಟಗಾರ ಆನಂದ ಶೆಟ್ಟಿಯವರು ಈ ಶಿಬಿರವನ್ನು ಸಂದರ್ಶಿಸಿದ್ದರು.

ಭಾಷಣ ಸ್ಪರ್ಧೆ

ಉಡುಪಿ, ಎ. 18 – ರಾಮನಾಮ ಪ್ರಚಾರಿಣಿ ಮಂಡಳಿಯ ವತಿಯಿಂದ ಹನುಮ ಜಯಂತಿಯ ಅಂಗವಾಗಿ ಎ. 21 ರಂದು ಜರುಗಲಿರುವ ಸತ್ಸಂಗದಲ್ಲಿ [illegible] ಸಾರ್ವಜನಿಕರು ಮತ್ತು [illegible]ಗಳಿಗೆ 'ರಾಮನಾಮ ಮಹಿಮೆ' ಎಂಬ ವಿಷಯದ ಮೇರೆ ಭಾಷಣ ಸ್ಪರ್ಧೆ [illegible]ರ್ಪಡಿಸಲಾಗಿದೆ.

[illegible] ಬಹುಮಾನ ರೂ. 105 ನಗದು [illegible] ರೂಪಾಯಿ ಮೌಲ್ಯದ [illegible] ಇಂಗ್ಲಿಷ್ ಪುಸ್ತಕಗಳನ್ನು ಬಹುಮಾನ [illegible] ವಿತರಿಸಲಾಗುವುದು.

ಹೆಚ್ಚಿನ ವಿವರಕ್ಕೆ, ರಾಮ [ಪ್ರಚಾರಿಣಿ ಮಂಡಳಿ, ಕೊಳದ ಪೇಟೆ ಉಡುಪಿ, ಈ ವಿಳಾಸವನ್ನು ಸಂಪರ್ಕಿಸಬಹುದಾಗಿದೆ.

[illegible]ಸನೆಗೆ [illegible]ಂಕಲ್ಪ

ಗ್ರಾಮಗಳು ಸೇವಾ ಕ್ಷೇತ್ರ ವಿಂಗಡಣೆಯಲ್ಲಿ ವಿಜಯ ಬ್ಯಾಂಕಿಗೆ ಲಭಿಸಿದಂತಾಗಿದೆ ಎಂದು ಭೋಜ ಶೆಟ್ಟಿ ತಿಳಿಸಿದರು.

ಕೃಷಿಕರಿಗೆ ಹೆಚ್ಚಿನ ಸಾಲ ಸೌಲಭ್ಯ ನೀಡುವ ಸಲುವಾಗಿ 'ವಿಜಯ ಕೃಷಿ ಕಾರ್ಡ್' ಯೋಜನೆಯನ್ನು ಪ್ರಾರಂಭಿಸಲಾಗಿದೆ. ಉದ್ಯಮಿಗಳಿಗೆ ತಾಂತ್ರಿಕ ಹಾಗೂ ಆರ್ಥಿಕ ಸಹಕಾರ ನೀಡಲು ಪ್ರತ್ಯೇಕ ವಿಭಾಗ ತೆರೆಯಲಾಗಿದೆ ಎಂದು ತಿಳಿಸಿದ ಅವರು ಬ್ಯಾಂಕಿನ ಶಾಖೆಗಳಲ್ಲಿ ಮತ್ತು ವಿಭಾಗೀಯ ಕಚೇರಿಗಳಲ್ಲಿ ಪ್ರತಿ ತಿಂಗಳ 15ನೇ ತಾರೀಕಿನಂದು ಮಧ್ಯಾಹ್ನ 3ಗಂಟೆಯಿಂದ 5 ಗಂಟೆ ವರೆಗೆ ಗ್ರಾಹಕರನ್ನು ಭೇಟಿ ಮಾಡುವ ಕಾರ್ಯಕ್ರಮವಿರುತ್ತದೆ. ಎಂದರು.

ಗ್ರಾಹಕರ ಅಹವಾಲು ಮತ್ತು ಪ್ರಶ್ನೆಗಳಿಗೆ ಉತ್ತರಿಸಿದ ಅವರು ಗ್ರಾಹಕರು ಸೇವಾ ಸುಧಾರಣೆ ಬಗ್ಗೆ ನೀಡಿದ ಸಲಹೆಗಳನ್ನು ಕಾರ್ಯಗತಗೊಳಿಸುವುದಾಗಿ ಭರವಸೆ ನೀಡಿ, ಮುಂದಕ್ಕೂ ಗ್ರಾಹಕರು ಮತ್ತು ಹಿತಚಿಂತಕರು ಈ ದಿಸೆಯಲ್ಲಿ ಸಹಕರಿಸಬೇಕೆಂದು ಕೋರಿದರು.

ಕೊನೆಯಲ್ಲಿ ಬ್ಯಾಂಕಿನ ಮಂಗಳೂರು ವಿಭಾಗೀಯ ಅಧಿಕಾರಿ ಬಿ. ದೇರಣ್ಣ ರೈ

ಮುಂಗಾರು

ಭಾನುವಾರ, ಮಾರ್ಚ್ 12, 1989

ಮೂಲಭೂತ ಬದಲಾವಣೆ ಆಗಬೇಕಿದೆ

ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳ ಪ್ರಯೋಜನಕ್ಕಾಗಿ ರಾಷ್ಟ್ರೀಕೃತ ಬ್ಯಾಂಕುಗಳ ಹೊಸ ಸೇವಾ ವಿಧಾನವು ಮುಂದಿನ ತಿಂಗಳಿಂದ ಆರಂಭವಾಗಲಿರುವುದಾಗಿ ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವರು ಹೇಳಿರುವ ಕುರಿತು ಸುದ್ದಿ ಬಂದಿದೆ. ಈ ದೇಶದ ಬಹುತೇಕ ಎಲ್ಲಾ ಇಲಾಖೆಗಳೂ ಕೂಡಾ ಗ್ರಾಮೀಣಾಭಿವೃದ್ಧಿ, ಗ್ರಾಮೀಣ ಜನತೆಯ ಏಳಿಗೆಗಳಿಗೆ ಪೂರಕವಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆಂಬ ಘೋಷಣೆಗಳನ್ನು ಆಗಿಂದಾಗ್ಗೆ ನೀಡುತ್ತಲೇ ಬಂದಿವೆ. ಅಂತೆಯೇ ಈ ದೇಶದ ಬ್ಯಾಂಕಿಂಗ್ ಕ್ಷೇತ್ರ ಕೂಡಾ ಇದರಿಂದ ಹೊರತಾಗಿಲ್ಲ. ಆದರೆ ಇವು ಗ್ರಾಮೀಣಾಭಿವೃದ್ಧಿಗೆ ಪೂರಕವಾಗಿ ಯೋಜನೆಗಳನ್ನು ಹಮ್ಮಿಕೊಂಡಿಲ್ಲವೆಂದಲ್ಲ. ಆದರೆ ಇದು ಇಡಿ ಗ್ರಾಮೀಣ ಪ್ರದೇಶದ ತೀರಾ ಕೆಳವರ್ಗದ ಬಹುಸಂಖ್ಯಾತ ಮಂದಿಯ ಜೀವನ ಮಟ್ಟವನ್ನು ಸುಧಾರಿಸುವಲ್ಲಿ ಎಷ್ಟರ ಮಟ್ಟಿಗೆ ಸಫಲವಾಗಿದೆ ಎಂಬುದು ಪ್ರಮುಖ ಪ್ರಶ್ನೆಯಾಗಿದೆ.

ಪ್ರಸ್ತುತ ಹಣಕಾಸು ಖಾತೆಯ ರಾಜ್ಯ ಸಚಿವರು ಪ್ರಕಟಿಸಿರುವ ಯೋಜನೆಯ ಪ್ರಕಾರ ಪ್ರತಿ ಗ್ರಾಮೀಣ ಮತ್ತು ಅರೆ–ನಗರ ಪ್ರದೇಶಗಳಲ್ಲಿರುವ ರಾಷ್ಟ್ರೀಕೃತ ಬ್ಯಾಂಕುಗಳು ಫಲಾನುಭವಿಗಳನ್ನು ಗುರುತಿಸಿ ನಿರ್ದಿಷ್ಟ ಪ್ರದೇಶದ ಸಾಲದ ಅವಶ್ಯಕತೆಗಳ ಬಗ್ಗೆ ಗಮನ ಹರಿಸಲಿವೆ. ಇದರಲ್ಲಿ ಹೊಸತೇನೂ ಇಲ್ಲ. ಬ್ಯಾಂಕುಗಳು ಗುರುತಿಸುವ ಫಲಾನುಭವಿಗಳು ಮಾತ್ರ ಬಡತನದ ರೇಖೆಯ ಕೆಳಗಿರುವ ಮಂದಿಯಂತೂ ಆಗಿರುವುದಿಲ್ಲ. ಬ್ಯಾಂಕಿನ ಸಾಲದ ವಾಪಸಾತಿಯ ದೂರಾಲೋಚನೆಯನ್ನಿಟ್ಟುಕೊಂಡೇ ಬ್ಯಾಂಕ್ ಅಧಿಕಾರಿಗಳು ಫಲಾನುಭವಿಗಳನ್ನು ಗುರುತಿಸುತ್ತಾರೆ. ಇದರಿಂದ ಸಹಜವಾಗಿ ಸ್ಥಿತಿವಂತ ಗ್ರಾಮೀಣ ವರ್ತಕರು ಮತ್ತು ಕೃಷಿಕರು ಮಾತ್ರ ಬ್ಯಾಂಕ್ ನೆರವು ಪಡೆಯುವ ಸಾಧ್ಯತೆಗಳಿವೆ. ಇದರಿಂದ ಗ್ರಾಮೀಣ ಪ್ರದೇಶದ ಸರ್ವತೋಮುಖ ಅಭಿವೃದ್ಧಿಯಾದಂತಾಗುವುದಿಲ್ಲ. ಗ್ರಾಮೀಣ ಪ್ರದೇಶದ ಕೇವಲ ಕೆಲವೇ ವರ್ಗದ ಮಂದಿ ಮಾತ್ರ ಬ್ಯಾಂಕಿನ ಸೌಲಭ್ಯಗಳನ್ನು ಗಿಟ್ಟಿಸಿಕೊಳ್ಳುವುದರಲ್ಲಿ ಯಶಸ್ವಿಯಾಗುತ್ತಾರಷ್ಟೆ.

ಪ್ರಸ್ತುತ ಇರುವ ಈ ತೆರನಾದ ಬ್ಯಾಂಕ್ ನೆರವಿನ ವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳನ್ನು ತಂದು ತೀರಾ ಕೆಳವರ್ಗದ ಬಹುಸಂಖ್ಯಾತ ಮಂದಿಯ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುವುದು ಅಸಾಧ್ಯವಾಗುತ್ತದೆ. ಆದ್ದರಿಂದ ಕೇಂದ್ರ ಸರಕಾರ ಬ್ಯಾಂಕ್‌ಗಳು ನೀಡುವ ಸಾಲದ ವಿಧಾನದಲ್ಲಿಯೇ ಕೆಲವು ಮೂಲಭೂತ ಬದಲಾವಣೆಗಳನ್ನು ತರಬೇಕಾದ ಅನಿವಾರ್ಯತೆ ಇದೆ. ಆಗ ಮಾತ್ರ ಈ ನಾಡಿನ ಗ್ರಾಮೀಣ ಪ್ರದೇಶದಲ್ಲಿ ಬಹುಸಂಖ್ಯಾತರಾಗಿರುವ ಬಡಜನತೆಗೆ ಬ್ಯಾಂಕಿನ ನೆರವು ಕನಿಷ್ಟ ಮಟ್ಟದಲ್ಲಾದರೂ ಸಿಕ್ಕಿ ಅವರ ಆರ್ಥಿಕಾಭಿವೃದ್ಧಿಗೆ ನೆರವು ಪೂರಕವಾಗಬಹುದು. ಆಗ ಮಾತ್ರ ಗ್ರಾಮೀಣ ಮತ್ತು ಅರೆನಗರ ಪ್ರದೇಶಗಳ ಪ್ರಯೋಜನಕ್ಕಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ತರಲಾಗುವ ಹೊಸ ಯೋಜನೆಗಳು ಅರ್ಥಪೂರ್ಣವೆನಿಸಿಕೊಳ್ಳಬಹುದು.

ರಾಷ್ಟ್ರೀಕೃತ ಬ್ಯಾಂಕುಗಳ ಆಡಳಿತ ನಿರ್ವಹಣೆ ಭಾರತೀಯ ರಿಸರ್ವ್ ಬ್ಯಾಂಕಿಗೆ ಸೇರಿರುವಂತಹದಾಗಿದ್ದು ದಿನನಿತ್ಯದ ಕೆಲಸಗಳಲ್ಲಿ ಸರಕಾರ ಹಸ್ತಕ್ಷೇಪ ನಡೆಸುವುದು ಸರಿಯಲ್ಲ ಎಂದು ಸಚಿವರು ಅಭಿಪ್ರಾಯಪಟ್ಟಿದ್ದಾರೆ. ಇದು ಕೂಡಾ ಅಕ್ಷರಶಃ ಸತ್ಯ. ಆದರೆ ಇವತ್ತಿನ ಬ್ಯಾಂಕಿನ ವ್ಯವಹಾರಗಳ ಮೇಲೆ ಸರಕಾರದ ಹಸ್ತಕ್ಷೇಪ ಬಹಳಷ್ಟಾಗಿದೆ ಎಂಬುದು ಸರ್ವವಿದಿತ.

ಈ ರೀತಿ ಸರಕಾರದ ಹಸ್ತಕ್ಷೇಪದ ಪರಿಣಾಮವಾಗಿ ಸಾಮಾನ್ಯ ಜನರಿಗೆ ಅನುಕೂಲವಾಗುವ ಬದಲು ದೊಡ್ಡ ಉದ್ಯಮ ಪ್ರಭುಗಳ ಏಳಿಗೆಗೆ ಪೂರಕವಾಗುತ್ತದೆ ಅಷ್ಟೆ. ಪಟ್ಟಭದ್ರ ಹಿತಾಸಕ್ತಿಗಳು ಬ್ಯಾಂಕ್ ನೆರವನ್ನು ತಮ್ಮ ಏಳಿಗೆಗೆ ಮೆಟ್ಟಿಲುಗಳನ್ನಾಗಿ ಬಳಸಿಕೊಂಡಿರುವುದಕ್ಕೆ ಅಂತಹ ಸಾಕಷ್ಟು ಉದಾಹರಣೆಗಳಿವೆ. ಇಂತಹುದಕ್ಕೆ ಸರಕಾರ ಅವಕಾಶ ನೀಡದಂತೆ ಎಚ್ಚರ ವಹಿಸಬೇಕಿದೆ.

ಒಟ್ಟಾರೆ, ಈ ದೇಶದ ಗ್ರಾಮೀಣ ಪ್ರದೇಶದ ಜನಜೀವನವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಬ್ಯಾಂಕ್‌ಗಳು ಯೋಜನೆಗಳನ್ನು ಹಮ್ಮಿಕೊಳ್ಳುವುದೆಂದರೆ ಅದು ತೀರಾ ಕೆಳವರ್ಗದ ಮಂದಿಯ ಆರ್ಥಿಕಾಭಿವೃದ್ಧಿಗೆ ಪೂರಕವಾಗಿದ್ದರೆ ಮಾತ್ರ ಅದು ಅರ್ಥಪೂರ್ಣವಾಗುತ್ತದೆ. ಆ ದಿಕ್ಕಿನಲ್ಲಿ ಈ ದೇಶದ ಸರಕಾರ ಹೆಜ್ಜೆಗಳನ್ನು ಇಡಲಿ.



...ಾಜ್ಯದ ಆಡಳಿತದಿಂದ ಜನ ...ೋಸಿ ಹೋಗಿದ್ದಾರೆ: ಬಂಗಾರಪ್ಪ

(ಮುಂಗಾರು ವರದಿ)

...ಕೋಲಾ, ಮಾ. 11 – "ಜನತಾ ...ವನ್ನು ನಂಬಿ ಮತ್ತು ರಾಮಕೃಷ್ಣ ...ಯವರು ಮೂಗಿಗೆ ಹಚ್ಚಿದ ತುಪ್ಪದ ... ಮರುಳಾಗಿ ಓಟು ಕೊಟ್ಟವರೆಲ್ಲ ... ಪಶ್ಚಾತ್ತಾಪ ಪಡುವಂತಾಗಿದೆ. ... ಸರಕಾರದ ದುರಾಡಳಿತದಿಂದ ...ದ ಜನತೆ ರೋಸಿ ಹೋಗಿದ್ದಾರೆ ...ಲ್ಲಿ ಬರಲಿರುವ ಚುನಾವಣೆಯ ...ಟು ಕೇಳಲು ಬರುವ ಆ ಪಕ್ಷದ ... ಮಂಗಳಾರತಿ ಎತ್ತಲು ಸಿದ್ಧರಾ...” ಎಂದು ಕಾಂಗ್ರೆಸ್ ಐ ನಾಯಕ ...ಬಂಗಾರಪ್ಪ ಹೇಳಿದರು.

...ಂಜೆಗೆ ಕಾಂಗ್ರೆಸ್ ಐ ಪಕ್ಷದ ...ಲಾ ತಾಲೂಕು ಘಟಕವು ಏರ್ಪಡಿ...ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

...ತಮ್ಮ ಭಾಷಣದ ಆರಂಭದಲ್ಲಿ ...ದಲ್ಲಿ ...ವಾದ ಸರಕಾರವೊಂದರ ಅಗತ್ಯ ...ಯಾಕೆ ಬೇಕು ಎಂಬುದನ್ನು ವಿಶ್ಲೇಷಿಸಿದ ಅವರು, ಒಂದು ವೇಳೆ ಹತ್ತಾರು ಪಕ್ಷಗಳು ತಾತ್ಕಾಲಿಕ ಹೊಂದಾಣಿಕೆಯ ಮೂಲಕ ರೂಪಿಸಿಕೊಂಡ ವಿರೋಧಿ ರಂಗವು ಅಧಿಕಾರಕ್ಕೇರಿದರೆ ತಮ್ಮೊಳಗಿನ ಕಚ್ಚಾಟದ ಫಲವಾಗಿ ರಾಷ್ಟ್ರದ ಸಮಗ್ರತೆಗೇ ಏಟು ಬೀಳುವ ಸಂಭವವಿದೆಯೆಂದು ಅಭಿಪ್ರಾಯ ಪಟ್ಟರು.

ಜನತಾಪಕ್ಷ, ಜನತಾದಳಗಳೆರಡೂ ತಮ್ಮ ದೃಷ್ಟಿಯಲ್ಲಿ ಒಂದೇ ಎಂದು ಹೇಳಿದ ಅವರು, ಹೆಗಡೆಯವರು ಅಧಿಕಾರಕ್ಕೆ ಬಂದ ಆರಂಭದಲ್ಲಿ ತಾವು ಅವರ ಕುರಿತು ಮಾಡಿದ ಆಪಾದನೆಗಳಿಗೆ ಆ ಪಕ್ಷದ ಶಾಸಕರು ಕಿವಿಕೊಟ್ಟಿರಲಿಲ್ಲ. ಈಗ ಅವರೇ ಹೆಗಡೆಯ ಲಂಚಾವತಾರದ ಕಥೆಯನ್ನು ಕಂತು ಕಂತಾಗಿ ಬಿಚ್ಚಿಡುತ್ತಿದ್ದಾರೆ ಎಂದೂ ಮೂದಲಿಸಿದರು.

ಸುಮಾರು ಒಂದು ತಾಸಿನ ತಮ್ಮ ಖಾರವಾದ ಭಾಷಣದುದ್ದಕ್ಕೂ ಅವರು ಕಳೆದ ಆರು ವರ್ಷಗಳಲ್ಲಿ ಕರ್ನಾಟಕದ ಜನತೆ ಅದರಲ್ಲೂ ದುರ್ಬಲ ವರ್ಗದವರು ಹಾಗೂ ನಿರುದ್ಯೋಗಿಗಳು ಅನುಭವಿಸುತ್ತ ಬಂದ ಬವಣೆಯನ್ನು ವಿಶ್ಲೇಷಿಸಿದರು.

ಆರಂಭದಲ್ಲಿ ತಾಲೂಕು ಕಾಂಗ್ರೆಸ್ ಅಧ್ಯಕ್ಷ ತಿಮ್ಮಣ್ಣ ನಾಯಕ ಸ್ವಾಗತಿಸಿದರು. ಬಂಗಾರಪ್ಪನವರೊಂದಿಗೆ ವೇದಿಕೆಯ ಮೇಲೆ ಶಾಸಕ ಪ್ರಭಾಕರ ರಾಣೆ ಹಾಗೂ ಪಕ್ಷದ ಇತರ ಸ್ಥಳೀಯ ಗಣ್ಯರೂ ಉಪಸ್ಥಿತರಿದ್ದರು. ಕೊನೆಯಲ್ಲಿ ಪಕ್ಷದ ಉ.ಕ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಎಚ್. ಗೌಡ ವಂದಿಸಿದರು.

...ಂಗನ ಕಾಯಿಲೆ, ...ಪರಿಹಾರಕ್ಕೆ ...ತ್ತಾಯ

(ಮುಂಗಾರು ವರದಿ)

...ಟ್ಕಳ, ಮಾ. 11– ಎರಡು ತಿಂಗ... ...ಹೊನ್ನಾವರ ಭಟ್ಕಳ ತಾಲೂಕಿನಾ... ವಿಪರೀತವಾದ ಮಂಗನ ಕಾಯಿಲೆ ... ಕನಿಷ್ಠ 6 ಜನರು ಮೃತರಾಗಿದ್ದು ...ಕುಟುಂಬಕ್ಕೆ ಕನಿಷ್ಠ 10 ಸಾವಿರ ...ಪರಿಹಾರವನ್ನು . ಮುಖ್ಯಮಂತ್ರಿ...ರ ನಿಧಿಯಿಂದ ಕೂಡಲೇ ಮಂ... ಮಾಡಬೇಕೆಂದು ರಾಜ್ಯ ಬಿಜೆಪಿ ...ದರ್ಶಿ ಡಾ! ಯು. ಚಿತ್ರರಂಜನ್ ...ಮಂತ್ರಿಯವರಿಗೆ ಮನವಿ ಅರ್ಜಿ

ಎಂದು ಅದೊಂದು ರುಚಿಯ ವಸ್ತುವಾಗಿದೆಯೋ, ಮತ್ತು ಏಕಾಂತದಲ್ಲಿ ಸವಿಯುತ್ತೀರೋ,

ಪಿ.ಜಿ.ಯ
ಹಸ್ಮುಖ್ ಚಹಾ

ನಿಮ್ಮ ದೈನಂದಿನ ಸಂತಸದಾಯಕದ ಒಂದು ಕಪ್
ಆಯ್ದ ಚಹಾ ಎಲೆಗಳಿಂದ ಅತ್ಯುತ್ತಮವಾಗಿ ಸಂಸ್ಕರಿಸಿದ

ಮುಂಗಾರು

ಶನಿವಾರ, ಮಾರ್ಚ್ 11, 1989

ಗಿರಿ ಮಂಡಳಿಗೆ ನಿರಾಸೆಗೊಳಿಸದಿರಿ

ಸುದೀರ್ಘ ಕಾಲದ ಹೋರಾಟದ ನಂತರ ಗೂರ್ಖಾ ಮಂದಿ ತಮ್ಮ ಬೇಡಿಕೆಯಾದ ಡಾರ್ಜಿಲಿಂಗ್ ಪ್ರಾಂತಕ್ಕೇ ಪ್ರತ್ಯೇಕ ಗಿರಿ ಮಂಡಳಿ ರಚನೆಯ ಬೇಡಿಕೆಯನ್ನು ಈಡೇರಿಸಿಕೊಳ್ಳುವಲ್ಲಿ ಯಶಸ್ವಿಯಾದರು. ಈ ಗಿರಿ ಮಂಡಳಿ ಅಸ್ತಿತ್ವಕ್ಕೆ ಬಂದು ಕೆಲವು ತಿಂಗಳುಗಳುರುಳಿದುವು. ಈಗ ಈ ಗಿರಿ ಮಂಡಳಿ ತನ್ನ ಯೋಜನೆಗಳಿಗೆ ಹಣಕಾಸಿನ ಮೂಲಕ್ಕಾಗಿ ರಾಜ್ಯ ಸರಕಾರದ ಬಳಿ ಕೈಯೊಡ್ಡಿದೆ. ಡಾರ್ಜಿಲಿಂಗ್‌ಗೂರ್ಖಾಗಿರಿ ಮಂಡಳಿಯ ಅಧ್ಯಕ್ಷ ಸುಭಾಷ್ ಗೇಶಿಂಗ್ ಅವರು ಮಂಡಳಿಯ 1989-90 ರ ಸಾಲಿಗೆ 260 ಕೋಟಿ ರೂ.ಗಳ ಯೋಜನಾ ಪತ್ರವನ್ನು ಪ. ಬಂಗಾಳ ಸರಕಾರದ ಹಣಕಾಸು ಸಚಿವರಿಗೆ ಸಲ್ಲಿಸಿದ್ದಾರೆಂದು ಸುದ್ದಿ ಬಂದಿದೆ. ಈ ಕುರಿತು ರಾಜ್ಯ ಸರಕಾರ ತಕ್ಷಣ ಒಂದು ಸಕಾರಾತ್ಮಕ ಧೋರಣೆ ತಳೆಯಬೇಕಾದ ಅಗತ್ಯವಿದೆ. ಇಲ್ಲದಿದ್ದರೆ ಕೇಂದ್ರ ಸರಕಾರ ರಾಜ್ಯ ಸರಕಾರಗಳ ಮೇಲೆ ತೋರಿಸುವ ಯಜಮಾನಿಕೆಯ ಧೋರಣೆಯನ್ನೇ ಈ ರಾಜ್ಯ ಸರಕಾರ ಗಿರಿಮಂಡಳಿಯ ಮೇಲೆ ತೋರಿಸಿದ ಆರೋಪಕ್ಕೆ ಸಿಲುಕಿಕೊಳ್ಳಬೇಕಾಗಬಹುದು. ಹಾಗೇನಾದರೂ ಆದಲ್ಲಿ ಮತ್ತೆ ಡಾರ್ಜಿಲಿಂಗ್ ಪ್ರದೇಶ ರಾಜ್ಯ ಮತ್ತು ಕೇಂದ್ರ ಸರಕಾರದ ನಿರ್ಲಕ್ಷ್ಯ ಧೋರಣೆಯ ವಿರುದ್ಧ ಸಿಡಿದು ನಿಲ್ಲುವ ಸಾಧ್ಯತೆಗಳಿವೆ. ಆಗ ಮತ್ತೊಮ್ಮೆ ಡಾರ್ಜಿಲಿಂಗ್ ಹಿಂಸಾಚಾರಗಳು ಭುಗಿಲೇಳಬಹುದು. ಅದಕ್ಕೆ ಪ. ಬಂಗಾಳ ಸರಕಾರ ಅವಕಾಶ ಕೊಡದಿರಲಿ.

ಡಾರ್ಜಿಲಿಂಗ್ ಗಿರಿ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ಅವಶ್ಯವಿರುವಷ್ಟು ಹಣವನ್ನು ಮಂಜೂರು ಮಾಡುವಂತೆ ತಾವು ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಲ್ಲಿ ವಿನಂತಿಸಿಕೊಂಡಿರುವುದಾಗಿ ಗೇಶಿಂಗ್ ತಿಳಿಸಿದ್ದಾರೆ. ಇದು ಈ ದೇಶದ ಸಂವಿಧಾನದ ಚೌಕಟ್ಟಿನ ಒಳಗೆ ಅವರು ನಡೆದುಕೊಳ್ಳಬೇಕಾದ ನಡವಳಿಕೆ. ಅವರು ಆ ರೀತಿಯಲ್ಲೇ ವರ್ತಿಸಿದ್ದಾರೆ. ಈಗ ಅದಕ್ಕೆ ಪೂರಕವಾಗಿ ಅಷ್ಟೇ ಗೌರವ ಯುತವಾಗಿ ಗಿರಿ ಮಂಡಳಿಯನ್ನು ತೀರಾ ಸಮಾನ ಭಾವದಿಂದ ಕಂಡು ಅದರ ಬೇಡಿಕೆಗಳಿಗೆ ಸ್ಪಂದಿಸಬೇಕಾದ ಕರ್ತವ್ಯ ಪಶ್ಚಿಮ ಬಂಗಾಳ ಸರಕಾರದ್ದಾಗಿದೆ.

ಡಾರ್ಜಿಲಿಂಗ್ ಪ್ರದೇಶ ಈ ದೇಶದ ಅತ್ಯಂತ ಶ್ರೀಮಂತ ಭೂಪ್ರದೇಶಗಳಲ್ಲಿ ಒಂದು. ಇದು ಆರ್ಥಿಕವಾಗಿಯೂ ಹೌದು. ಸಾಂಸ್ಕೃತಿಕವಾಗಿ ಮತ್ತು ನೈಸರ್ಗಿಕವಾಗಿಯೂ ಹೌದು. ಇದು ಜಗದ್ವಿಖ್ಯಾತ ಪ್ರವಾಸಿ ಕೇಂದ್ರವಾಗಿದೆ. ಪಶ್ಚಿಮ ಬಂಗಾಳ ಸರಕಾರಕ್ಕೆ ಡಾರ್ಜಿಲಿಂಗ್ ಪ್ರವಾಸಿಕೇಂದ್ರದಿಂದಲೇ ಅಪಾರ ಆದಾಯ ಬರುತ್ತದೆ. ಅಂತೆಯೇ ಡಾರ್ಜಿಲಿಂಗ್ ಪ್ರದೇಶ ಚಹ ಬೆಳೆಗೆ ಅತ್ಯಂತ ಪ್ರಶಸ್ತವಾದ ಸ್ಥಳವಾಗಿದ್ದು, ಇದರಿಂದಲೂ ಪಶ್ಚಿಮ ಬಂಗಾಳ ಸರಕಾರಕ್ಕೆ ಅಪಾರವಾದ ಆದಾಯ ಸಿಗುತ್ತಿದೆ. ಅಂತೆಯೇ ಇನ್ನೂ ಹಲವಾರು ಮೂಲಗಳಿಂದ ಡಾರ್ಜಿಲಿಂಗ್ ಪ್ರದೇಶ ರಾಜ್ಯ ಸರಕಾರ ಆದಾಯದ ಒಂದು ಬಲವಾದ ಆಧಾರವಾಗಿದೆ.

ಈವರೆಗೆ ಇಷ್ಟೊಂದು ಆದಾಯವನ್ನು ರಾಜ್ಯ ಸರಕಾರ ಪಡೆದುಕೊಳ್ಳುತ್ತಿದ್ದರೂ ಕೂಡಾ ಈ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿ ಮಹತ್ವದ್ದೇನನ್ನೂ ಮಾಡಲಿಲ್ಲವೆಂಬ ಅಸಮಾಧಾನವೇ ಗೂರ್ಖಾ ಜನಸಮೂಹದೊಳಗೆ ಸ್ಫೋಟಗೊಂಡು ಅದು ಸುದೀರ್ಘ ಹೋರಾಟದ ಹಾದಿ ಹಿಡಿದು ಕೊನೆಗೆ 'ಗಿರಿ ಮಂಡಳಿ' ರಚನೆಯಾಗುವುದರಲ್ಲಿ ಅಂತ್ಯಗೊಂಡಿತು.

ಈಗ ಗೂರ್ಖಾ ಮಂದಿಯದೇ ಆಡಳಿತ ಆ ಪ್ರದೇಶದಲ್ಲಿ ನಡೆಯುತ್ತದೆ. ತಮ್ಮ ಭೂ ಪ್ರದೇಶದ ಆರ್ಥಿಕಾಭಿವೃದ್ಧಿ, ಜನರ ಜೀವನ ಮಟ್ಟದಲ್ಲಿ ಸುಧಾರಣೆ, ತಮ್ಮ ವಿಶಿಷ್ಟ ಸಂಸ್ಕೃತಿ ಜಾನಪದಗಳ ರಕ್ಷಣೆಗಳ ನಿಟ್ಟಿನಲ್ಲಿ ಅವರೇ ಕಾರ್ಯಕ್ರಮಗಳನ್ನು ಯೋಜನೆಗಳನ್ನು ಹಮ್ಮಿಕೊಳ್ಳಲಿದ್ದಾರೆ. ಅದಕ್ಕೆ ಅಗತ್ಯವಾದಷ್ಟು ಹಣಕಾಸು ನೀಡಬೇಕಾದ ಕರ್ತವ್ಯ ಪಶ್ಚಿಮ ಬಂಗಾಳ ರಾಜ್ಯ ಸರಕಾರದ್ದಾಗಿದೆ. ರಾಜ್ಯ ಸರಕಾರ ಡಾರ್ಜಿಲಿಂಗ್ ಪ್ರದೇಶದಿಂದ ಪಡೆಯುತ್ತಿರುವ ಭಾರಿ ಆದಾಯದ ಒಂದು ಪ್ರಮುಖ ಪಾಲನ್ನು ಈಗ ಗಿರಿಮಂಡಳಿಗೆ ನೀಡಬೇಕಿದೆ.

ಗಿರಿ ಮಂಡಳಿ ಪ್ರಸ್ತುತ 1989-90ರ ಸಾಲಿಗೆ 260 ಕೋಟಿ ರೂ. ಗಳ ಯೋಜನಾ ಪತ್ರವನ್ನು ರಾಜ್ಯ ಸರಕಾರಕ್ಕೆ ನೀಡಿದೆ. ಇಷ್ಟು ಮೊತ್ತವನ್ನು ನೀಡಲು ರಾಜ್ಯ ಸರಕಾರ ಹಿಂಜರಿಕೆ ವಹಿಸುವುದೇ ಆದರೆ ಮತ್ತೊಮ್ಮೆ ಗೂರ್ಖಾಮಂದಿಯನ್ನು ಕೆಣಕಿದಂತಾಗುತ್ತದೆನ್ನುವುದರಲ್ಲಿ ಎರಡು ಮಾತಿಲ್ಲ. ಹಾಗೇನಾದರೂ ಮತ್ತೆ ಗೂರ್ಖಾಮಂದಿ ರಾಜ್ಯ ಸರಕಾರದ ಆರ್ಥಿಕ ಶೋಷಣೆಯ ವಿರುದ್ಧ ಸಿಡಿದು ನಿಂತರೆ ಅದರ ಪರಿಣಾಮ ಮಾತ್ರ ಇನ್ನೂ ಭೀಕರವಾಗಬಹುದು. ಅಂತಹುದಕ್ಕೆ ಪ. ಬಂಗಾಳ ಸರಕಾರ ಅವಕಾಶ ನೀಡದಿರಲಿ.

ಕರಡು ಯೋಜನಾ ಪತ್ರವನ್ನು ಅಧ್ಯಯನ ಮಾಡಿ ಆ ಬಗ್ಗೆ ಮಾರ್ಚ್ 12 ರಂದು ಕಲ್ಕತ್ತದಲ್ಲಿ ತಾವು ಗೇಶಿಂಗ್ ಅವರೊಂದಿಗೆ ಸಮಾಲೋಚನೆ ನಡೆಸುವುದಾಗಿ ಪ. ಬಂಗಾಳ ರಾಜ್ಯ ಸರಕಾರದ ಅಶೀಂ ದಾಸ್ ಗುಪ್ತಾ ಹೇಳಿದ್ದಾರೆ. ಅಂತೆಯೇ ಮಾರ್ಚ್ 13 ರಂದು ಮಂಡಿಸಲಾಗುವ ರಾಜ್ಯ ಬಜೆಟ್‌ನಲ್ಲಿ 1989-90 ರ ಸಾಲಿಗಾಗಿ ಡಾರ್ಜಿಲಿಂಗ್ ಗಿರಿ ಮಂಡಳಿಗೆ ಹಣ ಒದಗಿಸುವ ಬಗ್ಗೆ ಪ್ರಸ್ತಾಪ ಮಾಡಲಾಗಿದೆ ಎಂದೂ ಅವರು ಹೇಳಿದ್ದಾರೆ. ಆದರೆ ಎಷ್ಟೆಂಬುದನ್ನು ಬಹಿರಂಗಗೊಳಿಸಿಲ್ಲ.

ಆದರೆ ಮಂಡಿಸಲಿರುವ ಬಜೆಟ್‌ನಲ್ಲಿ ಗೂರ್ಖಾ ಗಿರಿ ಮಂಡಳಿಗೆ ನಿರಾಶೆಯಾಗುವಂತಹ ಅಂಕೆ ಸಂಖ್ಯೆಗಳ ಸರ್ಕಸ್ ನಡೆಸಲು ಹೋದುದೇ ಆದರೆ ಅದು ಪ. ಬಂಗಾಳ ಸರಕಾರ ಗಿರಿ ಮಂಡಳಿಗೆ ದ್ರೋಹ ಬಗೆದಂತಾಗುತ್ತದೆ. ಆ ಮೂಲಕ ಆಡಳಿತ ವಿಕೇಂದ್ರೀಕರಣ, ಸ್ವಾಯತ್ತತೆ ಇತ್ಯಾದಿ ವಿಚಾರಧಾರೆಗಳಿಗೆಲ್ಲಾ ತಣ್ಣೀರು ಚೆಲ್ಲಿದಂತಾಗುತ್ತದೆ. ಪ. ಬಂಗಾಳ ಸರಕಾರ ಅಂತಹ ಹೆಜ್ಜೆಗಳನ್ನು ಇಡದಿರಲಿ.

ಗೂರ್ಖಾ ಗಿರಿ ಮಂಡಳಿ ಹೊಸದಾಗಿ ರೂಪುಗೊಂಡಿದೆ. ಆರಂಭದಲ್ಲಿ ಅದು ಕೆಲವು ಹೊಸ ಅಭಿವೃದ್ಧಿ ಯೋಜನೆಗಳನ್ನು ಅಗತ್ಯವಾಗಿ ಹಮ್ಮಿಕೊಳ್ಳುವುದಿರುತ್ತದೆ. ಅಂತಹ ಆಸೆಗಳಿಗೆ ಪ. ಬಂಗಾಳ ಸರಕಾರ ಅಡ್ಡಗಾಲು ಹಾಕದಿರಲೆಂದು ನಾವು ಆಶಿಸುತ್ತೇವೆ.

ನಾಲ್ಕು ಘಟಕಗಳಿಗೂ ಕೂಡಾ ಹೆಚ್ಚು ಪರ್ಮಿಟ್‌ಗಳನ್ನು ತರಿಸಿಕೊಳ್ಳುವ ಪ್ರಯತ್ನವನ್ನು ವಿಭಾಗ ಮಟ್ಟದ ಅಧಿಕಾರಿಗಳು ನಡೆಸಿದರೆ ರಾಷ್ಟ್ರೀಕೃತ ಮಾರ್ಗಗಳಲ್ಲಿ ಬಸ್ಸುಗಳಿಲ್ಲದ ಬಸ್ಸುಗಳ ಓಡಾಟದ ಸಮಸ್ಯೆಯನ್ನು ಪರಿಹರಿಸಬಹುದಾಗಿದೆ.

ಸಾರಿಗೆ ಸಚಿವರಾಗಿರುವ ಸಿದ್ಧರಾಮಯ್ಯನವರು ಉಸ್ತುವಾರಿ ಸಚಿವರಾಗಿರುವ ದ.ಕ. ಜಿಲ್ಲೆಯ ರಾಷ್ಟ್ರೀಕೃತ ಮಾರ್ಗಗಳಲ್ಲಿ ಈ ತೆರನಾದ ಸಾರಿಗೆ ಸಮಸ್ಯೆ ಉದ್ಭವಿಸಿರುವುದು ಒಂದು ವಿಪರ್ಯಾಸ.

ತ್ಯಜಿಸಿ ... ಬೆಳೆಸಿಕೊಳ್ಳಿ'

ಹಂತದಲ್ಲೂ ಮೌಢ್ಯತೆ ಆವರಿಸಿ ವಿಚಾರ ಶಕ್ತಿ ಸಂಪೂರ್ಣ ನಶಿಸಿ ಹೋಗಿದೆ ಮತ್ತು ಬಾಬಾಗಳ ಮಾತೇ ವೇದ ವಾಕ್ಯವಾಗುತ್ತಿರುವುದು ವಿಷಾದನೀಯವೆಂದರು.

ಸಾಲ್ಮನ್ ರಶ್ದಿ ಬಗ್ಗೆ ಸೂಚ್ಯವಾಗಿ ಪ್ರಸ್ತಾಪಿಸಿ, ಧರ್ಮದ ವಿಚಾರ ಬಂದೊಡನೆ ಮನುಷ್ಯನ ಬದುಕು ಕುದಿಯುವಂತಾಗುತ್ತದೆ. ಯಾವುದೇ ಧರ್ಮದ ವಿಚಾರಗಳನ್ನು ಮುಚ್ಚಿಡುವುದರಿಂದ ಪ್ರಯೋಜನವಿಲ್ಲ, ಪರಸ್ಪರ ಅರಿವು, ಮುಕ್ತ ಚರ್ಚೆ ಅಗತ್ಯ. ಅನಗತ್ಯ ಸಂಪ್ರದಾಯಗಳನ್ನು ಕೈಬಿಟ್ಟು ಜೀವನಕ್ಕೆ ಅಗತ್ಯವಾದ ವಿಷಯಗಳಷ್ಟನ್ನೇ ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ಸಮಾಜ ವ್ಯಕ್ತಿಗಿಂತ ದೊಡ್ಡದು. ಸಾಮಾಜಿಕ ಅಭ್ಯುದಯದಲ್ಲಿ ವ್ಯಕ್ತಿಯ ಅಭ್ಯುದಯವು ಅಡಗಿದ್ದು, ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ವೈಚಾರಿಕತೆಯ ಮೂಲಕ ಸಮಾಜದ ಅನಿಷ್ಟ ಪದ್ಧತಿಗಳ ಬಗ್ಗೆ ಸಂಘಟಿತ ಹೋರಾಟ ನಡೆಸುವ ಮೂಲಕ ಉತ್ತಮ ಸಾಮಾಜಿಕ ಪರಿಸ್ಥಿತಿ ನಿರ್ಮಾಣಗೊಳ್ಳಲು ಮುಂದಾಗಬೇಕೆಂದೂ ಅವರು ಒತ್ತಿ ನುಡಿದರು.

ಮಂಡಲ ಪ್ರಧಾನ ಎ. ಎಸ್. ಸುಬ್ಬಣ್ಣ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹನುಮಂತೇಗೌಡ, ಪದವಿ ಪೂರ್ವ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕ ಮುಕ್ತಾರ್ ಪಾಷ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು.

ಈ ಸಮಾರಂಭದ ಅಧ್ಯಕ್ಷತೆಯನ್ನು ಪ್ರಿನ್ಸಿಪಾಲ್ ಡಿ. ಸಿ. ಅನಂತ ಸ್ವಾಮಿ ಅವರು ವಹಿಸಿದ್ದರು.


ಪಿ.ಜಿ.ಯ
ಹಸ್ಮುಖ್ ಚಹಾ
ನಿಮ್ಮ ದೈನಂದಿನ ಸಂತಸದಾಯಕದ ಒಂದು ಕಪ್
ಆಯ್ದ ಚಹಾ ಎಲೆಗಳಿಂದ ಅತ್ಯುತ್ತಮವಾಗಿ ಸಂಸ್ಕರಿಸಿದ
ಸ್ವಾದಿಷ್ಟ ಹಾಗೂ ಪರಿಮಳಯುಕ್ತ ಶ್ರೇಷ್ಠ ವರ್ಗದ ಸಂತೃಪ್ತಿ ನೀಡುವ ಚಹಾ.
ಹಸ್‌ಮುಖ್ ಎಂಡ್ ಕೊ (ಪಿ.ಜಿ.)
ಪ್ರಧಾನ ಕಛೇರಿ: 366, ಕಲ್ಬಾದೇವಿ ರಸ್ತೆ, ಡಾ. ವೇಗಸ್ ರಸ್ತೆಯ ತಿರುವು,
ಮುಂಬಾಯಿ-400 002 ಫೋನ್: 259887, 313520, 255855
ಶಾಖೆಗಳು: • ಪೈಧೋಣಿ: 327243 • ಘಾಟ್‌ಕೋಪರ್: 5139504
• ಥಾನಾ: 506529 • ಫೋರ್ಟ್: 269597 • ದಾದರ್: 4303105
• ಮಲಾಡ್: 690592 • ಬೊರಿವಿಲಿ: 651164
Sai-HPG-7

THE GREAT ANNIVERSARY DISCOUNT

ONLY ON 9th 10th 11th of March
SALE
RS. 40 OFF ON
khaitan FANS
harsha
The House Wives Dream Shop
K.M MARG UDUPI-576 101 TEL 21841
ESSEL/graphic workshop

2nd ANNIVERSARY OFFER
Weston
The electronics people
You've got to see it to believe it

BUY NOW & SAVE
RS.500 ON COLOUR T.V

ಮುಂಗಾರು

ಶುಕ್ರವಾರ, ಮಾರ್ಚ್ 3, 1989

ಪ್ರಾದೇಶಿಕ ಆಶೋತ್ತರಗಳಿಗೆ ಸ್ಪಂದಿಸಿ

"ಚಕ್ರದೊಳಗಿನ ನೇಗಿಲು ಹೊತ್ತ ರೈತ" ಚಿಹ್ನೆಯನ್ನು ತಮಗೆ ನೀಡಬೇಕೆಂಬ ಜನತಾ ಪಕ್ಷದ ಇಂದೂ ಭ್ಯಾ ಬಣದ ಮನವಿಯನ್ನು ಚುನಾವಣಾ ಆಯೋಗ ತಳ್ಳಿ ಹಾಕಿದೆ ಎಂಬ ಸುದ್ದಿ ಬಂದಿದೆ. ಮಧ್ಯ ಪ್ರದೇಶದ ದುರ್ಗ್ ಮತ್ತು ಹರ್ಯಾಣದ ನುಹ್ ವಿಧಾನ ಸಭಾ ಕ್ಷೇತ್ರಗಳ ಚುನಾವಣೆಗಳಿಗೆ ಸಂಬಂಧಿಸಿದಂತೆ ಜನತಾ ಪಕ್ಷದ ಇಂದೂ ಭ್ಯಾ ಬಣದ ಮರು ಸಲ್ಲಿಸಿದ್ದ ಮನವಿಗೆ ಮುಖ್ಯ ಚುನಾವಣಾ ಕಮಿಷನರ್ ಅವರು ಈ ತೆರನಾದ ತೀರ್ಪು ನೀಡಿದ್ದಾರೆ. ಪ್ರಸ್ತುತ ದೇಶದಲ್ಲಿ ಜನತಾ ಪಕ್ಷದ ಆಗುಹೋಗು, ವ್ಯಾಪ್ತಿಯನ್ನು ಗಮನಿಸಿದಾಗ ಚುನಾವಣಾ ಕಮಿಷನರ್ ನೀಡಿರುವ ತೀರ್ಪು ಸಮರ್ಪಕವಾದುದೆನಿಸುತ್ತಿದೆ.

ಜನತಾ ಪಕ್ಷ ಎನ್ನುವುದು ಕಳೆದ ಹಲವು ವರುಷಗಳಿಂದ ಕರ್ನಾಟಕದಲ್ಲಿ ಮಾತ್ರ ತನ್ನ ಅಸ್ತಿತ್ವವನ್ನು ಗುರುತಿಸಿಕೊಂಡಿದೆ. ಈ ಪಕ್ಷ ಕರ್ನಾಟಕದಲ್ಲಿ ಒಂದು ಪ್ರಾದೇಶಿಕ ಪಕ್ಷದ ನಮೂನೆ ಬೆಳದುಕೊಂಡು ಬಂದಿದೆ. ಆದರೆ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಮಹತ್ವಾಕಾಂಕ್ಷೆ ಇರುವ ರಾಜಕಾರಣಿಗಳು ರಾಷ್ಟ್ರೀಯ ಮಟ್ಟದ ಮೆರುಗನ್ನು ಮಾಧ್ಯಮಗಳ ಮೂಲಕ ನೀಡುತ್ತಾ ಬಂದಿವೆ.

ಜನತಾ ಪಕ್ಷ ಜನತಾ ದಳ ರಚನೆಗಾಗಿ ಬೇರೆ ಪಕ್ಷಗಳೊಂದಿಗೆ ವಿಲೀನವಾಗಿದ್ದರೂ ಜನತಾ ಪಕ್ಷ ಪ್ರತ್ಯೇಕ ಪಕ್ಷವಾಗಿಯೇ ಅಸ್ತಿತ್ವದಲ್ಲಿದೆ ಹಾಗೂ ಆಯೋಗದ ದಾಖಲೆಗಳ ಪ್ರಕಾರ ಅಜಿತ್ ಸಿಂಗ್ ಮತ್ತು ಮಧು ದಂಡವತೆ ಅವರುಗಳು ಜನತಾಪಕ್ಷದ ಅಧಿಕೃತ ಪದಾಧಿಕಾರಿಗಳಾಗಿದ್ದಾರೆ ಎಂದೂ ಆ ತೀರ್ಪಿನಲ್ಲಿ ಹೇಳಲಾಗಿದೆ.

ಅಂತೆಯೇ ಇಂದೂಭ್ಯಾ ಪಟೇಲ್ ಅವರು ಜನತಾಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಿಂದ ಆಯ್ಕೆಯಾಗಿದ್ದಾರೆಂಬ ಬಗ್ಗೆ ಚುನಾವಣಾ ಆಯೋಗದೊಂದಿಗೆ ಯಾವುದೇ ದಾಖಲೆ ಅಥವಾ ಇತರಸಾಕ್ಷ್ಯಗಳು ಇಲ್ಲ ಎಂದೂ ಮುಖ್ಯ ಚುನಾವಣಾ ಕಮಿಷನರ್ ಅವರು ತಮ್ಮ ತೀರ್ಪಿನಲ್ಲಿ ಹೇಳುತ್ತಾ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಂಡಿದ್ದಾರೆ.

ಕಾನೂನು ಕಟ್ಟಳೆಗಳ ನೀತಿ ನಿಯಮಗಳ ಪ್ರಕಾರ ಚುನಾವಣಾ ಆಯೋಗ ಈ ರೀತಿಯ ಸ್ಪಷ್ಟೀಕರಣಗಳನ್ನು ನೀಡಬೇಕಾದುದು ಅಗತ್ಯ. ನಿಜ. ಆದರೆ ಇದು ಎಷ್ಟು ಸರಿ ಎಷ್ಟು ತಪ್ಪು ಎಂಬುದರ ವಿಶ್ಲೇಷಣೆಯ ಅಗತ್ಯ ಕೂಡಾ ಈಗ ಕಂಡು ಬರುವುದಿಲ್ಲ.

ದಶಕದ ಹಿಂದೆ ಜಯಪ್ರಕಾಶ್ ನಾರಾಯಣ್ ಅವರ ಚಳವಳಿಯ ಮೂಸೆಯಿಂದ ಮೂಡಿಬಂದ ಈ ಪಕ್ಷ ನಂತರ ಕೇಂದ್ರದ ಅಧಿಕಾರದ ಗದ್ದುಗೆ ಏರಿತಾದರೂ ಮತ್ತೆ ತಮ್ಮ ತಮ್ಮೊಳಗಿನ ಕಿತ್ತಾಟಗಳ ಪರಿಣಾಮವಾಗಿ ಛಿದ್ರವಾಗಿ ಹೋಯಿತು.

ಅಲ್ಲಿಂದ ಈಚೆಗೆ ಜನತಾಪಕ್ಷ ಜನವಲಯಗಳಲ್ಲಿ ಕಾಂಗ್ರೆಗೆ ಪ್ರಬಲವಾದ ಪರ್ಯಾಯವಾಗಿ ಕಂಡು ಬರಲೇ ಇಲ್ಲ. ಕೊನೆಗೆ ಕರ್ನಾಟಕದಲ್ಲಿ ಮಾತ್ರ ಅದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿತು. ಇದೂ ಹೇಗೆಂದರೆ, ಈ ರಾಜ್ಯದಲ್ಲಿ ಯಾವುದೇ ಪ್ರಾದೇಶಿಕ ಪಕ್ಷಗಳು ಪ್ರಬಲವಾಗಿರದ ಕಾರಣ ಜನಸಮೂಹ ಜನತಾ ಪಕ್ಷದಲ್ಲೇ ತಮ್ಮ ಪ್ರಾದೇಶಿಕ ಕನಸುಗಳನ್ನು ಕಂಡು ಅದನ್ನು ಬೆಂಬಲಿಸಿದರು.

ಅಂತೆಯೇ ತಮಿಳುನಾಡಿನಲ್ಲಿ ಡಿ. ಎಂ. ಕೆ. ಆಂಧ್ರದಲ್ಲಿ ತೆಲುಗುದೇಶಂ, ಅಸ್ಸಾಂನಲ್ಲಿ ಎ. ಜಿ. ಪಿ. ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಹೀಗೆ ದೇಶದ ಎಲ್ಲೆಡೆಯೂ ಪ್ರಾದೇಶಿಕ ಪಕ್ಷಗಳೇ ಮೇಲುಗೈ ಸಾಧಿಸಿವೆ.

ಈ ದಿಕ್ಕಿನಲ್ಲಿ ವಿಶ್ಲೇಷಿಸುವಾಗ ಜನತಾ ಪಕ್ಷ ತನ್ನ ಚಿಹ್ನೆ ಕಳೆದುಕೊಂಡುದಕ್ಕಾಗಿ ತಳಮಳಗೊಳ್ಳುವ ಅಗತ್ಯವೇ ಇಲ್ಲ. ಜನತಾ ಪಕ್ಷ ಇವತ್ತು ಕರ್ನಾಟಕದಲ್ಲಿ ದೇವೇಗೌಡರ ಮುಖಂಡತ್ವದಲ್ಲಿ ಇನ್ನೂ ಒಲಿಷ್ಠವಾಗಿಯೇ ಇದೆ. ದೇವೇಗೌಡರು ಈ ಪಕ್ಷವನ್ನು ರಾಷ್ಟ್ರೀಯ ಪ್ರವಾಹದಲ್ಲಿ ಕರಗಿಸಿಕೊಳ್ಳುವ ಬದಲು ಕರ್ನಾಟಕದಲ್ಲೇ ಒಂದು ಬಲಿಷ್ಠ ಪ್ರಾದೇಶಿಕ ಪಕ್ಷವನ್ನಾಗಿ ಬೆಳೆಸುವಲ್ಲಿ ಹೆಜ್ಜೆ ಇಡಲಿ.

ಜನತಾ ಪಕ್ಷಕ್ಕೆ 'ಚಕ್ರದೊಳಗೆ ನೇಗಿಲು ಹೊತ್ತ ರೈತನ' ಚಿಹ್ನೆ ಕೊಡಲು ನಿರಾಕರಿಸಿರುವ ಚುನಾವಣಾ ಆಯೋಗದ ತೀರ್ಪಿನ ಬಗ್ಗೆ ದೇವೇಗೌಡರು ಒಂದಿಷ್ಟೂ ವಿಚಲಿತರಾಗದೆ ಇದನ್ನು ತಮ್ಮ ಪಕ್ಷದ ಮಟ್ಟಿಗೆ ಒಂದು ಆತ್ಮುತ್ತಮ ಪೂರಕ ಬೆಳವಣಿಗೆಯನ್ನಾಗಿ ಮಾರ್ಪಡಿಸಿಕೊಳ್ಳಲೂ ಸಾಧ್ಯವಿದೆ.

ಕರ್ನಾಟಕದಲ್ಲಿ ಪ್ರಾದೇಶಿಕ ಪಕ್ಷದ ರೂಪದಲ್ಲೇ ಇದ್ದ ಜನತಾಪಕ್ಷವನ್ನು ರಾಷ್ಟ್ರೀಯ ಮಟ್ಟಕ್ಕೆ ತಮಗೆ ಏರಲು ಮೆಟ್ಟಿಲುಗಳನ್ನಾಗಿಸಿಕೊಂಡ ಕೆಲವು ರಾಜಕಾರಣಿಗಳ ಬಗ್ಗೆಯೂ ಜನರಿಗೆ ಕಲ್ಪನೆ ಇದೆ. ದಿಲ್ಲಿಯಲ್ಲಿ ಕಣ್ಣಿಟ್ಟಿರುವ ಇಂತಹ ಮಂದಿ ತಮ್ಮ ಯಾವುದೇ ಪ್ರಾದೇಶಿಕ ಆಶೋತ್ತರಗಳಿಗೆ ಸ್ಪಂದಿಸಲಾರರು ಎನ್ನುವ ವಿಚಾರ ಜನಸಮೂಹಕ್ಕೆ ಈಗಾಗಲೆ ಮನದಟ್ಟಾಗಿದೆ.

ಆದ್ದರಿಂದ ಈ ಹಿನ್ನೆಲೆಯಲ್ಲಿ ದೇವೇಗೌಡರು ಈಗಿರುವ ತಮ್ಮ ಜನಶಕ್ತಿಯನ್ನೇ ಪ್ರಾದೇಶಿಕ ಪಕ್ಷವಾಗಿ ರೂಪಿಸುವುದಕ್ಕೆ ವಿನಿಯೋಗಿಸಲಿ. ಅದಕ್ಕೆ ಈ ನಾಡಿನ ಮಂದಿ ಸ್ಪಂದಿಸುವುದು ಖಚಿತ. ಆ ದಿಕ್ಕಿನಲ್ಲಿ ಕರ್ನಾಟಕದ ಜನತಾ ಪಕ್ಷ ಹೆಜ್ಜೆ ಇಡಲಿ.

ಯಕ್ಷಗಾನ ಸಂಘದ ವಾರ್ಷಿಕೋತ್ಸವ

ಸಾಲಿಗ್ರಾಮ, ಮಾ. 2- ಯುವಕರ ಯಕ್ಷಗಾನ ಮೇಳ ಸಾಲಿಗ್ರಾಮ ಇವರ ಪ್ರಥಮ ವಾರ್ಷಿಕೋತ್ಸವವು ರಾಮ ಭಜನಾ ಸಂಘ ಸಾಲಿಗ್ರಾಮ ಮತ್ತು ಊರ ಪರವೂರ ಕಲಾಭಿಮಾನಿಗಳ ಸಹಕಾರದಿಂದ ಇತ್ತೀಚೆಗೆ ನಡೆಸಿತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲೇಖಕ, ವಿಮರ್ಶಕ ಕಾರ್ಕಡ ಶ್ರೀನಿವಾಸ ಉಡುಪ ಅವರು ವಹಿಸಿದ್ದರು.

ಈ ಸಂದರ್ಭದಲ್ಲಿ ಹಿರಿಯ ಕಲಾವಿದ ಮಾಂಡೇಶ್ವರ ಸದಾಶಿವಯ್ಯ ಅವರನ್ನು ಸಂಘದ ಪತಿಯಿಂದ ಫಲವುಷ್ಪ ಅರ್ಪಿಸಿ ಗೌರವಧನ ಕೊಟ್ಟು ಶಾಲು ಹೊದಿಸಿ ಸನ್ಮಾನಿಸಲಾಯಿತು.

ಮುಖ್ಯ ಅತಿಥಿಗಳಾಗಿ, ಎಸ್. ನಾಗೇಶ್ ಮ್ಯಾಸುಭೋಗ, ರಾಮದೇವ್ ಐತಾಳ್, ರಾಮದಾಸ ಭಟ್ ಆಗಮಿಸಿದ್ದರು.

ಸುದರ್ಶನ ಉರಾಳ್ ಸ್ವಾಗತಿಸಿದರು. ಸಂಘದ ಕಾರ್ಯದರ್ಶಿ ಎಚ್. ಆನಂದ ರಾವ್ ಉರಾಳ್ ವರದಿ ಓದಿದರು. ಜೊತೆಕಾರ್ಯದರ್ಶಿ ಗುರುಪ್ರಸಾದ್ ಉಪಾಧ್ಯಾಯ ವಂದಿಸಿದರು

ಉ.ಕ. ಲೋಕ ಅದಾಲತ್ 220 ಪ್ರಕರಣ ಇತ್ಯರ್ಥ

(ಮಂಗಳೂರು ವರದಿ)

ಕಾರವಾರ, ಮಾ. 2- ಇತ್ತೀಚೆಗೆ ಉ. ಕ. ಜಿಲ್ಲಾ ಕಾನೂನು ನೆರವು ಸಮಿತಿ ಮತ್ತು ವಕೀಲರ ಸಂಘದ ಜಂಟಿ ಆಶ್ರಯದಲ್ಲಿ ಜರುಗಿದ ಜನತಾ ನ್ಯಾಯಾಲಯದಲ್ಲಿ 220 ಪ್ರಕರಣಗಳು ಇತ್ಯರ್ಥಗೊಂಡಿದ್ದು, ಪರಿಹಾರ ಧನವಾಗಿ 31.80 ಲಕ್ಷ ರೂ.ಗಳನ್ನು ನೀಡಲಾಗಿದೆ.

ರಾಜಿಯಲ್ಲಿ ಇತ್ಯರ್ಥಗೊಂಡ ಈ ವ್ಯಾಜ್ಯಗಳಲ್ಲಿ ಹೊಡೆದಾಟ, ಭೂಗಡಿ ವಿವಾದ ಮತ್ತು ಅಪಘಾತಕ್ಕೆ ಸಂಬಂಧಿಸದ ಇತರೇ 28 ಪ್ರಕರಣಗಳೂ ಒಳಗೊಂಡಿವೆ.

ಈ ಸಮಾವೇಶ ಉದ್ಘಾಟಿಸಿದ ಹೈಕೋರ್ಟಿನ ನ್ಯಾಯಮೂರ್ತಿ ರಂಗನಾಥ ಮಿಶ್ರ ಅವರು ಸ್ವತಃ ಉಪಸ್ಥಿತರಿದ್ದು ಸುಮಾರು ಒಂದು ಗಂಟೆ ಕಾಲ ಈ ರಾಜೀ ಸಂಧಾನದ ಮೂಲಕ ಇತ್ಯರ್ಥವಾದ ಪ್ರಕರಣವನ್ನು ಗಮನಿಸಿದರು. ವಿಶೇಷ ಪ್ರಕರಣಗಳಿಗೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಿದರು.

ಬೆಂಗಳೂರಿನಿಂದ ರಾಜ್ಯ ಕಾನೂನು ಕಾರ್ಯದರ್ಶಿ ಎನ್. ಡಿ. ವಿ. ಭಟ್, ಕೇಂದ್ರ ಸರಕಾರದ ಉಚಿತ ಕಾನೂನು ನೆರವು ಸಮಿತಿಯ ಕಾರ್ಯದರ್ಶಿ ಜೆ. ಕೃಷ್ಣಮೂರ್ತಿ, ರಾಜ್ಯ ಸರಕಾರಿ ಪ್ರಾಸಿಕ್ಯೂಟರ್ ಗೋಪಾಲ ಸ್ವಾಮಿ ಮೊದಲಾದವರು ಆಗಮಿಸಿದ್ದರು.

ರಾಜ್ಯ ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಪಿ. ಸಿ. ಜೈನ್. ನ್ಯಾಯಮೂರ್ತಿ ಹಿರೇಮಠ. ಕಾನೂನು ಸಚಿವ ಲಕ್ಷ್ಮೀ ಸಾಗರ್, ಆರ್. ವಿ. ದೇಶಪಾಂಡೆ ಅವರೆಲ್ಲರೂ ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ಇತ್ಯರ್ಥಗೊಂಡ 220 ಪ್ರಕರಣಗಳು ಮತ್ತು ಪರಿಹಾರ ನೀಡಿದ ವಿಮಾ ಸಂಸ್ಥೆಗಳ ಹೆಸರುಗಳು ಈ ಕೆಳಗಿನಂತಿವೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು 62 ಪ್ರಕರಣಗಳಿಗೆ 4.12 ಲಕ್ಷ ರೂ. ರಾಜ್ಯ ಸರಕಾರಿ ವಿಮಾ ಇಲಾಖೆ 2.98 ಲಕ್ಷ ರೂ. ನ್ಯೂ ಇಂಡಿಯಾ ಇನ್ಶೂರೆನ್ಸ್ 2.5? ಲಕ್ಷ ರೂ. ಓರಿಯೆಂಟಲ್ ಇನ್ಶೂರೆನ್ಸ್ 5.56 ಲಕ್ಷ ರೂ. ನ್ಯಾಷನಲ್ ಇನ್ಶೂರೆನ್ಸ್ 9.70 ಲಕ್ಷ ರೂ. ಯುನೈಟೆಡ್ ಇಂಡಿಯಾ ಇನ್ಶೂರೆನ್ಸ್ 6.90 ಲಕ್ಷ ರೂ. ಪರಿಹಾರ ನೀಡಿವೆ ಎಂದು ಜಿಲ್ಲಾ ಕಾನೂನು ನೆರವು ಸಮಿತಿ ಕಾರ್ಯದರ್ಶಿ ಚೆಯಬ್ಬ ಬ್ಯಾರಿ ತಿಳಿಸಿದ್ದಾರೆ.

ಸಾಮಾಜಿಕ ಪಿಡುಗಿನ ವಿರುದ್ಧ ಸಿಡಿದೇಳಲು ಕರೆ

ಪುತ್ತೂರು, ಮಾ. 2-ಇಂದಿನ ಈ ವೈಜ್ಞಾನಿಕ ಯುಗದಲ್ಲಿ ವಿಜ್ಞಾನಿಗಳು ಚಂದ್ರಲೋಕಕ್ಕೆ ಹೋಗಿದ್ದರೂ ಭೂಲೋಕದಲ್ಲಿ ಮಾತ್ರ ಮನುಷ್ಯ ಮನುಷ್ಯರನ್ನು ಹತ್ತಿರ ತರುವುದು ಇದುವರೆಗೆ ಸಾಧ್ಯವಾಗಿಲ್ಲ. ಇಂಥ ಸಾಮಾಜಿಕ ಪಿಡುಗಿನ ವಿರುದ್ಧ ಯುವಸಂಘಟನೆಗಳು ಸಿಡಿದೇಳಬೇಕಾಗಿದೆ ಎಂದು ವಿವೇಕಾನಂದ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ. ಅಮೃತಸೋಮೇಶ್ವರ ಅವರು ಕರೆ ನೀಡಿದರು.

ಅವರು ಇಲ್ಲಿಗೆ ಸಮೀಪದ ಬಜತ್ತೂರು ಶ್ರೀನಿಧಿ ಯುವಕ ಮಂಡಲದ ದಶಮಾನೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಇತ್ತೀಚೆಗೆ ಮಾತನಾಡುತ್ತಿದ್ದರು.

ಶ್ರೀನಿಧಿ ಯುವಕ ಮಂಡಲವು ಕೊಂಚ ಭಿನ್ನವಾದ ವೈಚಾರಿಕ ದೃಷ್ಟಿಕೋನ ಹೊಂದಿದೆ ಎಂದ ಅಮೃತರು, ಇಂಥ ಸಂಘಟನೆ[illegible] ಸಾಮಾಜಿಕ ಜವಾಬ್ದಾರಿ ಗುರುತರವಾ[illegible]ರು.

ಸಮಾರಂಭದ ಅಧ್ಯಕ್ಷತೆಯನ್ನು ನಿವೃತ್ತ ಪ್ರಾಧ್ಯಾಪಕ ಶಂಕರ[illegible] ವಹಿಸಿದ್ದರು.

ವಿವಿಧ ಸ್ಪರ್ಧಾ ವಿಜೇತರಿಗೆ ಮುಖ್ಯ ಅತಿಥಿಗಳು ಬಹುಮಾನ ವಿತರಿಸಿದರು.

ಇನ್ನೋರ್ವ ಮುಖ್ಯ ಅತಿಥಿಯಾಗಿ ಉಪ್ಪಿನಂಗಡಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಉಪನ್ಯಾಸಕ ಪೊರಬದ ಮಾ[illegible]

-6: ಮಂಗಳೂರಲ್ಲಿ ಇಲಾಖೆ ದಿನಾಚರಣೆ

[illegible] ದಿನಾಚರಣೆ ಹಾಗೂ ಕ್ರೀಡಾ ಕೂಟವನ್ನು ಜಿಲ್ಲಾ ಪರಿಷತ್ ಅಧ್ಯಕ್ಷರಾದ ಬಿ. ಸಂಕಪ್ಪ ರೈ ಅವರು ಉದ್ಘಾಟಿಸುವರು. ಜಿಲ್ಲಾಧಿಕಾರಿ ಸುಭಾಷ್‌ಚಂದ್ರ ಖುಂಟಿಆ ಅವರು ಸಮಾರಂಭದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಿಐಜಿ ಅಲ್ಬುಕರ್ಕ್ ಅವರು ಭಾಗವಹಿಸುವರು. ಉದ್ಘಾಟನೆಯ ನಂತರ ಕಂದಾಯ ಇಲಾಖೆ ಅಧಿಕಾರಿಗಳ ಮತ್ತು ನೌಕರರ ಕ್ರೀಡಾ ಕೂಟ ಜರಗಲಿದೆ.

ಅದೇ ದಿನ ಸಂಜೆ 5ಗಂಟೆಗೆ ಪುರಭವನದಲ್ಲಿ ಕಂದಾಯ ಇಲಾಖೆಯವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗುತ್ತವೆ.

ಮಾರ್ಚ್ 6ರಂದು ಬೆಳಗ್ಗೆ 9-30ಕ್ಕೆ ಇಲಾಖೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ಈ ಸ್ಪರ್ಧೆಯ ಅಧ್ಯಕ್ಷತೆಯನ್ನು ಸಹಾಯಕ ಕಮಿಷನರ್ ಸಿ. ಸೋಮಶೇಖರ್ ಅವರು ವಹಿಸುವರು. ಮುಖ್ಯ ಅತಿಥಿಯಾಗಿ ಜಿಲ್ಲಾಧಿಕಾರಿಗಳ ಕೇಂದ್ರ ಸಹಾಯಕರಾದ ರಾಮಕೃಷ್ಣ ಅವರು ಭಾಗವಹಿಸುವರು.

11-30ಕ್ಕೆ ವಿಚಾರ ಸಂಕಿರಣ ಜಿಲ್ಲಾಧಿಕಾರಿ ಸುಭಾಷ್‌ಚಂದ್ರ ಖುಂಟಿಆ ಅವರ ಅಧ್ಯಕ್ಷತೆಯಲ್ಲಿ ಜರಗಲಿದೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಪ್ರೊ. ನೀಲಂ ಅಚ್ಯುತರಾವ್ ಅವರು ಉಪಸ್ಥಿತರಿರುವರು.

ಈ ವಿಚಾರ ಸಂಕಿರಣದಲ್ಲಿ ಎಂ.ಎಚ್. ಸ್ವಾಮಿನಾಥನ್ ಬೆಂಗಳೂರು (ಅರಣ್ಯ ಸಂರಕ್ಷಣೆಯಲ್ಲಿ ಕಂದಾಯ ಇಲಾಖೆಯ ಪಾತ್ರ): ಸುಭಾಷ್‌ಚಂದ್ರ ಸಹಾಯಕ ಕಮಿಷನರ್ ಕುಂದಾಪುರ (ಸಾರ್ವಜನಿಕ ಕುಂದುಕೊರತೆಗಳ ಶೀಘ್ರ ಪರಿಹಾರ): ರಜನೀಶ್ ಗೋಯಲ್ ಸಹಾಯಕ [illegible]

ಮುಂಗಾರು
ಬುಧವಾರ, ಫೆಬ್ರವರಿ 15, 1989

ಹಾರಿಸಿಕೊಳ್ಳಲಾಗದ ಸರಕಾರಿ ಹೊಣೆ

1984 ಅಕ್ಟೋಬರ್ 31 ರಂದು ಇಂದಿರಾ ಗಾಂಧಿ ಹತ್ಯೆ ನಡೆದ ನಂತರದ ಎರಡು ದಿನಗಳ ಅವಧಿಯಲ್ಲಿ ಹೊಸದಿಲ್ಲಿಯಲ್ಲಿ ನಡೆದ ಅಮಾನುಷ ಹತ್ಯಾಕಾಂಡದಲ್ಲಿ ನಾಗರಿಕರಿಗೆ ರಕ್ಷಣೆ ನೀಡಲು ಕೇಂದ್ರ ಸರಕಾರ ವಿಫಲವಾಗಿರುವುದಕ್ಕಾಗಿ ಅದರ ವಿರುದ್ಧ 2,000 ಕೋಟಿ ರೂಪಾಯಿಗಳ ದಾವೆ ಹೂಡುವ ಸಿದ್ಧತೆ ನಡೆದ ಸುದ್ದಿ ಬಂದಿದೆ. ಈ ಗಲಭೆಗಳಲ್ಲಿ ಸಂತ್ರಸ್ತರಾದ ಜನರಿಗೆ ಪರಿಹಾರ ಮತ್ತು ಪುನರ್ವಸತಿಯನ್ನೊದಗಿಸುವ ಉದ್ದೇಶದಿಂದ ಸ್ಥಾಪಿತವಾದ ಕೇಂದ್ರ ಸಮಿತಿಯೊಂದು ಈ ದಾವೆ ಹೂಡಲಿದೆಯೆಂದೂ ಹೇಳಲಾಗಿದೆ.

ರಾಜ್ಯಾಂಗ ಬದ್ಧವಾದ ಕರ್ತವ್ಯದ ನಿರ್ವಹಣೆಯಲ್ಲಿ ಸರಕಾರದ ವೈಫಲ್ಯದ ಪ್ರಶ್ನೆಯನ್ನೆತ್ತಿ ಆದರ ವಿರುದ್ಧ ದಾವೆ ಹೂಡುವ ಈ ತೀರ್ಮಾನಕ್ಕೆ 1984 ರ ನವೆಂಬರ್ ಗಲಭೆಗಳಲ್ಲಿ ತಮಿಳುನಾಡಿನಲ್ಲಿ ಸಂತ್ರಸ್ತರಾದ ಸಿಖ್ಖ ಸಮುದಾಯದ ಪರವಾಗಿ ಸಲ್ಲಿಸಿದ ಅರ್ಜಿಯ ಬಗ್ಗೆ ತಮಿಳುನಾಡು ಹೈಕೋರ್ಟ್ ನೀಡಿದ್ದ ತೀರ್ಪು ಒಂದು ಪ್ರೇರಣೆಯೆಂದು ಹೇಳಲಾಗಿದೆ.

ತಮಿಳುನಾಡು ಹೈಕೋರ್ಟ್ ಅರ್ಜಿದಾರರ ಪರವಾಗಿ ನೀಡಿದ ತೀರ್ಪಿನಲ್ಲಿ, "ಕಾನೂನು ಮತ್ತು ವ್ಯವಸ್ಥೆಯನ್ನು ಕಾಪಾಡುವುದು ಸರಕಾರದ ಪ್ರಾಥಮಿಕ ಕರ್ತವ್ಯ. ಯಾವ ಸರಕಾರವೂ ಈ ಜವಾಬ್ದಾರಿಯಿಂದ ತಪ್ಪಿಸಿಕೊಂಡು ನಾಗರಿಕರ ಆಸ್ತಿ-ಪಾಸ್ತಿ ಹಾಗೂ ಜೀವವನ್ನು ಗಂಡಾಂತರಕ್ಕೆ ತಳ್ಳುವಂತಿಲ್ಲ. ಇಂತಹ ಗಲಭೆಗಳಲ್ಲಿ ಸಂತ್ರಸ್ತರಾದ ಜನತೆಯ ನೆರವಿಗೆ ಶೀಘ್ರವಾಗಿ ಧಾವಿಸುವುದು ಮತ್ತು ಸಾಕಷ್ಟು ಪ್ರಮಾಣದಲ್ಲಿ ಪುನರ್ವಸತಿ ಕಲ್ಪಿಸುವುದು ಸರಕಾರದ ರಾಜ್ಯಾಂಗಬದ್ಧ ಕರ್ತವ್ಯವಾಗಿದೆ.", ಎಂದು ತಮಿಳುನಾಡು ಹೈಕೋರ್ಟಿನ ತೀರ್ಪು ಹೇಳಿದೆ.

ತಮಿಳುನಾಡು ಹೈಕೋರ್ಟಿನ ಈ ತೀರ್ಪಿಗೆ ವಿಶೇಷವಾದ ಮಹತ್ವವಿದೆ. ನಾಗರಿಕರು ಮತ್ತು ಸರಕಾರದ ನಡುವಿನ ಸಂಬಂಧದಲ್ಲಿ - ಅದರಲ್ಲಿಯೂ ನಾಗರಿಕ ಹಕ್ಕುಗಳ ರಕ್ಷಣೆಯಲ್ಲಿ ಸರಕಾರದ ಹೊಣೆಯ ಕುರಿತು ನ್ಯಾಯಾಂಗದ ನಿಲುವು ಈ ತೀರ್ಪಿನಲ್ಲಿ ನಿಖರವಾಗಿ ವ್ಯಕ್ತಪಟ್ಟಿದೆ.

ಸರಕಾರದ ಕರ್ತವ್ಯ ಲೋಪಗಳಿಗೆ ನಾಗರಿಕರು ಪರಿಹಾರ ಪಡೆಯಲಾಗದಷ್ಟು ದೈತ್ಯಾಕಾರದಲ್ಲಿ ಬೆಳೆದಿರುವ ರಾಜ್ಯಶಕ್ತಿಗೆ ತಮಿಳುನಾಡು ಹೈಕೋರ್ಟಿನ ಈ ತೀರ್ಪು ಒಂದು ಅಂಕುಶವಾಗ ಬಲ್ಲುದು. ಗಣರಾಜ್ಯ ಭಾರತದಲ್ಲಿ ಆಗಾಗ ಕೋಮುಕಲಹಗಳು-ಗುಂಪು ಘರ್ಷಣೆಗಳು ನಡೆದು ಪ್ರಬಲರು-ದುರ್ಬಲರ ಹತ್ಯೆ ನಡೆಸುತ್ತಲೇ ಬಂದಿದ್ದಾರೆ. ಇಂತಹ ಗಲಭೆಗಳಲ್ಲಿ ಸರಕಾರದ ಕರ್ತವ್ಯ ಲೋಪಗಳಾಗಿವೆ. ನಾಗರಿಕರ ಜೀವ ಮತ್ತು ಸೊತ್ತುಗಳಿಗೆ ಅಪಾರ ಹಾನಿಯಾದ ಇಂತಹ ಸಂದರ್ಭಗಳಲ್ಲಿ ಸರಕಾರ ನ್ಯಾಯಾಂಗ ತನಿಖೆಗಳನ್ನೇ ಹಂಡಿಸಿ-ಮತ್ತೆ "ಸಾರ್ವಜನಿಕ ಹಿತ ದೃಷ್ಟಿಯಿಂದ" ತನಿಖಾ ವರದಿಗಳನ್ನು ದಾಖಲೆಗೆ ಸೇರಿಸುತ್ತಲೇ ಬಂದಿದೆ.

ಇಂದಿರಾ ಹತ್ಯೆಯ ನಂತರ 1984 ನವೆಂಬರ್ 1 ಮತ್ತು 2 ರಂದು ದೇಶದ ರಾಜಧಾನಿ ಹೊಸದಿಲ್ಲಿಯಲ್ಲಿ ನಡೆದ ನರಮೇಧದ ನ್ಯಾಯಾಂಗ ತನಿಖಾ ವರದಿಯನ್ನೂ ಸರಕಾರ ಮುಚ್ಚಿ ಇಟ್ಟಿದೆ. ಒಂದು ಸಭ್ಯ ಸಮಾಜ ನಾಚಿ ತಲೆ ತಗ್ಗಿಸಬೇಕಾದ ಈ ಹತ್ಯಾಕಾಂಡಕ್ಕೆ ಕಾರಣರಾದ ಅಪರಾಧಿಗಳನ್ನು ಶಿಕ್ಷಿಸುವ ದಿಸೆಯಲ್ಲೂ ಸರಕಾರ ದಿಟ್ಟನಿಲುವನ್ನು ತಳೆದಿಲ್ಲ. ತೋರಿಕೆಗೆ ಅಲ್ಲಿ-ಇಲ್ಲಿ ಕೆಲವರನ್ನು ಕಟ-ಕಟೆಗೆ ಹತ್ತಿಸಿ ಕಾಲ ತಳ್ಳುತ್ತಿದೆ. ಹೊಸದಿಲ್ಲಿಯ ಆ ಹತ್ಯಾಕಾಂಡದಲ್ಲಿ ಸಂತ್ರಸ್ತರಾದ ಸುಮಾರು 5,000 ಕ್ಕೂ ಹೆಚ್ಚು ಸಿಖ್ಖ ಕುಟುಂಬಗಳಿಗೆ ಇನ್ನೂ ಸರಿಯಾದ ಪರಿಹಾರ ಸಿಕ್ಕಿಲ್ಲ.

ಸಿಖ್ಖ ಜನಸಮುದಾಯದ ಮೇಲೆ ಅಂದು ನಡೆದ ದೌರ್ಜನ್ಯ ಇತ್ತೀಚಿನ ಇತಿಹಾಸದಲ್ಲಿ ಯಾವ ನಾಗರಿಕ ಸಮಾಜದಲ್ಲೂ ನಡೆದಿರಲಾರದು. ಆ ಎರಡು ದಿನಗಳಲ್ಲಿ ಹೊಸದಿಲ್ಲಿಯ ಬೀದಿಗಳಲ್ಲಿ ಮಾನವತೆಯ ಮಾರಣಹೋಮ ನಡೆದಿತ್ತು. ಪಾಶವೀಶಕ್ತಿಯ ಪ್ರತೀಕಗಳಾಗಿ ಅಂದು ಹೊಸದಿಲ್ಲಿಯ ಬೀದಿಗಳಲ್ಲಿ ಸಿಕ್ಖರ ಹತ್ಯೆ ನಡೆಸಿದ ಉದ್ರಿಕ್ತರನ್ನು ತಡೆಗಟ್ಟಲು ದೇಶದ ಸರಕಾರಕ್ಕೆ ಸಾಧ್ಯವಾಗಿರಲಿಲ್ಲ.

ಜಗತ್ತಿಗೆ ಮಾನವೀಯತೆಯ ಪಾಠ ಹೇಳುವ ಹಾಗೂ ಮಾನವ ಹಕ್ಕುಗಳ ಮಹಾರಕ್ಷಕನೆಂದು ಹೇಳಿಕೊಳ್ಳುತ್ತಿರುವ ಭಾರತದ ರಾಷ್ಟ್ರೀಯ ಪ್ರಜ್ಞೆ 1984ರ ನವೆಂಬರದಲ್ಲಿ ತನ್ನ ರಾಜಧಾನಿಯಲ್ಲೇ ನಡೆದ ನರಮೇಧದ ವಿರುದ್ಧ ಇದುವರೆಗೆ ಮಿಡಿಯಲಿಲ್ಲ. ಇಂದಿರಾ ಹಂತಕರು ಸಿಕ್ಖ ಸಮುದಾಯಕ್ಕೆ ಸೇರಿದವರೆಂಬ ಒಂದೇ ಅಪರಾಧಕ್ಕಾಗಿ ಎರಡೇ ದಿನಗಳಲ್ಲಿ ಸಾವಿರಕ್ಕೂ ಹೆಚ್ಚು ಮಂದಿ ಸಿಕ್ಖರ ಹೆಣಗಳು ಉರುಳಿದ್ದವು.

ಇದಾಗಿ ನಾಲ್ಕು ವರ್ಷಗಳು ಕಳೆದರೂ ಸಂತ್ರಸ್ತರನ್ನು ಗುರುತಿಸಿ ಅವರಿಗೆ ಪರಿಹಾರವನ್ನೊದಗಿಸುವ ಕೆಲಸವನ್ನು ದೇಶದ ಸರಕಾರ ಪ್ರಾಮಾಣಿಕವಾಗಿ ನಿರ್ವಹಿಸಿಲ್ಲ. ಅತಿ ಶೀಘ್ರದಲ್ಲಿ ತಿದ್ದಿಕೊಳ್ಳಬೇಕಾದ ತಪ್ಪು ಇದೆಂಬುದನ್ನು ಹೇಳುವ ಸಾರ್ವಜನಿಕ ಅಭಿಪ್ರಾಯವೂ ರೂಪುಗೊಂಡಿಲ್ಲ. ದೇಶದ ಸರಕಾರ, ರಾಜಕೀಯ ಮುಖಂಡರು ಹಾಗೂ ಪ್ರಜ್ಞಾವಂತ ಪ್ರಜೆಗಳೆನ್ನುವವರೆಲ್ಲ, ಆಗಿ ಹೋದ ಅನಾಹುತವನ್ನು ಮುಚ್ಚಿಡುವ ಆತ್ಮವಂಚನೆಯಲ್ಲೇ ನಿರತರಾಗಿದ್ದಾರೆ.

1984 ನವೆಂಬರದ ಹೊಸದಿಲ್ಲಿಯ ಹತ್ಯಾಕಾಂಡ ಈ ದೇಶದ ಸಮಗ್ರ ಸಿಕ್ಖ ಜನಸಮುದಾಯದ ಮನಸ್ಸಿನ ಮೇಲೆ ಮಾಸಿ ಹೋಗದ ಘಾಸಿ ಮಾಡಿದೆಯೆಂಬುದನ್ನು ದೇಶದ ಆಡಳಿತಗಾರರು ಇನ್ನೂ ಮನವರಿಕೆಮಾಡಿಕೊಂಡಿಲ್ಲ. ಪಂಜಾಬಿನಲ್ಲಿ ಕೊನೆಗೊಳ್ಳದ ಕ್ಷೋಭೆಗೆ ಇದೂ ಒಂದು ಕಾರಣವೆಂಬುದನ್ನು ಮನಗಂಡಿಲ್ಲ. ಭಾರತದ ರಾಷ್ಟ್ರೀಯತೆಯ ಒಡಲ ಹುಣ್ಣಾಗಿ ಸಿಖ್ಖ ಸಂತ್ರಸ್ತರ ನೋವು ಉಳಿದಿದೆ.

ಈ ನೋವನ್ನು ನಿವಾರಿಸುವ ಹೊಣೆ ರಾಷ್ಟ್ರದ ಸರಕಾರದ ಮೇಲಿರುವಷ್ಟೇ ಭಾರತದ ರಾಷ್ಟ್ರೀಯತೆಯಲ್ಲಿ ಭಾವುಕರಾಗುವ ಪ್ರಜೆಗಳ ಮೇಲೂ ಇದೆ. ಈ ದೃಷ್ಟಿಯಿಂದ ಹೊಸದಿಲ್ಲಿ ಗಲಭೆಗಳ ಸಂತ್ರಸ್ತರಿಗೆ 2,000ಕೋ.ರೂಪಾಯಿಗಳ ಪರಿಹಾರವನ್ನೊದಗಿಸುವ ದಾವೆಯ ಯೋಚನೆ ತೀರಾ ಸ್ವಾಗತಾರ್ಹವೆನಿಸುತ್ತದೆ. ಸಿಕ್ಖರು ಭಾರತೀಯರೆಂದು ಭಾರತದ ರಾಷ್ಟ್ರೀಯವಾದಿಗಳು ನಂಬುವುದಾದರೆ ನೊಂದ ಈ ಜನರಿಗೆ ಪರಿಹಾರವನ್ನೊದಗಿಸುವ ಯತ್ನವನ್ನು ಬೆಂಬಲಿಸಬೇಕು. ಇದರಿಂದ ಈ ದೇಶಕ್ಕೆ ಎರಡು ಬಗೆಯ ಉಪಕಾರವಾಗಲು ಸಾಧ್ಯ. ಮೊದಲನೆಯದಾಗಿ ಇದರಿಂದ ಸಿಕ್ಖರ ನೋವಿನಲ್ಲಿ ಭಾರತೀಯರೆಲ್ಲರೂ ಭಾಗಿಗಳೆಂಬುದನ್ನು ಎತ್ತಿ ತೋರಿಸಬಹುದು. ಭಾರತದ ರಾಷ್ಟ್ರೀಯ ವಾಹಿನಿಯಿಂದ ಬೇರಾಗುತ್ತಿರುವ ಸಿಖ್ಖರ ಭಾವನೆಗಳಿಗೆ ಬಂಧುತ್ವದ ಬೆಸುಗೆ ಹಾಕಬಹುದು. ಎರಡನೆಯದಾಗಿ ಇದರಿಂದ ರಾಜ್ಯಶಕ್ತಿಯನ್ನು ನಾಗರಿಕರ ಹಕ್ಕುಗಳ ರಕ್ಷಣೆಗೆ ಬದ್ಧವನ್ನಾಗಿ ಮಾಡಬಹುದು.

ಆರ್ಥಿಕವಾಗಿ ಪ್ರಭುತ್ವದ ಅವಲಂಬಿಗಳೂ ಸಾಮಾಜಿಕವಾಗಿ ವಿಭಜಿತರೂ ಆಗಿರುವ ಪ್ರಜಾವರ್ಗ ದುರ್ಬಲವೆನ್ನಿಸುತ್ತದೆ. ದುರ್ಬಲರನ್ನಾಳುವ ಸರಕಾರವನ್ನು ದೈತ್ಯಶಕ್ತಿ ಆವರಿಸುತ್ತದೆ. ನಾಗರಿಕರ ಹಕ್ಕುಗಳ ರಕ್ಷಣೆಯನ್ನು ಗೌಣವಾಗಿ ಕಾಣುತ್ತದೆ. ಭಾರತದಲ್ಲಿ ಇಂತಹ ಒಂದು ದೈತ್ಯರೂಪಿಯಾದ ಪ್ರಭುತ್ವ ಬೆಳೆಯುತ್ತಿದೆ. ಇದರ ಮೇಲೆ ಅಂಕುಶ ಹಾಕಬೇಕಾದ ಕಾಲ ಈಗ ಬಂದಿದೆ. ಈ ದೃಷ್ಟಿಯಿಂದ ಹೊಸದಿಲ್ಲಿಯ ಹತ್ಯಾಕಾಂಡವನ್ನು ತಡೆಗಟ್ಟುವುದರಲ್ಲಿ ಸರಕಾರದ ವೈಫಲ್ಯಕ್ಕೆ ತಕ್ಕ ಶಾಸ್ತಿ ಆಗಲೇಬೇಕು.

ಸಿದರು. ನಾ. ಅನಂತ ಪೆರಾಜೆ ಸಂದೇಶ ಓದಿದರು. ಅಚ್ಯುತ ಆಚಾರ್ ವರದಿ ಓದಿದರು. ರಾಮಯ್ಯ ಕಿಲ್ಲೆ ವಂದಿಸಿದರು.

ಪ್ರತಿಭಾ ದಿನಾಚರಣೆ

ಕಾರ್ಕಳ, ಫೆ. 14– ಕಾರ್ಕಳ ಮೈನ್ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚೆಗೆ ವಿದ್ಯಾರ್ಥಿಗಳ ಪ್ರತಿಭಾ ದಿನವನ್ನು ಆಚರಿಸಲಾಯಿತು.

ಶಾಲಾಭಿವೃದ್ಧಿ ಸಮಿತಿ ಸದಸ್ಯ ಕೆ. ಗೋಪಾಲ ಕೃಷ್ಣ ಶೆಣೈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಂತೋಷ್ ಅತಿಥಿಯಾಗಿದ್ದರು. ರೂಪಾ ಜನಾರ್ದನ ಶೆಣೈ ಬಹುಮಾನ ವಿತರಿಸಿದರು.

ಶಾಲಾ ಮುಖ್ಯೋಪಾಧ್ಯಾಯ ಕೆ. ಬಾಬಣ್ಣ ಸ್ವಾಗತಿಸಿ ವಂದಿಸಿದರು. ಪುಷ್ಪಲತಾ ಕರ್ಕೇರ ವರದಿ ಓದಿದರು.

ಕಿನ್ನಿಗೋಳಿ ಮ. ಪ. ಜನತಾ ಸದಸ್ಯರು ಜನತಾ ದಳಕ್ಕೆ

ಮಂಗಳೂರು, ಫೆ. 14– ಮಂಗಳೂರು ತಾಲೂಕು ಕಿನ್ನಿಗೋಳಿ ಮಂಡಲ ಪಂಚಾಯತ್ ಜನತಾ ಪಕ್ಷದ ಚುನಾಯಿತ ಸದಸ್ಯರು ಜನತಾ ದಳ ಸೇರಿದ್ದಾರೆ ಎಂದು ತಿಳಿಸಲಾಗಿದೆ.

ಇತ್ತೀಚೆಗೆ ಕಿನ್ನಿಗೋಳಿ ಮಂಡಲ ಪ್ರಧಾನರಾದ ವೈ. ಕೆ. ಸಂಜೀವ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಚುನಾಯಿತ ಸದಸ್ಯರ ಸಭೆ ಜರಗಿ ಈ ತೀರ್ಮಾನ ಕೈಗೊಂಡರು ಎಂದು ತಿಳಿಸಲಾಗಿದೆ. ಈ ಸಭೆಯಲ್ಲಿ ವೀಕ್ಷಕರಾಗಿ ಜನತಾ ದಳದ ತಾಲೂಕು ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಮಂಜನಾಡಿ ಭಾಗವಹಿಸಿದ್ದರು.

ರಸ್ತೆ ವಿದ್ಯುತ್ ದೀಪ ಉದ್ಘಾಟನೆ

ಮಂಗಳೂರು, ಫೆ. 14– ಬಜಾಲ್‌ನಿಂದ ಅಳಪೆ ಮಠದ ಮೂಲಕವಾಗಿ ಹಾದು ಹೋಗುವ ಕಂಕನಾಡಿ ನಾಗೂರಿಗೆ ಸಂಪರ್ಕಿಸುವ ನೂತನ ರಸ್ತೆಗೆ ವಿದ್ಯುತ್ ದೀಪದ ವ್ಯವಸ್ಥೆಯನ್ನು ನಗರ ಪಾಲಿಕೆ ಮಾಜಿ ಮೇಯರ್ ಪಿ. ಎಂ. ಕ್ರಾಸ್ಟಲಿನೊ ಅವರು ಇತ್ತೀಚೆಗೆ ಉದ್ಘಾಟಿಸಿದರು.

ಸಮಾರಂಭದಲ್ಲಿ ಗ್ರಾಮದ ಹಿರಿಯರಾದ ಪೂವಪ್ಪ ಪೂಜಾರಿ, ಭೋಜ ಕರ್ಕೇರ, ಕಾಳಪ್ಪ ಶೆಟ್ಟಿಗಾರ ಹಾಗೂ ಸ್ಥಳೀಯ ಕಾರ್ಪೊರೇಟರ್ ಕೃಷ್ಣಪ್ಪ ಮೆಂಡನ್ ಭಾಗವಹಿಸಿದ್ದರು.

…ಾಡಿ ಕಟ್ಟಲು …ತನ ಜಾಲ

ಅಮಾನತು

ನಗರದ ಕೇವಲ್‌ಚಂದ್ ಎಂಬುವರ ಅಕ್ಕಿ ವ್ಯಾಪಾರದ ಲೈಸನ್ಸ್‌ನ್ನು ಜಿಲ್ಲಾಧಿಕಾರಿಗಳು ಅಮಾನತುಗೊಳಿಸಿದ್ದಾರೆ.

ಇಲ್ಲಿನ ತಹಸೀಲ್ದಾರ್ ಹುತ್ತಪ್ಪ ಅವರು ಕೇವಲ್‌ಚಂದ್‌ನ ಗೋಡೌನ್‌ಗೆ ಇತ್ತೀಚೆಗೆ ಬೀಗ ಮುದ್ರೆ ಹಾಕಿದ್ದರು. ಅದನ್ನು ಕೇವಲ್‌ಚಂದ್ ತೆಗೆದು ಬಲಾತ್ಕಾರದಲ್ಲಿ ವ್ಯಾಪಾರದಲ್ಲಿ ತೊಡಗಿದ್ದರೆಂದು ತಹಸೀಲ್ದಾರರು ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸಿದ್ದರು.

ಬಟ್ಟೆ ಕಳವು

ಶೃಂಗೇರಿಯ ಮಂಜುನಾಥ ಕ್ಲಾತ್ ಸ್ಟೋರಿನ ಬೀಗ ಒಡೆದು ಸಾವಿರಾರು ರೂ.ಗಳ ಬಟ್ಟೆಯನ್ನು ಕಳವು ಮಾಡಲಾಗಿದೆ ಎಂದು ಅಂಗಡಿಯ ಮಾಲೀಕ ಸುಬ್ಬರಾವ್ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

…ನಿಗಮದವರಿಗೆ ವಹಿಸಿದರೆ, ನಿಗಮದವರು ಸೂಚಿಸಿದ ಗಿಡಮರಗಳನ್ನು ಕಡಿದು ಮಾಲು ತಯಾರಿಸಿ ಸರ್ಕಾರಿ ಡಿಪೋಗಳಿಗೆ ಸಾಗಿಸಿ ಅದನ್ನು ಮಾರಾಟ ಮಾಡುತ್ತಾರೆ. ಇದರಿಂದ ಮಾಲೀಕರಿಗೆ ಹೆಚ್ಚಿನ ಲಾಭ ಬರುವುದೆಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ.

ಅರಣ್ಯದಲ್ಲಿ ಅಕ್ರಮ ಕಡಿತವನ್ನು ಗಣನೀಯವಾಗಿ ಕಡಿಮೆ ಮಾಡಬಹುದೆಂಬ ಉದ್ದೇಶದಿಂದ ಈ ರೀತಿಯ ಯೋಜನೆ ಹಾಕಿಕೊಳ್ಳಲಾಗುತ್ತಿದೆ.

ಖಾಸಗಿ ಹಿಡಿತದಲ್ಲಿರುವ ಎಲ್ಲ ಮರಗಡಗಳ ಕಡಿಯುವಿಕೆಯ ಜವಾಬ್ದಾರಿಯನ್ನು ನಿಗಮದವರಿಗೆ ನೀಡಬೇಕು. ಅದರ ಜವಾಬ್ದಾರಿ ವಹಿಸಿಕೊಟ್ಟ ನಂತರ

ಉಡುಪಿ ಪುರಸಭೆ: ಪ್ರತಿ ಬುಧವಾರ ಸಾರ್ವಜನಿಕ ಭೇಟಿ ಕಾರ್ಯಕ್ರಮ

ಉಡುಪಿ, ಫೆ. 14 – ಇಲ್ಲಿನ ಪುರಸಭೆಯ ಆಡಳಿತಾಧಿಕಾರಿಯವರಾದ ಕುಂದಾಪುರದ ಸಹಾಯಕ ಕಮಿಶನರ್, ಸ್ಥಳೀಯ ಪುರಸಭಾ ಕಚೇರಿಯಲ್ಲಿ ಪ್ರತೀ ಬುಧವಾರ ಅಪರಾಹ್ನ 3 ಗಂಟೆಯ ನಂತರ ಸಾರ್ವಜನಿಕ ಭೇಟಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಈ ಸಮಯದಲ್ಲಿ ಪುರಸಭೆಗೆ ಸಂಬಂಧಪಟ್ಟ ಅಹವಾಲುಗಳನ್ನು ನಾಗರಿಕರಿಂದ ಸ್ವೀಕರಿಸಲಾಗುವುದೆಂದೂ ತಿಳಿಸಲಾಗಿದೆ.

ಈ ಅವಕಾಶಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಪುರಸಭಾ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ಕೋರಿದ್ದಾರೆ.

ಕಳ್ಳತನ: ಶೀಘ್ರ ತನಿಖೆಗೆ ಮನವಿ

ಶಿರಾಲಿ, ಫೆ. 14– ಕಳ್ಳತನದ ಬಗ್ಗೆ ಶೀಘ್ರ ತನಿಖೆ ನಡೆಸಿ, ಕಳವಾದ ಬಂಗಾರದ ಆಭರಣಗಳು ಲಭ್ಯವಾಗುವಂತೆ ಮಾಡಬೇಕೆಂದು ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲೂಕಿನ ಬೇಂಗ್ರೆ ಗ್ರಾಮ ಲೆಕ್ಕಾಧಿಕಾರಿ ಸಿ ಜೆ, ಗೊನ್ಸಾಲ್ವಿಸ್‌ಅವರು ಕಾರವಾರದ ಸ್ಟೇಟ್ ಇಂಟಲಿಜನ್ಸ್‌ನ ಪೊಲೀಸ್ ಇನ್ಸ್‌ಪೆಕ್ಟರ್ ಅವರಿಗೆ ಮನವಿ ಮಾಡಿದ್ದಾರೆ.

ನಿವೃತ್ತ ಗ್ರಾಮಲೆಕ್ಕಾಧಿಕಾರಿ ನಾರಾಯಣ ಶೆಟ್ಟಿ ಅವರ ಶಿರಾಲಿ ಮನೆಯಲ್ಲಿ ವಾಸವಾಗಿರುವ ಗೊನ್ಸಾಲ್ವಿಸ್ ಅವರ ಮನೆಯಲ್ಲಿ 11–5–88ರಂದು ರಾತ್ರಿ ಈ ಕಳ್ಳತನ ಆಗಿದ್ದು ಆ ಬಗ್ಗೆ ಪೊಲೀಸರಿಗೆ ದೂರು ನೀಡಲಾಗಿತ್ತೆಂದು ಗೊನ್ಸಾಲ್ವಿಸ್ ತಿಳಿಸಿದ್ದಾರೆ.

ಮನೆಯ ಮಾಲೀಕರ ಮಗಳ ನಿಶ್ಚಿತಾರ್ಥಕ್ಕೆಂದು ತಮ್ಮ ಬಂಗಾರದ ಆಭರಣಗಳನ್ನು ಅವರಿಗೆ ನೀಡಲಾಗಿತ್ತು, ಮತ್ತು ಅವರು ಮರಳಿ ಒಪ್ಪಿಸಿದ್ದರು. ಆದರೆ ಅಂದೇ ರಾತ್ರಿ ಆಭರಣಗಳು ಇದ್ದ ಸ್ಥಳದಿಂದ ನಾಪತ್ತೆಯಾಗಿದ್ದವೆಂದು ಗೊನ್ಸಾಲ್ವಿಸ್ ಮನವಿಯಲ್ಲಿ ತಿಳಿಸಿದ್ದಾರೆ.

ಸುಮಾರು 38,000 ರೂ. ಒಟ್ಟು ಮೌಲ್ಯದ 9 ಬಂಗಾರದ ಒಡವೆಗಳು ಈ ಕಳ್ಳತನದಲ್ಲಿ ನಾಪತ್ತೆಯಾಗಿದ್ದು ಈ ಬಗ್ಗೆ ಶಂಕಿತ7 ಜನರ ಮೇಲೆ ಪೊಲೀಸ್ ಠಾಣೆಗೆ ದೂರು ನೀಡಲಾಗಿತ್ತು. ದೂರು ಕೊಟ್ಟ ದಿನದಿಂದ ಈ ವರೆಗೆ ತನಗೆ ಯಾವುದೇ ನ್ಯಾಯ ದೊರೆಯಲಿಲ್ಲವೆಂದು ಗೊನ್ಸಾಲ್ವಿಸ ಇಂಟಲಿಜನ್ಸ್ ಪೊಲೀಸ್ ಇನ್ಸ್‌ಪೆಕ್ಟರ್ ಅವರಿಗೆಸಲ್ಲಿಸಿದ ಮನವಿಯಲ್ಲಿ ತಿಳಿಸಿದ್ದಾರೆ.

ಇದೇ ಮನವಿಯನ್ನು ಉ. ಕ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ, ನಗರಾಭಿವೃದ್ಧಿ ಸಚಿವರಿಗೆ ಮುಖ್ಯ ಮಂತ್ರಿಯವರಿಗೆ ಸಲ್ಲಿಸಲಾಗಿದೆ ಎಂದು ಗೊನ್ಸಾಲ್ವಿಸ್ ತಿಳಿಸಿದ್ದಾರೆ.

ನೇತ್ರ ತಪಾಸಣೆ

(ಮುಂಗಾರು ವರದಿ)

ಕಾರವಾರ, ಫೆ. 14– ಮಲ್ಲಿಕಾರ್ಜುನ ಪದವಿಪೂರ್ವ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಘಟಕ ಹಾಗೂ ಲಯನ್ಸ್ ಕ್ಲಬ್ ಕಾರವಾರ ಇವರ ಜಂಟಿ ಆಶ್ರಯದಲ್ಲಿ ಇತ್ತೀಚೆಗೆ ಸಿದ್ದರದಲ್ಲಿ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣೆ ಶಿಬಿರ ನಡೆಯಿತು.

ಶಿಬಿರದ ಉದ್ಘಾಟಕರಾಗಿ ಶಾಸಕ ಪಿ. ಎಸ್ ರಾಣೆ ಅವರು ಆಗಮಿಸಿದ್ದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ। ಎಮ್‌ಬಿ ಕರಕಣ್ಣ ಅವರು ಮುಖ್ಯ ಅತಿಥಿಗಳಾಗಿದ್ದು ಲಯನ್ಸ್‌ಕ್ಲಬ್ ಅಧ್ಯಕ್ಷ ಟಿ ಆರ್ ಶೆಣೈಅವರು ಅಧ್ಯಕ್ಷತೆ ವಹಿಸಿದ್ದರು.

ಈ ಶಿಬಿರದಲ್ಲಿ 500 ಕ್ಕೂ ಹೆಚ್ಚಿನ ಫಲಾನುಭವಿಗಳು ಪ್ರಯೋಜನ ಪಡೆದರು ಕಾರವಾರದ ಸಿವಿಲ್ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಆರ್ ಬಿ ನಾಯಕ, ಶೆಟ್ಟಿ ಬಿಣಗಾವಿ, ಹಾಗು ದೊಡ್ಡಮನಿ ಅವರ ಶಿಬಿರ ನಡೆಸಿಕೊಟ್ಟರು.

ಎಮ್ ವಿ ರಾಣೆ ಸ್ವಾಗತಿಸಿದರು. ಜಿ. ಪಿ. ನಾಯಕ ಕಾರ್ಯನಿರ್ವಹಿಸಿದರು. ಪಿ.ಜಿ, ನಾಯಕ ವಂದಿಸಿದರು.

ಹೊಸ ಪಡಿತರ ಚೀಟಿ ನೀಡಿಕೆ

ಉಡುಪಿ, ಫೆ. 14– ಉಡುಪಿ ತಾಲೂಕು ಅನೌಪಚಾರಿಕ ಪಡಿತರ ಪ್ರದೇಶಕ್ಕೆ ಒಳಪಡುವ ಈ ಕೆಳಗಿನ ನ್ಯಾಯಬೆಲೆ ಅಂಗಡಿಗಳಲ್ಲಿ ಫೆ. 18 ರಂದು ನವೀಕರಿಸಿದ ಹೊಸ ಪಡಿತರ ಚೀಟಿಗಳನ್ನು ವಿತರಿಸಲಾಗುವುದು.

1. ಕೊರಂಗ್ರಪಾಡಿ, ವ್ಯವಸಾಯ ಸಹಕಾರಿ ಸಂಘ ಶಾಖೆ: ಕೊರಂಗ್ರಪಾಡಿ, 2. ಕೊರಂಗ್ರಪಾಡಿ ವ್ಯವಸಾಯ ಸೇವಾ ಸಹಕಾರಿ ಸಂಘ ಶಾಖೆ: ಅಲೆವೂರು, 3. ಕೊರಂಗ್ರಪಾಡಿ ವ್ಯವಸಾಯ ಸೇವಾ ಸಹಕಾರಿ ಸಂಘ ಕುಕ್ಕಿಕಟ್ಟೆ, 4. [illegible] ವ್ಯವಸಾಯ ಸೇವಾ ಸಹಕಾರಿ ಸಂ[illegible] ಅಂಬಾಗಿಲು. 5. ಮಣಿಪಾಲ ಗ್ರಾಹಕರ ಸಂಘ ಮಣಿಪಾಲ, 6. ಉದ್ಯಾವರ ಮೀನುಗಾರರ ಸಹಕಾರಿ ಸಂಘ ಪಿತ್ರೋಡಿ 7. ಕೊಡವೂರು ಹರಿಜನ ಮಹಿಳಾ ಮೀನುಗಾರರ ಸಹಕಾರಿ ಸಂಘ ತೊಟ್ಟಂ, 8. ಟಿ. ಎ. ಪಿ. ಸಿ. ಎಂ. ಎಸ್. ಉಡುಪಿ, 9. ಪರ್ಕಳ ಗ್ರಾಹಕರ ಸಂಘ ಪರ್ಕಳ, 10. ಕೋಟ ಸಿ. ಎ. ಬ್ಯಾಂಕ್ ಶಾಖೆ ಸಾಲಿಗ್ರಾಮ 11. ಬಡಗಬೆಟ್ಟು ಸಹಕಾರಿಸಂಘ ಶಾಖೆ ಬೈಲೂರು.

ನವೀಕರಿಸಿದ ಹೊಸ ಪಡಿತರ ಚೀಟಿಯನ್ನು ಹೊಸ ಅರ್ಜಿಯಲ್ಲಿ ಭಾವ ಚಿತ್ರವನ್ನು ನೀಡಿರುವ ಕುಟುಂಬದ ಮುಖ್ಯಸ್ಥರೇ ಹಾಜರಾಗಿ ತಮಗೆ ನೀಡಲಾಗಿರುವ ತಾತ್ಕಾಲಿಕ ಪಡಿತರ ಚೀಟಿಯನ್ನು ಹಾಜರುಪಡಿಸಿ ಪಡೆಕೊಳ್ಳತಕ್ಕದ್ದು ಎಂದು ಉಡುಪಿ ತಹಸೀಲ್ದಾರರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

'ಕಥಾ ಗೊಂಚಲು' ಬಿಡುಗಡೆ

ಉಳ್ಳಾಲ, ಫೆ.14– ಶಾಸಕ ಬಿ. ಎಂ. ಇದಿನಬ್ಬ ಅವರು ಬರೆದ 'ಕಥಾ ಗೊಂಚಲು' ಹೊಸ ಕಥಾ ಸಂಕಲನವನ್ನು ಮಂಗಳೂರು ಸರಕಾರಿ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಕೇಶವನ್ ಪ್ರೀತಿ ಅವರು ಇತ್ತೀಚೆಗೆ ಬಿಡುಗಡೆ ಮಾಡಿದರು.

ಮಾನವತಾ ಸಾಹಿತ್ಯ ಮಾಲೆಯ ವತಿಯಿಂದ ಉಳ್ಳಾಲ ಮಂಡಲ ಪಂಚಾಯತ್ ಸಭಾಂಗಣದಲ್ಲಿ ನಡೆದ ಈ ಸಮಾರಂಭದ ಅಧ್ಯಕ್ಷತೆಯನ್ನು ಪ್ರಾಜೆಕ್ಟ್ ಇಂಜಿನಿಯರ್ ಟಿ. ಯು. ಕಾಮತ್ ಅವರು ವಹಿಸಿದ್ದರು.

ಪ್ರಾಸ್ತಾವಿಕ ಭಾಷಣ ಮಾಡಿದ ಗ್ರಂಥಕರ್ತ ಬಿ. ಎಂ. ಇದಿನಬ್ಬ ಅವರು ಪುಸ್ತಕದ ಪರಿಚಯ ನೀಡಿದರು.

ಉಳ್ಳಾಲ ಮಂಡಲ ಪ್ರಧಾನ ಅಬ್ದುಲ್ ರಶೀದ್ ಸ್ವಾಗತಿಸಿ ವಂದಿಸಿದರು.